ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆರ್‌ಸಿಬಿಗೆ ಪಂಜಾಬ್ ಎದುರಾಳಿ

ನಾಯಕ ಶ್ರೇಯಸ್ ಅಯ್ಯರ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಭಾನುವಾರ ನಡೆದ ಐಪಿಎಲ್ ಕ್ವಾಲಿಫೈಯರ್ ಎರಡನೇ ಪಂದ್ಯದಲ್ಲಿ ಪಂಜಾಬ್ ತಂಡವು ಮುಂಬೈ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿ ಐಪಿಎಲ್ ಫೈನಲ್ ಪ್ರವೇಶಿಸಿದೆ. ನಾಳೆ ಅಹಮದಾಬಾದ್‌ನಲ್ಲಿ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಆರ್‌ಸಿಬಿ-ಪಂಜಾಬ್ ಸೆಣಸಾಡಲಿವೆ.

ಸೊಂಪಾದ ಪುಟಗಳು

ಅಮಿತ್ ಶಾ ಆತುರಕ್ಕೆ ಏನು ಕಾರಣ?

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಕೊನೆಗೂ ಅವರಿಗೆ ಪದ್ಮಶ್ರೀ ಬರಲಿಲ್ಲ...

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ನೀವು ಸದಾ ಸರಿಯಾಗಿಯೇ ಇರುವುದರಿಂದ ಆತ್ಮವಿಶ್ವಾಸ ಮೂಡುವುದೂ ಇಲ್ಲ, ಬೆಳೆಯುವುದೂ ಇಲ್ಲ. ಆದರೆ ನೀವು ಯಾವಾಗ ತಪ್ಪು ಮಾಡಲು ಹಿಂದೇಟು ಹಾಕುವುದಿಲ್ಲವೋ, ಆಗ ನೀವು ಸಾಕಷ್ಟು ಆತ್ಮವಿಶ್ವಾಸ ಬೆಳೆಸಿಕೊಂಡಿದ್ದೀರಿ ಎಂದರ್ಥ.

ವಕ್ರತುಂಡೋಕ್ತಿ

ಮದರ್ ಇನ್ ಲಾ, ಫಾದರ್ ಇನ್ ಲಾ, ಸನ್ ಇನ್ ಲಾ, ಡಾಟರ್ ಇನ್ ಲಾ ಹೀಗೆ ಯಾರೇ ಇರಲಿ, ವೈಫ್ ಈಸ್ ದಿ ಲಾ.

ಮೂರು ತಿಂಗಳಲ್ಲಿ ಪಶ್ಚಿಮ ಘಟ್ಟದ ಧಾರಣಾ ಸಾಮರ್ಥ್ಯ ವರದಿ ಸಲ್ಲಿಸಲು ಖಂಡ್ರೆ ಸೂಚನೆ

ಭೂಕುಸಿತ ವರದಿ ನೀಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಮುಂಗಾರು ಪೂರ್ಣ ಪ್ರಮಾಣದಲ್ಲಿ ಆರಂಭವಾಗುವ ಮೊದಲೇ ಕರಾವಳಿ ಭಾಗದ ಹಲವು ಪ್ರದೇಶಗಳಲ್ಲಿ ಭೂ ಕುಸಿತವಾಗಿರುವುದರಿಂದ ಪಶ್ಚಿಮ ಘಟ್ಟಗಳ 'ಧಾರಣಾ ಸಾಮರ್ಥ್ಯ'ದ ಅಧ್ಯಯನಕ್ಕೆ ಸರಕಾರ ಚಿಂತನೆ ನಡೆಸಿದೆ.

ಭಾರಿ ಮಳೆಯಾಗುವ ಮೊದಲೇ ಪಶ್ಚಿಮ ಘಟ್ಟದ ಹಲವು ಪ್ರದೇಶದಲ್ಲಿ ಭೂ ಕುಸಿತವಾಗುತ್ತಿರುವ ವರದಿಗಳು ಕೇಳಿಬರುತ್ತಿವೆ. ಆದ್ದರಿಂದ ಪಶ್ಚಿಮ ಘಟ್ಟದ ಯಾವೆಲ್ಲ ಪ್ರದೇಶಗಳಲ್ಲಿ ಭೂಮಿ ಸಡಿಲವಾಗಿದೆ? ಯಾವೆಲ್ಲ ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಮಾಡುವುದು ಸೂಕ್ತವಲ್ಲ? ಮುಂದಿನ ದಿನಗಳಲ್ಲಿ ಪಶ್ಚಿಮ ಘಟ್ಟದ ಯಾವ ಭಾಗದಲ್ಲಿ ಭಾರಿ ಕಾಮಗಾರಿಗಳು ಸಮಸ್ಯೆಯನ್ನು ತಂದೊಡ್ಡುತ್ತವೆ? ಎನ್ನುವ ಬಗ್ಗೆ ಸಮಗ್ರ ಅಧ್ಯಯನ ನಡೆಸುವುದು ಈ ಧಾರಣಾ ಸಾಮರ್ಥ್ಯ ಪರೀಕ್ಷೆಯ ಉದ್ದೇಶವಾಗಿದೆ. → 4

ಪಶ್ಚಿಮಘಟ್ಟದಲ್ಲಿ ಶೇ.60ರಷ್ಟು ಅರಣ್ಯ ಇದ್ದು, ಇದು ಸಸ್ಯಸಂಕುಲ, ಪ್ರಾಣಿ ಸಂಕುಲ, ಕೀಟ ಸಂಕುಲಗಳ ನೆಲೆವೀಡಾಗಿದೆ. ಈ ಪ್ರದೇಶದ ಧಾರಣಾ ಸಾಮರ್ಥ್ಯದ ಬಗ್ಗೆ ಅಧ್ಯಯನವಾದರೆ, ಯೋಜನೆ ರೂಪಿಸುವಾಗ ಎಚ್ಚರ ವಹಿಸಲು ಸಹಾಯ ವಾಗುತ್ತದೆ.
-ಈಶ್ವರ್ ಖಂಡ್ರೆ, ಅರಣ್ಯ ಸಚಿವ

ವರದಿಯ ಲಾಭವೇನು?

- ಪಶ್ಚಿಮ ಘಟ್ಟದಲ್ಲಿರುವ ಸೂಕ್ಷ್ಮ ಪ್ರದೇಶಗಳ ಸ್ಪಷ್ಟ ಮಾಹಿತಿ ಸಿಗಲಿದೆ
- ವರದಿಯ ಆಧಾರದಲ್ಲಿ ಭವಿಷ್ಯದಲ್ಲಿ ಹೊಸ ಯೋಜನೆಗೆ ಸಹಾಯ
- ಸಡಿಲವಿರುವ ಪ್ರದೇಶದಲ್ಲಿ ಯಾವುದೇ ಪ್ರಾಜೆಕ್ಟ್‌ಗೆ ಅವಕಾಶ ನೀಡದಿರಬಹುದು
- ಯಾವುದೇ ಯೋಜನೆ ಪ್ಲಾನಿಂಗ್ ವೇಳೆ ವರದಿ ನೋಡಿಕೊಂಡು ತೀರ್ಮಾನ



ಕರಾವಳಿಯಲ್ಲಿ ಮಳೆಗೆ ಬಿಡುವು

ಬೆಂಗಳೂರು: ರಾಜ್ಯದಲ್ಲಿ ನೈರುತ್ಯ ಮುಂಗಾರು ಮಳೆ ದುರ್ಬಲಗೊಂಡಿದ್ದು, ಕರಾವಳಿ ಮತ್ತು ಮಲೆನಾಡು ಭಾಗದಲ್ಲೂ ಗಣನೀಯವಾಗಿ ಕಡಿಮೆಯಾಗಿದೆ. ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ನಿರಂತರ ಭಾರೀ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತವಾಗಿತ್ತು. ಆದರೀಗ ಉತ್ತರ ಹಾಗೂ ದಕ್ಷಿಣ ಒಳನಾಡಿನಲ್ಲಿ ಮಳೆ ಬಿಡುವು ಕೊಟ್ಟಿದೆ. ಹವಾಮಾನ ಇಲಾಖೆ ಪ್ರಕಾರ, ಸದ್ಯಕ್ಕೆ ರಾಜ್ಯದಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆಗಳಿಲ್ಲ. → 4

ಈಶಾನ್ಯ ಭಾರತ ಮಳೆಗೆ 31 ಸಾವು

ದೆಹಲಿ: ಅಸ್ಸಾಂ, ಮೇಘಾಲಯ, ಸಿಕ್ಕಿಂ ಸೇರಿದಂತೆ ಈಶಾನ್ಯ ಭಾರತದಲ್ಲಿ ಕಳೆದ 3 ದಿನಗಳಿಂದಲೂ ಭಾರೀ ಮಳೆಯಾಗುತ್ತಿದ್ದು, ಪ್ರವಾಹ ಪರಿಸ್ಥಿತಿ ಸೃಷ್ಟಿಯಾಗಿದೆ. ಸತತ ಮಳೆಯಿಂದ ಪ್ರವಾಹ-ಭೂಕುಸಿತ ಉಂಟಾಗಿ ಅಸ್ಸಾಂನಲ್ಲಿ 8 ಮಂದಿ, ಅರುಣಾಚಲ ಪ್ರದೇಶದಲ್ಲಿ 9 ಮಂದಿ ಸೇರಿದಂತೆ ಈಶಾನ್ಯ ಭಾರತದಲ್ಲಿ ಒಟ್ಟು 31 ಮಂದಿ ಮಳೆ ಸಂಬಂಧಿತ ಅವಘಡಗಳಲ್ಲಿ ಸಾವಿಗೀಡಾಗಿದ್ದಾರೆ.

ಶೇ.95ರಷ್ಟು ಜನರಿಗೆ ಕೋಮುವಾದ, ಮಧ್ಯವಾದ ಬೇಕಿಲ್ಲ: ಸಚಿವ ದಿನೇಶ್

ಕೋಮು ಸಂಘರ್ಷ ವಿರುದ್ಧ ಕಠಿಣ ಕ್ರಮ

ಮಂಗಳೂರು/ಬೆಂಗಳೂರು: ಕರಾವಳಿ ಜಿಲ್ಲೆಯಲ್ಲಾಗುತ್ತಿರುವ ಕೋಮು ಸಂಘರ್ಷ ನಿಯಂತ್ರಣಕ್ಕೆ ಸರಕಾರ ವಿಶೇಷ ಪಡೆ ಸ್ಥಾಪಿಸುವ ಜತೆಜತೆಗೆ, ದ್ವೇಷ ಹರಡುತ್ತಿರುವ ಎರಡೂ ಕಡೆಯವರ ವಿರುದ್ಧ ಕಠಿಣ ಕ್ರಮಕ್ಕೆ ಸಿದ್ಧತೆ ನಡೆಸಿದೆ.

ಕಳೆದ ಎರಡು ದಿನಗಳಿಂದ ದಕ್ಷಿಣ ಕನ್ನಡದಲ್ಲಿರುವ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಕರಾವಳಿ ಜಿಲ್ಲೆಗಳಲ್ಲಿ ಹಿಂದೂ-ಮುಸ್ಲಿಂ ನಡುವೆ ದ್ವೇಷ ಹರಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಈ ಸಂಬಂಧ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಡಿಸಿ ಹಾಗೂ ಎಸ್‌ಪಿಗೆ ಸೂಚನೆ ನೀಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಂತಿ ಸಭೆಗಳ ಮೂಲಕ ಸೌಹಾರ್ದತೆ, ಶಾಂತಿ ಪಾಲನೆಗೆ ಕ್ರಮ ಕೈಗೊಳ್ಳಲಾಗುವುದು. ಶೇ.95ರಷ್ಟು ಜನರಿಗೆ ಕೋಮುವಾದ, ಮಧ್ಯವಾದ ಬೇಕಿಲ್ಲ. ಕೆಲವೇ ಕೆಲವು ಶಕ್ತಿಗಳು ಕೋಮುಸಂಘರ್ಷದಲ್ಲಿ ತೊಡಗಿಸಿಕೊಂಡಿವೆ. ಅನಗತ್ಯವಾದ ಪ್ರಚೋದನೆ ನೀಡುತ್ತಿವೆ. ಅದನ್ನು ಮುಲಾಜಿಲ್ಲದೆ ಮಟ್ಟ ಹಾಕಲಾಗುವುದು ಎಂದರು. → 4

ದ.ಕ. ಉಸ್ತುವಾರಿ ಬದಲಾವಣೆ ಇಲ್ಲ

ದಕ್ಷಿಣ ಕನ್ನಡದಲ್ಲಾಗುತ್ತಿರುವ ಕೋಮು ಗಲಭೆಗಳಿಂದ ವೈಯಕ್ತಿಕವಾಗಿ ಗುಂಡೂರಾವ್ ಅವರಿಗೆ ಆಗುತ್ತಿರುವ ಡ್ಯಾಮೇಜ್ ಕಂಟ್ರೋಲ್‌ಗೆ, ಜಿಲ್ಲಾ ಉಸ್ತುವಾರಿಯಿಂದ ಹೊರಬರುವ ತೀರ್ಮಾನಕ್ಕೆ ಬಂದಿದ್ದು, ಮುಖ್ಯಮಂತ್ರಿಗಳ ಬಳಿಯೂ ಈ ಬಗ್ಗೆ ಚರ್ಚಿಸಿದ್ದಾರೆ ಎನ್ನಲಾಗಿತ್ತು. ಆದರೀಗ ಇದಕ್ಕೆ ಸ್ಪಷ್ಟನೆ ನೀಡಿರುವ ಅವರು, ಉಸ್ತುವಾರಿ ಬದಲಾವಣೆ ಮಾಡುವಂತೆ ಕೇಳಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ವಾಣಿಜ್ಯ ಎಲ್‌ಪಿಜಿ ದರ 24 ರು. ಇಳಿಕೆ

ದೆಹಲಿ: ವಾಣಿಜ್ಯ ಬಳಕೆಯ 19 ಕೆ.ಜಿ ಅಡುಗೆ ಅನಿಲ ಸಿಲಿಂಡರ್ ಬೆಲೆಯಲ್ಲಿ ₹24 ಕಡಿವಾಗಿದೆ. ಬೆಲೆ ಕಡಿತದ ಬಳಿಕ ಸಿಲಿಂಡರ್ ಬೆಲೆ ₹1,723 ಆಗಿದೆ. ಪರಿಷ್ಕೃತ ದರ ಜೂ.1ರಿಂದಲೇ ಜಾರಿಗೆ ಬಂದಿದೆ. ಏ.1 ರಂದು ವಾಣಿಜ್ಯ ಬಳಕೆಯ ಅಡುಗೆ ಅನಿಲ ಸಿಲಿಂಡರ್ ಬೆಲೆಯಲ್ಲಿ ₹41 ಕಡಿತ ಮಾಡಲಾಗಿತ್ತು. ಗೃಹ ಬಳಕೆ ಅಡುಗೆ ಅನಿಲ ಬೆಲೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

ಕೋವಿಡ್: 3,758ಕ್ಕೆ ಏರಿಕೆ

ದೆಹಲಿ: ದೇಶದಲ್ಲಿನ ಕರೋನಾ ಸಕ್ರಿಯ ಪ್ರಕರಣಗಳ ಸಂಖ್ಯೆ 3.758ಕ್ಕೆ ಮುಟ್ಟಿದೆ. ಕೇರಳ 1400ಕ್ಕೂ ಅಧಿಕ ಕೇಸ್‌ಗಳೊಂದಿಗೆ ಮೊದಲ ಸ್ಥಾನದಲ್ಲಿದ್ದರೆ, ಮಹಾರಾಷ್ಟ್ರ 485 ಪ್ರಕರಣ ಮತ್ತು 7 ಸಾವುಗಳ ಕಾರಣ ಕರೋನಾ ಪಟ್ಟಿಯಲ್ಲಿ 2ನೇ ಸ್ಥಾನದಲ್ಲಿದೆ. ದೆಹಲಿಯಲ್ಲಿನ ಕರೋನಾ ಸಕ್ರಿಯ ಪ್ರಕರಣಗಳ ಸಂಖ್ಯೆ 436ಕ್ಕೇರಿದೆ. ದೇಶದಲ್ಲಿ ಈವರೆಗೂ ಒಟ್ಟು 26 ಸೋಂಕಿತರು ಅಸುನೀಗಿದ್ದಾರೆ.

ಸಮಾಚಾರ ಸಣ್ಣದಲ್ಲ

ಕೃಷ್ಣಮೂರ್ತಿಗೆ ಫೆಲೋ ಗೌರವ

ಬೆಂಗಳೂರು: ಅಮೆರಿಕದ ಷಿಕಾಗೊ ವಿಶ್ವವಿದ್ಯಾಲಯ ಬೆಂಗಳೂರಿನ ಭಾರತೀಯ ಶಾಂಖಿಕ ಸಂಸ್ಥೆಯ ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನದ ಮಾಹಿತಿ ವಿಜ್ಞಾನದ ಪ್ರಾಧ್ಯಾಪಕರಾದ ಎಂ. ಕೃಷ್ಣಮೂರ್ತಿ ಅವರನ್ನು ಫೆಲೋ ಆಗಿ ಆಯ್ಕೆ ಮಾಡಿದೆ. ಜೂನ್ 15,16 ರಂದು ಷಿಕಾಗೊ ವಿಶ್ವವಿದ್ಯಾಲಯದಲ್ಲಿ ನಡೆಯುವ ಸಮ್ಮೇಳನದಲ್ಲಿ 'ಡಾಟಾ ಮ್ಯಾನೇಜ್ಮೆಂಟ್ ಇನ್ ಸೋಶಿಯಲ್ ಸೈನ್ಸ್' ಎಂಬ ವಿಷಯದ ಕುರಿತು ಕೃಷ್ಣಮೂರ್ತಿ ಅವರು ಉಪನ್ಯಾಸ ನೀಡಲಿದ್ದಾರೆ ಎಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಸಾನಿಕ, ಜನರಕ್ಷಿಕ ರಂಗಪ್ರವೇಶ ಜೂ.7ಕ್ಕೆ

ಬೆಂಗಳೂರು: ಕಾರುಣ್ಯ ನೃತ್ಯ ಅಕಾಡೆಮಿಯ ಸಾನಿಕ ಎಸ್ ಮತ್ತು ಜನರಕ್ಷಿಕ ಬಿ.ಆರ್ ಜೂ 7ರ ಸಂಜೆ 5.30ಕ್ಕೆ ವಯ್ಯಾಲಿಕಾವಲ್‌ನ ಶ್ರೀಕೃಷ್ಣದೇವ ರಾಯ ಕಲಾಮಂದಿರದಲ್ಲಿ ರಂಗಪ್ರವೇಶ ನಡೆಯಲಿದೆ. ರೂಪೇಶ್ ಕುಮಾರ್ ಎಸ್. ಮತ್ತು ಬಿ. ಭರಣಿ ದಂಪತಿಗಳ ಪುತ್ರಿ ಜನರಕ್ಷಿತ ಹಾಗೂ ಶೇಖರ್ ರಾವ್ ಬಿ.ಎಚ್ ಮತ್ತು ಎಸ್. ಶ್ವೇತಾ ಅವರ ಪುತ್ರಿ ಸಾನಿಕಾ, ವಿದುಷಿ ಅಮೃತಾ ಶಶಾಂಕ್ ಶಿಷ್ಯೆಯಾಗಿದ್ದಾರೆ. ಕರ್ನಾಟಕ ಸರಕಾರದ ಜ್ಯೂನಿಯರ್ ನೃತ್ಯಪರೀಕ್ಷೆಯಲ್ಲಿ ಶ್ರೇಷ್ಠ ಅಂಕಗಳನ್ನು ಪಡೆದು ತೇರ್ಗಡೆಯಾಗಿದ್ದು ಆಸಕ್ತಿಯಿಂದ ನಾಟ್ಯ ಕಲಿಯುತ್ತಿದ್ದಾರೆ.

ಇಂದು 153 ಎಕರೆ ಭೂಮಿ ಹಸ್ತಾಂತರ

ಬೆಂಗಳೂರು: ಬೆಂಗಳೂರು ಯಲಹಂಕ ಬಳಿಯ ಮಾದಪ್ಪನಹಳ್ಳಿಯ 153 ಎಕರೆ ಅರಣ್ಯ ಭೂಮಿಯಲ್ಲಿ ಲಾಲ್ ಬಾಗ್ ಮಾದರಿಯಲ್ಲಿ ಬೃಹತ್ ಉದ್ಯಾನ ನಿರ್ಮಿಸಲು ಅರಣ್ಯ ಸಚಿವ ಈಶ್ವರ ಖಂಡ್ರೆ ತೀರ್ಮಾನಿಸಿದ್ದು, ಸೋಮವಾರ ಈ ಯೋಜನೆಗೆ ಚಾಲನೆ ಸಿಗಲಿದೆ. ಮಾದಪ್ಪನಹಳ್ಳಿಯ ನೆಡುತೋಪಿನಲ್ಲಿ ಸೋಮವಾರ ನಡೆಯಲಿರುವ ಅರಣ್ಯ ಇಲಾಖೆಯ ಕಾರ್ಯಕ್ರಮದಲ್ಲಿ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ ವಶದಲ್ಲಿರುವ ನೀಲಗಿರಿತೋಪನ್ನು ಅರಣ್ಯ ಇಲಾಖೆಗೆ ಮರು ಹಸ್ತಾಂತರ ಮಾಡಲಾಗುತ್ತಿದೆ. ಕೆಎಫ್‌ಡಿಸಿ ಅಧ್ಯಕ್ಷ ಬಸವರಾಜು ನೀಲಪ್ಪ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಲಿದ್ದಾರೆ. ಈ ಬೃಹತ್ ಉದ್ಯಾನ ಮುಂಬರುವ ದಿನಗಳಲ್ಲಿ ಉತ್ತರ ಬೆಂಗಳೂರಿಗೆ ಮಹತ್ವದ ಶ್ವಾಸ ತಾಣವಾಗಲಿದ್ದು, 2 ತಿಂಗಳಲ್ಲಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಕೆಲ ದಿನಗಳ ಹಿಂದೆ ಹೇಳಿದ್ದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಬೆಂಗಳೂರಿನ ಅಭಿವೃದ್ಧಿಗೆ 1 ಲಕ್ಷ ಕೋಟಿ ಮೊತ್ತದ ಯೋಜನೆಗಳನ್ನು ರೂಪಿಸಲಾಗಿದೆ: ಡಿಸಿಎಂ ಡಿಕೆಶಿ

ನಗರ ಅಭಿವೃದ್ಧಿಗೆ ಕಾಂಗ್ರೆಸ್ ಕೊಡುಗೆ ಹೆಚ್ಚು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರಿನ ಅಭಿವೃದ್ಧಿಗೆ ಕಾಂಗ್ರೆಸ್ ಸರಕಾರದ ಕೊಡುಗೆಯೇ ಹೆಚ್ಚು. ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ನಮ್ಮ ಸರಕಾರ ಒಂದು ಲಕ್ಷ ಕೋಟಿ ಮೊತ್ತದ ದೊಡ್ಡ ಯೋಜನೆಗಳನ್ನು ಹಮ್ಮಿಕೊಂಡಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ, ಕಳೆದ 20 ವರ್ಷಗಳಲ್ಲಿ ಬೆಂಗಳೂರು ಜನತೆ 70 ಲಕ್ಷದಿಂದ 1.50 ಕೋಟಿಗೆ ಏರಿಕೆಯಾಗಿದೆ. ಹೀಗಾಗಿ ಬೆಂಗಳೂರಿನ ಅಭಿವೃದ್ಧಿಗೆ ಮುಂದಿನ ಮೂರ್ನಾಲ್ಕು ವರ್ಷಗಳಲ್ಲಿ ಲಕ್ಷ ಕೋಟಿ ಮೊತ್ತದ ಯೋಜನೆ ರೂಪಿಸಿದ್ದೇವೆ. ನಿಮ್ಮ ಕ್ಷೇತ್ರದಲ್ಲಿ ಹಾದು ಹೋಗುವ ನೆಲಮಂಗಲ ಮೇಲ್ಸೇತುವೆ ಬಿಜೆಪಿಯವರು ಮಾಡಿದ್ದಲ್ಲ, ಕೃಷ್ಣಬೈರೇಗೌಡ ಅವರ ಕ್ಷೇತ್ರದಲ್ಲಿ ವಿಮಾನ ನಿಲ್ದಾಣಕ್ಕೆ ಹೋಗುವ ಮೇಲ್ಸೇತುವೆ, ಹೊಸೂರು ರಸ್ತೆಯಲ್ಲಿರುವ ಮೇಲ್ಸೇತುವೆ, ಕೋಲಾರಕ್ಕೆ ಡಬಲ್ ರೋಡ್ ಮಾಡಿದ್ದು ಮನಮೋಹನ್ ಸಿಂಗ್ ಸರಕಾರದಲ್ಲಿ, ಬೆಂಗಳೂರಿನಲ್ಲಿ ಇಂತಹ ಯಾವುದೇ ಕಾರ್ಯಕ್ರಮವಿದ್ದರೂ ಅದು ಕಾಂಗ್ರೆಸ್ ಸರಕಾರದ ಕೊಡುಗೆಯೇ ವಿನಃ ಬಿಜೆಪಿ ಸರಕಾರವಲ್ಲ ಎಂದರು,

ಬೆಂಗಳೂರು ಬೆಳೆಯುತ್ತಿದೆ. ಆದ್ದರಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆ ಮಾಡಿದ್ದೇವೆ. ಇದರಲ್ಲಿ ಎಷ್ಟು ಪಾಲಿಕೆ ಮಾಡಬೇಕು ಎಂದು ಚರ್ಚೆ ಮಾಡಲು ಸಚಿವರು ಹಾಗೂ ಶಾಸಕರ ಸಭೆ ಮಾಡಿದ್ದೇನೆ. ಇನ್ನೊಂದು ವಾರದಲ್ಲಿ ಮತ್ತೊಂದು ಸಭೆ ಮಾಡಿ ಅಂತಿಮ ತೀರ್ಮಾನ ಮಾಡಲಾಗುವುದು. ಪಾಲಿಕೆ ರಚಿಸಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಮಾಡುತ್ತೇವೆ. ಹೊಸ ಪಾಲಿಕೆ ಸದಸ್ಯರು ಆಯ್ಕೆಯಾಗಬೇಕು. ಮುಂದೆ ದಾಸರಹಳ್ಳಿಯಲ್ಲಿ ಶಾಸಕ ಹಾಗೂ ಕಾರ್ಪೊರೇಟರ್ ಸ್ಥಾನಗಳು ಕಾಂಗ್ರೆಸ್ ಪಕ್ಷಕ್ಕೆ ಎಂಬ ನಂಬಿಕೆ ಇದೆ ಎಂದು ತಿಳಿಸಿದರು.



ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಮುಖಂಡರು ಡಿಸಿಎಂ ಡಿ..ಕೆ.ಶಿವಕುಮಾರ್ ಅವರನ್ನು ಸನ್ಮಾನಿಸಿದರು.

ನಮ್ಮದು ನುಡಿದಂತೆ ನಡೆದ ಸರಕಾರ: ನಾನು ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿ ಅಧಿಕಾರ ಸ್ವೀಕಾರ ಮಾಡಿದಾಗ ಒಂದು ಮಾತು ಹೇಳಿದ್ದೆ. ಮಹಿಳೆಯರು ಹಾಗೂ ಯುವಕರು ಮನಸ್ಸು ಮಾಡಿದರೆ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದೇ ಬರುತ್ತದೆ ಎಂದು ಹೇಳಿದ್ದೆ. ಮಹಿಳೆಯರಿಗೆ ಉಪಕಾರ ಸ್ಮರಣೆ ಇರುತ್ತದೆ. ಹೀಗಾಗಿ ನಮ್ಮ ಐದು ಗ್ಯಾರಂಟಿ ಯೋಜನೆಗಳ ಪೈಕಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದರು.

ಗೃಹಲಕ್ಷ್ಮಿ, ಶಕ್ತಿ, ಅನ್ನ ಭಾಗ್ಯ, ಗೃಹಜ್ಯೋತಿ ಯೋಜನೆಗಳನ್ನು ಮಹಿಳೆಯರಿಗಾಗಿ ಮಾಡಲಾಗಿದೆ. ನಮ್ಮ ಸರಕಾರ ಅಧಿಕಾರಕ್ಕೆ ಬಂದ ಮೊದಲ ದಿನವೇ ಐದೂ ಗ್ಯಾರಂಟಿಗಳ ಅನುಷ್ಠಾನಕ್ಕೆ ಅನುಮೋದನೆ ನೀಡಲಾಯಿತು. ಆಮೂಲಕ ನಾವು ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇವೆ. ನಮ್ಮ ಸರಕಾರ ಎರಡು ವರ್ಷ ಪೂರೈಸಿದ್ದು, ಸಚಿವ ಕೃಷ್ಣಬೈರೇಗೌಡ ನೇತೃತ್ವದಲ್ಲಿ 1,11,111 ಕುಟುಂಬಗಳಿಗೆ ಉಚಿತವಾಗಿ ಪಟ್ಟಾ ಖಾತೆಯನ್ನು ನೀಡುವ ಮೂಲಕ 6ನೇ ಗ್ಯಾರಂಟಿ ಯೋಜನೆ ಭೂ ಗ್ಯಾರಂಟಿಯನ್ನು ನೀಡಿದ್ದೇವೆ ಎಂದರು.

> ನಮ್ಮ ಸರಕಾರ ಈ ದೇಶಕ್ಕೆ ಮಾದರಿ. ಬಿಜೆಪಿ ಭಾವನೆ ಮೇಲೆ ರಾಜಕೀಯ ಮಾಡಿದರೆ, ನಾವು ಬದುಕಿನ ಮೇಲೆ ರಾಜಕೀಯ ಮಾಡುತ್ತೇವೆ. ನಮಗೆ ನಿಮ್ಮ ಬದುಕು ಮುಖ್ಯ. ನಿಮಗೆ ಪ್ರತಿ ತಿಂಗಳು ಕನಿಷ್ಠ 5 ಸಾವಿರ ಉಳಿತಾಯ ಆದರೆ ನಿಮಗೆ ಅನುಕೂಲವಾಗುತ್ತದೆ ಎಂಬ ಉದ್ದೇಶದಿಂದ ನಾವು ಗ್ಯಾರಂಟಿ ಯೋಜನೆ ಜಾರಿಗೆ ತಂದೆವು. ಬೆಲೆ ಏರಿಕೆ ಸಮಸ್ಯೆಯಿಂದ ಜನರನ್ನು ರಕ್ಷಣೆ ಮಾಡಲಾಗಿದೆ.
> – ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಪಿಇಎಸ್ ವಿವಿ ಕುಲಾಧಿಪತಿ ಪ್ರೊ.ಜವಾಹರ್ ದೊರೆಸ್ವಾಮಿ ಸಲಹೆ

ವಿದ್ಯಾರ್ಥಿಗಳು ಅಧ್ಯಯನಕ್ಕೆ ಹೆಚ್ಚು ಸಮಯವನ್ನು ಮೀಸಲಿಡಬೇಕು

ಬೆಂಗಳೂರು: ವಿದ್ಯಾರ್ಥಿಗಳು ತರಗತಿಯೊಳಗೆ ಕಳೆಯುವ ಸಮಯದೊಂದಿಗೆ ತರಗತಿಯ ಹೊರಗೆ ಕಳೆಯುವ ಸಮಯದಲ್ಲಿಯೂ ಅಧ್ಯಯನಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಪ್ರೊ. ಜವಾಹರ್ ದೊರೆಸ್ವಾಮಿ ಸಲಹೆ ನೀಡಿದರು.

ಪಿಇಎಸ್ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ತರಗತಿಗಳ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ಅಧ್ಯಯನಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ತಮ್ಮ ಗುರಿಯನ್ನು ತಲುಪಬಹುದು. ಕಠಿಣ ಪರಿಶ್ರಮ, ಒಳ್ಳೆಯ ಹವ್ಯಾಸಗಳು, ಉತ್ತಮ ತಂತ್ರಜ್ಞಾನದ ಬಳಕೆ ಮತ್ತು ಅತ್ಯುತ್ತಮ ಮಾರ್ಗದರ್ಶಕರಿಂದ ಜೀವನದಲ್ಲಿ ಯಶಸ್ಸನ್ನು ಗಳಿಸಲು ಸಾಧ್ಯ ಎಂದು ತಿಳಿಸಿದರು.

ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಜಿ. ಸೂರ್ಯಪ್ರಸಾದ್ ಮಾತನಾಡಿ, ಸರಿಯಾದ ಮಾರ್ಗದರ್ಶಕರ ಸಹಾಯ ಮತ್ತು ನಿಮ್ಮ ಪರಿಶ್ರಮದಿಂದ ಜೀವನದಲ್ಲಿ ಯಶಸ್ಸನ್ನು ಕಂಡುಕೊಳ್ಳಬೇಕು. ಬದುಕಿನ ಯಶಸ್ಸು ಅಡಗಿರುವುದು ನಾವು ಆಳವಡಿಸಿಕೊಂಡಿರುವ ಶಿಸ್ತಿನಿಂದ ಹೊರತು, ಸಾಮಾಜಿಕ ಜಾಲತಾಣಗಳಲ್ಲಿ ನಾವು ಗಳಿಸುವ ಪ್ರಸಿದ್ಧಿಯಿಂದಲ್ಲ. ಪ್ರಸ್ತುತ ಜಗತ್ತಿನಲ್ಲಿ, ತಂತ್ರಜ್ಞಾನದ ಬಳಕೆಯು ಉನ್ನತಿಗೆ ಕಾರಣವಾಗುತ್ತದೆ, ಆದರೆ ಅತಿಯಾದ ಅವಲಂಬನೆ ನಮ್ಮನ್ನು ಸೋಮಾರಿಗಳನ್ನಾಗಿ ಮಾಡುತ್ತದೆ. ಹೀಗೆ ಅಭಿವೃದ್ಧಿಗಾಗಿ ತಂತ್ರಜ್ಞಾನದ ಜಾಗೃತ ಬಳಕೆಯ ಬಗ್ಗೆ ತಿಳಿಸಿದರು.

ಈ ವೇಳೆ 2024– 25ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತ್ಯಧಿಕ ಅಂಕ ಗಳಿಸಿದ ವಾಣಿಜ್ಯ ಮತ್ತು ವಿಜ್ಞಾನ ವಿಭಾಗದ ಒಟ್ಟು 73 ವಿದ್ಯಾರ್ಥಿಗಳಿಗೆ ಅವರು ಪಾವತಿಸಿದ ಶೇ.25ರಷ್ಟು ಶುಲ್ಕ ವಿದ್ಯಾರ್ಥಿ ವೇತನವನ್ನಾಗಿ ನೀಡಲಾಯಿತು.

ಪಿಇಎಸ್ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ತರಗತಿಗಳ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಪಿಇಎಸ್ ವಿಶ್ವವಿದ್ಯಾ ಲಯದ ಕುಲಾಧಿಪತಿಗಳಾದ ಪ್ರೊ. ಜವಾಹರ್ ದೊರೆಸ್ವಾಮಿ, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

14 ವಾಣಿಜ್ಯ ರಸ್ತೆಗಳಲ್ಲಿ ಪೇ ಆ್ಯಂಡ್ ಪಾರ್ಕಿಂಗ್‌ಗೆ ಬಿಬಿಎಂಪಿ ನಿರ್ಧಾರ

ಬೆಂಗಳೂರು: ನಗರದ ಜನಜಂಗುಳಿಯಿರುವ ಪ್ರದೇಶಗಳಲ್ಲಿ ಪೇ ಆ್ಯಂಡ್ ಪಾರ್ಕಿಂಗ್ ವ್ಯವಸ್ಥೆಯನ್ನು ಜಾರಿಗೆ ತರಲು ಬಿಬಿಎಂಪಿ ನಿರ್ಧರಿಸಿದ್ದು, ಆಯ್ದ ವಾಣಿಜ್ಯ ರಸ್ತೆಗಳಲ್ಲಿ ಪಾರ್ಕಿಂಗ್ ಶುಲ್ಕವನ್ನು ಪಡೆಯಲು ಮುಂದಾಗಿದೆ.

ನಗರದ ಪ್ರಮುಖ ಜನನಿಬಿಡ ವಾಣಿಜ್ಯ ರಸ್ತೆಗಳಲ್ಲಿ ಪ್ರತಿಗಂಟೆಗೆ ದ್ವಿಚಕ್ರ ವಾಹನಗಳಿಗೆ 15 ರು. ಹಾಗೂ ಕಾರುಗಳಿಗೆ 30 ರು. ಪಾರ್ಕಿಂಗ್ ಶುಲ್ಕ ಪಡೆಯಲು ಪಾಲಿಕೆ ನಿರ್ಧರಿಸಿದ್ದು, ಈ ಮೂಲಕ ಆರಂಭದಲ್ಲಿ ವಾರ್ಷಿಕ 7 ಕೋಟಿ ರು. ಆದಾಯವನ್ನು ಈ ಮೂಲಕ ಗಳಿಸುವ ನಿರೀಕ್ಷೆಯನ್ನು ಹೊಂದಿದೆ. ಎಂ.ಜಿ. ರಸ್ತೆ, ಬ್ರಿಗ್ರೇಡ್ ರಸ್ತೆ ಮತ್ತು ಕಮರ್ಷಿಯಲ್ ಸ್ಟ್ರೀಟ್ ರಸ್ತೆ ಅಂತಹ ಪ್ರಮುಖ ರಸ್ತೆಗಳು ಸೇರಿದಂತೆ ಒಟ್ಟು 14 ವಾಣಿಜ್ಯ ಪ್ರದೇಶಗಳಲ್ಲಿ ಪೇ ಆ್ಯಂಡ್ ಪಾರ್ಕಿಂಗ್ ವ್ಯವಸ್ಥೆಯನ್ನು ಕಾರ್ಯ ರೂಪಕ್ಕೆ ತರಲಿದ್ದು, ಶುಲ್ಕ ವಿಧಿಸುವ ನಿರ್ವಹಣೆ ವ್ಯವಸ್ಥೆಯನ್ನು ಹೊರಗುತ್ತಿಗೆ ನೀಡಲಾಗುತ್ತದೆ.

ಎಲ್ಲಾ ನಗರ ಪ್ರದೇಶಗಳಲ್ಲಿ ಪೇ ಆ್ಯಂಡ್ ಪಾರ್ಕ್ ವ್ಯವಸ್ಥೆಯನ್ನು ಜಾರಿಗೆ ತರುವ ಉದ್ದೇಶವನ್ನು ನಗರ ಭೂ ಸಾರಿಗೆ ನಿರ್ದೇಶನಾಲಯ ಹೊಂದಿದ್ದು, ವಾಹನಗಳ ಸಂಖ್ಯೆ ಹೆಚ್ಚಾದಂತೆ ಪಾರ್ಕಿಂಗ್‌ನ ಸಮಸ್ಯೆಯೂ ಜಾಸ್ತಿಯಾಗುತ್ತಿದೆ. ಬೆಂಗಳೂರಿನಲ್ಲಿ ಈಗ 1.25 ಕೋಟಿ ವಾಹನಗಳಿದ್ದು, ಪಾರ್ಕಿಂಗ್ ವ್ಯವಸ್ಥೆ ಈ ಹೆಚ್ಚಳಕ್ಕೆ ಅನುಗುಣವಾಗಿಲ್ಲ ಎಂದು ಹೇಳಿದೆ. ನಗರದ ಪಾರ್ಕಿಂಗ್ ಸಮಸ್ಯೆಯನ್ನು ನಿರ್ವಹಿಸುವ ಸಲುವಾಗಿ ಸಾರ್ವಜನಿಕ ವಾಹನಗಳನ್ನು ಬಳಸಿಕೊಂಡು ಖಾಸಗಿ ವಾಹನಗಳ ಸಂಚಾರವನ್ನು ನಿಯಂತ್ರಿಸಲು ಉತ್ತೇಜನ ನೀಡಲು ನಗರ ಭೂ ಸಾರಿಗೆ ನಿರ್ದೇಶನಾಲಯ ಈ ಯೋಜನೆಯನ್ನು ಪರಿಚಯಿಸಿದ್ದು, ಈ ಯೋಜನೆಯನ್ನು ಸಂಪೂರ್ಣವಾಗಿ ಜಾರಿಗೆ ತಂದಿಲ್ಲ. ನಗರದ ಸಂಚಾರ ಸಮಸ್ಯೆಗಳು, ವಿಶೇಷವಾಗಿ ವಾಣಿಜ್ಯ ಜಿಲ್ಲೆಗಳಲ್ಲಿ ಪಾರ್ಕಿಂಗ್ ಸ್ಥಳಗಳು ಸಾಕಷ್ಟಿಲ್ಲದ ಕಾರಣ ಇನ್ನಷ್ಟು ಹದಗೆಡುತ್ತಲೇ ಇರುವುದರಿಂದ ಈ ಹೊಸ ಉಪಕ್ರಮದ ಭಾಗವಾಗಿ ವಾಣಿಜ್ಯ ಕಟ್ಟಡಗಳು ಈಗ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆಗಳನ್ನು ಹೊಂದಿರಬೇಕು ಅಥವಾ ಪಾರ್ಕಿಂಗ್‌ಗಾಗಿ ನೆಲಮಹಡಿಯ ಹಂತಗಳನ್ನು ಕಾಯ್ದಿರಿಸಬೇಕು ಎಂದು ಹೇಳಿದೆ.

ಬಿಬಿಎಂಪಿ ಮೊದಲ ಹಂತದಲ್ಲಿ ಪೇ-ಆ್ಯಂಡ್-ಪಾರ್ಕ್ ವ್ಯವಸ್ಥೆಯಿಂದ ವಾರ್ಷಿಕ 7 ಕೋಟಿ ಆದಾಯ ನಿರೀಕ್ಷೆಯನ್ನು ಹೊಂದಿದ್ದು, ಈ ಯೋಜನೆಯನ್ನು 14 ಪ್ರಮುಖ ವಾಣಿಜ್ಯ ರಸ್ತೆಗಳಲ್ಲಿ ಜಾರಿಗೆ ತರಲಾಗುತ್ತದೆ. ಜನದಟ್ಟಣೆ ಹೆಚ್ಚಿರುವ ವಾಣಿಜ್ಯ ಪ್ರದೇಶಗಳು ಎಂಬ ಖ್ಯಾತಿ ಪಡೆದಿರುವ ಚರ್ಚ್ ಸ್ಟ್ರೀಟ್, ಸೇಂಟ್ ಮಾರ್ಕ್ ರಸ್ತೆ, ಮ್ಯೂಸಿಯಂ ರಸ್ತೆ, ಲ್ಯಾವೆಲ್ಲೆ ರಸ್ತೆ ಮತ್ತು ಕಸೂರ್ತ ಬಾ ರಸ್ತೆಯಂತಹ ರಸ್ತೆಗಳು ಈಗಾಗಲೇ ಈ ವ್ಯವಸ್ಥೆಯಡಿಯಲ್ಲಿವೆ. ಖಾಸಗಿ ಗುತ್ತಿಗೆದಾರರಿಗೆ ಈ ಪ್ರದೇಶಗಳನ್ನು ನಿರ್ವಹಿಸುವ ಕಾರ್ಯವನ್ನು ನೀಡಲಾಗಿದೆ.

ಮೂರು ದಿನಗಳ ನಾಟಕೋತ್ಸವ

ಬೆಂಗಳೂರು: ನಗರದ ರಂಗಶಂಕರದಲ್ಲಿ ಸಮಷ್ಟಿ ತಂಡದಿಂದ ಜೂ.3ರಿಂದ ಮೂರು ದಿನಗಳ ನಾಟಕೋತ್ಸವವನ್ನು ಆಯೋಜಿಸಲಾಗಿದ್ದು, ಮೂರು ದಿನ ಜನಪ್ರಿಯ ಹಾಗೂ ಹಾಸ್ಯ ನಾಟಕಗಳನ್ನು ಪ್ರದರ್ಶಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ. ಜೂನ್ 3ರಂದು ರಂಗಶಂಕರದಲ್ಲಿ ಸಂಜೆ 7.30 ಗಂಟೆಗೆ ನೀರು ಕುಡಿಸಿದ ನೀರೆಯರು ನಾಟಕ ಪ್ರದರ್ಶನವಿರಲಿದೆ. ಜೂನ್ 4ರಂದು ಸಂಜೆ 7.30ಕ್ಕೆ ಮುಕ್ಕಾಂ ಪೋಸ್ಟ್ ಬೊಂಬಿಲವಾಡಿ ನಾಟಕ ಹಾಗೂ ಜೂನ್ 5ರಂದು ಸಂಜೆ 7.30ಕ್ಕೆ ಮಿಸ್. ಸದಾರಮೆ ನಾಟಕದ ಪ್ರದರ್ಶನವಿರಲಿದೆ. ಹೆಚ್ಚಿನ ಮಾಹಿತಿಗೆ ; 98451 63380, ಅಂತರ್ಜಾಲ: www.samashti.com, ಮಿಂಚಂಚೆ : ravisamashti.com ಸಂಪರ್ಕಿಸಿ.

ವಕೀಲರ ಪ್ರಾಕ್ಟೀಸ್ ಪ್ರಮಾಣಪತ್ರ ಅರ್ಜಿ ಸಲ್ಲಿಕೆಗೆ ಜೂ.30 ಕೊನೆ ದಿನ

ಬೆಂಗಳೂರು: ತಾತ್ಕಾಲಿಕ ನೋಂದಣಿ ಮಾಡಿಕೊಂಡ ಮೂರು ವರ್ಷದೊಳಗೆ ಎಲ್ಲಾ ವಕೀಲರು ಪಡೆಯಬೇಕಿರುವ ಪ್ರಾಕ್ಟೀಸ್ ಪ್ರಮಾಣಪತ್ರಕ್ಕಾಗಿ (ಸರ್ಟಿಫಿಕೇಟ್ ಆಫ್ ಪ್ರಾಕ್ಟೀಸ್– ಸಿಒಪಿ) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಜೂ.30ರ ತನಕ ಕರ್ನಾಟಕ ವಕೀಲರ ಪರಿಷತ್ ವಿಸ್ತರಿಸಿದೆ.



ಭಾರತೀಯ ವಕೀಲರ ಪರಿಷತ್ ಆದೇಶದಂತೆ ಅಖಿಲ ಭಾರತ ವಕೀಲರ ಪರೀಕ್ಷೆಯಲ್ಲಿ ಅರ್ಹರಾದ ವಕೀಲರು ಮಾತ್ರ ದೇಶದ ನ್ಯಾಯಾಲಯಗಳಲ್ಲಿ ಪ್ರಾಕ್ಟೀಸ್ ಮುಂದುವರಿಸಲು ಸಿಒಪಿ ಪಡೆಯಬೇಕಾಗುತ್ತದೆ. ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಲ್ಲಿ 1,19,179 ವಕೀಲರು ನೋಂದಾವಣಿಯಾಗಿದ್ದು, ಅದರಲ್ಲಿ ವಕೀಲರು ಈಗಾಗಲೇ ಸಿ.ಓ.ಪಿ ಅರ್ಜಿಗಳನ್ನು 2016, 2019 ಮತ್ತು 2023 ರಲ್ಲಿ ಸ್ವೀಕರಿಸಲಾಗಿದೆ. ಇದೂವರೆಗೂ ಅಂದರೆ 2025 ರವರೆಗೂ 66,747 ಅರ್ಜಿಗಳು ಮಾತ್ರ ಸ್ವೀಕೃತವಾಗಿವೆ ಎಂದು ಪರಿಷತ್ ತಿಳಿಸಿದೆ. ತಮ್ಮ ವಕೀಲರ ಸಂಘದ ಎಲ್ಲಾ ವಕೀಲರಿಗೆ ಸಿಒಪಿ ಅರ್ಜಿಯನ್ನು ಸಲ್ಲಿಸುವಾಗ ಹಾಲಿ ಇರುವ ಅಂದರೆ ಯಾವ ವಕೀಲರ ಸಂಘದಲ್ಲಿ ನೋಂದಾವಣಿ ಪಡೆದುಕೊಂಡಿರುವ ತಮ್ಮ ವಾಸಸ್ಥಳದ ವಿಳಾಸವನ್ನು ನಮೂದಿಸತಕ್ಕದ್ದು. ಯಾರು ಸಿಒಪಿ ಅರ್ಜಿ ಸಲ್ಲಿಸುವುದಿಲ್ಲವೋ ಅಂತಹವರಿಗೆ ವಕೀಲರ ಸಂಘದಲ್ಲಿ ನಡೆಯುವ ಚುನಾವಣೆಯಲ್ಲಿ ಹಾಗೂ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಚುನಾವಣೆಯಲ್ಲಿ ಮತದಾನದ ಹಕ್ಕು ಇರುವುದಿಲ್ಲ ಅಲ್ಲದೇ ಅಂತಹವರ ವಿರುದ್ಧ ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಕಾನೂನು ಕ್ರಮಕೈಗೊಳ್ಳಲಾಗುವುದು ಅಲ್ಲದೇ ವಕೀಲರ ಕಲ್ಯಾಣ ನಿಧಿಯಿಂದ ಯಾವುದೇ ರೀತಿಯ ಸೌಲಭ್ಯಗಳು ದೊರುಕುವುದಿಲ್ಲ ಎಂದು ಪರಿಷತ್ ಅಧ್ಯಕ್ಷ ಮಿಟ್ಟಲಕೋಡ ತಿಳಿಸಿದ್ದಾರೆ.

ಮಾರುಕಟ್ಟೆ ಸುತ್ತ ಸ್ವಚ್ಛತೆ ಕಾಪಾಡಿ: ಮಹೇಶ್ವರ್ ರಾವ್

ಬೆಂಗಳೂರು: ನಗರದ ಕೆ.ಆರ್. ಮಾರುಕಟ್ಟೆಯ ಸುತ್ತಮುತ್ತಲಿನ ಪ್ರದೇಶ ಹಾಗೂ ರಸ್ತೆಗಳಲ್ಲಿ ಸ್ವಚ್ಛತೆ ಕಾಪಾಡಬೇಕು ಎಂದು ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್‌ರಾವ್ ಸೂಚನೆ ನೀಡಿದರು.

ಕೆ.ಆರ್ ಮಾರುಕಟ್ಟೆಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿ, ಕೆ.ಆರ್ ಮಾರುಕಟ್ಟೆ ಸುತ್ತಮುತ್ತಲಿನ ಪ್ರದೇಶಗಳು ಮತ್ತು ರಸ್ತೆಗಳನ್ನು ಪ್ರೆಶರ್ ಜೆಟ್ಟಿಂಗ್ ಯಂತ್ರಗಳ ಮೂಲಕ ಸ್ವಚ್ಛಗೊಳಿಸಬೇಕು. ಮಾರುಕಟ್ಟೆಯಲ್ಲಿ ಉತ್ಪತ್ತಿ ಆಗುವ ತ್ಯಾಜ್ಯವನ್ನು ಸಮರ್ಕವಾಗಿ ವಿಲೇವಾರಿ ಮಾಡಬೇಕು. ಎಲ್ಲಿಯೂ ತ್ಯಾಜ್ಯ ಬಿಸಾಡದಂತೆ ನೋಡಿಕೊಂಡು ಸದಾ ಸ್ವಚ್ಛತೆಯಿರುವಂತೆ ನೋಡಿಕೊಳ್ಳಬೇಕು. ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡುತ್ತಿರುವವರ ಸಮೀಕ್ಷೆ ಮಾಡಿ, ಹೆಚ್ಚುವರಿ ಜಾಗ ಆಕ್ರಮಿಸಿಕೊಂಡು ವ್ಯಾಪಾರ ಮಾಡದಂತೆ ಅಗತ್ಯ ಕ್ರಮವಹಿಸಬೇಕು. ಅಂಗಡಿಗಳ ನಡುವಿನ ಅಂತರಕ್ಕಾಗಿ ಮಾಸ್ಟರ್ ಪ್ಲಾನ್ ಮಾಡಬೇಕು ಎಂದು ಮಾರ್ಷಲ್ ಮೇಲ್ವಿಚಾರಕರಿಗೆ ಸೂಚನೆ ನೀಡಿದರು.

ಸಂಚಾರಿ ಪೊಲೀಸ್ ವಿಭಾಗದಿಂದ ಸೀಜ್/ವಶಪಡಿಸಿಕೊಂಡಿರುವ ವಾಹನಗಳನ್ನು ಕೆ.ಆರ್ ಮಾರುಕಟ್ಟೆಯ ಪಾರ್ಕಿಂಗ್ ಸ್ಥಳದಲ್ಲಿದ್ದು, ಅವುಗಳನ್ನು ಕೂಡಲೇ ತೆರವುಗೊಳಿಸಬೇಕು. ಜತೆಗೆ ತುಂಬಾ ದಿನಗಳಿಂದ ನಿಂತಿರುವ ವಾಹನಗಳನ್ನು ಗುರುತಿಸಿ ಸಂಚಾರಿ ಪೊಲೀಸ್ ಸಹಯೋಗದೊಂದಿಗೆ ತೆರವುಗೊಳಿಸಬೇಕು ಎಂದು ಸೂಚನೆ ನೀಡಿದರು. ಈ ವೇಳೆ ಪಶ್ಚಿಮ ವಲಯ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್, ಮುಖ್ಯ ಅಭಿಯಂತರರಾದ ಲೋಕೇಶ್, ಬಸವರಾಜ್ ಕಬಾಡೆ, ರಾಜೇಶ್ ಇದ್ದರು.

ಮುಖ್ಯ ಆಯುಕ್ತ ಮಹೇಶ್ವರ್‌ರಾವ್ ಅವರು ಕೆ.ಆರ್.ಮಾರುಕಟ್ಟೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

PUBLIC NOTICE

Public are informed that our clients Sri. G. H. Dhananjay S/o. G. A. Hanumaiah is the absolute owner of Middle Portion of the Khaneshumari No. 44, Katha No. 193, Sidadhahalli Village, BBMP, Yeshwanthapura Hobli, Bengaluru North Taluk, measuring East to West: 62+76/2 Feet, and North to South: 13.5 Feet, totally measuring 931.5 sq. ft. and bounded on the :
East by : Hesarghatta Main Road,
West by : 25 feet Road,
North by: Remaining portion of same property,
South by : Remaining portion of same property.

and same was purchased by him from its predecessor in title i.e. Deepa J. Kataria, Piyoosh Kataria and Simran Kataria, under the sale deed dated 27/5/2011, vide regd. as doc. No. 1405/2011-12.

Now informing general public that Sri. G. H. Dhananjay S/o. G. A. Hanumaiah intent to mortgage the said property in favour of M/s SMFG India Credit Company Limited and anyone having any claim over the said property or any other claims by any person/s Nationalized banks, MNC Banks Private Banks, Co-Operative Banks any Financial institutions Governed by the RBI Rules may lodge their objections in writing within 07 days from this day to the under mentioned Advocate.

K. S. Ravi
ADVOCATE
OFFICE# 53/1, 1th Floor, Guttahalli Main Road,
D.T. Street, 8th Cross, Malleshwaram,
Bangalore – 560 003
Email: raviksadvocate@gmail.com
Mobile: 99450 00789

ಸಾರ್ವಜನಿಕ ಸೂಚನೆ

ಜಿಎಸ್‌ಎಸ್ ಪ್ರಾಸ್ಪರ್ ಸ್ಪ್ರಿಂಗ್ಸ್ ಪ್ರೈವೇಟ್ ಲಿಮಿಟೆಡ್
CIN: U74999KA2017PTC107903
ನೋಂದಾಯಿತ ವಿಳಾಸ : ಜಿ 05 ಸುಮಧುರ ಶಾಂಗ್ರಿಲಾ ಸೀತಾರಾಮಪಾಳ್ಯ, ಮಹದೇವಪುರ ಬೆಂಗಳೂರು, ಕರ್ನಾಟಕ, ಭಾರತ–560048
ಇ–ಮೇಲ್ : gsmash95@gmail.com
ದಿನಾಂಕ : 02ನೇ ಜೂನ್, 2025

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಜಿಎಸ್‌ಎಸ್ ಪ್ರಾಸ್ಪರ್ ಸ್ಪ್ರಿಂಗ್ಸ್ ಪ್ರೈವೇಟ್ ಲಿಮಿಟೆಡ್ ("ಕಂಪನಿ") ಪ್ರತಿನಿಧಿತ್ವದ ಈಕ್ವಿಟಿ ಮತ್ತು ಆದ್ಯತಾ ಪಾಲು ಬಂಡವಾಳದ ಎಲ್ಲಾ ಮೂಲ ಷೇರು ಪ್ರಮಾಣಪತ್ರಗಳು 18ನೇ ಮತ್ತು 19, 2025ರಂದು ಸಂಭವಿಸಿದ ಮಳೆ ಅನಾಹುತದಿಂದಾಗಿ ಸಂಪೂರ್ಣವಾಗಿ ಹಾನಿಗೊಂಡಿದೆ. ಕಂಪನಿಯು ಈ ಸಂಬಂಧ ನಕಲಿ ಪ್ರಮಾಣಪತ್ರಗಳನ್ನು ನೀಡಲು ಆರಂಭಿಸಿದೆ. ಹೇಳಲಾದ ನಕಲಿ ಪ್ರಮಾಣಪತ್ರಗಳನ್ನು ವಿತರಿಸುವ ಬಗ್ಗೆ ಯಾವುದೇ ವ್ಯಕ್ತಿ ಯಾವುದೇ ಕ್ಲೈಮು ಅಥವಾ ಆಕ್ಷೇಪಣೆ ಇದ್ದಲ್ಲಿ ಅಂಥವರು ಕಂಪನಿಯ ಈ ಮೇಲೆ ಹೆಸರಿಸಿದ ವಿಳಾಸಕ್ಕೆ ಈ ನೋಟೀಸ್ ಪ್ರಕಟವಾದ 15 ದಿನಗಳ ಒಳಗಾಗಿ ಸಂಪರ್ಕಿಸಲು ಕೋರಲಾಗಿದೆ. ನಿಗದಿತ ಸಮಯದಲ್ಲಿ ಬರದೇ ಇದ್ದಲ್ಲಿ, ನಕಲಿ ಷೇರು ಪ್ರಮಾಣ ಪತ್ರಗಳನ್ನು ವಿತರಿಸುವ ಬಗ್ಗೆ ಎಲ್ಲರ ಸಮಹತ ಇದೆ ಎಂದು ಭಾವಿಸಿ, ಮುಂದುವರಿಯಾಗುವುದು.

ಸಂಪರ್ಕವಿಳಾಸ :
ಹೆಸರು: ಸಮೀರ್ ಶಶಾಂಕ್ ಗಟ್ಟುಪಲ್ಲಿ
ಹುದ್ದೆ: ವ್ಯವಸ್ಥಾಪಕ ನಿರ್ದೇಶಕರು
ದೂರವಾಣಿ ಸಂ. +91 97722 18600
ಇ–ಮೇಲ್ ವಿಳಾಸ : sameer@moneyplanned.com
ಸಹಿ/–
ಸಮೀರ್ ಶಶಾಂಕ್ ಗಟ್ಟುಪಲ್ಲಿ
ನಿರ್ದೇಶಕರು
ಜಿಎಸ್‌ಎಸ್ ಪ್ರಾಸ್ಪರ್ ಸ್ಪ್ರಿಂಗ್ಸ್ ಪ್ರೈವೇಟ್ ಲಿಮಿಟೆಡ್

ಕೆಲಸಕ್ಕಿದ್ದ ಉದ್ಯಮಿ ಮನೆಗೇ ಕನ್ನ ಹಾಕಿ ಪರಾರಿಯಾದ ದಂಪತಿ

ಬೆಂಗಳೂರು: ಉದ್ಯಮಿಯೊಬ್ಬರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ನೇಪಾಳ ಮೂಲದ ದಂಪತಿ ಆ ಮನೆಯಲ್ಲಿ ಕಳ್ಳತನವೆಸಗಿ ಪರಾರಿಯಾದ ಘಟನೆ ಬೆಳಕಿಗೆ ಬಂದಿದೆ. ಎಚ್‌ಎಎಲ್ ಠಾಣೆ ವ್ಯಾಪ್ತಿಯ ಶಾಸ್ತ್ರಿನಗರದಲ್ಲಿರುವ ರಮೇಶ್ ಬಾಬು ಎಂಬವರ ಮನೆಯಲ್ಲಿ ಘಟನೆ ನಡೆದಿದ್ದು, ಮನೆ ಕೆಲಸ ಮಾಡುತ್ತಿದ್ದ ರಾಜ್ ಹಾಗೂ ದೀಪಾ ದಂಪತಿ ಮನೆಯಲ್ಲಿದ್ದ 2 ಕೆ.ಜಿ ಚಿನ್ನಾಭರಣ, 10 ಲಕ್ಷ ರುಪಾಯಿ ನಗದು, ಪರವಾಗಿ ಹೊಂದಿದ್ದ ಪಿಸ್ತೂಲ್ ದೋಚಿಕೊಂಡು ಪರಾರಿಯಾಗಿದ್ದಾರೆ.

ತಿರುಪತಿಗೆ ತೆರಳಿದ್ದಾಗ ದಂಪತಿಯಿಂದ ಕೃತ್ಯ: ರಮೇಶ್ ಬಾಬು ಅವರ ಮನೆಯಲ್ಲಿ ಸೆಕ್ಯೂರಿಟಿ ಹಾಗೂ ಮನೆಗೆಲಸಕ್ಕೆಂದು 3 ತಿಂಗಳ ಹಿಂದಷ್ಟೆ ರಾಜ್ ಹಾಗೂ ದೀಪಾ ದಂಪತಿಯನ್ನು ನೇಮಿಸಿಕೊಳ್ಳಲಾಗಿತ್ತು. ಮೇ 27ರಂದು ರಮೇಶ್ ಬಾಬು ಅವರು ರಾಜ್ ದಂಪತಿಯನ್ನು ಮನೆಯಲ್ಲಿ ಬಿಟ್ಟು ಕುಟುಂಬ ಸಮೇತ ತಿರುಪತಿಗೆ ತೆರಳಿದ್ದರು. ತಿರುಪತಿಯಲ್ಲಿದ್ದ ರಮೇಶ್ ಬಾಬು ಅವರು ಮೇ 28ರಂದು ಬೆಳಗಿನ ಜಾವ ತಮ್ಮ ಮೊಬೈಲ್ ಫೋನ್ ಮೂಲಕ ಪರಿಶೀಲಿಸಿದಾಗ ಮನೆಯ ಸಿಸಿಟಿವಿ ಕ್ಯಾಮೆರಾಗಳು ಆಫ್ ಆಗಿರುವುದು ಕಂಡು ಬಂದಿತ್ತು.

ನೇಪಾಳಿ ದಂಪತಿ

ವಿದ್ಯುತ್ ವ್ಯತ್ಯಯ ಆಗಿರಬಹುದು ಎಂದುಕೊಂಡ ರಮೇಶ್ ಬಾಬು ಹೆಚ್ಚು ತಲೆಕಡಿಸಿಕೊಂಡಿರಲಿಲ್ಲ. ಆದರೆ ಬೆಳಗ್ಗೆ ಪಕ್ಕದ ಮನೆಯವರು ಕರೆ ಮಾಡಿ, ನಿಮ್ಮ ಮನೆಯಲ್ಲಿ ಯಾರೂ ಇಲ್ಲ ಎಂದು ರಮೇಶ್ ಬಾಬು ಅವರಿಗೆ ತಿಳಿಸಿದ್ದರು. ತಕ್ಷಣ ಎಚ್ಚೆತ್ತ ರಮೇಶ್ ಬಾಬು, ತಮ್ಮ ಸ್ನೇಹಿತರ ಮೂಲಕ ಮನೆ ಬಳಿ ಪರಿಶೀಲಿಸಿದಾಗ ಮನೆಯ ಮೇನ್ ಡೋರ್, ಬೆಡ್ ರೂಮ್ ಬಾಗಿಲುಗಳನ್ನು ಮುರಿದು ಕಳ್ಳತನ ಎಸಗಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ರಮೇಶ್ ಬಾಬು ಎಚ್‌ಎಎಲ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ. ಆರೋಪಿಗಳಿಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

11.5 ಲಕ್ಷ ನಗದು ದೋಚಿ ಪರಾರಿ

ಬೆಂಗಳೂರು: ಕಾರ್ ಗ್ಲಾಸ್ ಒಡೆದು 11.5 ಲಕ್ಷ ರು. ನಗದು ದೋಚಿ ಕಳ್ಳರು ಪರಾರಿಯಾಗಿರುವ ನೆಲಮಂಗಲದ ಅಂಬೇಡ್ಕರ್ ಭವನದ ಮುಂಭಾಗದಲ್ಲಿ ನಡೆದಿದೆ.

ಖದೀಮರು ಕಾರಿನ ಗ್ಲಾಸ್ ಒಡೆದು ನಗದು ದೋಚುತ್ತಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅತೀಕ್ ರೆಹಮಾನ್ ಎಂಬವರಿಗೆ ಸೇರಿದ್ದ 11.5 ಲಕ್ಷ ರು. ನಗದು ಹಣವನ್ನು ಕಳ್ಳರು ದೋಚಿದ್ದಾರೆ. ಅತೀಕ್ ರೆಹಮಾನ್ ದಾಬಸ್ ಪೇಟೆಯಲ್ಲಿ ಲಾಜಿಸ್ಟಿಕ್ಸ್ ನಡೆಸುತ್ತಿದ್ದರು. ಈ ವೇಳೆ ಅತೀಕ್ ಅಣ್ಣ ಬ್ಯಾಂಕ್‌ನಿಂದ ಹಣ ತರುವಂತೆ ಸೂಚನೆ ನೀಡಿದ್ದರು. ಅದರಂತೆ ಅತೀಕ್ ದಾಬಸ್ ಪೇಟೆಯಿಂದ ಹಣ ತೆಗೆದುಕೊಂಡು ಬಂದಿದ್ದರು. ಬಳಿಕ ಅವರು ಕಾರಿನಲ್ಲಿ ಹಣದ ಬ್ಯಾಗ್ ಇಟ್ಟು, ನೆಲಮಂಗಲದಲ್ಲಿ ಮಿಕ್ಸಿ ರಿಪೇರಿ ಮಾಡಿಸಲು ಹೋಗಿದ್ದರು. ವಾಪಸ್ ಬಂದು ನೋಡಿದಾಗ ಖದೀಮರು ಕಾರಿನ ಗ್ಲಾಸ್ ಒಡೆದು ಹಣ ಕಳ್ಳತನ ಮಾಡಿರುವುದು ಬೆಳಕಿಗೆ ಬಂದಿದೆ.

ಚಾಲಕನ ಮೇಲೆ ಚಪ್ಪಲಿಯಿಂದ ಹಲ್ಲೆ

ಬೆಂಗಳೂರು: ಬೆಳ್ಳಂದೂರಿನಲ್ಲಿ ಆಟೋ ಚಾಲಕನ ಮೇಲೆ ಚಪ್ಪಲಿಯಿಂದ ಹಲ್ಲೆ ಮಾಡಿದ್ದ ಮಹಿಳೆ ಪೊಲೀಸರ ಮುಂದೆ ವಿಚಾರಣೆಗೆ ಹಾಜರಾಗಿ ಹೇಳಿಕೆ ದಾಖಲಿಸಿದ್ದಾಳೆ. ವಿಚಾರಣೆ ವೇಳೆ ಆಟೋ ಚಾಲಕನ ಮೇಲೆ ಹಲ್ಲೆ ಮಾಡಿರುವುದನ್ನು ಮಹಿಳೆ ಒಪ್ಪಿಕೊಂಡಿದ್ದಾಳೆ.

ಹಲ್ಲೆ ಮಾಡಿದ್ದ ಮಹಿಳೆ ಪನ್ಖೂರಿ ಮಿಶ್ರಾಳನ್ನು (28) ಬೆಳ್ಳಂದೂರು ಪೊಲೀಸ್ ಠಾಣೆಗೆ ಕರೆಸಲಾಗಿತ್ತು. ಮಹಿಳೆ ಬಿಹಾರ ಮೂಲದವಳಾಗಿದ್ದು, ತನ್ನ ಪತಿಯೊಂದಿಗೆ ವಾಸವಾಗಿದ್ದಾಳೆ ಎಂದು ತಿಳಿದು ಬಂದಿದೆ. ಗರ್ಭಿಣಿ ಯಾಗಿರುವ ಮಹಿಳೆ, ಆಸ್ಪತ್ರೆಗೆ ತೆರಳಿ ವಾಪಸ್ ಆಗುತ್ತಿದ್ದಳು.

ಈ ವೇಳೆ ಬೆಳ್ಳಂದೂರು ಬಳಿ ಆಕೆಯ ದ್ವಿಚಕ್ರ ವಾಹನಕ್ಕೆ ಹಿಂದಿನಿಂದ ಆಟೋ ಡಿಕ್ಕಿಯಾಗಿತ್ತು ಎಂದು ಹೇಳಿಕೊಂಡಿದ್ದಾಳೆ. ಇದನ್ನ ಪ್ರಶ್ನಿಸಿದ್ದಕ್ಕೆ ಆಟೋ ಡ್ರೈವರ್ ಬೈದು ಹಲ್ಲೆಗೆ, ಯತ್ನಿಸಿದ್ದಾನೆ ಎಂದು ಮಹಿಳೆ ಆರೋಪಿಸಿದ್ದಾಳೆ.

ಘಟನೆ ವೇಳೆ ಕೋಪ ಗೊಂಡು ಚಪ್ಪಲಿಯಿಂದು ಹಲ್ಲೆ ಮಾಡಿದೆ ಎಂದು ಪೊಲೀಸರ ಮುಂದೆ ಹೇಳಿಕೊಂಡಿದ್ದಾಳೆ. ಮಹಿಳೆಯ ಹೇಳಿಕೆ ದಾಖಲಿಸಿ ಕೊಂಡು ಪೊಲೀಸರು ಆಕೆಯನ್ನು ವಾಪಸ್ ಕಳುಹಿಸಿದ್ದಾರೆ. ಘಟನೆ ಸಂಬಂಧ ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಹಲ್ಲೆ ಮಾಡಿದ್ದ ಮಹಿಳೆಯ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಆಟೋ ಚಾಲಕರು ಹಾಗೂ ಸಾರ್ವಜನಿಕರು ಆಗ್ರಹಿಸಿದ್ದರು.

ಅಪರಾಧ ಸುದ್ದಿಗಳು

ಯುವತಿ ಮೇಲೆ ಬಸ್ ಹತ್ತಿಸಲು ಯತ್ನ: ಚಾಲಕ ಅಮಾನತು

ಬೆಂಗಳೂರು: ಬೆಂಗಳೂರಿನಲ್ಲಿ ಬಸ್ ಅಡ್ಡಗಟ್ಟಿದ ಯುವತಿ ಮೇಲೆ ಬಸ್ ನುಗ್ಗಿಸಲು ಪ್ರಯತ್ನಿಸಿದ ಬಸ್ ಚಾಲಕನನ್ನು ಅಮಾನತು ಗೊಳಿಸಿ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಆದೇಶ ಹೊರಡಿಸಿದ್ದಾರೆ.

ಪ್ರಶಾಂತ್ ಅಮಾನತಾದ ಚಾಲಕ. ಬಿಎಂ ಟಿಸಿ ಬಸ್ ಪಕ್ಕ ಕಾರಿನಲ್ಲಿದ್ದ ಯುವತಿ ಕಾರಿನಿಂದ ಇಳಿದು ಬಸ್ ಚಾಲಕನನ್ನು ಪ್ರಶ್ನೆ ಮಾಡಿದ್ದಾಳೆ. ಯಾವ ವಿಚಾರವಾಗಿ ಯುವತಿ ಪ್ರಶ್ನೆ ಮಾಡಿದ್ದಾಳೆ ಎಂಬ ಕುರಿತು ಸ್ಪಷ್ಟತೆ ದೊರೆತಿಲ್ಲ. ಬಳಿಕ ಬಸ್ ಚಾಲಕ ಮತ್ತು ಯುವತಿ ನಡುವೆ ಜಗಳ ನಡೆದು ಬಸ್ ಚಾಲಕನನ್ನು ಪ್ರಶ್ನೆ ಮಾಡಲು ಯುವತಿ ಸಿಗ್ನಲ್‌ನಲ್ಲಿ ಬಸ್ ಅಡ್ಡಗಟ್ಟಿದ್ದಳು. ಆದರೆ, ಯುವತಿಯನ್ನು ಲೆಕ್ಕಿಸದೇ ಚಾಲಕ ಬಸ್ ನುಗ್ಗಿಸಲು ಮುಂದಾಗಿದ್ದಾನೆ. ಸ್ವಲ್ಪದರಲ್ಲೇ ಯುವತಿ ಪಾರಾಗಿದ್ದು, ಚಾಲಕನ ಕೃತ್ಯದಿಂದ ಜನ ಬೆಚ್ಚಿಬಿದ್ದಿದ್ದಾರೆ. ಡಿಪೋ ನಂಬರ್ 17, ಚಂದ್ರಾಲೇಔಟ್ ಡಿಪೋಗೆ ಸೇರಿದ ಬಸ್ ಇದಾಗಿದೆ. ಮೇ 23ರಂದು ಸಂಜೆ 5:40ಕ್ಕೆ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಏಕಾಏಕಿ ಯುವತಿಯ ಮೇಲೆ ಬಸ್ ಹತ್ತಿಸಲು ಹೊರಟಿದ್ದ ಚಾಲಕನ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ.

ವಾಹನ ಅಡ್ಡಗಟ್ಟಿ ದರೋಡೆ ಡಿಜಿ-ಐಜಿಪಿಗೆ ದೂರು

ಬೆಂಗಳೂರು: ನಗರದ ಮೂಲಕ ಹಾದು ಹೋಗಿರುವ ರಾಷ್ಟ್ರೀಯ–ರಾಜ್ಯ ಹೆದ್ದಾರಿಗಳಲ್ಲಿ ದರೋಡೆ ತಂಡವು ಸಕ್ರಿಯವಾಗಿದ್ದು, ವಾಹನಗಳನ್ನು ಅಪಘಾತಕ್ಕೀಡು ಮಾಡಿ ದರೋಡೆ ನಡೆಸಲಾಗುತ್ತಿದೆ. ಪ್ರಯಾಣಿಕ ರಿಂದ ಹಣ ಹಾಗೂ ಚಿನ್ನಾಭರಣ ದೋಚ ಲಾಗುತ್ತಿದೆ. ಬೆಂಗಳೂರು–ಚೆನ್ನೈ ಎಕ್ಸ್ ಪ್ರೆಸ್ ವೇನಲ್ಲಿ ದರೋಡೆ ತಂಡವು ಸಕ್ರಿಯವಾಗಿದೆ ಎಂದು ಆರೋಪಿಸಿ ವಕೀಲ ಹುಸೇನ್ ಒವೈಸ್ ಎಂಬುವವರು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ ಅವರಿಗೆ ದೂರು ನೀಡಿದ್ದಾರೆ.

ವೇಗವಾಗಿ ಬರುವ ಕಾರುಗಳನ್ನು ಗುರಿ ಯಾಗಿಸಿ ಹೆದ್ದಾರಿ ಮಧ್ಯದಲ್ಲಿ ಕಲ್ಲುಗಳನ್ನು ಜೋಡಿಸಿಟ್ಟು ಅಪಘಾತ ಮಾಡಿ ದರೋಡೆ ನಡೆಸುತ್ತಿದ್ದಾರೆ. ಹೊಸಕೋಟೆಯಿಂದ ಕೆಜಿಎಫ್ ಮಾರ್ಗದಲ್ಲಿ ಈ ಕೃತ್ಯ ಎಸಗಲಾ ಗುತ್ತಿದೆ. ಆರೋಪಿಗಳ ಚಲನವಲನವು ಕಾರಿನ ಡ್ಯಾಶ್ ಬೋರ್ಡ್ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ದೃಶ್ಯಾವಳಿ ಸಹಿತ ಸಲೀಂ ಅವರಿಗೆ ಹುಸೇನ್ ದೂರು ನೀಡಿದ್ದಾರೆ. ಎಕ್ಸ್‌ಪ್ರೆಸ್ ವೇನಲ್ಲಿ ಕೆಜಿಎಫ್ ಸ್ಟ್ರೆಚ್ ಬಳಿ ಕಲ್ಲು, ಕಬ್ಬಿಣದ ರಾಡುಗಳನ್ನು ಇಟ್ಟು ಅಪಘಾತ ಮಾಡುತ್ತಿರುವ ದುಷ್ಕರ್ಮಿಗಳು, ಬಳಿಕ ದರೋಡೆ ಮಾಡುತ್ತಿದ್ದಾರೆ.

32 ಸಾವಿರ ಮುಂಗಡ ಪಡೆದು ಮಹಿಳೆ ಪರಾರಿ

ಬೆಂಗಳೂರು: ಮಗುವನ್ನು ನೋಡಿ ಕೊಳ್ಳಲು ಬಂದ ಯುವತಿಯೊಬ್ಬಳು ಕೇವಲ 30 ನಿಮಿಷದಲ್ಲಿ 32,000 ಪಡೆದು ಎಸ್ಕೇಪ್ ಆಗಿರುವ ಘಟನೆ ಬೆಂಗಳೂರಿನ ಕುಂಬಳಗೋಡಿನಲ್ಲಿ ನಡೆದಿದೆ.

ಇಲ್ಲಿನ ನಿವಾಸಿಯಾದ ರಶ್ಮಿ ಸೇಲ್ಸ್ ಮ್ಯಾನೇಜರ್ ಆಗಿದ್ದು, ಪತಿ ಅನೂಪ್ ಖಾಸಗಿ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದಾರೆ. ಈ ದಂಪತಿಗೆ ಒಂದೂವರೆ ವರ್ಷದ ಮಗುವಿದೆ. ಮನೆಯಲ್ಲಿ ನೋಡಿಕೊಳ್ಳಲು ಯಾರೂ ಇಲ್ಲ ಎಂದು ಸುಲೇಖಾ ಆಪ್ ಮೂಲಕ ಸಮೀಕ್ಷ ಮೇಡ್ ಸರ್ವಿಸ್‌ನಲ್ಲಿ ಮನೆ ಕೆಲಸದವರನ್ನು ಹುಡುಕಿದ್ದರು. ಈ ವೇಳೆ ಆಪ್‌ನಲ್ಲಿ ಸಚಿನ್ ಎಂಬಾತ ಸಂಪರ್ಕಕ್ಕೆ ಬಂದು ಬಿಮಲಾ ಎಂಬ ಯುವತಿಯನ್ನು ಕೆಲಸಕ್ಕೆ ಕಳುಹಿಸಿ ಕೊಡೋದಾಗಿ ಹೇಳಿದ್ದರು. ಅದರಂತೆ ಯುವತಿ ಬಿಮಲಾ, ಆ ದಂಪತಿಗಳ ಮನೆಗೆ ಬಂದು ಅರ್ಧ ಗಂಟೆ ಮನೆಯೆಲ್ಲಾ ಸಂಪೂರ್ಣವಾಗಿ ನೋಡಿಕೊಂಡು ಎರಡು ತಿಂಗಳ ಸಂಬಳ ಅಡ್ವಾನ್ಸ್ ಎಂದು 32,000 ಪಡೆದು ಫೋನ್‌ನಲ್ಲಿ ಮಾತಾಡುವಂತೆ ನಟಿಸಿ ಅಲ್ಲಿಂದ ಎಸ್ಕೇಪ್ ಆಗಿದ್ದಾಳೆ. ಯುವತಿ ವಾಪಸ್ ಬರದೇ ಇದ್ದಾಗ ಅನುಮಾನಗೊಂಡು ಪರಿಶೀಲನೆ ನಡೆಸಿದ ವೇಳೆ ಮೋಸ ಹೋಗಿರುವುದು ಗೊತ್ತಾಗಿದೆ. ಒಂದು ವೇಳೆ ಮಗುವನ್ನು ಆರೈಕೆಗೆ ಆಕೆಯ ಕೈಗೆ ಕೊಟ್ಟು ಹೋಗಿದ್ದರೆ ಏನಾಗುತ್ತಿತ್ತು? ಮನೆಯಲ್ಲಿದ್ದ ಹಣ, ಚಿನ್ನಾಭರಣದ ಗತಿಯೇನು ಎಂದು ರಶ್ಮಿ ದಂಪತಿಗಳು ನಿಟ್ಟುಸಿರು ಬಿಟ್ಟಿದ್ದಾರೆ. ಈ ಬಗ್ಗೆ ಕುಂಬಳಗೂಡು ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ.

ನಾಳೆ ದತ್ತಿ ಪ್ರಶಸ್ತಿ ಪ್ರದಾನ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ನೀಡಲಾಗುವ ಎಂ.ಎಲ್. ಮಾದಯ್ಯ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭವು ಜೂನ್ 3ರಂದು ಸಂಜೆ 4.30 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ಆಯೋಜಿಸಲಾಗಿದೆ. ಕರ್ನಾಟಕ ಗಾಂದಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ. ವೂಡೇ.ಪಿ. ಕೃಷ್ಣ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ ಅಧ್ಯಕ್ಷತೆ ವಹಿಸಲಿದ್ದಾರೆ. ಲೋಕೋಪಯೋಗಿ ಇಲಾಖೆಯ ನಿವೃತ್ತ ಮುಖ್ಯ ಅಭಿಯಂತರ ಎಸ್. ರಾಮದಾಸ್‌ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಮಳೆ ಅವಾಂತರ: ಡ್ರೋನ್ ಮೂಲಕ ಬಿಬಿಎಂಪಿ ನಿಗಾ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದಲ್ಲಿ ಪೂರ್ವ ಮುಂಗಾರು ಮಳೆಯ ಅಬ್ಬರಕ್ಕೆ ಪ್ರವಾಹದ ಸ್ಥಿತಿಯುಂಟಾಗಿದ್ದು, ಈ ಹಿನ್ನೆಲೆ ಮಳೆಗಾಲದಲ್ಲಿ ಉಂಟಾಗುವ ಸಾಲು ಸಾಲು ಅವಾಂತರಗಳು ಹಾಗೂ ನಗರದ ಸ್ಥಿತಿಗತಿಗಳನ್ನು ಪರಿಶೀಲಿಸಲು ಪಾಲಿಕೆ ಹೊಸ ಕ್ರಮಕ್ಕೆ ಮುಂದಾಗಿದೆ.

ಸಣ್ಣ ಮಳೆಗೂ ನದಿಯಂತಾಗುವ ನಗರದ ಸ್ಥಿತಿಯನ್ನು ಸುಧಾರಿಸಲು ಸರಿಯಾದ ಕ್ರಮ ಕೈಗೊಳ್ಳಲು ಪಾಲಿಕೆ ಮುಂದಾಗಿದ್ದು, ಮಳೆಯಿಂದಾಗುವ ಅವಾಂತರಗಳನ್ನು ನಿಯಂತ್ರಿಸಲು ಒಂದರ ಹಿಂದೊಂದರಂತೆ ಹೊಸ ಪ್ರಯೋಗಕ್ಕೆ ಕೈ ಹಾಕುತ್ತಿದೆ. ಮೊನ್ನೆ ಮೊನ್ನೆಯಷ್ಟೇ ಬೋಟ್, ಲೈಫ್ ಜಾಕೆಟ್ ಖರೀದಿಗೆ ಟೆಂಡರ್ ಕರೆದಿದ್ದ ಬಿಬಿಎಂಪಿಯು ಮುಂದುವರಿದು ಮಳೆ ಹಾನಿ ಪ್ರದೇಶಗಳ ಮೇಲೆ ನಿಗಾ ವಹಿಸಲು ಡ್ರೋನ್ ಬಳಕೆಗೆ ಮುಂದಾಗಿದೆ. ನಗರದಲ್ಲಿ ಮಳೆ ಬಂದಾಗ ಜಲಾವೃತವಾಗುವ ಪ್ರದೇಶಗಳು, ಮಳೆಹಾನಿ ಪ್ರದೇಶಗಳಲ್ಲಿ ಡ್ರೋನ್ ಹಾರಿಸಿ ಮಾಹಿತಿ ಕಲೆ ಹಾಕಲು ಸಿದ್ಧತೆ ನಡೆಸಿದೆ.

ಪೊಲೀಸ್ ಇಲಾಖೆಯ ಜತೆ ಸೇರಿ ಡ್ರೋನ್ ಕಾರ್ಯಾಚರಣೆ ಮೂಲಕ ಮಳೆ ಹಾನಿ ಪ್ರದೇಶಗಳ ಪತ್ತೆಗೆ ಚಿಂತನೆ ನಡೆಸಲಾಗಿದ್ದು, ಡ್ರೋನ್ ಹಾರಾಟ ನಿರ್ವಹಣೆಗೆ ಪೊಲೀಸ್ ಹಾಗೂ ಬಿಬಿಎಂಪಿಯ ಅಧಿಕಾರಿಗಳ ತಂಡದಿಂದ ನೋಡಲ್ ಆಫೀಸರ್‌ಗಳನ್ನು ನೇಮಿಸಿದೆ. ಮಳೆ ಬಂದಾಗ ಯಾವ್ಯಾವ ಪ್ರದೇಶಗಳಲ್ಲಿ ಹಾನಿಯಾಗುತ್ತದೆ ಎಂಬುದನ್ನು ಡ್ರೋನ್ ಮೂಲಕ ಬಿಬಿಎಂಪಿಯ ಕಂಟ್ರೋಲ್ ರೂಮ್‌ನಲ್ಲಿ ಕುಳಿತುಕೊಂಡು ಮಾಹಿತಿ ಕಲೆ ಹಾಕಲಾಗುತ್ತಿದ್ದು, ಇದರಿಂದ, ಎಲ್ಲಿ ಸಮಸ್ಯೆಯಾಗಿದೆ ಎಂಬುದನ್ನು ಪತ್ತೆಹಚ್ಚಿ ಸೂಕ್ತ ಸಮಯಕ್ಕೆ ನೆರವು ನೀಡುವುದಕ್ಕೆ ಅನುಕೂಲವಾಗಲಿದೆ.

ಕಾರ್ಯಾಚರಣೆಯ ವಿಧ

- ಮಳೆ ಅವಾಂತರ ಆಗಿರುವ ಜಾಗದ ಬಗ್ಗೆ ಮಾಹಿತಿ ಸಂಗ್ರಹ
- ಮಳೆ ನೀರಿರುವ ಕಡೆ ಡ್ರೋನ್ ಹಾರಿಸಲಿರುವ ತಂಡ
- ಡ್ರೋನ್ ಹಾರಾಟದ ದೃಶ್ಯಗಳು ಬಿಬಿಎಂಪಿಯ ಕಂಟ್ರೋಲ್ ರೂಮ್‌ನಲ್ಲಿ ಡಿಸ್‌ಪ್ಲೇ
- ಜಲಾವೃತವಾದ ಜಾಗದಲ್ಲಿ ಎಲ್ಲಿ ನೀರು ಹರಿಯಲು ಜಾಗ ಇದೆ ಎಂಬುದನ್ನು ಗುರುತಿಸಲಾಗುತ್ತದೆ
- ಅವಾಂತರ ಆದಲ್ಲಿ ಏನು ಕ್ರಮ ಕೈಗೊಳ್ಳಬೇಕು ಎಂಬುದರ ರೂಪುರೇಷೆ ಸಿದ್ಧತೆ
- ರಕ್ಷಣಾ ಕಾರ್ಯಾಚರಣೆ, ನೀರು ತೆರವು ಕಾರ್ಯಾಚರಣೆಗೆ ಕ್ರಮ ರೂಪಿಸಲು ಯೋಜನೆ

ಕಮಲ್ ಹೇಳಿಕೆಗೆ ತೀವ್ರ ಖಂಡನೆ

ಬೆಂಗಳೂರು: ನಟ ಕಮಲ್ ಹಾಸನ್ ಹೇಳಿಕೆಯನ್ನು ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಡಾ.ಎ.ಆರ್.ಗೋವಿಂದ ಸ್ವಾಮಿ ಖಂಡಿಸಿದ್ದು, ಇದೊಂದು ಭಾಷಾ ದುರಾಭಿಮಾನ ಹೇಳಿಕೆ ಎಂದು ಟೀಕಿಸಿದ್ದಾರೆ.

ಥಗ್ ಲೈಫ್ ಚಿತ್ರದ ಧ್ವನಿ ಸುರಳಿ ಬಿಡುಗಡೆ ಸಮಾರಂಭದಲ್ಲಿ ಕನ್ನಡ ಭಾಷೆ ತಮಿಳಿನಿಂದ ಹುಟ್ಟಿದ್ದು ಎಂದು ರಾಜಕೀಯ ಬೇಳೆ ಬೇಯಿಸಿಕೊಳ್ಳುವ ದುರುದ್ದೇಶದಿಂದ ಹೇಳಿಕೆ ನೀಡಿದ್ದಾರೆ ಎಂದಿದ್ದಾರೆ.

ಕನ್ನಡಕ್ಕೆ 3 ಸಾವಿರ ವರ್ಷಗಳಿಗೂ ಹಿಂದಿನ ಇತಿಹಾಸವಿದ್ದು, ಸ್ವತಂತ್ರ ಲಿಪಿ ಹಾಗೂ ಅಂಕಿಗಳನ್ನು ಹೊಂದಿದೆ. ಇದು ಕ್ರಿ.ಪೂ. 3ನೇ ಶತಮಾನದಲ್ಲೇ ಬಳಕೆಗೆ ಬಂದಿದೆ. ತಮಿಳಿಗೆ ಲಿಪಿ ಕೊಟ್ಟ ಜಗತ್ತಿನ ಅತ್ಯಂತ ಪುರಾತನ ಭಾಷೆ ಕನ್ನಡ ಭಾಷೆ ಎನ್ನುವುದಕ್ಕೆ ವಿದ್ವಾಂಸರ ದಾಖಲೆಯಿದೆ. 130ಕ್ಕೂ ಹೆಚ್ಚು ದ್ರಾವಿಡ ಭಾಷಾ ಕುಟುಂಬದಲ್ಲಿ ಪ್ರಾಗ್ದ್ರಾವಿಡ ಭಾಷೆಯೇ ಮೂಲ ತಾಯಿ. ನಂತರ ಈ ಭಾಷೆಗಳು ಪ್ರತ್ಯೇಕವಾಗಿವೆ. ಆದ್ದರಿಂದ ಕನ್ನಡ, ತಮಿಳು ಸೇರಿದಂತೆ ಎಲ್ಲಾ ದ್ರಾವಿಡ ಭಾಷೆಗಳು ಮೂಲ ದ್ರಾವಿಡದಿಂದಲೇ ಬಂದಿವೆ. ಮೂಲ ದ್ರಾವಿಡದಿಂದ ಮೊದಲಿಗೆ ಬೇರೆಯಾದ ಭಾಷೆಗಳಲ್ಲಿ ತಮಿಳು, ಕುಯಿ ಆಗಿವೆ. ನಂತರ ತುಳು, ಬಂಜಾರ, ಕೊಂಕಣಿ, ಕನ್ನಡ, ತೆಲುಗು, ಮಲೆಯಾಳಂ ಮುಂತಾದ ಬೇರೆ ಬೇರೆ ಭಾಷೆಗಳು ಬೆಳೆದು ಬಂದಿವೆ. ಇವುಗಳೆಲ್ಲದರ ಸಹೋದರ ಭಾಷಾ ಸಂಬಂಧ ಇದೆ ಎಂದರು.

ಸಮಾಚಾರ ಸಣ್ಣದಲ್ಲ

ಗುತ್ತಿಗೆದಾರನ ಹತ್ಯೆ ಆರೋಪಿಗಳ ಬಂಧನ

ಹಾಸನ: ಚಿನ್ನಾಭರಣಕ್ಕಾಗಿ ಗುತ್ತಿಗೆದಾರ ವಿಜಯ್ ಕುಮಾರ್ ಎಂಬುವರನ್ನು ಹತ್ಯೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಒಬ್ಬ ಅಪ್ರಾಪ್ತ ಸೇರಿ ಇಬ್ಬರು ಆರೋಪಿಗಳನ್ನು ಅರಸೀಕೆರೆ ನಗರ ಪೊಲೀಸರು ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ ಬಂಧಿಸಿದ್ದಾರೆ.

ಬಿಹಾರ ಮೂಲದ ಬಿಕ್ರಂ ಕುಮಾರ್ (25), ಕಾನೂನು ಸಂಘರ್ಷಕ್ಕೊಳಗಾದ 15 ವರ್ಷದ ಅಪ್ರಾಪ್ತ ಬಂಧಿತರು. ಬಂಧಿತರಿಂದ 2 ಚಿನ್ನದ ಸರ, 3 ಚಿನ್ನದ ಉಂಗುರಗಳು ಹಾಗೂ 1 ಬೈಕ್ ವಶಕ್ಕೆ ಪಡೆಯಲಾಗಿದೆ. ಹೋಟೆಲ್ ಕಟ್ಟಡ ನಿರ್ಮಾಣಕ್ಕೆ ಕೆಲಸಕ್ಕೆ ಗುತ್ತಿದಾರ ವಿಜಯ್ ಕುಮಾರ್ ಬಿಹಾರ ಮೂಲದವರನ್ನು ಸೇರಿಸಿಕೊಂಡಿದ್ದರು. ಬೈಕ್‌ನಲ್ಲಿ ವಿಜಯ್‌ಕುಮಾರ್ ತೆರಳುವ ವೇಳೆ ಕೊಲೆ ಮಾಡಿ ಕುತ್ತಿಗೆಯಲ್ಲಿದ್ದ ಚಿನ್ನದ ಸರ ಕದ್ದು ದುಷ್ಕರ್ಮಿಗಳು ಪರಾರಿ ಆಗಿದ್ದರು. ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ.

ಆಸ್ತಿ ಕಲಹ: ವ್ಯಕ್ತಿಯ ಕೊಲೆ

ಕೊಪ್ಪಳ: 2 ಕುಟುಂಬಗಳ ನಡುವಿನ ಆಸ್ತಿ ವಿವಾದ ಹಿನ್ನೆಲೆ ನಡುರಸ್ತೆಯಲ್ಲೇ ವ್ಯಕ್ತಿಯನ್ನು ಕೊಚ್ಚಿ ಕೊಲೆ ಮಾಡಿರುವ ಘಟನೆ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ತಾವರಗೇರಾ ಪಟ್ಟಣದಲ್ಲಿ ನಡೆದಿದೆ.

ಚೆನ್ನಪ್ಪ ನಾರಿನಾಳ(35) ಕೊಲೆಯಾದ ದುರ್ದೈವಿ. ಶನಿವಾರ ಮಧ್ಯರಾತ್ರಿ ರವಿ ನಾರಿನಾಳ ಹಾಗೂ ಚೆನ್ನಪ್ಪ ನಾರಿನಾಳ ಕುಟುಂಬಗಳ ನಡುವೆ ಆಸ್ತಿ ವಿಚಾರವಾಗಿ ಜಗಳ ನಡೆದಿತ್ತು. ಈ ಜಗಳ ಅತಿರೇಕಕ್ಕೆ ತಿರುಗಿ ಚೆನ್ನಪ್ಪ ನಾರಿನಾಳರನ್ನು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಲಾಗಿದೆ. ರವಿ ನಾರಿನಾಳ ಹಾಗೂ ಸಹಚರರ ಮೇಲೆ ಕೊಲೆ ಮಾಡಿರುವ ಆರೋಪ ಮಾಡಲಾಗಿದೆ. ಕಳೆದ ಹಲವು ವರ್ಷಗಳಿಂದ ಬಿಸ್ತಿ ಮತ್ತು ನಾರಿನಾಳ ಕುಟುಂಬದ ನಡುವೆ ದ್ವೇಷವಿತ್ತು. ಈ ಬಗ್ಗೆ ತಾವರಗೇರಾ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಹಲವರ ಮೇಲೆ ರೌಡಿಶೀಟರ್ ಸಹ ತೆರೆಯಲಾಗಿದೆ. ಕೊಲೆ ಪ್ರಕರಣ ಸಂಬಂಧ 10 ಜನರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಸದ್ಯ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ. ಇನ್ನುಳಿದ ಆರೋಪಿಗಳನ್ನು ಶೀಘ್ರವೇ ಬಂಧಿಸಲಾಗುವುದು ಎಂದು ಎಸ್ಪಿ ಡಾ ರಾಮ್‌ಎಲ್ ಅರಸಿದ್ದಿ ಅವರು ತಿಳಿಸಿದ್ದಾರೆ.

ಅಡಕೆ ಹಾಳೆಯಿಂದಲೂ ಕ್ಯಾನ್ಸರ್ ಎಂಬ ಅಮೆರಿಕದ ಆರೋಪದಿಂದ ಅಡಕೆ ಉದ್ಯಮಕ್ಕೆ ಪೆಟ್ಟು | ರಾಜತಾಂತ್ರಿಕ ಕ್ರಮಕ್ಕೆ ತಜ್ಞರಿಂದ ಪ್ರಧಾನಿ ನರೇಂದ್ರ ಮೋದಿಗೆ ಪತ್ರ | ಅಮೆರಿಕದ ಏಕಪಕ್ಷೀಯ ಕ್ರಮವನ್ನು ಪ್ರಶ್ನಿಸುವಂತೆ ಕೃಷಿ ತಜ್ಞರು ಆಗ್ರಹ

ಅಡಕೆಹಾಳೆಯ ವಿರುದ್ಧ ಅಪಪ್ರಚಾರ: ಮಧ್ಯಪ್ರವೇಶಕ್ಕೆ ಆಗ್ರಹ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಡಕೆಯಿಂದ ಕ್ಯಾನ್ಸರ್ ಬರುತ್ತದೆ ಎಂದು ಅಪಪ್ರಚಾರವಾದ ಬಳಿಕ ಇದೀಗ ಅಡಕೆ ಹಾಳೆಯಿಂದಲೂ ಕ್ಯಾನ್ಸರ್ ಬರುತ್ತದೆ ಎನ್ನುವ ಆಧಾರರಹಿತ 'ವರದಿ'ಗೆ ರಾಜ್ಯದ ಅಡಕೆ ಬೆಳೆಗಾರರಿಂದ ತೀವ್ರ ವಿರೋಧ ವ್ಯಕ್ತವಾಗಿದ್ದು, ಕೂಡಲೇ ಈ ಸಂಬಂಧ ಕೇಂದ್ರ ಸರಕಾರ ಮಧ್ಯಪ್ರವೇಶಿಸಬೇಕು ಎನ್ನುವ ಆಗ್ರಹ ಜೋರಾಗಿದೆ.

ಕೆಲ ದಿನಗಳ ಹಿಂದೆ ಅಮೆರಿಕದ ಎಫ್‌ಡಿಎ ಅಡಕೆ ಹಾಳೆಗಳಿಂದ ಕ್ಯಾನ್ಸರ್ ಬರುವ ಸಾಧ್ಯತೆಯಿದೆ ಎಂದು ಅಡಕೆಹಾಳೆಯ ಬಳಕೆಗೆ ನಿರ್ಬಂಧ ವಿಧಿಸಿದೆ. ಆದರೆ ಅಮೆರಿಕದ ಈ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಈ ಹಿಂದೆ ಅಡಕೆಯ ಮೇಲೆ ಮಾಡಿದ್ದ 'ಆಧಾರರಹಿತ' ಆರೋಪವನ್ನೇ ಇದೀಗ ಅಡಕೆ ಹಾಳೆಯ ಮೇಲೆಯೂ ಮಾಡಲಾಗುತ್ತಿದೆ. ಆದ್ದರಿಂದ ಕೇಂದ್ರ ಸರಕಾರ ಕೂಡಲೇ ಮಧ್ಯಪ್ರವೇಶಿಸಬೇಕು ಎಂದು ಕರ್ನಾಟಕ ಕೃಷಿ ಬೆಲೆ ಆಯೋಗ ಮಾಜಿ ಅಧ್ಯಕ್ಷ ಡಾ. ಪ್ರಕಾಶ್ ಕಮ್ಮರಡಿ ಹಾಗೂ 106 ತಜ್ಞರು ಆಗ್ರಹಿಸಿದ್ದಾರೆ.

ಪ್ರಧಾನಿಗೆ ಕಮ್ಮರಡಿ ಪತ್ರ: ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವ ಕಮ್ಮರಡಿ ಅವರು, ಅಮೆರಿಕದ ಆಧಾರರಹಿತ ಆರೋಪದಿಂದ ಕರ್ನಾಟಕದ ಲಕ್ಷಾಂತರ ಅಡಕೆ ಬೆಳೆಗಾರರಿಗೆ ಭಾರಿ ಸಮಸ್ಯೆಯಾಗುತ್ತದೆ. ಈ ರೀತಿಯ ಆಧಾರರಹಿತ ಆರೋಪಗಳಿಂದ, ಕೇವಲ

ಅಮೆರಿಕ ಮಾರುಕಟ್ಟೆ ಮಾತ್ರವಲ್ಲದೇ ವಿವಿಧ ದೇಶದ ಮಾರುಕಟ್ಟೆಯ ಮೇಲೆಯೂ ಪರಿಣಾಮ ಬೀರುತ್ತದೆ. ಆದ್ದರಿಂದ ಪ್ರಧಾನಿ ನರೇಂದ್ರ ಮೋದಿ ಅವರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಅಮೆರಿಕದ ಈ ಏಕಪಕ್ಷೀಯ ಕ್ರಮವನ್ನು ಪ್ರಶ್ನಿಸಬೇಕು ಎಂದು ಆಗ್ರಹಿಸಿದ್ದಾರೆ.

ಈಗಾಗಲೇ ಹಲವು ಬಾರಿ ಅಡಕೆಯ ಮೇಲೆ ಈ ರೀತಿಯ ವ್ಯವಸ್ಥಿತ ಅಪಪ್ರಚಾರದ ಮುಂದುವರಿದ ಭಾವವಾಗಿ ಅಮೆರಿಕದ ಆಹಾರ ಮತ್ತು ಔಷಧಿ ಆಡಳಿತ ಸಂಸ್ಥೆ ಅಡಕೆ ಹಾಳೆಯಿಂದ ತಯಾರಿಸಿದ ಪರಿಸರ ಸ್ನೇಹಿತಟ್ಟೆ, ಲೋಟ ಇತ್ಯಾದಿ ಊಟದ ಪಾತ್ರೆಗಳನ್ನು ನಿಷೇಧಿಸಿರುತ್ತದೆ. ಈ ಹಾಳೆಗಳ ಬಳಕೆಯಿಂದ ಅಡಕೆಯೊಳಗಿನ ಅತ್ಯಂತ ನೈಸರ್ಗಿಕ ಅಂಶವಾದ ಅಲ್ಕಾಲೈಡ್ ತಿನ್ನುವ ಆಹಾರದೊಳಗೆ ಸೇರಿ ಆರೋಗ್ಯಕ್ಕೆ ಹಾನಿಕರ ಹಾಗೂ ಕ್ಯಾನ್ಸರ್‌ಗೆ ಕಾರಣವಾಗಬಹುದು ಎಂದಿರುವ ವಾದ ಅರ್ಥಹೀನ, ಹಾಸ್ಯಸ್ಪದ ಎಂದು ತಜ್ಞರು ಪತ್ರದಲ್ಲಿ ಅಸಮಾಧಾನವ್ಯಕ್ತಪಡಿಸಿದ್ದಾರೆ.

ಅಮೆರಿಕದ ಈ ಏಕಪಕ್ಷೀಯ ಕ್ರಮ 'ವಿಶ್ವ ವ್ಯಾಪಾರ ಒಪ್ಪಂದಕ್ಕೆ' ಹೊಂದಿಕೆಯಾಗಿರುತ್ತದೆಯೇ ಎನ್ನುವ ಸ್ಪಷ್ಟೀಕರಣವನ್ನು ಹಾಗೂ ಅಡಕೆ ಹಾಳೆತಟ್ಟೆ ಮತ್ತಿತರ ಪಾತ್ರೆಗಳ ಬಳಕೆಯಿಂದ ಆಹಾರ ಮಲಿನವಾಗಿ ಆರೋಗ್ಯಕ್ಕೆ ಹಾನಿಕರ ಎಂಬುದರ ಬಗ್ಗೆ ಸ್ಪಷ್ಟ ವೈಜ್ಞಾನಿಕ ಪುರಾವೆಗಳನ್ನುಅಮೆರಿಕದಿಂದ ಪಡೆಯಬೇಕು. ಇದರೊಂದಿಗೆ ಅಡಕೆ ಮೇಲಿನ ಈ ಅಪಪ್ರಚಾರಕ್ಕೆ ಸಂಪೂರ್ಣ ತಡೆಯಬೇಕು ಎಂದು ಆಗ್ರಹಿಸಿದ್ದಾರೆ.

ಪತ್ರದಲ್ಲಿರುವ ಪ್ರಮುಖಾಂಶ

- 2030ರ ವಿಶ್ವಾದ್ಯಂತ ವೇಳೆಗೆ ಅಡಕೆಹಾಳೆಯ ಉದ್ಯಮದ ಮೌಲ್ಯ 3500 ಕೋಟಿ ರು. ಆಗಲಿದೆ
- ಇದರಲ್ಲಿ ಭಾರತದ ಪಾಲು 2500 ಕೋಟಿ ರು. ಇರಲಿದೆ
- ಪಾಶ್ಚಿಮಾತ್ಯ ದೇಶಗಳಲ್ಲಿ ಇತ್ತೀಚಿಗೆ ಹೆಚ್ಚು ಬೇಡಿಕೆಯಿರುವುದರಿಂದ ಅಡಕೆಹಾಳೆಯ ಮಾರುಕಟ್ಟೆಯನ್ನು ತಗ್ಗಿಸಲು ಈ ಕುತಂತ್ರ
- ಕೇವಲ ಭಾರತ ಮಾತ್ರವಲ್ಲದೇ, ಹಲವು ದೇಶಗಳಲ್ಲಿಯೂ ಅಡಕೆ ಹಾಳೆ ಕೈಗಾರಿಕೆಗೆ ಹೆಚ್ಚಿದ ಬೇಡಿಕೆ
- ಆಧಾರರಹಿತ ಆರೋಪಗಳ ವಿರುದ್ಧ ರಾಜತಾಂತ್ರಿಕ ಹಾಗೂ ಅಗತ್ಯ ಕ್ರಮವನ್ನು ಕೇಂದ್ರ ಸರಕಾರ ಕೂಡಲೇ ತೆಗೆದುಕೊಳ್ಳಬೇಕು

ಅಡಕೆ ಅನಾದಿ ಕಾಲದಿಂದಲೂ ಆರೋಗ್ಯ ವೃದ್ಧಿಸುವ ಆಹಾರವೆಂದು ಬಳಸಲಾಗುತ್ತಿದೆ. ಇದರಿಂದ ಮಧುಮೇಹ, ವೃದ್ಧಾಪ್ಯದ ಮರೆವು ಮಾತ್ರವಲ್ಲದೇ ಎಲ ಕ್ಯಾನ್ಸರಿಗೂ ಪರಿಹಾರ ಎಂಬುದು ಸಂಶೋಧನೆಗಳಿಂದ ಸ್ಪಷ್ಟವಾಗಿದೆ. ಆದರೂ, ಯಾವುದೇ ಪುರಾವೆಯಿಲ್ಲದೇ, ಏಕಾಏಕಿ ಅಡಕೆಹಾಳೆಯಿಂದ ಕ್ಯಾನ್ಸರ್ ಬರುತ್ತದೆ ಎಂದು ಸುಳ್ಳು ಪ್ರಚಾರ ಮಾಡುತ್ತಿದೆ. ಇದರಿಂದ ಕರ್ನಾಟಕ ಸೇರಿ ದೇಶದ ಹಲವು ಭಾಗದಲ್ಲಿರುವ ಅಡಕೆ ಬೆಳೆಗಾರರಿಗೆ ಸಮಸ್ಯೆಯಾಗುತ್ತದೆ. ಆದ್ದರಿಂದ ಕೂಡಲೇ ಈ ವಿಷಯದಲ್ಲಿ ರಾಜತಾಂತ್ರಿಕ ಹಾಗೂ ವೈಜ್ಞಾನಿಕ ವಿಷಯಗಳನ್ನು ಮುಂದಿಟ್ಟು ಅಮೆರಿಕದ ಈ ಸುಳ್ಳು ಪ್ರಚಾರ ತಪ್ಪಿಸಬೇಕು.

– ಡಾ. ಪ್ರಕಾಶ್ ಕಮ್ಮರಡಿ, ಮಾಜಿ ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ

ಇನ್ನೈದು ವರ್ಷದಲ್ಲಿ 3500 ಕೋಟಿ ಮಾರುಕಟ್ಟೆ

ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಡಕೆ ಹಾಳೆಯ ತಟ್ಟೆ ಹಾಗೂ ಇತರೆ ಉತ್ಪನ್ನಗಳಿಗೆ ಭಾರಿ ಬೇಡಿಕೆಯಿದ್ದು, 2030ರ ವೇಳೆಗೆ 3500 ಕೋಟಿ ರು. ಮಾರುಕಟ್ಟೆಯನ್ನು ಹೊಂದಿರಲಿದೆ. ಇದರಲ್ಲಿ ಕನಿಷ್ಠ 2500 ಕೋಟಿ ರು. ಭಾರತದ ಪಾಲಾಗಿರಲಿದೆ. ಆದರೆ ಅಮೆರಿಕದ ಈ ಅಪಪ್ರಚಾರದಿಂದ ಭಾರತಕ್ಕೆ ಹಾಗೂ ರೈತರಿಗೆ ನಷ್ಟವಾಗಲಿದೆ. ಕೆಲವರ್ಷದ ಅವಧಿಯಲ್ಲಿ ಮಂಗಳೂರು ಬಂದರಿನಿಂದ ಸುಮಾರು ಒಂದು ಸಾವಿರ ಮೆಟ್ರಿಕ್ ಟನ್‌ನ ಅಡಕೆ ಹಾಳೆಯನ್ನು ರಫ್ತು ಮಾಡಲಾಗಿದೆ. ಸುಮಾರು 600ಕ್ಕೂ ಹೆಚ್ಚು ಕೈಗಾರಿಕೆಗಳು, ಸಾವಿರಾರು ಕಾರ್ಮಿಕರು ಈ ಉದ್ಯಮ ಮೇಲೆ ಅಲವಂಬಿತರಾಗಿದ್ದಾರೆ. ಈ ಪ್ರಮಾಣದ ಮಾರುಕಟ್ಟೆ ಹಾಗೂ ಅತಿ ಸುರಕ್ಷಿತ ಪರಿಸರ ಪ್ರೇಮಿ ಅಡಕೆ ಹಾಳೆಗಳ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಅಮೆರಿಕದೊಂದಿಗೆ ಚರ್ಚಿಸಿ, ಈ ವಿಷಯವನ್ನು ಸರಿಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

ಕೇರಳದಿಂದ ಮಂಗಳೂರಿಗೆ ಬಂದು ಕೋಮು ಗಲಭೆಗೆ ಪ್ರಚೋದನೆ

ಎಸ್‌ಡಿಪಿಐ ನಿಷೇಧಕ್ಕೆ ಮುತಾಲಿಕ್ ಆಗ್ರಹ

ಹುಬ್ಬಳ್ಳಿ: ಕೇರಳದಿಂದ ಮಂಗಳೂರಿಗೆ ಬಂದ ವ್ಯಕ್ತಿಗಳು ಗಲಭೆ ಮಾಡುತ್ತ, ಕೊಲೆಗೆ ಪ್ರಚೋದನೆ ನೀಡುತ್ತ ದಾಂಧಲೆ ಮಾಡುತ್ತಿದ್ದಾರೆ. ಪಿಎಫ್‌ಐ ಸಂಘಟನೆ ನಿಷೇಧಿಸಿದಂತೆ, ಎಸ್‌ಡಿಪಿಐ ಪಕ್ಷವನ್ನು ನಿಷೇಧಿಸಬೇಕು ಎಂದು ಶ್ರೀರಾಮ ಸೇನಾ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ್ ಆಗ್ರಹಿಸಿದರು.

ನಗರದ ಕ್ಯೂಬಿಕ್ಸ್ ಹೋಟೆಲ್ ಸಭಾಂಗಣದಲ್ಲಿ ಭಾನುವಾರ ನಡೆದ ಶ್ರೀರಾಮ ಸೇನೆಯ ಲವ್ ಜಿಹಾದ್ ವಿರುದ್ಧ 24/7 ಕಾರ್ಯ ನಿರ್ವಹಿಸಿದ ಸಹಾಯವಾಣಿಯ ಪ್ರಥಮ ವರ್ಷದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮುಸ್ಲಿಮ್ ಮತಾಂಧರು ಲವ್ ಜಿಹಾದ್ ಮೂಲಕ ಹಿಂದೂ ಹುಡುಗಿ ಯರನ್ನು ಯಾಮಾರಿಸುತ್ತಿದ್ದಾರೆ. ಅವರು ನಿಜವಾಗಿಯೂ ಪ್ರೀತಿಸಿ ಮದುವೆಯಾಗಿದ್ದರೆ, ಗೋಮಾಂಸ ತಿನ್ನುವಂತೆ, ಬುರ್ಖಾ ಧರಿಸುವಂತೆ ಯಾಕೆ ಒತ್ತಡ ಹಾಕಬೇಕು? ನಾವು ಪ್ರೀತಿಗೆ ವಿರೋಧಿಸುತ್ತಿಲ್ಲ. ಪ್ರೀತಿ ಹೆಸರಲ್ಲಿ ನಡೆಯುತ್ತಿರುವ ಕಪಟತನ, ಧರ್ಮ ವಿರೋಧಿ ಹಾಗೂ ದೇಶದ್ರೋಹಿ ಕಾರ್ಯದ ವಿರುದ್ಧ ಸಮರ ಸಾರುತ್ತಿದ್ದೇವೆ ಎಂದರು.

ದೇವಸ್ಥಾನ, ಮಠಗಳಿಗೆ ದೇಣಿಗೆ, ಹಣ ಕೊಡುವುದನ್ನು ನಿಲ್ಲಿಸಿ. ಅವು ಈಗಾಗಲೇ ಸದೃಢವಾಗಿ ಬೆಳೆದಿದ್ದು, ಅವರ್‍ಯಾರಿಗೂ ಹಿಂದೂಗಳ ಬಗ್ಗೆ ಕಾಳಜಿಯಿಲ್ಲ. ದೇಶಕ್ಕೆ ಹಿಂದೂ ಸಂಘಟಕರ ಅಗತ್ಯವಿದೆ. ಅವರ ವಿರುದ್ಧ ದಾಖಲಾಗುವ ಪ್ರಕರಣಗಳ, ಕೋರ್ಟ್ ವಿಚಾರಣೆಗಳಿಗೆ ಹಣದ ಅಗತ್ಯವಿದೆ. ನೆರವು ನೀಡುವವರು ಬೇಕಾಗಿದ್ದಾರೆ.

-ಪ್ರಮೋದ್ ಮುತಾಲಿಕ್, ಶ್ರೀರಾಮಸೇನೆ ಸಂಸ್ಥಾಪಕ

ನಮ್ಮ ಸಮಾಜದಲ್ಲಿರುವ ಜಾತಿ ಪದ್ಧತಿಯನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಅದನ್ನು ವಿರೋಧಿಸಿ ಎಲ್ಲ ಜಾತಿಯವರನ್ನು ಒಟ್ಟುಗೂಡಿಸಿದ್ದ ಬಸವಣ್ಣನನ್ನೇ, ಒಂದು ಜಾತಿಗೆ ಸೀಮಿತವಾಗಿಸಿದ್ದಾರೆ. ಜಾತಿಯ ಅಹಂಕಾರ, ಸೊಕ್ಕು ಎಲ್ಲೇ ಮೀರುತ್ತಿದೆ. ಅದು ಮನೆಯ ಒಳಗಡೆಯೇ ಇರಲಿ, ಹೊರಗೆ ಬಂದಾಗ ಹಿಂದೂ ಅನ್ನುವುದಷ್ಟೇ ಆಗಿರಲಿ. ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಎಲ್ಲರಿಗೂ ಪಾಠವಾಗಬೇಕು ಎಂದ ಮುತಾಲಿಕ್, ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಒಂದು ಜಾತಿಗೆ ಸೀಮಿತ ಮಾಡುವುದು ಬೇಡ. ಮಹಾಪುರುಷರನ್ನು ಜಾತಿಯ ಚೌಕಟ್ಟಿನಲ್ಲಿ ನೋಡುವುದನ್ನು ಬಿಟ್ಟು ಬಿಡಿ ಎಂದು ಹೇಳಿದರು.

ಕೋಮು ಸಂಘರ್ಷ ವಿರುದ್ಧ ಕಠಿಣ ಕ್ರಮ

← ಮೊದಲಪುಟದಿಂದ

ಜನ ಬಯಸಿದಂತೆ ಶಾಂತಿ ಸುವ್ಯವಸ್ಥೆಯನ್ನು ಪಾಲನೆ ಮಾಡಲಾಗುವುದು. ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿ ಹಿಂದೂ-ಮುಸ್ಲಿಂ ಎರಡೂ ಸಮುದಾಯಗಳಲ್ಲಿ ಕೆಲ ಸಂಘಟನೆಗಳು ಪ್ರಚೋದನೆ ನೀಡುತ್ತಿವೆ. ಅಂತಹ ಚಟುವಟಿಕೆಗಳ ವಿರುದ್ಧ ಕ್ರಮ ಕೈಗೊಳ್ಳಲು ಕೋಮು ಹಿಂಸೆ ನಿಗ್ರಹ ಪಡೆ ರಚಿಸಲಾಗುತ್ತದೆ ಎಂದು ತಿಳಿಸಿದರು.

ಸತ್ಯಶೋಧನಾ ಸಮಿತಿ ರಚಿಸಿದ ಕೆಪಿಸಿಸಿ: ಕರಾವಳಿ ಭಾಗದಲ್ಲಿ ನಡೆಯುತ್ತಿರುವ ಅಹಿತಕರ ಘಟನೆಗಳಿಂದ ಪಕ್ಷಕ್ಕೆ ಹಾಗೂ ಸರಕಾರಕ್ಕೆ ತೀವ್ರ ಮುಜುಗರವಾಗುತ್ತಿರುವ ಬೆನ್ನಲ್ಲೇ, ಕೆಪಿಸಿಸಿ ಸತ್ಯಶೋಧನಾ ಸಮಿತಿ ರಚಿಸಿದ್ದು, ಇನ್ನೊಂದು ವಾರದಲ್ಲಿ ಘಟನಾ ಸ್ಥಳಗಳಿಗೆ ಭೇಟಿ ನೀಡಿ, ಸಂತ್ರಸ್ತರೊಂದಿಗೆ ಸಂವಾದ ನಡೆಸಿ ನೈಜ ವರದಿ ನೀಡುವಂತೆ ಸೂಚನೆ ನೀಡಿದೆ. ಈ ಸಂಬಂಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸೈಯದ್ ನಾಸೀರ್ ಹುಸೇನ್ ನೇತೃತ್ವದಲ್ಲಿ ಏಳು ಜನರ ತಂಡ ರಚಿಸಿದ್ದಾರೆ. ಈ ಸತ್ಯಶೋಧನಾ ಸಮಿತಿ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇತ್ತೀಚೆಗೆ ನಡೆದ ಅಹಿತರಕ ಘಟನೆ, ಪ್ರಕರಣಗಳ ಸತ್ಯಾಸತ್ಯತೆ ಹಾಗೂ ನೈಜತೆ ಪರಿಶೀಲಿಸಿ ವರದಿ ನೀಡಲಿದೆ. ನಾಸೀರ್ ಹುಸೇನ್ ನೇತೃತ್ವದ ಸಮಿತಿಯಲ್ಲಿ ಮಂಜುನಾಥ ಭಂಡಾರಿ, ಎನ್.ಎ ಹ್ಯಾರಿಸ್, ವಿ.ಆರ್. ಸುದರ್ಶನ್, ಕಿಮ್ಮನೆ ರತ್ನಾಕರ, ಜಯಪ್ರಕಾಶ್ ಹೆಗಡೆ ಹಾಗೂ ರೋಜಿ ಖಾನ್ ಇದ್ದಾರೆ.

ಅತಿ ಹೆಚ್ಚು ಬಾರಿ ಜಿಲ್ಲಾ ಪ್ರವಾಸ

ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡ ಬಳಿಕ ನಿರಂತರ ಮಂಗಳೂರಿಗೆ ಪ್ರವಾಸ ಮಾಡುತ್ತಿದ್ದರೂ, ಜಿಲ್ಲಾ ಉಸ್ತುವಾರಿ ಸಚಿವರಾಗಿ ಗುಂಡೂರಾವ್ ವಿಫಲ ಎನ್ನುವ ಆರೋಪ ಕೇಳಿಬರುತ್ತಿದೆ. ಆದರೆ ಕಳೆದ ಎರಡು ವರ್ಷಗಳಲ್ಲಿ ಎದುರಾದ ಪ್ರಾಕೃತಿಕ ವಿಕೋಪದ ಸಂದರ್ಭ, ಕೋಮು ಸಂಘರ್ಷದ ಸಮಯದಲ್ಲಿ ಜಿಲ್ಲೆಗೆ ಭೇಟಿ ನೀಡಿದ್ದಾರೆ ಎನ್ನುವುದು ಅವರ ಆಪ್ತ ಮಾತಾಗಿದೆ. ಹಾಗೇ ನೋಡಿದರೆ, ಕಳೆದ ಎರಡು ವರ್ಷಗಳಲ್ಲಿ 34 ಬಾರಿ ದಕ್ಷಿಣ ಕನ್ನಡಕ್ಕೆ ಭೇಟಿ ನೀಡಿದ್ದು, 2023 ಹಾಗೂ 2024 ಮೇ ತಿಂಗಳು ಹೊರತುಪಡಿಸಿ ಇನ್ನುಳಿದ ಎಲ್ಲ ತಿಂಗಳಲ್ಲಿಯೂ ಕನಿಷ್ಠ ಎರಡು ಬಾರಿ ನೀಡಿರುವ ಅಂಕಿ-ಅಂಶಗಳನ್ನು ಆಪ್ತರು ಬಿಡುಗಡೆ ಮಾಡುವ ಮೂಲಕ, ದಿನೇಶ್ ಬೆಂಬಲಕ್ಕೆ ನಿಂತಿದ್ದಾರೆ.

ಮಂಗಳೂರಿನಲ್ಲಿ ಎಲ್ಲರೂ ನನ್ನೊಂದಿಗೆ ವಿಶ್ವಾಸದಿಂದಲೇ ಮಾತನಾಡಿದ್ದಾರೆ. ಉಸ್ತುವಾರಿ ಬಗ್ಗೆ ಯಾರೂ ಆಕ್ಷೇಪ ವ್ಯಕ್ತಪಡಿಸಿಲ್ಲ. ಒಂದಿಬ್ಬರ ಮಾತುಗಳಿಗೆ ಒತ್ತು ನೀಡಬೇಕಿಲ್ಲ. ದಕ್ಷಿಣ ಕನ್ನಡದ ಉಸ್ತುವಾರಿ ಬಗ್ಗೆ ನನಗೆ ಯಾವುದೇ ಬೇಸರವಿಲ್ಲ. ಹೆಚ್ಚಿನ ಉತ್ಸಾಹದಿಂದಲೇ ಕೆಲಸ ಮಾಡುತ್ತಿದ್ದೇನೆ. ಮತ್ತಷ್ಟು ಪರಿಣಾಮಕಾರಿ ಕೆಲಸ ಮಾಡಲು ಮುಂದಾಗುತ್ತಿದ್ದೇನೆ.

– ದಿನೇಶ್ ಗುಂಡೂರಾವ್, ಸಚಿವ

ಉಸ್ತುವಾರಿ ಬದಲಾವಣೆಗೆ ಕೇಳಿಲ್ಲ: ಗುಂಡೂರಾವ್

ದಕ್ಷಿಣ ಕನ್ನಡದಲ್ಲಾಗುತ್ತಿರುವ ಕೋಮು ಗಲಭೆಗಳಿಂದ ವೈಯಕ್ತಿಕವಾಗಿ ಗುಂಡೂರಾವ್ ಅವರಿಗೆ ಆಗುತ್ತಿರುವ ಡ್ಯಾಮೇಜ್ ಕಂಟ್ರೋಲ್‌ಗೆ, ಜಿಲ್ಲಾ ಉಸ್ತುವಾರಿಯಿಂದ ಹೊರಬರುವ ತೀರ್ಮಾನಕ್ಕೆ ಬಂದಿದ್ದು, ಮುಖ್ಯಮಂತ್ರಿಗಳ ಬಳಿಯೂ ಈ ಬಗ್ಗೆ ಚರ್ಚಿಸಿದ್ದಾರೆ ಎನ್ನಲಾಗಿತ್ತು. ಆದರೀಗ ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡಿರುವ ಅವರು, ಉಸ್ತುವಾರಿ ಬದಲಾವಣೆ ಮಾಡುವಂತೆ ಕೇಳಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಮಂಗಳೂರಿಗೆ ಭೇಟಿ ಕೊಟ್ಟು ಸಾಕಷ್ಟು ಕಾನೂನು ಕ್ರಮ ಕೈಗೊಂಡಿದ್ದೇವೆ. ಅನೇಕ ಬದಲಾವಣೆ ಮಾಡಿದ್ದೇವೆ. ಕಾನೂನು ಕ್ರಮ ಚುರುಕಿಗೆ ಗೃಹ ಸಚಿವರು ಸೂಚಿಸಿದ್ದಾರೆ. ಉಸ್ತುವಾರಿ ಬದಲಾವಣೆ ಮಾಡಿ ಎಂದು ಹೇಳಿಲ್ಲ. ಈ ವಿಷಯ ಏಕೆ ಓಡಾಡುತ್ತಿದೆ ಎನ್ನುವುದು ಗೊತ್ತಿಲ್ಲ. ಜವಾಬ್ದಾರಿ ಇದ್ದಾಗ ಒಂದೊಂದು ಸಂದರ್ಭದಲ್ಲಿ ಎಲ್ಲವನ್ನೂ ಎದುರಿಸಬೇಕಾಗುತ್ತದೆ. ನಾನು ಅಷ್ಟೇ ಉತ್ಸಾಹದಲ್ಲಿದ್ದೇನೆ. ಯಾರೋ ಒಬ್ಬರು ಇಬ್ಬರು ಹೇಳಿಕೆ ಕೊಟ್ಟಿರಬಹುದು. ವಿನಾಕಾರಣ ರಾಜಕಾರಣ ಮಾಡಬಾರದು ಎಂದು ಹೇಳಿದರು.

ದ್ವೇಷದ ರಾಜಕಾರಣ ಒಳ್ಳೆಯ ಬೆಳವಣಿಗೆ ಅಲ್ಲ: ಸೋಮಣ್ಣ

ಹಳಿ ತಪ್ಪಿದ ಸಿದ್ದರಾಮಯ್ಯನವರ ಸರಕಾರ

ಕಲಬುರಗಿ: ಸಿಎಂ ಸಿದ್ದರಾಮಯ್ಯ ಅವರು ಹಳಿ ತಪ್ಪಿರುವ ರೈಲಿನಂತಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇದೀಗ ಮೊದಲಿನ ಸಿದ್ದರಾಮಯ್ಯರಾಗಿ ಉಳಿದಿಲ್ಲ. ಅವರ ಟ್ರ್ಯಾಕ್ ಸಂಪೂರ್ಣ ಹಳಿ ತಪ್ಪಿದೆ ಎಂದು ಕೇಂದ್ರ ರೈಲ್ವೆ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ಹೇಳಿದರು.

ಕಲಬುರಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರಕಾರ ನಿಂತ ನೀರಾಗಬಾರದು, ಹರಿಯುವ ನೀರಿನಂತೆ ಇರಬೇಕು.ದ್ವೇಷದ ರಾಜಕಾರಣ ಯಾರೊಂದಿಗೂ ನಡೆಯಬಾರದು. ಇದು ರಾಜಕೀಯದಲ್ಲಿ ಒಳ್ಳೆ ಬೆಳವಣಿಗೆ ಅಲ್ಲ. ಭಾರತ ಸರಕಾರದಲ್ಲಿ ಒಂದು ನಯಾ ಪೈಸೆಗೂ ಅಕೌಂಟೆಬಿಲಿಟಿ ಇದೆ ಎಂದರು. ರಾಜ್ಯದ 13 ಜಿಲ್ಲೆಗಳಲ್ಲಿ ವಂದೇ ಭಾರತ ರೈಲಿನ ಸಂಚಾರ ನಡೆದಿದೆ. ಭವಿಷ್ಯದ 2047ರ ವಿಕಸಿತ ಭಾರತದ ಹಿತದೃಷ್ಟಿಯಿಂದ ಸಾಕಷ್ಟು ಅಭಿವೃದ್ಧಿ ಕೆಲಸಗಳು ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆಯುತ್ತಿದ್ದು, ದೇಶದಲ್ಲಿ ಅಮೃತ ಭಾರತ, ಜಲ ಶಕ್ತಿ, ವಂದೇ ಭಾರತ ರೈಲಿನ ವಿಸ್ತರಣೆ ಕೆಲಸ ವೇಗವಾಗಿ ನಡೆಯುತ್ತಿದೆ. ರೈಲ್ವೆಗೆ ಸಂಬಂಧ ಪಟ್ಟ 39 ಸಾವಿರ ಕೋಟಿ ಯೋಜನೆಯ ಕೆಲಸಗಳು ಮುಂಬರುವ 2026-27ರ ಡಿಸೆಂಬರ್ ಹಂತಕ್ಕೆ ಮುಗಿಯಲಿವೆ ಎಂದರು.

3ನೇ ಬಾರಿಗೆ ಪ್ರಧಾನಿಯಾಗಿ ನರೇಂದ್ರ ಮೋದಿ ಅಧಿಕಾರ ವಹಿಸಿಕೊಂಡ ಬಳಿಕ ರೈಲ್ವೆ, ಜಲಶಕ್ತಿ ಇಖಾಖೆಗೆ ಹೊಸ ಉರುಪು ನೀಡಿದ್ದಾರೆ. ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ದೇಶದ ಉದ್ದಗದ ಮೇಲ್ಸೇತುವೆ ಹಾಗೂ ಕೆಳ ಸೇತುವೆಗಳನ್ನು ಆದ್ಯತೆ ಮೇರೆಗೆ ಅಭಿವೃದ್ಧಿ ಗೊಳಿಸಲು ಕೇಂದ್ರ ಸರಕಾರ ಮುಂದಾಗಿದೆ.

– ವಿ.ಸೋಮಣ್ಣ, ಕೇಂದ್ರ ರೈಲ್ವೆ ರಾಜ್ಯ ಖಾತೆ ಸಚಿವ

ಅತ್ಯಾಚಾರ: ಐವರ ಬಂಧನ

ಬೆಳಗಾವಿ: ಅಪ್ರಾಪ್ತೆಯನ್ನು ಅಪಹರಿಸಿ ಅತ್ಯಾಚಾರ ಎಸಗಿದ 5 ಕೀಚಕರನ್ನು ಕಾಕತಿ ಠಾಣೆ ಪೊಲೀಸರು ಬಂಧಿಸಿ, ಉಳಿದವರಿಗೆ ಹುಡುಕಾಟ ನಡೆಸಿದ್ದಾರೆ. ಬಾಲಕಿಯನ್ನು ಪುಸಲಾಯಿಸಿ ಅಪಹರಿಸಿ ಗುಡ್ಡಗಾಡು ಪ್ರದೇಶದ ನಿರ್ಜನ ಪ್ರದೇಶದಲ್ಲಿ 2 ದಿನಗಳ ಕಾಲ ನಿರಂತವಾಗಿ ಅತ್ಯಾಚಾರ ಎಸಗಿದ ಪ್ರಕರಣ ಬೆಳಕಿಗೆ ಬಂದಿದೆ. ಸದ್ಯ 5 ಆರೋಪಿಗಳನ್ನು ಬಂಧಿಸಲಾಗಿದ್ದು, ಉಳಿದವರಿಗೆ ಪೊಲೀಸರು ತಲಾಶ್ ನಡೆಸಿದ್ದಾರೆ. 15 ವರ್ಷದ ಬಾಲಕಿ ಮೇಲೆ ಎರಡು ಬಾರಿ ಸಾಮೂಹಿಕ ಅತ್ಯಾಚಾರ ಮಾಡಿರುವ ದುರುಳರು 6 ತಿಂಗಳ ಹಿಂದೆ ಸಾಮೂಹಿಕ ಅತ್ಯಾಚಾರ ಮಾಡಿ ವಿಡಿಯೋ ಮಾಡಿಕೊಂಡಿದ್ದರು. ಬಾಲಕಿಯನ್ನು ಸ್ನೇಹಿತ ಪುಸಲಾಯಿಸಿ ಗುಡ್ಡಕ್ಕೆ ಕರೆದುಕೊಂಡು ಹೋಗಿ ಅತ್ಯಾಚಾರ ಮಾಡಿದ್ದಾರೆ. ಬಳಿಕ ಅದೇ ವಿಡಿಯೋ ಇಟ್ಟುಕೊಂಡು ಬ್ಲ್ಯಾಕ್ ಮೇಲ್ ಮಾಡಿ ಮತ್ತೊಮ್ಮೆ ಅತ್ಯಾಚಾರ ಮಾಡಿದ್ದಾರೆ. ಈ ವೇಳೆ ಕೂಡ ವಿಡಿಯೋ ಮಾಡಿಕೊಂಡಿದ್ದ ದುಷ್ಕರ್ಮಿಗಳು. ವಿಡಿಯೋ ಇಟ್ಟುಕೊಂಡು ಈಗ ಮತ್ತೆ ಬಾಲಕಿಗೆ ಬೆದರಿಕೆ ಹಾಕಿದ್ದರು. ಈ ಹಿನ್ನೆಲೆ ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಎಫ್‌ಐಆರ್ ದಾಖಲಾದ ಒಂದೇ ದಿನದಲ್ಲಿ ಐವರನ್ನು ಬಂಧಿಸಲಾಗಿದೆ. ಎ1ಗಾಗಿ ಶೋಧ ಕಾರ್ಯ ನಡೆಯುತ್ತಿದೆ.

ಪೊಲೀಸ್ ಇಲಾಖೆ

ಪೊಲೀಸ್ ಮಹಾನಿರ್ದೇಶಕರು ರವರ ಕಛೇರಿ ಪೊಲೀಸ್ ಗಣಕ ವಿಭಾಗ, 7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001, ಇ-ಮೇಲ್ :dgppcw@ksp.gov.in ದೂರವಾಣಿ : 22353871

ಸಂಖ್ಯೆ: 16/ಸಂಗ್ರಹ/ಎಡಿಜಿಪಿ/ಪಿಸಿಡಬ್ಲ್ಯೂ/2024-25 ದಿನಾಂಕ : 30.05.2025

ಇ-ಟೆಂಡರ್ ಪ್ರಕಟಣೆ

ಪೊಲೀಸ್ ಗಣಕ ವಿಭಾಗದ ವತಿಯಿಂದ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಿಗೆ ಅವಶ್ಯಕತೆ ಇರುವ ಈ ಕೆಳಕಂಡ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವ ಕುರಿತು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ ಇ-ಟೆಂಡರ್ ಪ್ರಕ್ರಿಯೆ ಮೂಲಕ ಅರ್ಜಿಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಕ್ರ ಸಂ	ಟೆಂಡರ್ ಸಂಖ್ಯೆ	ಟೆಂಡರ್ ಸಂಕ್ಷಿಪ್ತ ವಿವರ	ಸಂಖ್ಯೆ	ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ
1	KSP/2025-26/ IND0303	Supply of Medium End Desktop	400	02/07/2025 by 17:30 hrs
2		Supply of Medium End Laptop	24	

ಈ ನಿಟ್ಟಿನಲ್ಲಿ ಕುಶಲತೆ ಪಡೆದಿರುವ ಸಂಸ್ಥೆಗಳು ವಿವರವಾದ ಷರತ್ತು ಮತ್ತು ನಿಬಂಧನೆ ಹಾಗೂ ತಾಂತ್ರಿಕ ವಿವರ ಒಳಗೊಂಡಿರುವ ಟೆಂಡರ್ ದಾಖಲಾತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಮೇಲ್ಕಂಡ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸಲು ಇಚ್ಛಿಸುವವರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವುದು. ಇ-ಖರೀದಿಯ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಇ-ಪ್ರೊಕ್ಯೂರ್‌ಮೆಂಟ್ ಸೆಲ್, ಇ-ಆಡಳಿತ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇಲ್ಲಿ ವ್ಯವಸ್ಥೆಗೊಳಿಸುತ್ತಿದ್ದು, ಎಲ್ಲಾ ಸರಬರಾಜುದಾರರು ದೂರವಾಣಿ ಸಂಖ್ಯೆ 91-8046010000 + 91-8068948777 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ-ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ-ಖರೀದಿ ವ್ಯವಸ್ಥೆಯಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಥವಾ ಹೆಲ್ಪ್‌ಲೈನ್ 91-8046010000 +91-8068948777ಗಳನ್ನು ಸಂಪರ್ಕಿಸತಕ್ಕದ್ದು. ದಿನಾಂಕ : 02.06.2025 ರಿಂದ ದಾಖಲಾತಿಯು https://kppp.karnataka.gov.inನಲ್ಲಿ ಲಭ್ಯವಿರುತ್ತದೆ.

1) ವಿವರಗಳು : ಟೆಂಡರ್ ಫಾರಂ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : (02/06/2025 ರಿಂದ 02/07/2025 ರ 17:30 ಗಂಟೆಯವರೆಗೆ) (2) ಇಎಂಡಿ ಮೊತ್ತ : ರೂ. 4,71,200/-(ನಾಲ್ಕು ಲಕ್ಷದ ಎಪ್ಪತ್ತೊಂದು ಸಾವಿರದ ಎರಡು ನೂರು ಮಾತ್ರ) ಗಳನ್ನು ಈ ಕೆಳಕಂಡ ವಿಧಾನಗಳ ಮೂಲಕ ಪಾವತಿ ಮಾಡಬಹುದು. (ಎ) ಕ್ರೆಡಿಟ್ ಕಾರ್ಡ್, (ಬಿ) ಡೆಬಿಟ್ ಕಾರ್ಡ್, (ಸಿ) ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್, (ಡಿ) ಪಾವತಿ ವಿವರ ಬಿಡ್ ಡಾಕ್ಯುಮೆಂಟ್‌ನಲ್ಲಿ ತಿಳಿಸಿರುವಂತೆ (ಇ-ಪಾವತಿ ವಿವರ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ) (3) ಪ್ರೀ ಬಿಡ್ ಸಭೆ : 10-06-2025 ರ 12.30 ಗಂಟೆಗೆ (4) ತಾಂತ್ರಿಕ ಬಿಡ್ : 04-07-2025 ರ 11.00 ಗಂಟೆಗೆ (5) ವಾಣಿಜ್ಯ ಬಿಡ್ : 10-07-2025 ರ ಬೆಳಿಗ್ಗೆ 11.30 ಗಂಟೆಗೆ.

ಸಹಿ/-
ಪೊಲೀಸ್ ಮಹಾ ನಿರ್ದೇಶಕರು,
ಪೊಲೀಸ್ ಗಣಕ ವಿಭಾಗ, ಬೆಂಗಳೂರು

DIPR/CP/960/NR/2025-26

ಹೇಮಾವತಿ ಲಿಂಕ್ ಕೆನಾಲ್ ಹೋರಾಟ | ಮಠಾಧೀಶರು, ಜನಪ್ರತಿನಿಧಿಗಳ ಮೇಲೆ ಎಫ್‌ಐಆರ್

ಗುಬ್ಬಿ ಠಾಣೆಯಲ್ಲಿ 11 ಮಂದಿ ವಿರುದ್ಧ ಎಫ್‌ಐಆರ್

ತುಮಕೂರು: ಹೇಮಾವತಿ ಲಿಂಕ್ ಕೆನಾಲ್ ವಿರೋಧಿಸಿ ರೈತರು, ಮಠಾಧೀಶರು, ಜನಪ್ರತಿನಿಧಗಳು ಸೇರಿ ನಡೆಸಿದ್ದ ಬೃಹತ್ ಪ್ರತಿಭಟನೆ ಸಂಬಂಧ ಇಬ್ಬರು ಸ್ವಾಮೀಜಿಗಳು ಸೇರಿ 11 ಜನರ ವಿರುದ್ಧ ತುಮಕೂರಿನ ಗುಬ್ಬಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಇಬ್ಬರು ಸ್ವಾಮೀಜಿಗಳು ಯಾರೆಂದು ಹೆಸರು ಉಲ್ಲೇಖ ಮಾಡಲಾಗಿಲ್ಲ.

ಶನಿವಾರ ಗುಬ್ಬಿ ಬಳಿ ರೈತರು ರಾಷ್ಟ್ರೀಯ ಹೆದ್ದಾರಿ ತಡೆದು, ಟೈರ್‌ಗಳಿಗೆ ಬೆಂಕಿ ಹಚ್ಚಿ ಪ್ರತಿಭಟನೆ ನಡೆಸಿದ್ದರು. ಪ್ರತಿಭಟನೆಗೆ ಜನಪ್ರತಿನಿಧಿಗಳು, ಮಠಾಧೀಶರು ಬೆಂಬಲ ನೀಡಿದ್ದರು. ಪ್ರತಿಭಟನೆ ವೇಳೆ ಪೊಲೀಸರ ಮೇಲೆ ಹಲ್ಲೆ, ಸಾರ್ವಜನಿಕರಿಗೆ ತೊಂದರೆ, ಸರಕಾರಿ ವಾಹನಗಳಿಗೆ ಹಾನಿ, ರಾಷ್ಟ್ರೀಯ ಹೆದ್ದಾರಿ ಬ್ಲಾಕ್ ಮಾಡಿ ತೊಂದರೆ ಮಾಡಿದ ಆರೋಪದಲ್ಲಿ ಪ್ರಕರಣ ದಾಖಲಾಗಿದೆ. ಪ್ರತಿಭಟನೆ ವೇಳೆ ಕರ್ತವ್ಯದಲ್ಲಿದ್ದ ಪೊಲೀಸರ ಮೇಲೆ ಕಲ್ಲುತೂರಾಟ ನಡೆಸಲಾಗಿದ್ದು, ಈ ವೇಳೆ ಸಿಪಿಐ, ಪಿಎಸ್‌ಐ, ಪೊಲೀಸ್ ಸಿಬ್ಬಂದಿಗೆ ಗಾಯಗಳಾಗಿವೆ. ಹಿಟಾಚಿಯಿಂದ ಪೈಪ್ ಮುಚ್ಚುವ ವೇಳೆ ಪೊಲೀಸ್ ವರಿಷ್ಠಾಧಿಕಾರಿ ಕೈಗೆ ಗಾಯವಾಗಿದೆ. ಸೆಕ್ಷನ್ 144 ಜಾರಿ ಉಲ್ಲಂಘಿಸಿ ಪ್ರತಿಭಟನೆ ನಡೆಸಲಾಗಿದೆ ಎಂದು ಪ್ರಕರಣ ದಾಖಲಾಗಿದೆ.

ನೂರು ಎಫ್‌ಐಆರ್ ಹಾಕಿದರ ಹೆದರಲ್ಲ: ಎಫ್‌ಆರ್ ವಿರುದ್ಧ ಶಾಸಕ ಸುರೇಶ್ ಗೌಡ ಕಿಡಿಕಾರಿದ್ದಾರೆ. ಪೋಲಿಗಳನ್ನು ಸೇರಿಸಿ ಟೆಕ್ನಿಕಲ್ ಕಮಿಟಿ ಮಾಡಿದ್ದಾರೆ. ನೂರು ಎಫ್‌ಐಆರ್‌ಗಳನ್ನು ದಾಖಲಿಸಿದರೂ ಎದುರುವ ಪ್ರಶ್ನೆಯೇ ಇಲ್ಲ, ರೈತರ ಪರವಾಗಿ ಎದೆ ಕೊಟ್ಟು ನಿಲ್ಲುತ್ತೇನೆ. ನೀರಿಗಾಗಿ ಸಾಯುವ ಸ್ಥಿತಿ ಬಂದರೆ ಅದಕ್ಕೂ ಸಿದ್ಧ. ಯಾವುದೇ ಕಾರಣಕ್ಕೂ ಹೇಮಾವತಿ ನೀರು ರಾಮನಗರಕ್ಕೆ ಹೋಗಲು ಬಿಡಲ್ಲ. ಹೇಮಾವತಿ ಲಿಂಕ್ ಕೆನಲ್ ಯೋಜನೆಯಿಂದ ಜಿಲ್ಲೆಯ ಜನರಿಗೆ ಹಾಗೂ ಇಲ್ಲಿನ ರೈತರಿಗೆ ಅನ್ಯಾಯವಾಗಲಿದೆ. ತುಮಕೂರಿನ ಅನೇಕ ಹಳ್ಳಿಯಗಳಲ್ಲಿ ನೀರಿನ ಸಮಸ್ಯೆಯಿರುವಾಗ ಇಂತಹ ಅವೈಜ್ಞಾನಿಕ ಯೋಜನೆ ಜಾರಿ ಮಾಡುವುದು ಸರಿಯಲ್ಲ. ಹೇಮಾವತಿ ಕೆನಾಲ್ ಮೂಲಕ ನೀರು ಹರಿ ಸುವುದು ಸಂಪೂರ್ಣ ಅವೈಜ್ಞಾನಿಕ ಇದರಿಂದ ಈ ಭಾಗದ ರೈತರಿಗೆ ಅನ್ಯಾಯಾಗುತ್ತದೆ. ಒಂದು ವೇಳೆ ನೀರು ಹರಿಸುವುದಾದರೆ ನನ್ನ ಹೆಣದ ಮೇಲೆ ನೀರು ಹರಿಸಿ ಎಂದು ಶಾಸಕ ಸುರೇಶ್ ಗೌಡ ಆಕ್ರೋಶ ವ್ಯಕ್ತಪಡಿಸಿದರು.

ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದ್ದೇನು?

- 144 ಜಾರಿ ನಡುವೆ ಹೆದ್ದಾರಿ ತಡೆದು ಮಠಾ ಧೀಶರು, ಜನಪ್ರತಿನಿಧಿಗಳು, ರೈತರು ಹೋರಾಟ
- ಪ್ರತಿಭಟನೆ ವೇಳೆ ಸಾರ್ವಜನಿಕರಿಗೆ ತೊಂದರೆ, ಪೊಲೀಸರ ಮೇಲೆ ಕಲ್ಲು ತೂರಾಟ
- ಸಾರ್ವಜನಿಕ ಆಸ್ತಿಗೆ ಹಾನಿ, ಪ್ರತಿಭಟನೆ ವೇಳೆ ಸಿಪಿಐ, ಪಿಎಸ್‌ಐ, ಸಿಬ್ಬಂದಿಗೆ ಗಾಯ

ಯಾರ್‍ಯಾರ ಮೇಲೆ ಎಫ್‌ಐಆರ್?

ಶಾಸಕರಾದ ಶಾಸಕ ಸುರೇಶ್ ಗೌಡ, ಜ್ಯೋತಿ ಗಣೇಶ್, ಎಂ.ಟಿ ಕೃಷ್ಣಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ಹೆಬ್ಬಾಕ ರವಿ, ದಿಲೀಪ್ ಕುಮಾರ್ ಹಾಗೂ ಇಬ್ಬರು ಸ್ವಾಮೀಜಿಗಳು ಸೇರಿ ಒಟ್ಟು 11 ಜನರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಆದರೆ, ಸ್ವಾಮೀಜಿಗಳ ಹೆಸರು ಉಲ್ಲೇಖಿಸಿಲ್ಲ. ಇದರಲ್ಲಿ 10 ಸ್ವಯಂಪ್ರೇರಿತ ಪ್ರಕರಣಗಳಾಗಿವೆ. ಒಂದು ಕೇಸ್ ಮಾತ್ರ ಗುತ್ತಿಗೆದಾರರು ನೀಡಿದ ದೂರಿನ ಮೇಲೆ ದಾಖಲಾಗಿದೆ.

ಹೇಮಾವತಿ ಲಿಂಕ್ ಕೆನಾಲ್ ಯೋಜನೆಗೆ ಹಾಕುತ್ತಿರುವ ಹಣದಲ್ಲಿ ಅರ್ಧ ಹಣವನ್ನು ಮುಖ್ಯ ಕಾಲುವೆ ಅಗಲೀಕರಣಕ್ಕೆ ಹಾಕಿದರೆ ಸಾಕು. ಸಮಸ್ಯೆ ಪರಿಹಾರ ಆಗುತ್ತೆ. ಎಲ್ಲರಿಗೂ ಅನುಕೂಲ ಆಗುತ್ತದೆ. ವಿನಾಕಾರಣ ಎಲ್ಲರಿಗೂ ತೊಂದರೆ ಕೊಡುವ ಕೆಲಸವನ್ನು ಮಾಡಲಾಗುತ್ತಿದೆ.

– ಶ್ರೀನಿವಾಸ್, ಗುಬ್ಬಿ ಶಾಸಕ

ಪ್ರಾಣ ಕೊಡಲು ಸಿದ್ಧ : ಶಾಸಕ ರಂಗನಾಥ್

ಜಿಲ್ಲೆಯ ಮಗನಾಗಿ ಯೋಜನೆಯನ್ನು ಬೇರೆ ಕಡೆ ತೆಗೆದುಕೊಂಡು ಹೋಗಲು ನಾನು ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ಹೇಮಾವತಿ ಲಿಂಕ್ ಕೆನಾಲ್ ಯೋಜನೆ ಕುಣಿಗಲ್‌ಗೆ ಮಾತ್ರ ಸೀಮಿತ ವಾದ ಯೋ ಜನೆ. ಯೋಜನೆಯನ್ನು ರಾಮನಗರಕ್ಕೆ ತೆಗೆದು ಕೊಂಡು ಹೋಗುತ್ತಿದ್ದಾರೆಂಬುವುದು ಶುದ್ಧ ಸುಳ್ಳು. ರೈತರ ಹಿತಾಸಕ್ತಿಗೆ ನಾನು ನನ್ನ ಪ್ರಾಣ ಕೊಡಲು ಸಿದ್ದನಿದ್ದೇನೆ ಎಂದು ಕುಣಿಗಲ್ ಶಾಸಕ ರಂಗನಾಥ್ ತಿಳಿಸಿದರು.

ಇನ್ನು ಯಾರ್‍ಯಾರ ಮೇಲೆ ಎಫ್‌ಐಆರ್ ಸಾಧ್ಯತೆ?

ತೇವಡಿಹಳ್ಳಿ ಮಠದ ಗೋಸಲ ಚನ್ನಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ, ದೊಡ್ಡಗುಣಿ ಮಠದ ರೇವಣಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಬೆಳ್ಳಾವಿ ಕಾರದ ಮಠದ ಕಾರದ ವೀರ ಬಸವ ಸ್ವಾಮೀಜಿ, ಗೊಲ್ಲಹಳ್ಳಿ ಮಠದ ವಿಭವ ವಿದ್ಯಾಶಂಕರ ಸ್ವಾಮೀಜಿ, ಮಾಜಿ ಶಾಸಕ ಮಸಾಲೆ ಜಯರಾಮ್, ಮುಖಂಡರಾದ ಜಿ.ಎನ್.ಬೆಟ್ಟಸ್ವಾಮಿ, ಎ.ಗೋವಿಂದರಾಜು, ಪ್ರಭಾಕರ್, ಚಂದ್ರಶೇಖರ್ ಬಾಬು, ಶಾಂತಕುಮಾರ್, ಹೊನ್ನಗಿರಿಗೌಡ, ಬಿ.ಎಸ್.ನಾಗರಾಜು, ಬ್ಯಾಟರಂಗೇಗೌಡ, ವೆಂಕಟೇಗೌಡ, ಕಳ್ಳಿಪಾಳ್ಯ ಲೋಕೇಶ್, ಭೈರಪ್ಪ, ಕಾಡಶೆಟ್ಟಿಹಳ್ಳಿ ಸತೀಶ್ ಮೇಲೆ ಎಫ್‌ಐಆರ್ ದಾಖಲಿಸುವ ಸಾಧ್ಯತೆಯಿದೆ.

ಭೂಕುಸಿತ ವರದಿ ನೀಡಿ

← ಮೊದಲಪುಟದಿಂದ

ಈ ಸಂಬಂಧ ಅರಣ್ಯ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿರುವ ಸಚಿವ ಈಶ್ವರ್ ಖಂಡ್ರೆ ಅವರು, ಪಶ್ಚಿಮಘಟ್ಟದ ಧಾರಣಾ ಸಾಮರ್ಥ್ಯ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಸೂಚನೆ ನೀಡಿದ್ದಾರೆ.

ತಜ್ಞರ ಆತಂಕ: ಈಗಾಗಲೇ ಪಶ್ಚಿಮ ಘಟ್ಟದಲ್ಲಿ ಹಲವು ರಸ್ತೆ, ಮತ್ತಿತರ ಯೋಜನೆಗಳು ಕಾರ್ಯಗತವಾಗುತ್ತಿದ್ದು, ಇದರಿಂದ ಘಟ್ಟ ಅಪಾಯಕ್ಕೆ ಸಿಲುಕಿದೆ. ಆಸ್ತಿ ಹಾನಿ, ಬೆಳೆ ಹಾನಿ, ಜೀವಹಾನಿಯ ಜತೆಗೆ ವನ್ಯ ಜೀವಿಗಳೂ ಸಂಕಷ್ಟ ಎದುರಿಸುವಂತಾಗಿದೆ ಎಂದು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ. ಪಶ್ಚಿಮಘಟ್ಟ ಕ್ಷೀಣಿಸಿದರೆ ಮುಂಬರುವ ದಿನಗಳಲ್ಲಿ ತೀವ್ರ ಜಲಕ್ಷಾಮ ಎದುರಾಗುವ ಭೀತಿ ಇದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪಶ್ಚಿಮ ಘಟ್ಟದ ಧಾರಣಾ ಸಾಮರ್ಥ್ಯದ ಬಗ್ಗೆ ಅಧ್ಯಯನ ಮಾಡಿ ಮೂರು ತಿಂಗಳೊಳಗೆ ವರದಿ ಸಲ್ಲಿಸಲು ಸೂಚನೆ ನೀಡಿದ್ದಾರೆ.

ಕರಾವಳಿಯಲ್ಲಿ ಮಳೆಗೆ ಬಿಡುವು

← ಮೊದಲಪುಟದಿಂದ

ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಸಾಧಾರಣ ಮಳೆ ಮುಂದುವರಿಯಲಿದ್ದು, ಒಳನಾಡಿನಲ್ಲಿ ಚದುರಿದಂತೆ ಕೆಲವೆಡೆ ಮಳೆಯಾಗುವ ಸಾಧ್ಯತೆಗಳಿವೆ. ಈ ಬಾರಿ ಮೇ 24ಕ್ಕೆ ಮುಂಗಾರು ಮಳೆ ರಾಜ್ಯ ಪ್ರವೇಶವಾಗಿ, ಆರಂಭದಲ್ಲೇ ಆರ್ಭಟಿಸಿತ್ತು. ಮೇ ತಿಂಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದು, ಶತಮಾನದ ದಾಖಲೆ ಮಳೆಯಾಗಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ, ಕಳೆದ ಒಂದು ವಾರದಲ್ಲಿ ಶೇ.298ರಷ್ಟು ಮಳೆಯಾಗಿದೆ. ಮೇ ತಿಂಗಳಲ್ಲಿ ರಾಜ್ಯದ ವಾಡಿಕೆ ಮಳೆ ಪ್ರಮಾಣ 73.6 ಮಿ.ಮೀ.ನಷ್ಟಿದ್ದು, 218.7 ಮಿ.ಮೀ.ನಷ್ಟು ಮಳೆಯಾಗಿದೆ. ಒಟ್ಟಾರೆ ವಾಡಿಕೆಗಿಂತ ಶೇ.197ರಷ್ಟು ಹೆಚ್ಚು ಮಳೆಯಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಸಮಾಚಾರ ಸಣ್ಣದಲ್ಲ

ಹಟ್ಟಿ ಚಿನ್ನದಗಣಿ ಕಾರ್ಮಿಕ ಸಾವು

ರಾಯಚೂರು: ಜಿಲ್ಲೆಯ ಲಿಂಗಸುಗೂರಿನ ಹಟ್ಟಿ ಚಿನ್ನದಗಣಿಯಲ್ಲಿ ಏರ್ ಬ್ಲಾಸ್ಟ್ ಆಗಿ ಒಬ್ಬ ಕಾರ್ಮಿಕ ಸಾವನ್ನಪ್ಪಿದ್ದು, ಮತ್ತೊಬ್ಬ ಗಂಭೀರವಾಗಿ ಗಾಯ

ಗೊಂಡಿದ್ದಾರೆ. ಮೃತನನ್ನು ಶರಣಬಸವ (40) ಎಂದು ಗುರುತಿಸಲಾಗಿದೆ. ಗಂಭೀರ ಗಾಯಗೊಂಡ ಕಾರ್ಮಿಕನನ್ನು ನಿರುಪಾದಿ ಎಂದು ಗುರುತಿಸ ಲಾಗಿದೆ. ಚಿನ್ನದ ಗಣಿಯ ಮಲ್ಲಪ್ಪ ಶಾಫ್‌ಫುಟ್ ನಲ್ಲಿ ಈ ಅವಘಡ ಸಂಭವಿಸಿದೆ. ಸುಮಾರು 2,800 ಅಡಿ ಆಳದಲ್ಲಿ ಗಣಿಗಾರಿಕೆ ಮಾಡುತ್ತಿದ್ದಾಗ ಏರ್ ಬ್ಲಾಸ್ಟ್ ಆಗಿದೆ ಎಂದು ತಿಳಿದು ಬಂದಿದೆ. ಕೆಳಗೆ ಕಾರ್ಮಿಕರು ಸಿಲುಕಿರುವ ಶಂಕೆ ವ್ಯಕ್ತವಾಗಿದೆ. ಚಿನ್ನದ ಗಣಿ ರಕ್ಷಣಾ ತಂಡದಿಂದ ಕಾರ್ಯಾಚರಣೆ ನಡೆಯುತ್ತಿದೆ. ಗಾಯಗೊಂಡ ಕಾರ್ಮಿಕನನ್ನು ಚಿನ್ನದ ಗಣಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಫನ್‌ತರಂಗ

– ರಘುಪತಿ ಶೃಂಗೇರಿ –

ಸಂಸದೆ ಜೊತೆ ಹಸೆಮಣೆ ಏರಲು ಸಜ್ಜಾದ ಕ್ರಿಕೆಟಿಗ ರಿಂಕು ಸಿಂಗ್

ಸುದ್ದಿ

ಮದ್ವೆ ಆದ್ಮೇಲೆ...
ಇಂಡಿಯನ್ ಪ್ರೀಮಿಯರ್ ಲೀಗ್ (IPL) ಗ್ರೇಟು...
ಇಂಡಿಯನ್ ಪೊಲಿಟಿಕಲ್ ಲೀಗ್ (IPL) ಗ್ರೇಟು,
ಅಂತ ಕಚ್ಚಾಡಬಾರದು ಅಷ್ಟೇ ನಮ್ ಆಸೆ...!!

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಕಲಬುರಗಿ**

ಸಮಸ್ಯೆಯೇನು..?

- ಕಲಬುರಗಿ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂಬರ್ 11ರಲ್ಲಿ ಶಹಾಬಜಾರ್‌ನಲ್ಲಿ ಗಂಜ್‌ಗೆ ಹೋಗುವ ರಸ್ತೆಯ ಡ್ರೈನೇಜ್ ದುರಸ್ತಿ ಮಾಡುವ ಬಗ್ಗೆ.
- **ಪರಿಹಾರ:** ಸಲ್ಲಿಕೆಯಾದ ದೂರನ್ನು ಪರಿಶೀಲನೆ ಮಾಡಲಾಗಿದ್ದು, ಪಾಲಿಕೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಡ್ರೈನೇಜ್ ಕಾಮಗಾರಿಯನ್ನು ಪ್ರಾರಂಭಿಸಿದ್ದಾರೆ. ಕಾಮಗಾರಿ ಪ್ರಗತಿಯಲ್ಲಿದ್ದು, ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ.

ವಿಶ್ವವಾಣಿ ಕ್ಲಬ್ ಹೌಸ್
02.06.2025
ಸಂಜೆ: 06.55 ರಿಂದ 08.05 ರವರೆಗೆ

ಸೋಮವಾರದ ಅತಿಥಿ
ಕು. ಕವನ ಕೋಗಿಲೆ
ವಿಷಯ
ಹೆಚ್. ಎಸ್ .ವಿ . ಗೀತೆಗಳು
vishwavani.news

ಟ್ವೀಟೂ-ಖಾರಾ

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ದೈನಂದಿನ ಆಹಾರದ ಭಾಗವಾಗಿರುವ ಹಾಲಿನ ಮಹತ್ವ ಹಾಗೂ ಮೌಲ್ಯವರ್ಧನೆ ಕುರಿತು ಜಗತ್ತಿನಾದ್ಯಂತ ಅರಿವು ಮೂಡಿಸಲು ವಿಶ್ವ ಹಾಲು ದಿನವನ್ನು ಆಚರಿಸಲಾಗುತ್ತದೆ.
ಹಾಲಿನ ಪೌಷ್ಟಿಕ ಗುಣಗಳು ಮಕ್ಕಳ ಬೆಳವಣಿಗೆಗೆ ಸಹಕಾರಿಯಾಗುವುದರಿಂದ ನಮ್ಮ ಸರಕಾರ 'ಕ್ಷೀರ ಭಾಗ್ಯ'ದಂಥ ಯೋಜನೆಗಳನ್ನು ತಂದಿದೆ.
ಹೈನುಗಾರರ ಬದುಕನ್ನು ಹಸನಾಗಿಸಲು ಹಲವಾರು ಯೋಜನೆಗಳನ್ನು ರೂಪಿಸಿದೆ. ನಮ್ಮ ಸರಕಾರ ಸದಾ ರೈತ ಪರ ಸರಕಾರ. ಸಮಸ್ತ ಹಾಲು ಉತ್ಪಾದಕರು ಹಾಗೂ ಗ್ರಾಹಕರಿಗೂ ವಿಶ್ವ ಹಾಲು ದಿನದ ಶುಭಾಶಯಗಳು.

ಬಾಡಿಗೆ ಅಭಿಮಾನಿ

ಏನಿದು ವಿಶೇಷ. ಎಣ್ಣೆ ಕುಡಿಯುವವರು ಹಾಲು ಕುಡಿಯುತ್ತಿದ್ದಾರೆ.

ಸಂಘಗಳಿಗೆ ಆದ್ಯತೆ ಬೇಡ, ಕ್ರಿಶ್ಚಿಯನ್ನರಿಗೆ ಅವಕಾಶ ನೀಡಿ | ರಾಜ್ಯದ ಪಟ್ಟಿ ದಿಲ್ಲಿಯಲ್ಲಿ ತಿರಸ್ಕಾರ ?

ಪರಿಷತ್ ಹೆಸರುಗಳ ಶಿಫಾರಸ್ಸಿಗೆ ಹೈಕಮಾಂಡ್ ಆಕ್ಷೇಪ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ಬಹು ನಿರೀಕ್ಷಿತ ವಿಧಾನಪರಿಷತ್ ನಾಲ್ಕು ನಾಮನಿರ್ದೇಶನ ಸದಸ್ಯರ ಸ್ಥಾನಕ್ಕೆ ರಾಜ್ಯ ಕಾಂಗ್ರೆಸ್ ಸಲ್ಲಿಸಿದ್ದ ಶಿಫಾರಸ್ಸುಗಳನ್ನು ಪಕ್ಷದ ಹೈಕಮಾಂಡ್ ಬೇಸರಗೊಂಡು ಪಕ್ಕಕ್ಕೆ ಇರಿಸಿದೆ ಎಂಬುದು ತಿಳಿದುಬಂದಿದೆ.

ರಾಜ್ಯದಲ್ಲಿ ತೆರವಾಗಿರುವ ಮೇಲ್ಮನೆಯ 4 ಸ್ಥಾನಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪ್ರತ್ಯೇಕವಾಗಿ ಶಿಫಾರಸು ಪಟ್ಟಿ ಸಲ್ಲಿಸಿ ತಿಂಗಳೇ ಕಳೆದಿದೆ. ಆದರೂ ಹೈಕಮಾಂಡ್‌ನಿಂದ ಇದರ ಬಗ್ಗೆ ಸಣ್ಣ ಸೊಲ್ಲೂ ಕೇಳಿ ಬಂದಿಲ್ಲ. ಅಂದರೆ ಇದನ್ನು ಹೈಕಮಾಂಡ್ ಸಂಪೂರ್ಣ ತಿರಸ್ಕರಿಸಿದೆಯೇ ಎನ್ನುವ ಗಂಭೀರ ಚರ್ಚೆ ಪಕ್ಷದಲ್ಲಿ ನಡೆಯುತ್ತಿದೆ.

ತೆರವಾಗಿರುವ 4 ಪರಿಷತ್ ಸ್ಥಾನಗಳಿಗೆ ಸುಮಾರು 60ಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದು, ಇವರಲ್ಲಿ ಕೆಲವರು ತಿಂಗಳಿನಿಂದಲೂ ದಿಲ್ಲಿಯಲ್ಲಿ ನಿರಂತರ ಲಾಬಿ ನಡೆಸುತ್ತಿದ್ದಾರೆ. ಅವರೇ ಈಗ ರಾಜ್ಯದ ಶಿಫಾರಸು ಪಟ್ಟಿ ತಿರಸ್ಕಾರವಾಗಿರುವ ಮಾಹಿತಿ ಬಯಲು ಮಾಡಿದ್ದಾರೆ. ದಿಲ್ಲಿಯಲ್ಲಿ ಬೀಡು ಬಿಟ್ಟಿರುವ ಪ್ರಬಲ ಆಕಾಂಕ್ಷಿಗಳ ಪ್ರಕಾರ, ರಾಜ್ಯ ಕಾಂಗ್ರೆಸ್ ಈಗ ಹೊಸ ಪಟ್ಟಿಯನ್ನು ಸಲ್ಲಿಸಬೇಕು ಅಥವಾ ಸಲ್ಲಿಕೆಯಾಗಿರುವ ಪಟ್ಟಿಯನ್ನು ಸಮರ್ಥಿಸುವ ಪ್ರಯತ್ನ ಮಾಡಬೇಕು. ಇಲ್ಲವಾದರೆ ಪಕ್ಷದ ವರಿಷ್ಠರೇ ನಾಮನಿರ್ದೇಶನ ಸದಸ್ಯತ್ವದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಕಳುಹಿಸುವ ಸಾಧ್ಯತೆ ಇದೆ.

ರಾಜ್ಯ ಸರಕಾರ ಮತ್ತು ರಾಜ್ಯ ಕಾಂಗ್ರೆಸ್ ಜತೆಗೂಡಿ ಸಲ್ಲಿಸಿರುವ ಶಿಫಾರಸು ಪಟ್ಟಿಯಲ್ಲಿ ಹೆಚ್ಚಿನ ರೀತಿಯಲ್ಲಿ

ಸಂಘಟನೆಗಳಿಂದ ಬಂದವರಿಗೆ, ರಾಜಕಾರಣಿಗಳಿಗೆ ಹಾಗೂ ಸಮಾಜ ಸೇವೆಯಲ್ಲಿದ್ದವರಿಗೆ ಆದ್ಯತೆ ನೀಡಲಾಗಿದೆ. ಹಾಗೆಯೇ ಅಲ್ಪಸಂಖ್ಯಾತರ ಹೆಸರಿನಲ್ಲಿ ಮುಸ್ಲಿಂ ಸಮುದಾಯ ಮಾತ್ರ ಪರಿಗಣಿಸಿ ಕ್ರಿಶ್ಚಿಯನ್ ಸಮುದಾಯ ನಿರ್ಲಕ್ಷ್ಯ ಮಾಡಿರುವ ಆಕ್ಷೇಪವೂ ಇದೆ ಎನ್ನಲಾಗಿದೆ.

ಇದೆಲ್ಲಕ್ಕಿಂತ ಮುಖ್ಯವಾಗಿ ರಾಜ್ಯಪಾಲರು ಈಗಾಗಲೇ ಅಲ್ಪಸಂಖ್ಯಾತರಿಗೆ ಗುತ್ತಿಗೆಯಲ್ಲಿ ಮೀಸಲು ಕಲ್ಪಿಸುವ ವಿಧೇಯಕ ಸೇರಿದಂತೆ ಅನೇಕ ಮಸೂದೆಗಳನ್ನು ಒಂದರ ಹಿಂದೆ ಒಂದರಂತೆ ತಿರಸ್ಕರಿಸುತ್ತಿರುವ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳ ಸಾಧಕರು, ಪರಿಣಿತರು ಹಾಗೂ ವಿದ್ವಾಂಸರ ಬದಲು ರಾಜಕಾರಣಿಗಳನ್ನು ನಾಮಕರಣ ಮಾಡಿ ಕಳುಹಿಸಿದರೆ ರಾಜ್ಯಪಾಲರಿಂದ ತಿರಸ್ಕಾರವಾಗಬಹುದು. ಆದ್ದರಿಂದ ಕಾಂಗ್ರೆಸ್‌ಗೆ ಮುಖಭಂಗವಾಗಬಹುದು ಎನ್ನುವ ಬಗ್ಗೆಯೂ ಪಕ್ಷದ ವರಿಷ್ಠರು ಆಲೋಚಿಸಿದ್ದಾರೆ ಎನ್ನಲಾಗಿದೆ. ಹೀಗಾಗಿ ಹೈಕಮಾಂಡ್‌ಗೆ ಸಲ್ಲಿಕೆಯಾಗಿರುವ ಪಟ್ಟಿಯನ್ನು ಈಗ ರಾಜ್ಯ ನಾಯಕರು ಮರುಪರಿಶೀಲಿಸಬೇಕು. ಇಲ್ಲವೇ ಹೊಸ ಹೆಸರುಗಳು ಸಹಿತ ಹೈಕಮಾಂಡ್ ಭೇಟಿ ಮಾಡಿ ನಾಮನಿರ್ದೇಶನ ಸದಸ್ಯರ ನೇಮಕದ ಕಸರತ್ತು ಅಂತ್ಯಗೊಳಿಸಬೇಕಿದೆ ಎಂದು ಪಕ್ಷದ ದಿಲ್ಲಿ ಮೂಲಗಳು ತಿಳಿಸಿವೆ.

ಅಂತಿಮ ಆಯ್ಕೆ ಯಾರದು, ಹೇಗೆ ?

ಇರುವ ನಾಲ್ಕು ಸ್ಥಾನಗಳಿಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಐಎಸಿಸಿ ಮುಖಂಡ ಕೆ.ಸಿ.ವೇಣುಗೋಪಾಲ್ ಅವರು ಸಮ್ಮತಿಸುವವರನ್ನು ಆಯ್ಕೆ ಮಾಡಲಾಗುತ್ತದೆ. ಆದರೆ ಈಗಿರುವ ಪಟ್ಟಿಯನ್ನು ಈ ನಾಲ್ವರೂ ನಾಯಕರ ಜತೆಗೆ ಗೂಡಿ ಸಮಾಲೋಚಿಸಿ ಸರಿಪಡಿಸಲಿದ್ದಾರೆ.
ಪಕ್ಷದ ಮೂಲಗಳು ಪ್ರಕಾರ, ಜೂನ್ 5ರ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ದಿಲ್ಲಿ ಪ್ರವಾಸ ಕೈಗೊಳ್ಳಲಿದ್ದು, ಹೈಕಮಾಂಡ್ ಜತೆ ಚರ್ಚಿಸಲಿದ್ದಾರೆ. ಅಂದರೆ ಈಗಾಗಲೇ ನೀಡಿರುವ ಹೆಸರುಗಳಲ್ಲಿ ಕೊಂಚ ಬದಲಾವಣೆ ಮಾಡಿ ಅಭ್ಯರ್ಥಿಗಳ ಪಟ್ಟಿ ಅಖೈರುಗೊಳಿಸಿಕೊಂಡು ಬರಲಿದ್ದಾರೆ. ಈ ಮಾಹಿತಿ ತಿಳಿಯುತ್ತಿದ್ದಂತೆ ಕೆಲವು ಹೊಸ ಆಕಾಂಕ್ಷಿಗಳು ಲಾಬಿ ಆರಂಭಿಸಿದ್ದು, ಹಿಂದುಳಿದ ವರ್ಗದಿಂದ ವೇಣುಗೋಪಾಲ್, ದಲಿತ ಸಾಹಿತಿಯೂ, ಕಾಂಗ್ರೆಸ್ ಹಿರಿಯರೂ ಆದ ಎಲ್, ಹನುಮಂತಯ್ಯ, ಮಾಜಿ ಸಚಿವ ಆಂಜನೇಯ ಹಾಗೂ ತೇಜಸ್ವಿನಿ ಗೌಡ ಮತ್ತು ರಮೇಶ್ ಬಾಬು ಮಂಚೂಣಿಯಲ್ಲಿದ್ದಾರೆ.

ಏನಿದು ಗೊಂದಲ, ಏಕೆ ತಿರಸ್ಕಾರ ?

ಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯರಾಗಿದ್ದ ಯು.ಬಿ.ವೆಂಕಟೇಶ್ ಹಾಗೂ ಪ್ರಕಾಶ್ ರಾಥೋಡ್, ಜೆಡಿಎಸ್ ನಿಂದ ನಾಮಕರಣಗೊಂಡಿದ್ದ ತಿಪ್ಪೇಸ್ವಾಮಿ, ಬಿಜೆಪಿಯಿಂದ ನಾಮಕರಣಗೊಂಡಿದ್ದ ಸಿ.ಪಿ. ಯೋಗೇಶ್ವರ್ ಅವರ ಸ್ಥಾನಗಳು ತೆರವಾಗಲಿದ್ದು, ಈ ಎಲ್ಲಾ ಸ್ಥಾನಗಳಿಗೂ ಕಾಂಗ್ರೆಸ್ ಸದಸ್ಯರು ನಾಮಕರಣಗೊಂಡರೆ, ಪರಿಷತ್ ನಲ್ಲಿ ಕಾಂಗ್ರೆಸ್ ಸದಸ್ಯ ಬಲ 37ಕ್ಕೆ ಏರಿಕೆಯಾಗಲಿದೆ. ಬಿಜೆಪಿಯ ಬಲ 29ಕ್ಕೆ ಇಳಿಯಲಿದ್ದು, ಜೆಡಿಎಸ್ ಸದಸ್ಯರ ಸಂಖ್ಯೆ 9ರಲ್ಲಿ ಮುಂದುವರಿಯಲಿದೆ. ಬಿಜೆಪಿ-ಜೆಡಿಎಸ್ ಸೇರಿದಂತೆ ಪರಿಷತ್ ನಲ್ಲಿ ಪ್ರತಿಪಕ್ಷಗಳ ಸದಸ್ಯ ಬಲ ಕೂಡ 37 ಆಗಲಿದೆ. ಹೀಗಾಗಿ ಕಾಂಗ್ರೆಸ್ ನಲ್ಲಿ ನಾಲ್ಕು ಸದಸ್ಯತ್ವಕ್ಕೆ ವಿವಿಧ ಕ್ಷೇತ್ರಗಳ ಸಾಧಕರು, ಅನುಭವಿಗಳನ್ನು ಆಯ್ಕೆ ಮಾಡಿ ಮೇಲ್ಮನೆಗೆ ಕಳುಹಬೇಕಿದೆ. ಆದರೆ ರಾಜ್ಯದಿಂದ ಸಲ್ಲಿಸಿರುವ ಶಿಫಾರಸು ಪಟ್ಟಿಯಲ್ಲಿ ಅಂಥವರು ವಿರಳ ಎನ್ನುವ ಆಕ್ಷೇಪ ಹೈಕಮಾಂಡ್ ನದ್ದಾಗಿದೆ ಎಂದು ತಿಳಿದುಬಂದಿದೆ. ಈ ಪಟ್ಟಿಯಲ್ಲಿ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ, ಎಐಸಿಸಿ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಹಿರಿಯ ಮುಖಂಡ ವೇಣು ಗೋಪಾಲ ಸೇರಿದಂತೆ ಅನೇಕ ಹಿರಿಯ ಆಪ್ತರಿದ್ದು, ವಿಯನ ಕಾರ್ತಿಕ್, ಬಿ.ಎಲ್.ಶಂಕರ್, ರಘುನಂದನ್ ರಾಮಣ್ಣ, ಡಿ.ಜಿ.ಸಾಗರ್, ಕೆ.ಶಿವಕುಮಾರ್, ದಿನೇಶ್ ಅಮೀನ್ ಮಟ್ಟು, ಅಗಾ ಖಾನ್ ಹಾಗೂ ಕೆಲವು ಉದ್ಯಮಿಗಳು ಹಾಗೂ ರಾಜಕಾರಣಿಗಳೇ ಹೆಚ್ಚಾಗಿ ದ್ದಾರೆ ಎನ್ನಲಾಗಿದೆ. ಇವರಲ್ಲಿ ಕೆಲವರು ಪತ್ರಿಕೋದ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳ ಹಿನ್ನೆಲೆಯವರು ಇರುವುದು ಸರಿ. ಆದರೆ ಸಂಘಟನೆಯಿಂದ ಬಂದವರಿದ್ದಾರೆ. ಜತೆಗೆ ಕ್ರಿಶ್ಚಿಯನ್ ಸಮುದಾಯಕ್ಕೆ ಆದ್ಯತೆ ಸಿಕ್ಕಿಲ್ಲ. ಹಿಂದುಳಿದವರಲ್ಲೇ ಅತಿ ಸಣ್ಣ ಜನಾಂಗಕ್ಕೆ ಅವಕಾಶ ನೀಡಿಲ್ಲ. ಹಾಗೆಯೇ ಮಾದಿಗ ಸಂಘಟನೆಗಳು ಆಕ್ಷೇಪಿಸುತ್ತಿರುವಂತೆ ದಲಿತರಲ್ಲೇ ಮಾದಿಗ ಸಮುದಾಯಕ್ಕೆ ಅವಕಾಶ ನೀಡಿಲ್ಲ ಎನ್ನುವ ಆಕ್ಷೇಪಗಳಿವೆ, ಇಂಥ ಪಟ್ಟಿಯನ್ನು ಅಂತಿಮಗೊಳಿಸಿ ರಾಜ್ಯಪಾಲರಿಗೆ ಕಳುಹಿಸಿದರೆ ಅವರು ತಿರಸ್ಕರಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ ಎನ್ನುವ ಆತಂಕ ಕಾಂಗ್ರೆಸ್ ನದಾಗಿದೆ ಎಂದು ಮೂಲಗಳು ವಿವರಿಸಿವೆ.

ಶಿಫಾರಸ್ಸು ಪಟ್ಟಿಯಲ್ಲಿ ಯಾರಿಗೆ ಮಣೆ?

- ತೆರವಾದ ಪರಿಷತ್‌ನ 4 ಸ್ಥಾನಗಳಿಗೆ 60ಕ್ಕೂ ಹೆಚ್ಚು ಆಕಾಂಕ್ಷಿಗಳು
- ರಾಜಕಾರಣಿಗಳಿಗೆ ಹಾಗೂ ಸಮಾಜ ಸೇವೆಯಲ್ಲಿದ್ದವರಿಗೆ ಆದ್ಯತೆ
- ಅಲ್ಪಸಂಖ್ಯಾತರ ಕೋಟಾದಲ್ಲಿ ಮುಸ್ಲಿಂ ಸಮುದಾಯಕ್ಕೆ ಮಣೆ
- ಕ್ರಿಶ್ಚಿಯನ್ ಸಮುದಾಯ ನಿರ್ಲಕ್ಷಿಸಿ ಆಕಾಂಕ್ಷಿಗಳ ಪಟ್ಟಿ ರವಾನೆ

---

124 ವರ್ಷದ ಬಳಿಕ ದಾಖಲೆ ಮಳೆ

ಬೆಂಗಳೂರು: ರಾಜ್ಯದಲ್ಲಿ ಶತಮಾನದ ಬಳಿಕ ಪೂರ್ವ ಮುಂಗಾರು ಮತ್ತು ನೈಋತ್ಯ ಮುಂಗಾರು ಹಲವು ದಾಖಲೆ ಬರೆದಿದ್ದು, ರಾಜ್ಯದ 7 ಜಿಲ್ಲೆಗಳಲ್ಲಿ 2025ರ ಮೇ ತಿಂಗಳ ಅವಧಿಯಲ್ಲಿ ಸಾರ್ವಕಾಲಿಕ ದಾಖಲೆ ಮಳೆಯಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮಾಹಿತಿ ನೀಡಿದೆ.

2025ರ ಮೇನಲ್ಲಿ ಕರಾವಳಿ ವ್ಯಾಪ್ತಿಯ ಜಿಲ್ಲೆಗಳಲ್ಲಿ 764 ಮಿ.ಮೀ. ಮಳೆಯಾಗಿದ್ದು,1918ರ ಮೇನಲ್ಲಿ 706 ಮಿ.ಮೀ. ಮಳೆಯಾಗಿತ್ತು. 124 ವರ್ಷದ ಬಳಿಕ ಕೊಪ್ಪಳದಲ್ಲಿ ದಾಖಲೆ ಮಳೆ ಸುರಿದಿದೆ. 1901ರ ಮೇನಲ್ಲಿ ಕೊಪ್ಪಳದಲ್ಲಿ 129 ಮಿ. ಮೀ. ಮಳೆಯಾಗಿತ್ತು. 2025ರ ಮೇನಲ್ಲಿ 165 ಮಿ.ಮೀ. ಮಳೆ ಸುರಿದಿದೆ. 83 ವರ್ಷದ ಬಳಿಕ ಮೇ ಅವಧಿಯಲ್ಲಿ ರಾಜ್ಯಾದ್ಯಂತ ಅಧಿಕವಾಗಿ ವರ್ಷಧಾರೆಯಾಗಿದೆ. 2025ರ ಮೇನಲ್ಲಿ ರಾಜ್ಯಾದ್ಯಂತ 245 ಮಿ.ಮೀ. ಸುರಿದಿದೆ. 1943ರ ಮೇನಲ್ಲಿ 185 ಮಿ.ಮೀ. ಮಳೆಯಾಗಿತ್ತು. ಅಲ್ಲದೆ, ಮಾರ್ಚ್‌ನಿಂದ ಮೇ ತಿಂಗಳವರೆಗೆ ವಿವಿಧ ಜಿಲ್ಲೆಗಳಲ್ಲಿ ದಾಖಲೆ ಮಳೆ ಸುರಿದಿರುವುದು ವರದಿಯಾಗಿದೆ.

ಎಲ್ಲೆಲ್ಲಿ ದಾಖಲೆ ಮಳೆ?: 1960ರ ಮೇನಲ್ಲಿ ಯಾದಗಿರಿಯಲ್ಲಿ ಸುರಿದಿದ್ದ 157 ಮಿ.ಮೀ. ದಾಖಲೆ ಮಳೆ ಸುರಿದಿತ್ತು. ಈ ಬಾರಿ 200 ಮಿ.ಮೀ. ಮಳೆಯಾಗಿದೆ. ವಿಜಯಪುರದಲ್ಲಿ 178 ಮಿ.ಮೀ. ಮಳೆ ಸುರಿದಿದೆ. ಇದು 1990ರ ಮೇನಲ್ಲಿ ಸುರಿದಿದ್ದ 158.3 ಮಿ.ಮೀ. ಮಳೆ ದಾಖಲೆಯನ್ನು ಹಿಂದಿಕ್ಕಿದೆ. ಬೀದರ್‌ನಲ್ಲಿ 213 ಮಿ.ಮೀ. ದಾಖಲೆ ಮಳೆಯಾಗಿದ್ದು, 1986ರಲ್ಲಿ ಸುರಿದಿದ್ದ 171.8 ಮಿ.ಮೀ. ದಾಖಲೆ ಮಳೆಯಾಗಿತ್ತು. ಬಾಗಲಕೋಟೆಯಲ್ಲಿ 1958ರ ಮೇನಲ್ಲಿ ಸುರಿದಿದ್ದ 131 ಮಿ.ಮೀ. ದಾಖಲೆ ಮಳೆಯನ್ನು ಈ ಬಾರಿಯ ಮೇ ತಿಂಗಳಿನಲ್ಲಿ ಸುರಿದ 148.9 ಮಿ.ಮೀ. ಮಳೆಯು ದಾಖಲೆ ಸೃಷ್ಟಿಸಿದೆ.

ಪ್ರದೇಶ	2025ರಲ್ಲಿ ಮಳೆ	ಮಿ ಮೀಗಳಲ್ಲಿ (ವರ್ಷ)
ಕರಾವಳಿ ಕರ್ನಾಟಕ	764	690(1918)
ಉತ್ತರ ಕರ್ನಾಟಕ	764	151(1943)
ಬಾಗಲಕೋಟೆ	148	131(1958)
ಬೀದರ್	213	171(1986)
ವಿಜಯಪುರ	178	158(1990)
ಚಿಕ್ಕಮಗಳೂರು	415	321(1995)
ದಕ್ಷಿಣ ಕನ್ನಡ	994	845(1918)
ಕೊಪ್ಪಳ	165	129(1901)
ಯಾದಗಿರಿ	200	157(1960)

ಆಪರೇಷನ್ ಸಿಂದೂರದ ಬಗ್ಗೆ ಬಿ.ಕೆ.ಹರಿಪ್ರಸಾದ್ ಪ್ರಶ್ನೆ

ಕೇಂದ್ರ ಇನ್ನಾದರೂ ಸತ್ಯ ಹೇಳಲಿ

ಬೆಂಗಳೂರು: ಆಪರೇಷನ್ ಸಿಂದೂರದ ಬಗ್ಗೆ ಪಾಕಿಸ್ತಾನಕ್ಕೆ ಪೂರ್ವ ಮಾಹಿತಿ ನೀಡಿದ್ದರಿಂದಾದ ಅನಾಹುತಗಳ ಬಗ್ಗೆ ದೇಶದ ರಕ್ಷಣಾ ಪಡೆಗಳ ಮುಖ್ಯಸ್ಥರು ವಾಸ್ತವಾಂಶವನ್ನು

ಒಪ್ಪಿಕೊಳ್ಳುತ್ತಿದ್ದಾರೆ. ಈಗಲಾದರೂ ಸುಳ್ಳು ಪ್ರಚಾರಗಳನ್ನು ಬಿಟ್ಟು ಜನರಿಗೆ ಸತ್ಯ ಹೇಳುವ ಕೆಲಸವನ್ನು ಕೇಂದ್ರ ಸರಕಾರ ಮಾಡಲಿ ಎಂದು ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಆಗ್ರಹಿಸಿದ್ದಾರೆ.

ಟ್ವೀಟ್ ಮಾಡಿರುವ ಅವರು, ಸುಳ್ಳಿಗೆ ಪ್ರಚಾರದ ಹುಚ್ಚಿರುತ್ತದೆ ಆದರೆ ಸತ್ಯಕ್ಕೆ ಮಾತ್ರ ಶಕ್ತಿ ಹೆಚ್ಚಿರುತ್ತೆ ಅನ್ನೋದಕ್ಕೆ ಆಪರೇಷನ್ ಸಿಂಧೂರ ಬಗ್ಗೆ ಹೊರಬೀಳುತ್ತಿರುವ ಘಟನೆಗಳೇ ಸಾಕ್ಷಿ. ಪಾಕಿಸ್ತಾನಿ ಉಗ್ರರನ್ನು ಹುಟ್ಟಡಗಿಸಿದ ನಮ್ಮ ಸೈನ್ಯದ ಪರಾಕ್ರಮದ ಬಗ್ಗೆ ಹಾಗೂ ಆಪರೇಷನ್ ಸಿಂದೂರದ ಯಶಸ್ಸಿನ ಬಗ್ಗೆ ದೇಶ ಹೆಮ್ಮೆ ಪಟ್ಟಿದೆ. ಕಾಂಗ್ರೆಸ್ ಹಾಗೂ ನಮ್ಮ ನಾಯಕರು, ಪ್ರತಿಪಕ್ಷದ ನಾಯಕರಾದ ರಾಹುಲ್ ಗಾಂಧಿ ಅವರು ಸೇನಾಪಡೆಯ ಸಾಹಸ ಹಾಗೂ ದಿಟ್ಟತನವನ್ನು ಪ್ರಶಂಸಿಸುತ್ತಲೇ, ಸೈನ್ಯಕ್ಕಾದ ಹಾನಿ ಹಾಗೂ ನಷ್ಟದ ಬಗ್ಗೆ ದೇಶದ ಜನರೆದುರು ವಾಸ್ತವ ತೆರೆದಿಡಿ ಎಂದು ಕೇಂದ್ರ ಸರಕಾರವನ್ನು ಒತ್ತಾಯಿಸಿದ್ದರು. ಸತ್ಯವನ್ನು ಮರೆಮಾಚುವ ಉದ್ದೇಶದಿಂದ ಮೋದಿ ಸರಕಾರ ರಾಹುಲ್ ಗಾಂಧಿ ಅವರ ಪ್ರಶ್ನೆಗೆ ಉತ್ತರಿಸಿದೆ, ಮೊಂಡುವಾದ ಮಾಡುತ್ತಾ, ಹೀಯಾಳಿಸುತ್ತಾ, ನಿಂದಿಸುತ್ತಾ, ಕಾಲ ಹರಣ ಮಾಡಿತು ಎಂದು ತಿಳಿಸಿದ್ದಾರೆ.

ಪ್ರಧಾನಿಗೆ ಸುಳ್ಳು ಪ್ರಚಾರವೇ ವೃತ್ತಿ

ದೇಶದ ರಕ್ಷಣಾಪಡೆಗಳ ಮುಖ್ಯಸ್ಥರಾದ ಅನಿಲ್ ಚೌಹಾಣ್ ಅವರೇ ಈಗ ದೇಶದ ಎದುರು ವಾಸ್ತವತೆಯನ್ನು ಒಪ್ಪಿಕೊಂಡಿದ್ದಾರೆ. ಯುದ್ಧ ವಿಮಾನಗಳನ್ನು ಕಳೆದುಕೊಂಡಿರುವ ಸತ್ಯವೂ ಸೇರಿದಂತೆ ಆಪರೇಷನ್ ಸಿಂದೂರದ ಸಮಯದಲ್ಲಾಗಿರುವ ಲೋಪದ ಬಗ್ಗೆಯೂ ಮಾತಾಡಿದ್ದಾರೆ. ಆದರೆ ಸುಳ್ಳು ಪ್ರಚಾರವನ್ನೇ ತಮ್ಮ ವೃತ್ತಿಯನ್ನಾಗಿಸಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ಹಾಗೂ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಮೌನವಹಿಸಿದ್ದು ಏಕೆ?, ದೇಶಕ್ಕೆ ಈಗಲಾದರೂ ಉತ್ತರದಾಯಿಗಳಾಗಿ, ಆಪರೇಷನ್ ಸಿಂದೂರದ ಸ್ಪಷ್ಟ ಚಿತ್ರಣವನ್ನು ತೆರೆದಿಡಿ ಎಂದು ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಹೇಳಿದ್ದಾರೆ.

- ಕಾಂಗ್ರೆಸ್ ನಾಯಕರು, ರಾಹುಲ್ ಗಾಂಧಿ ಅವರು ಸೇನಾಪಡೆಯ ಸಾಹಸ ಹಾಗೂ ದಿಟ್ಟತನಕ್ಕೆ ಪ್ರಶಂಸೆ
- ಆಪರೇಷನ್ ಸಿಂದೂರದ ಯಶಸ್ಸಿನ ಬಗ್ಗೆ ದೇಶ ಹೆಮ್ಮೆ ಪಟ್ಟಿದೆ
- ಜನರೆದುರು ವಾಸ್ತವ ತೆರೆದಿಡಲು ಕೇಂದ್ರಕ್ಕೆ ಒತ್ತಾಯ

ಮೆಡಿಕಲ್ ವಿದ್ಯಾರ್ಥಿಗಳಿಂದ ಚಿಕಿತ್ಸೆ ಆರೋಪ | ಮಂಡ್ಯದ ಮಿಮ್ಸ್ ವೈದ್ಯರ ವಿರುದ್ಧ ಆಕ್ರೋಶ

ಶಸ್ತ್ರಚಿಕಿತ್ಸೆ ಫಲಿಸದೇ ಬಾಲಕಿ ಸಾವು

ಮಂಡ್ಯ: ಪಾದ ಶಸ್ತ್ರಚಿಕಿತ್ಸೆಯಾದ 7 ವರ್ಷದ ಬಾಲಕಿ ಚಿಕಿತ್ಸೆ ಫಲಿಸದೇ ಮೃತಪಟ್ಟಿರುವ ಘಟನೆ ಮಂಡ್ಯದ ಮಿಮ್ಸ್ ಆಸ್ಪತ್ರೆಯಲ್ಲಿ ನಡೆದಿದೆ. ಬಾಲಕಿ ಸಾನ್ವಿ ಸಾವಿಗೆ ವೈದ್ಯರ

ನಿರ್ಲಕ್ಷ್ಯವೇ ಕಾರಣ ಎಂದು ಸಂಘಟನೆಗಳು ಹಾಗೂ ಮೃತ ಬಾಲಕಿಯ ಸಂಬಂಧಿಕರು ಮಿಮ್ಸ್ ಎದುರು ಪ್ರತಿಭಟನೆ ನಡೆಸಿದರು. ಘಟನೆ ಬಗ್ಗೆ ಪ್ರತಿಕ್ರಿಯೆ ನೀಡಿದ ಉಸ್ತುವಾರಿ ಸಚಿವ ಎನ್. ಚಲುವರಾಸ್ವಾಮಿ, ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಹೇಳಿದರು.

ಬಾಲಕಿಗೆ ಏನಾಗಿತ್ತು?: ಮಳವಳ್ಳಿಯ ನೆಲ್ಲೂರು ಗ್ರಾಮದ ನಿಂಗರಾಜು ಮತ್ತು ರಂಜಿತಾ ದಂಪತಿಗಳ ಪುತ್ರಿ ಸಾನ್ವಿ, ಮೇ 29 ರಂದು ಮನೆಯಲ್ಲಿ ಟೈಲ್ಸ್ ಬಾಲಕಿಯ ಪಾದದ ಮೇಲೆ ಬಿದ್ದಿದೆ. ಈ ವೇಳೆ ಬಾಲಕಿಯ ಕಾಲು ಮುರಿತವಾಗಿದೆ. ಇದರಿಂದ ಉತ್ತಮ ಚಿಕಿತ್ಸೆ ನಿರೀಕ್ಷೆಯಲ್ಲಿ ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಮೂಳೆ ಸರಿಯಾಗಬೇಕು ಅಂದ್ರೆ ಕೂಡಲೇ ಆಪರೇಷನ್ ಮಾಡಬೇಕು ಅಂತ ವೈದ್ಯರು ಸಲಹೆ ನೀಡಿದ್ದಾರೆ. ಅದರಂತೆ ಸಾನ್ವಿಗೆ 29ರ ರಾತ್ರಿಯೇ ಬಾಲಕಿಗೆ ಆಪರೇಷನ್ ಮಾಡಿದ್ದಾರೆ. ಆಪರೇಷನ್ ಆದ ನಂತರ ಬಾಲಕಿ ಚೇತರಿಸಿಕೊಂಡಿದ್ದು, ಪೋಷಕರ ಜತೆಯು ಮಾತನಾಡಿದ್ದಾಳೆ. ಆದರೆ ಶನಿವಾರ ರಾತ್ರಿ ಚಿಕಿತ್ಸೆ ಫಲಿಸದೇ ಬಾಲಕಿ ಮೃತ ಪಟ್ಟಿದ್ದಾಳೆ.

ಆರೋಪ ತಳ್ಳಿಹಾಕಿರುವ ವೈದ್ಯರು: ಪೋಷಕರ ಈ ಆರೋಪ ತಳ್ಳಿಹಾಕಿರುವ ವೈದ್ಯರು, ಮೊದಲು ಪರೀಕ್ಷೆ ಮಾಡಿದ ನಂತರ ಆಪರೇಷನ್ ಮಾಡಲಾಗಿದೆ. ಆದ್ರೆ ಆಪರೇಷನ್ ನಂತರ ಮಗುವಿನ ಆರೋಗ್ಯದಲ್ಲಿ ಏರುಪೇರಾಗಿದೆ. ಈ ವೇಳೆ ರಕ್ತ ಪರೀಕ್ಷೆ ಮಾಡಿದಾಗ ಮಗುವಿನ ಪ್ಲೇಟ್ ಲೇಟ್ ಕಡಿಮೆಯಾಗಿತ್ತು. ಜತೆಗೆ ಇನ್ಫೆಕ್ಷನ್ ಆಗಿರುವುದು ಗೊತ್ತಾಗಿದೆ. ವೈದ್ಯರು ಯಾವುದೇ ನಿರ್ಲಕ್ಷ್ಯ ಮಾಡಿಲ್ಲ ಅಂತ ವೈದ್ಯಾಧಿಕಾರಿಗಳು ಸಮರ್ಥನೆ ಮಾಡಿಕೊಂಡಿದ್ದಾರೆ.

ಕೆ.ಆರ್.ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ

ಮಂಡ್ಯದ ಮಿಮ್ಸ್‌ನಲ್ಲಿ ಸಾನ್ವಿ ಮರಣೋತ್ತರ ಪರೀಕ್ಷೆಗೆ ಹೋರಾಟಗಾರರು ಹಾಗೂ ಬಾಲಕಿ ಪೋಷಕರು ವಿರೋಧಿಸಿದರು. ಮಿಮ್ಸ್‌ನಲ್ಲೇ ಮರಣೋತ್ತರ ಪರೀಕ್ಷೆ ನಡೆಸಿದರೇ ವರದಿ ತಿರುಚುರು ಆತಂಕವಿದೆ. ಆದ್ದರಿಂದ ಮೈಸೂರಿನಲ್ಲಿ ಮರಣೋತ್ತರ ಪರೀಕ್ಷೆ ನಡೆಸಲು ಆಗ್ರಹಿಸಿದರು. ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಸಾನ್ವಿಯ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಸಾವಿನ ವಿಚಾರ ಪೋಷಕರಿಗೆ ಹೇಳಲಿಲ್ಲ?

ಬಾಲಕಿ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿ ಪೋಷಕರು ಮಿಮ್ಸ್ ವಿರುದ್ಧ ಪ್ರತಿಭಟನೆಗಿಳಿದಿದ್ದಾರೆ. ಪೋಷಕರ ಈ ಪ್ರತಿಭಟನೆಗೆ ಹಲವು ಸಂಘಟನೆಗಳು ಸಾಥ್ ನೀಡಿದ್ದು, ವೈದ್ಯರ ನಿರ್ಲಕ್ಷ್ಯದ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದಾರೆ. ಬಾಲಕಿಗೆ ಆಪರೇಷನ್ ಆದ ನಂತರ ಸರಿಯಾದ ಶುಶ್ರೂಷೆ ಮಾಡಿಲ್ಲ. ವೈದ್ಯರ ಬದಲಾಗಿ ವೈದ್ಯಕೀಯ ವಿದ್ಯಾರ್ಥಿಗಳು ಚಿಕಿತ್ಸೆ ನೀಡಿದ್ದು, ಈ ಘಟನೆಗೆ ಕಾರಣವೆಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಅಷ್ಟೆ ಅಲ್ಲದೇ ಮಗು ಸಾವನ್ನಪ್ಪಿದ್ದರೆ ಪೋಷಕರಿಗೆ ಮೊದಲು ವಿಚಾರ ತಿಳಿಸಬೇಕಾಗಿತ್ತು. ಆದರೆ ಅದರ ಬದಲು ಪೊಲೀಸರಿಗೆ ವಿಚಾರ ತಿಳಿಸಿ ನಂತರ ಪೋಷಕರಿಗೆ ತಿಳಿಸಿದ್ದಾರೆ ಆರೋಪಿಸಿದ್ದಾರೆ.

> ವೈದ್ಯರ ನಿರ್ಲಕ್ಷ್ಯದ ಬಗ್ಗೆ ವೈದ್ಯರ ತಂಡದ ತನಿಖೆ ಮಾಡಲಾಗುತ್ತೆ. ಯಾವೆಲ್ಲ ವೈದ್ಯರು ಚಿಕಿತ್ಸೆ ಕೊಟ್ಟಿದ್ದಾರೆ. ಚಿಕಿತ್ಸೆಗೆ ಏನೆಲ್ಲಾ ಔಷಧಿ ನೀಡಲಾಗಿದೆ. ಸಾವಿಗೆ ಕಾರಣ ಏನು ಎನ್ನುವುದರ ಬಗ್ಗೆ ತನಿಖೆ ಮಾಡಲಾಗುತ್ತದೆ. ಬಾಲಕಿಗೆ ನೀಡಿದ ಔಷಧಿಗಳ ಸ್ಯಾಂಪಲ್‌ಗಳನ್ನು ಎಫ್ಎಸ್ಎಲ್‌ಗೆ ರವಾನೆ ಮಾಡಲಾಗುವುದು.
> -**ಮಲ್ಲಿಕಾರ್ಜುನ ಬಾಲದಂಡಿ,** ಮಂಡ್ಯ ಎಸ್ಪಿ

- ಟೈಲ್ಸ್ ಕಾಲಿನ ಮೇಲೆ ಬೀಳಿಸಿಕೊಂಡಿದ್ದ ಬಾಲಕಿ ಸಾನ್ವಿ
- ಬಲವಾಗಿ ಪೆಟ್ಟು ಬಿದ್ದಿದ್ದರಿಂದ ಪಾದದ ಮೂಳೆ ಮುರಿತ
- ಮೇ 29 ರಂದು ಮಿಮ್ಸ್‌ಗೆ ದಾಖಲು, ಅಂದೇ ಶಸ್ತ್ರಚಿಕಿತ್ಸೆ
- ಶಸ್ತ್ರಚಿಕಿತ್ಸೆ ಬಳಿಕ ಸರಿಯಾಗಿ ಆರೈಕೆ ಮಾಡದ ಆರೋಪ
- ಮೆಡಿಕಲ್ ವಿದ್ಯಾರ್ಥಿಗಳಿಂದ ಬಾಲಕಿಗೆ ಚಿಕಿತ್ಸೆ ಆರೋಪ

ಕಮಲ್ ಹೇಳಿಕೆಗೆ ಮಹತ್ವ ನೀಡುವ ಅಗತ್ಯವಿಲ್ಲ

ದಾವಣಗೆರೆ: ಕನ್ನಡ ಭಾಷೆಗೆ ಇತಿಹಾಸ ಹಾಗೂ ಪರಂಪರೆ ಇದೆ. ನಟ ಕಮಲ್ ಹಾಸನ್ ಹೇಳಿಕೆಯಿಂದ ಕನ್ನಡದ ಘನತೆಗೆ ಧಕ್ಕೆ ಆಗುವುದಿಲ್ಲ. ಅವರ ಹೇಳಿಕೆಗೆ ಮಹತ್ವ ನೀಡುವ ಅಗತ್ಯವಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅಭಿಪ್ರಾಯಪಟ್ಟರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಮಲ್ ಹಾಸನ್ ಆಡಿದ ಮಾತಿನಿಂದ ಕನ್ನಡಕ್ಕೆ ತೊಂದರೆ ಆಗುವುದಿಲ್ಲ. ಈ ಬಗ್ಗೆ ಚರ್ಚೆ ಮಾಡುತ್ತ ಕಮಲ್ ಅವರನ್ನು ಎತ್ತರಕ್ಕೆ ಏರಿಸುವುದು ಸರಿಯಲ್ಲ. ರೈತರು, ದಲಿತ ಹಾಗೂ ಕನ್ನಡಪರ ಸಂಘಟನೆಗಳ ಕಾರ್ಯಕರ್ತರ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯುವುದು ಹೊಸದೇನಲ್ಲ. ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಎಲ್ಲ ಪಕ್ಷಗಳು ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆದ ನಿದರ್ಶನಗಳಿವೆ. ಪ್ರಕರಣ ಹಿಂಪಡೆದ ರಾಜ್ಯ ಸರ್ಕಾರದ ಆದೇಶವನ್ನು ಹೈಕೋರ್ಟ್ ರದ್ದು ಮಾಡಿರುವ ಕುರಿತು ಸಚಿವ ಸಂಪುಟದಲ್ಲಿ ಚರ್ಚಿಸಲಾಗುವುದು ಎಂದು ಹೇಳಿದರು.

ಹಿಂದಿನ ಸರಕಾರದ ಅವಧಿಯಲ್ಲಿಯೂ ಮಂಗಳೂರಿನಲ್ಲಿ ಕೋಮುಗಲಭೆಗಳು ನಡೆದಿವೆ. ಕೋಮುಗಲಭೆ ನಿಯಂತ್ರಣಕ್ಕೆ ಸರ್ಕಾರ ಒತ್ತು ನೀಡಲಿದೆ. ಸಚಿವ ಸಂಪುಟ ಪುನರ್ ರಚನೆ ಮುಖ್ಯಮಂತ್ರಿ ಹಾಗೂ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಕಾಂಗ್ರೆಸ್ ಮುಖಂಡ ಬಿ.ಕೆ. ಹರಿಪ್ರಸಾದ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ಸ್ವಾಭಾವಿಕ ಎಂದರು.

ವಿಶ್ವವಾಣಿ ಪತ್ರಿಕೆ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್‌ರಿಗೆ ಯಕ್ಷಧ್ರುವ ಪಟ್ಲ ಫೌಂಡೇಶನ್ ಕಲಾ ಗೌರವ

ಯಕ್ಷಗಾನ ಕ್ಷೇತ್ರಕ್ಕೆ ಸತೀಶ್ ಪಟ್ಲರ ಸೇವೆ ಸ್ಮರಣೀಯ

ಮಂಗಳೂರು: ಯಕ್ಷಗಾನ ಶ್ರೀಮಂತವಾಗಿದೆ ಯಕ್ಷಗಾನ ಕಲಾವಿದರು ಮರುಗಬೇಕಾದಾಗ ಅಗತ್ಯ ಇಲ್ಲ. ಸತೀಶ್ ಪಟ್ಲ ಅಂತವರು ಎಲ್ಲಿಯ ತನಕ ಸೇವಾ ಕೈಂಕರ್ಯಗಳಲ್ಲಿ ಸಕ್ರಿಯವಾಗಿ ಇರುತ್ತಾರೋ ಅಲ್ಲಿಯವರೆಗೆ ಯಕ್ಷಗಾನ ಶ್ರೀಮಂತವಾಗಿರುತ್ತದೆ ಎಂದು ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್ ಹೇಳಿದರು.

ಮಂಗಳೂರಿನ ರಾಷ್ಟ್ರೀಯ ಕಲಾ ಸಮ್ಮೇಳನ ಅಡ್ಯಾರ್ ಗಾರ್ಡನ್‌ನಲ್ಲಿ ಭಾನುವಾರ ಜರುಗಿದ ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ನ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಯಕ್ಷಧ್ರುವ ಕಲಾ ಗೌರವ ಸ್ವೀಕರಿಸಿ ಮಾತನಾಡಿದ ಅವರು, ಪಟ್ಲ ಅವರು ವ್ಯಕ್ತಿಯಾಗಿ ಶಕ್ತಿಯಾಗಿ ಯಕ್ಷಗಾನಕ್ಕೆ ಆಧಾರ ಸ್ತಂಭವಾಗಿ ಇದ್ದಾರೆ. ಕಲಾವಿದರಿಗೆ ಮಾಡಿದ ಸೇವೆ ಬಹಳ ದೊಡ್ಡದು. ಕೊಲ್ಲಿ ರಾಷ್ಟ್ರಗಳಲ್ಲಿ, ಹೊರ ರಾಜ್ಯಗಳಲ್ಲಿ ಪಟ್ಲರ ಗುಣಗಾನ ಕೇಳಿದ್ದೇನೆ. ಕೆರೆಮನೆ ಶಿವಾನಂದ ಹೆಗಡೆ ಅವರು ಯಕ್ಷಗಾನ ಶಾಲೆ ಬಹಳ ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಶಾಲೆ ಮುಚ್ಚುವ ಸ್ಥಿತಿ ಬಂದಾಗ ನಾನಿದ್ದೇನೆ ಎಂದು ಬೆಂತ್ತಲವಾಗಿ ನಿಂತವರು ಸತೀಶ್ ಪಟ್ಲ, ಇಂಥವರನ್ನು ಪಡೆದ ಯಕ್ಷಗಾನ ಕ್ಷೇತ್ರ ಪುಣ್ಯ ಮಾಡಿದೆ. ಗುಣಕ್ಕೆ ಮತ್ಸರ ಬೇಡ, ಮಾತಿಗೆ ಬಡತನ ಬೇಡ ಎಂದು ಹೇಳಿದರು.

ನಾಡೋಜ ಜಿ.ಶಂಕರ್ ಮಾತನಾಡಿ, ಕಳೆದ 10 ವರ್ಷಗಳಿಂದ ಪಟ್ಲ ಫೌಂಡೇಶನ್ ಟ್ರಸ್ಟ್ ಜನಮೆಚ್ಚಿದ ಕೆಲಸ ಮಾಡುತ್ತ ಬಂದಿದೆ. ಈಗಿನ ಪೀಳಿಗೆ ಯಕ್ಷಗಾನ ಕಲೆಯ ಬಗ್ಗೆ ಅಷ್ಟಾಗಿ ಅಭಿರುಚಿ ಹೊಂದಿಲ್ಲ. ಆದರೆ ಪಟ್ಲರ ಕಾರ್ಯ ಸಾಧನೆಯಿಂದ ಯಕ್ಷಗಾನ ಇಂದು ಯುವ ಮನಸುಗಳಿಗೂ ಆಪ್ತವಾಗಿದೆ. ಉಡುಪಿಯಲ್ಲೂ ನಮ್ಮ ಟ್ರಸ್ಟ್ ಪಟ್ಲರ ಜತೆಗೆ ಕೈಜೋಡಿಸಲಿದೆ. ಪಟ್ಲರ ಜತೆಗೆ ಎಲ್ಲರೂ ಒಗ್ಗಟ್ಟಾಗಿ ದುಡಿದಾಗ ಕಲಾವಿದರ ಬದುಕು ಹಸನಾಗುತ್ತದೆ ಎಂದರು.

ಯಕ್ಷಧ್ರುವ ಪಟ್ಲ ಫೌಂಡೇಶನ್ ಕಲಾ ಗೌರವ-2025 ಅನ್ನು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ನಿವೃತ್ತ ಯೋಧ ಕರ್ನಲ್ ನಿಟ್ಟೆಗುತ್ತು ಶರತ್ ಭಂಡಾರಿ, ಅಲಂಗಾರು ದೇವಸ್ಥಾನದ ಪ್ರಧಾನ ಅರ್ಚಕ ವೇದಮೂರ್ತಿ ಈಶ್ವರ ಭಟ್, ಮಂಗಳೂರು ವಿವಿ ಮಾಜಿ ಕುಲಪತಿ ಪ್ರೊ. ಬಿ.ಎ. ವಿವೇಕ್ ರೈ, ರಂಗಮನೆ ಸಾಂಸ್ಕೃತಿಕ ಕಲಾಕೇಂದ್ರ ಸುಳ್ಯ ಇದರ ಜೀವನ್ ರಾಮ್ ಸುಳ್ಯ ಅವರಿಗೆ ಪ್ರದಾನ ಮಾಡಲಾಯಿತು.

ವೇದಿಕೆಯಲ್ಲಿ ಆದಿತ್ಯ ಕಿಮ್ಮನೆ, ಮಂಗಳೂರು ವಿವಿ ಕುಲಪತಿ ಪ್ರೊ.ಕೆ.ಎಲ್.ಧರ್ಮ, ರಾಜೇಶ್ ಕಾರಂತ್, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ, ಮುನಿಯಾಲ್ ಉದಯ ಕುಮಾರ್ ಶೆಟ್ಟಿ, ದಶಮ ಸಂಭ್ರಮದ ಅಧ್ಯಕ್ಷ ಶಶಿಧರ್ ಶೆಟ್ಟಿ ಬರೋಡ ಮತ್ತಿತರರು ಉಪಸ್ಥಿತರಿದ್ದರು.



ಮಂಗಳೂರಿನ ಅಡ್ಯಾರ್ ಗಾರ್ಡನ್ ಸಭಾಂಗಣದಲ್ಲಿ ಯಕ್ಷಧ್ರುವ ಪಟ್ಲ ದಶಮಾನೋತ್ಸವ ಸಂಭ್ರಮ ಸಮಾರಂಭದಲ್ಲಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರನ್ನು ಯಕ್ಷಧ್ರುವ ಕಲಾಗೌರವದೊಂದಿಗೆ ಸನ್ಮಾನಿಸಲಾಯಿತು. ಯಕ್ಷಧ್ರುವ ಪಟ್ಲ ಸತೀಶ್ ಶೆಟ್ಟಿ ಇದ್ದರು.

> ಯಕ್ಷಗಾನ ಮಲೆನಾಡು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಅತ್ಯುನ್ನತ ಕಲೆ. ನಮ್ಮ ಕ್ಷೇತ್ರದ ಮಕ್ಕಳಿಗೆ ಯಕ್ಷಗಾನ ಕಲಿಸುತ್ತಿರುವ ಪಟ್ಲ ಸತೀಶ್ ಶೆಟ್ಟಿಯವರು ಅಭಿನಂದನಾರ್ಹರು. ಇಂತಹ ಕಾರ್ಯಕ್ಕೆ ನಾವೆಲ್ಲರೂ ಬೆಂಬಲ ನೀಡಬೇಕಿದೆ.
> – **ಬೇಳೂರು ಗೋಪಾಲಕೃಷ್ಣ** ಶಾಸಕ

ಹೆದ್ದಾರಿ ಡಾಂಬರೀಕರಣ ಕೆಲಸ ಮಾಡುತ್ತಿದ್ದ ಕಲಬುರಗಿಯವರು

ಲಾರಿ ಹರಿದು ಮೂವರು ಕೂಲಿ ಕಾರ್ಮಿಕರು ಸಾವು

ಬೆಳಗಾವಿ: ಟ್ಯಾಂಕರ್ ಲಾರಿ ಹರಿದು ಹೆದ್ದಾರಿ ಡಾಂಬರೀಕಣ ಕಾಮಗಾರಿ ಮಾಡುತ್ತಿದ್ದ ಮೂವರು ಕಾರ್ಮಿಕರು ಸ್ಥಳದಲ್ಲೇ ದುರ್ಮರಣಕ್ಕೀಡಾದ ಘಟನೆ ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು ಸಮೀಪದ ಇಟಗಿ ಕ್ರಾಸ್ ಬಳಿ ನಡೆದಿದೆ. ಇಬ್ಬರ ಸ್ಥಿತಿ ಗಂಭೀರವಾಗಿದ್ದು, ಬೆಳಗಾವಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ದುರಂತದಲ್ಲಿ ತಂದೆ-ಮಗ ಸಾವನ್ನಪ್ಪಿದ್ದಾರೆ. ಕಲಬುರಗಿ ಜಿಲ್ಲೆಯ ವಡ್ಡರ ಗಲ್ಲಿಯ ರಾಮಚಂದ್ರ ಜಾಧವ (45), ಪುತ್ರ ಮಹೇಶ ಜಾಧವ (18), ಚಿಂಚೋಳಿ ತಾಲೂಕು ಶಿರೋಳ ಗ್ರಾಮದ ರಾಮಣ್ಣ ಅಲಿಯಾಸ್ ರಮೇಶ (38) ಮೃತರು. ವರ್ಷದ ಹಿಂದೆ ಬೆಳಗಾವಿ ಬಿಡ್ ಕಾನ್ ಕಂಪನಿಯಲ್ಲಿ ಹೆದ್ದಾರಿ ಡಾಂಬರೀಕರಣ ಕೆಲಸಕ್ಕೆ ಬಂದಿದ್ದರು. ಭೀಮಾಬಾಯಿ, ಅನುಶ್ರೀ, ಲಕ್ಷ್ಮಿಬಾಯಿ ಹಾಗೂ ಟ್ಯಾಂಕರ್ ಚಾಲಕ ಮಂಗಳೂರಿನ ದಿನೇಶ ಶೆಟ್ಟಿ ಗಾಯಗೊಂಡಿದ್ದಾರೆ. ಮೊಬೈಲ್‌ನಲ್ಲಿ ಮಾತನಾಡುತ್ತ ಕ್ಯಾಂಟರ್ ಚಾಲಕ ವೇಗವಾಗಿ ಲಾರಿ ಚಲಾಯಿಸಿದ್ದಾನೆ ಎನ್ನಲಾಗಿದೆ. ಲಾರಿ ವೇಗ ನಿಯಂತ್ರಣಕ್ಕೆ ಕಾರ್ಮಿಕರು ಸೂಚನೆ ಕೊಟ್ಟರು ನಿರ್ಲಕ್ಷಿಸಿ ಲಾರಿ ಚಲಾಯಿಸಿದ್ದಾನೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಭೀಮಾಶಂಕರ ಗುಳೇದಭೇಟಿ ನೀಡಿದರು.

ವಿಶ್ವವಾಣಿ

ಸಂಪಾದಕೀಯ

ಇದು ಭರವಸೆಯ ಆಶಾಕಿರಣ

ತಂಬಾಕು ಉತ್ಪನ್ನಗಳ ಖರೀದಿಗೆ ಇದ್ದ ವಯೋಮಿತಿಯನ್ನು 18 ವರ್ಷದಿಂದ 21ಕ್ಕೆ ಏರಿಸಿ ಆದೇಶ ಹೊರಡಿಸಿದೆ ರಾಜ್ಯ ಸರಕಾರ. ಇದು ನಿಜಕ್ಕೂ ಒಂದು ಶ್ಲಾಘನೀಯ ಉಪಕ್ರಮ ಎನ್ನಲಡ್ಡಿಯಿಲ್ಲ. ಏಕೆಂದರೆ, ಹದಿಹರೆಯದವರು, ಅದರಲ್ಲೂ ಗ್ರಾಮೀಣ ಪ್ರದೇಶದವರು ಸಿಗರೇಟು ಮತ್ತು ಇತರ ತಂಬಾಕು ಉತ್ಪನ್ನಗಳ ಗೀಳಿಗೆ ಒಳಗಾಗುತ್ತಿರುವ ಪರಿ ತೀವ್ರವಾಗಿರುವ ಈ ಕಾಲಘಟ್ಟದಲ್ಲೇ ಇಂಥದೊಂದು ತೀರ್ಮಾನ ಹೊರಬಿದ್ದಿರುವುದು ಹಾಗೂ 'ವಿಶ್ವ ತಂಬಾಕುರಹಿತ ದಿನ'ವೇ ಅದಕ್ಕೆ ಪರ್ವಕಾಲವಾಗಿರುವುದು ಸ್ವೀಕಾರಾರ್ಹವೇ ಸರಿ. ಇಂದು ಶಾಲಾ-ಕಾಲೇಜುಗಳ ಕೆಲವು ವಿದ್ಯಾರ್ಥಿಗಳು ತಂತಮ್ಮ ತರಗತಿಯ ಕೊಠಡಿಗಳಲ್ಲಿ ಇರುವುದಕ್ಕಿಂತ, ತಂಬಾಕು ಉತ್ಪನ್ನಗಳ ಅಂಗಡಿಗಳ ಮುಂದೆಯೇ ಹೆಚ್ಚೆಚ್ಚು ಜಮೆಯಾಗುವುದು ಬಹಳ ಕಡೆ ಕಾಣಬರುವ ದೃಶ್ಯ. ತಂಬಾಕು ಉತ್ಪನ್ನವನ್ನು ಅದೊಂದು ದುರ್ಲಭ ಅಮೃತವೇನೋ ಎಂಬಷ್ಟರ ಮಟ್ಟಿಗೆ ಇವರೆಲ್ಲ ಜಗಿದು ಜಿಗಿದಾಡುವುದನ್ನು ನೋಡಿದಾಗ, ಭವ್ಯ ಭಾರತದ ಈ ಭವಿಷ್ಯದ ಪ್ರಜೆಗಳ ಭವಿತವ್ಯದ ಬಗ್ಗೆ ಆತಂಕ ಮೂಡುವುದು ಸಹಜ. ಶಿಕ್ಷಣ ಸಂಸ್ಥೆಗಳ ಇಂತಿಷ್ಟು ಅಂತರದ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡಬಾರದೆಂಬ ನಿಯಮವಿದ್ದರೂ ಅದು ಸಮರ್ಥವಾಗಿ ಪರಿಪಾಲನೆಯಾಗುತ್ತಿರುವುದರ ಬಗ್ಗೆ ಖಾತ್ರಿಯಿಲ್ಲ ಹಾಗೂ ಇಂಥ ಮಳಿಗೆಗಳ ಮುಂದೆ ಕಾಣುವ ಜಂಗುಳಿಯೂ ಕಮ್ಮಿಯಾಗುತ್ತಿಲ್ಲ. ಈಗ, ಸರಕಾರವು ಈ ಆದೇಶವನ್ನು ಹೊರಡಿಸಿದ ನಂತರವಾದರೂ ಪರಿಸ್ಥಿತಿಯಲ್ಲಿ ಸುಧಾರಣೆಯಾಗುವುದೇ ಎಂಬುದನ್ನು ಕಾದುನೋಡಬೇಕಾಗಿದೆ. 'ನಮ್ಮ ಆರೋಗ್ಯ ನಮ್ಮ ಕೈಯಲ್ಲಿ' ಎಂಬುದು ಬಲ್ಲವರು ಹೇಳಿರುವ 'ಎಚ್ಚರಿಕೆ-ಭರಿತ' ಮತ್ತು ವಿವೇಕಯುತ ಮಾತು. ತಂಬಾಕು ಉತ್ಪನ್ನಗಳಿಗೆ ಒಮ್ಮೆ ಬಾಯೊಡ್ಡಿದರೆ, ಮುಂದೆ ಯಾವುದಕ್ಕೂ ಬಾಯಿ ಒಡ್ಡಲಾರದಂಥ ಪರಿಸ್ಥಿತಿ ನಿರ್ಮಾಣವಾಗಬಹುದು ಎಂಬುದೂ ಅಪ್ರಿಯಸತ್ಯವೇ. ಆದರೆ ಈ ಚಟಕ್ಕೆ ಒಡ್ಡಿಕೊಂಡವರಿಗೆ ಇಂಥ ವಿವೇಕದ ಮಾತುಗಳು ಕೇಳುವುದಿಲ್ಲ, ಒಂದೊಮ್ಮೆ ಕೇಳಿದರೂ ರುಚಿಸುವುದಿಲ್ಲ ಎಂಬುದು ವಿಪರ್ಯಾಸ. ಮನೆಯಲ್ಲಿನ ಹಿರಿಯರೆನಿಸಿಕೊಂಡವರು ಈ ಕುರಿತು ಇನ್ನಷ್ಟು ಜಾಗ್ರತೆ ವಹಿಸಿ, ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಟೊಂಕ ಕಟ್ಟಬೇಕಿದೆ.

ಸೊಂಪಾದಕೀಯ

ಇಟ್ಸ್ ಫೈನ್!

ನಮ್ಮ ಬೆಂಗಳೂರು ನಗರ ಏನಕ್ಕೆ ಫೇಮಸ್ ಅಂತ ಕೇಳಿದ್ರೆ, ಕ್ಲಾಸಿಗೆ ಹೋಗದ ಮಕ್ಕಳು ಕೂಡಾ "ಟ್ರಾಫಿಕ್ಕಿಗೆ" ಅಂತ ಸುಲಭವಾಗಿ ಹೇಳಬಲ್ಲರು. ಅದು ನಿಜ ಕೂಡಾ. ಬೆಂಗಳೂರು ದೇಶದ ಜನರಿಗೆ ಬದುಕಲು ಎಷ್ಟು ಸುಂದರ ನಗರವೋ ಟ್ರಾಫಿಕ್ ವಿಷಯದಲ್ಲಿ ಅಷ್ಟೇ ಕಿರಿಕಿರಿ ಮೂಡಿಸುವ ನಗರವೂ ಹೌದು. ಆದರೆ ಅದರ ಜತೆಗೆ ಬೆಂಗಳೂರು ನಗರದ ನಾಗರಿಕರು ಟ್ರಾಫಿಕ್ ನಿಯಮಗಳನ್ನು ಮೀರುವುದರಲ್ಲೂ ಎತ್ತಿದ ಕೈ. ಅದಕ್ಕಾಗಿ ಎಷ್ಟೇ ದಂಡ ತೆತ್ತರೂ ಅವರು ಬುದ್ಧಿ ಕಲಿಯೊಲ್ಲ. ಈಗಂತೂ ನಗರ ಟ್ರಾಫಿಕ್ ಪೊಲೀಸಿನವರು ಸಾಕಷ್ಟು ತಂತ್ರಜ್ಞಾನದ ಬಳಕೆ ಮಾಡುತ್ತಿದ್ದಾರೆ. ಆದರೆ ನಮ್ಮ ನಾಗರಿಕರು ಮಾತ್ರ ಟ್ರಾಫಿಕ್ ನಿಯಮ ಮೀರಬಾರದು ಅನ್ನೋ ಸಾಮಾನ್ಯ ಜ್ಞಾನವನ್ನು ಮಾತ್ರ ಬಳಸುತ್ತಿಲ್ಲ. ಅದರ ಪರಿಣಾಮವಾಗಿ ಕಳೆದ 7 ತಿಂಗಳಲ್ಲಿ ದಂಡ ವಸೂಲಾತಿ ಕಾರ್ಯಕ್ರಮ ದಿಂದಾಗಿ ಪೊಲೀಸರು ಸಾರ್ವಜನಿಕರಿಂದ ವಸೂಲಿ ಮಾಡಿರುವ ಹಣದ ಮೊತ್ತ 35 ಕೋಟಿ ರುಪಾಯಿಗೂ ಮೀರಿದೆ. ಇನ್ನು ಕಳೆದ 3 ವರ್ಷಗಳಲ್ಲಿ ಈ ದಂಡ ವಸೂಲಾತಿ ಮೊತ್ತ ಸುಮಾರು 400 ಕೋಟಿ ಆಗಿದೆ ಎಂದರೆ ನಮ್ಮ ಸಾರ್ವಜನಿಕರು ಈ ದಂಡ ವಸೂಲಾತಿ ಫಂಡ್‌ಗೆ ಅದೆಷ್ಟು ಉದಾರವಾಗಿ ದೇಣಿಗೆ ನೀಡುತ್ತಿದ್ದಾರೆ ಅನ್ನೋದರ ಅಂದಾಜು ಸಿಗುತ್ತದೆ. ಇದು ನಮ್ಮ ಊರಿನ ಜನ ರಸ್ತೆಯಲ್ಲಿ ವಾಹನ ಚಲಾಯಿಸುವಾಗ ತೋರಿಸುವ ಬೇಜವಾಬ್ದಾರಿತನ. ಇದಲ್ಲದೆ ರೋಡ್ ರೇಜ್ ಪ್ರಕರಣ ಕೂಡಾ ಇತ್ತೀಚೆಗೆ ತುಂಬಾ ಸದ್ದು ಮಾಡುತ್ತಿದೆ. ಸಣ್ಣ ಜಗಳದಂತೆ ಶುರುವಾಗೋ ಈ ಪ್ರಕರಣಗಳಲ್ಲಿ ಇತ್ತೀಚೆಗೆ ಕೆಲವರು ಪ್ರಾಣ ಕಳೆದುಕೊಂಡಿದ್ದೂ ಉಂಟು. ಮೊನ್ನೆ ಒಂದು ಪಬ್‌ನ ಬೌನ್ಸರ್ ಒಬ್ಬ, ತನ್ನ ಮುಂದಿನ ಗಾಡಿ ಸಡನ್ ಆಗಿ ಬ್ರೇಕ್ ಹಾಕಿದ್ದಕ್ಕೆ ಅವನ ಗಾಡಿಗೆ ತನ್ನ ಗಾಡಿ ಗುದ್ದಿ ಬೌನ್ಸ್ ಆಯಿತು ಅಂತ ಕಾರಿನವರ ಮೇಲೆ ಹಲ್ಲೆ ಮಾಡಿ ಪೊಲೀಸರ ಅತಿಥಿ ಆಗಿದ್ದಾನೆ. ಇನ್ನೊಬ್ಬ ಅಯೋಗ್ಯ ಬೈಕ್ ಒಂದನ್ನು ಅಟ್ಟಿಸಿಕೊಂಡು ಹೋಗಿ ಕಾರಿನಿಂದ ಗುದ್ದಿ ಬೈಕ್ ಸವಾರನ ಸಾವಿಗೆ ಕಾರಣ ಆಗಿದ್ದಾನೆ. ನಮ್ಮ ವ್ಯವಸ್ಥೆ ಈ ರೀತಿ ಹದಗೆಟ್ಟಿರೋದನ್ನು ನೋಡಿದಾಗ ಸಂಚಾರ ನಿಯಮ ಉಲ್ಲಂಘನೆ ಜತೆಗೆ ರಸ್ತೆಯಲ್ಲಿ ಧಿಮಾಕು ತೋರಿಸುವ ದುರಂಹಂಕಾರಿಗಳಿಗೂ ಸರಿಯಾದ ಶಾಸ್ತಿ ಮಾಡುವ ಅಗತ್ಯ ಇದೆ ಅನ್ನಿಸೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಅಂಕಣಕಾರನ ತಳಮಳ

ಈ ವಾರ ಏನು ಬರೆಯುವುದು? ಇದು ಅಂಕಣಕಾರರ ದೊಡ್ಡ ಸಮಸ್ಯೆ. ಎಲ್ಲ ವಾರವೂ ವಿಷಯಗಳು ಸಿಗುವುದಿಲ್ಲ. ಸಿಕ್ಕ ವಿಷಯಗಳ ಬಗೆಗೆಲ್ಲ ಬರೆಯಲಾಗುವುದಿಲ್ಲ, ಬರೆಯಲೂಬಾರದು. ಪ್ರತಿಯೊಬ್ಬ ಅಂಕಣಕಾರ ತನ್ನ ಬರಹಕ್ಕೆ ಒಂದು ಹಸನಾದ ಪಿಚ್ ಸಿದ್ಧಪಡಿಸಿಕೊಂಡಿರುತ್ತಾನೆ. ಅದಕ್ಕೆ ಮನಸ್ಸು ಮತ್ತು ವಿಷಯ ಹದವಾಗಿರಬೇಕು. ಬರೆಯುವ ವಿಷಯದ ಬಗ್ಗೆ ಸ್ಟ್ರಾಂಗ್ ಪಾಯಿಂಟ್ಸ್ ಇರಬೇಕು. ಇಲ್ಲದಿದ್ದರೆ ಬರಹ ಘಟ್ಟ ಹತ್ತುವುದಿಲ್ಲ. ಶಿರಾಡಿ ಘಾಟಿನಲ್ಲಿ ಏದುಸಿರು ಬಿಡುತ್ತಾ ಏರುವ ಲಾರಿಯಂತಾಗುತ್ತದೆ. ಓದುಗನಿಗೆ 'ಇಂದು ಅಂಕಣಕಾರ ಏಕೋ ಸಿದ್ಧನಾಗಿಲ್ಲ, ಏನೋ ರಾಂಗ್ ಹೊಡೆಯುತ್ತಿದ್ದಾನಲ್ಲ' ಎಂಬುದು ಮೂರು ಪ್ಯಾರ ಓದುತ್ತಿದ್ದಂತೆ ಗೊತ್ತಾಗುತ್ತದೆ. ಮೊದಲ ಓವರಿನಲ್ಲಿ ಮೂರು ವೈಡ್ ಬಾಲ್ ಎಸೆದರೆ ಬೌಲರನ ಮನಸ್ಥಿತಿಯಂತೆ, ಅಂಕಣಕಾರನೂ ಪೇಚಾಡುವುದು ಅನುಭವಕ್ಕೆ ಬರುತ್ತದೆ. ಹಾಗಂತ ಅದೇನು ಪ್ರಮಾದವಲ್ಲ. ಮಾಲ್ಕಮ್ ಮಾರ್ಷಲ್‌ನಂಥ ಅದ್ಭುತ ಬೌಲರುಗಳು ಸಹ ಓವರಿನಲ್ಲಿ ಐದು ವೈಡ್ ಬಾಲ್ ಎಸೆದಿದ್ದಾರೆ. ಅದು ಅವನ ಅಂದಿನ ಮನಸ್ಥಿತಿ ಅಷ್ಟೇ. ಅಂಕಣಕಾರನೂ ಒಮ್ಮೊಮ್ಮೆ ಇಂಥದೇ ವೈಡ್ ಬಾಲ್ ಎಸೆಯುತ್ತಾನೆ. ಅಂಪೈರುಗಳಾದ ಓದುಗರು ಥಟ್ಟನೆ 'ವೈಡ್ ಬಾಲ್' ಎಂದು ನಿರ್ಧರಿಸಿಬಿಡುತ್ತಾರೆ. ಅಂಕಣ ಬರಹ ಏಕಾಏಕಿ ಹುಟ್ಟುವಂಥದ್ದಲ್ಲ. ವಿಷಯ ಆಗಾಗ ಅಂಕಣಕಾರನ ಎದೆಯೊಳಗೆ ತುರಿಸುತ್ತಿರಬೇಕು. ಹಲವಾರು ದಿನಗಳಿಂದ ಕಾಡಬೇಕು. ಆ ವಿಷಯದ ಬಗ್ಗೆ ಮತ್ತಷ್ಟು ಅಧ್ಯಯನ ಮಾಡುವಂತೆ ಪ್ರೇರೇಪಿಸಬೇಕು. ಕೆಲವು ಆಪ್ತರ ಜತೆ, ಪರಿಣತರ ಜತೆ ಚರ್ಚೆಗೆ ಕರೆದುಕೊಂಡು ಹೋಗಬೇಕು. ಆಗಾಗ ತೊಟ್ಟಿಕ್ಕುತ್ತಾ ತುಂಬುವ ಕೊಡದಂತೆ ವಿಷಯಗಳೂ ಹನಿಹನಿಗರೆದು ತುಂಬುತ್ತಿರಬೇಕು. ಅದಿಲ್ಲದೆ ಏಕಾಏಕಿ, ಸಂತೆ ಹೊತ್ತಿಗೆ ಮೂರು ಮೊಳ ನೇಯ್ದರೆ, ಹುಡುಗಾಟಿಕೆ ಎನಿಸಿಕೊಳ್ಳುತ್ತದೆ. ಅಷ್ಟಕ್ಕೂ ಪತ್ರಿಕೆಯಲ್ಲಿ ಅಂಕಣಕಾರನಿಗೆ, ಸಂಪಾದಕನ ನಂತರ, ಅಭಿಪ್ರಾಯ ರೂಪಿಸುವ ಮಹತ್ವದ ಹೊಣೆಗಾರಿಕೆಯಿರುತ್ತದೆ. ಪತ್ರಿಕೆಯೊಂದು ಬರಹಗಾರನಿಗೆ ಕೊಡಬಹುದಾದ ದೊಡ್ಡ ಹುದ್ದೆ ಅಥವಾ ಗೌರವವೆಂದರೆ ಅಂಕಣಕಾರನದು. ಹೀಗಾಗಿ ಈ ಜವಾಬ್ದಾರಿಯಿಂದಲೇ ವಾರವಾರವೂ ಬರೆಯಲು ಕುಳಿತುಕೊಳ್ಳಬೇಕು. ಒಂದು ಬರಹ ಸೋತರೆ, ಅಷ್ಟರಮಟ್ಟಿಗೆ ಓದುಗರಿಗೆ ನಿರಾಸೆಯಾಗುತ್ತದೆ. ವಿರಾಟ್ ಕೊಹ್ಲಿ ಎಲ್ಲಾ ಪಂದ್ಯಗಳಲ್ಲಿ ಸೆಂಚುರಿ ಹೊಡೆಯದಿರಬಹುದು, ಅನೇಕ ಸಲ ಜೀರೋಕ್ಕೆ ಔಟ್ ಆಗಿರಬಹುದು. ಆದರೆ ಪ್ರೇಕ್ಷಕ ಮಾತ್ರ ಪ್ರತಿ ಸಲವೂ ಆತ ಸೆಂಚುರಿ ಹೊಡೆಯಲಿ ಎಂದೇ ನಿರೀಕ್ಷಿಸುತ್ತಾನೆ. ಈ ಸಂಗತಿ ಅಂಕಣಕಾರನಿಗೆ ಹೇಳಿ ಮಾಡಿಸಿದಂತಿದೆ. ಹಾ.ಮಾ.ನಾಯಕರು ಅಂಕಣಕಾರರ ತಳಮಳ ಎಂಬ ಲೇಖನದಲ್ಲಿ ತಾವು 'ಪ್ರಜಾವಾಣಿ' ಅಂಕಣಕಾರರಾಗಿ ಅನುಭವಿಸಿದ ಬರೆಯುವ ಸಂಕಷ್ಟಗಳ ಬಗ್ಗೆ ಬರೆದಿದ್ದಾರೆ. ಅವರು 'ಸಂಪ್ರತಿ' ಎಂಬ ಅಂಕಣ ಬರೆಯುತ್ತಿದ್ದರು. ಅದು ಆ ದಿನಗಳಲ್ಲಿ ಜನಪ್ರಿಯವಾಗಿತ್ತು. ಕೆಲವೊಮ್ಮೆ ಡೆಡ್‌ಲೈನ್ ಸಮೀಪಿಸಿದರೂ ಯಾವ ವಿಷಯದ ಬಗ್ಗೆ ಬರೆಯಬೇಕು ಎಂಬುದು ಗೊತ್ತಾಗದೇ ಚಡಪಡಿಸುತ್ತಿದ್ದರು. ಒಮ್ಮೆ ವಿಷಯ ಸಿಕ್ಕರೆ ಚೌಕಟ್ಟನ್ನು ಹದಗೊಳಿಸಬಹುದು, ಮಾರ್ಗವನ್ನು ರೂಪಿಸಬಹುದು. ವಿಷಯ ಆಯ್ಕೆಯೇ ಸಮಸ್ಯೆಯಾಗಿ ಅವರು ಪರದಾಡುತ್ತಿದ್ದರು. ಈ ವಾರ ಹೇಗೋ ಮುಗಿಯಿತಲ್ಲ ಎಂದು ನಿಟ್ಟುಸಿರು ಬಿಟ್ಟು ಎರಡು ದಿನ ಕಳೆಯುತ್ತಿದ್ದಂತೆ, ಮತ್ತೆ ಶುರು, ಮುಂದಿನ ವಾರ ಯಾವ ವಿಷಯದ ಬಗ್ಗೆ ಬರೆಯುವುದು ಎಂಬ ಗುಂಗಿಹುಳದ ಕೊರೆತ. ವಾರ ವಾರವೂ ಬಸಿರಾಗುವುದು ಮತ್ತು ವಾರ ವಾರವೂ ಹಡೆಯುವುದು ಕಷ್ಟ ಕಷ್ಟ. ಒಮ್ಮೆಯೂ ಪ್ರಸೂತಿ ವೈರಾಗ್ಯ ಬರಲೇಕೂಡದು. ಹೀಗಾಗಿ ಕೆಲವು ಅಂಕಣಕಾರರು ಐದಾರು ತಿಂಗಳು ಬರೆದು ಸುಸ್ತಾಗಿ ಹೋಗುತ್ತಾರೆ. ಅವರಲ್ಲಿ ಖಾಲಿತನ ಕಾಡಲಾರಂಭಿಸುತ್ತದೆ. ಅನಂತರ ಅವರು ಏನೋ ನೆಪ ತೆಗೆದು ಕೈಚೆಲ್ಲಿಬಿಡುತ್ತಾರೆ. ಇನ್ನು ಕೆಲವು ಅಂಕಣಕಾರರ ಬರಹಗಳಲ್ಲಿ ಸುಸ್ತು ಇಣುಕಲಾರಂಭಿಸುತ್ತದೆ. ಅವರ ಬರಹ ನೋಡಿಯೇ, ಓದುಗರು ದಣಿಯುತ್ತಾರೆ.

ಅಮಿತ್ ಶಾ ಆತುರಕ್ಕೆ ಏನು ಕಾರಣ?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ರಾಜ್ಯ ಬಿಜೆಪಿಯ ಉಸ್ತುವಾರಿ ನೋಡಿಕೊಳ್ಳುತ್ತಿರುವ ರಾಧಾಮೋಹನದಾಸ್ ಅಗರ್ವಾಲ್ ಕಳೆದ ವಾರ ಕರ್ನಾಟಕಕ್ಕೆ ಬಂದರು. ಹೀಗೆ ಬಂದವರು ಪಕ್ಷದ ರಾಜ್ಯ ನಾಯಕರ ವಿರುದ್ಧ ಕಂಪ್ಲೇಂಟುಗಳ ಪಟ್ಟಿ ಹಿಡಿದುಕೊಂಡು ಬಂದಿದ್ದರು.

ಅಂದ ಹಾಗೆ ಇದಕ್ಕೂ ಮುಂಚೆ ತಿರಂಗಾ ಯಾತ್ರೆಗೆ ಅಂತ ಕರ್ನಾಟಕಕ್ಕೆ ಬಂದಿದ್ದ ರಾಧಾಮೋಹನದಾಸ್ ಅಗರ್ವಾಲ್, ಪಕ್ಷದ ರಾಜ್ಯ ಘಟಕ ಫೋರ್ಸ್‌ಫುಲ್ ಆಗಿ ಕೆಲಸ ಮಾಡುತ್ತಿಲ್ಲ ಅಂತ ಅವತ್ತೇ ಚುಚ್ಚಿ ಹೋಗಿದ್ದರು. ಆದರೆ ಇದಾದ ನಂತರವೂ ಕರ್ನಾಟಕ ಬಿಜೆಪಿಯಲ್ಲಿ ಹೋರಾಟದ ಗುಣ ಕಾಣದೆ ಹೋಗಿದ್ದರಿಂದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಗರ್ವಾಲ್ ಅವರನ್ನು ಕರೆಸಿ ಕಿರಿಕಿರಿ ಮಾಡಿದ್ದರಂತೆ. "ನಿಮಗೆ ಮುಂಚೆಯೇ ಹೇಳಿದ್ದೇನೆ ಅಗರ್ವಾಲ್ ಜೀ. ಕರ್ನಾಟಕದಲ್ಲಿ ಪಕ್ಷದ ಶಕ್ತಿ ಕಡಿಮೆಯಾಗುತ್ತಿದೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ವಿರುದ್ಧ ನಮ್ಮವರ ಹೋರಾಟ ಪರಿಣಾಮಕಾರಿಯಾಗಿಲ್ಲ. ಮಾತೆತ್ತಿದರೆ ರಾಜಭವನಕ್ಕೆ ಹೋಗಿ ಕಂಪ್ಲೇಂಟು ಕೊಡುವ ಕೆಲಸ ಮಾಡುತ್ತಿದ್ದಾರಾದರೂ ಸರಕಾರದ ಹಗರಣಗಳ ಬಗ್ಗೆ ಪರಿಣಾಮಕಾರಿಯಾಗಿ ಹೋರಾಡುತ್ತಿಲ್ಲ. ಹೋಗಲಿ, ಸರಕಾರದ ವಿರುದ್ಧ ಹಗರಣಗಳ ಆರೋಪ ಇಲ್ಲವಾ ಅಂದರೆ ಒಂದರ ಹಿಂದೊಂದು ಆರೋಪಗಳು ಕೇಳಿ ಬರುತ್ತಲೇ ಇವೆ. ಇಂಥ ಹಗರಣಗಳ ಬಗ್ಗೆ ರಾಜ್ಯದ ಬಿಜೆಪಿ ಕಾರ್ಯಕರ್ತರು ನಮಗೆ ಮಾಹಿತಿ ಕಳಿಸುತ್ತಲೇ ಇದ್ದಾರೆ. ಇವತ್ತು ಇದನ್ನು ಮುಂದಿಟ್ಟುಕೊಂಡು ರಾಜ್ಯದ ನಾಯಕರು ಹೋರಾಡಬೇಕೇ ಹೊರತು ಸರಕಾರದ ನಡಾವಳಿಕೆಗಳ ಬಗ್ಗೆ ಟೀಕಿಸುತ್ತಾ ಕೂತರೆ ಸಾಲುವುದಿಲ್ಲ. ಹೀಗಾಗಿ ಸರಕಾರದ ಹಗರಣಗಳನ್ನು ಬಯಲು ಮಾಡಬೇಕು, ಹೋರಾಡಬೇಕು ಅಂತ ನೀವು ಅವರಿಗೆ ಹೇಳದಿದ್ದರೆ ಪಕ್ಷಕ್ಕೆ ರಾಜಕೀಯ ಲಾಭವಾಗುವುದಾದರೂ ಹೇಗೆ?" ಅಂತ ಅಮಿತ್ ಶಾ ಹೇಳಿದ ನಂತರ ಅಗರ್ವಾಲ್ ರಪ್ಪಂತ ಬೆಂಗಳೂರಿಗೆ ಹೊರಟು ಬಂದಿದ್ದಾರೆ.

ಹೀಗೆ ಬಂದವರು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್. ಅಶೋಕ್ ಸೇರಿದಂತೆ ಎಲ್ಲರನ್ನೂ ಒಗ್ಗೂಡಿಸಿ ಸತತ ಸಭೆಗಳನ್ನು ಮಾಡಿದ್ದಾರೆ. "ಎಲ್ರೀ ನಮ್ಮ ಪಕ್ಷದ ಮೋರ್ಚಾಗಳು ಯಾಕೆ ಆ್ಯಕ್ಟೀವ್ ಆಗಿಲ್ಲ?" ಅಂತ ಕೇಳುವುದರಿಂದ ಹಿಡಿದು ಪ್ರತಿಯೊಂದು ವಿಷಯದ ಬಗ್ಗೆ ಕ್ಲಾಸು ತೆಗೆದುಕೊಂಡಿದ್ದಾರೆ. ಈ ಮಧ್ಯೆ ರಾಧಾಮೋಹನದಾಸ್ ಅಗರ್ವಾಲ್ ಅವರಿಗೆ ಪಕ್ಷ ನಡೆಸಿದ ಜನಾಕ್ರೋಶ ಯಾತ್ರೆಯ ವಿವರ ನೀಡಿದ ಪಕ್ಷಾಧ್ಯಕ್ಷ ವಿಜಯೇಂದ್ರ ಅವರು, "ಸರ್, ರಾಜ್ಯ ಸರಕಾರದ ವಿರುದ್ಧ ನಾವು ನಡೆಸಿದ ಜನಾಕ್ರೋಶ ಯಾತ್ರೆಗೆ ಒಳ್ಳೆ ರೆಸ್ಪಾನ್ಸ್ ಇದೆ. ಆದರೆ ಈ ಯಾತ್ರೆಯನ್ನು ಬೆಂಗಳೂರಿನಲ್ಲಿ ನಡೆಸಲು ನಮಗೆ ಸಹಕಾರ ಸಿಕ್ಕಿಲ್ಲ" ಅಂತ ಪರೋಕ್ಷವಾಗಿ ಆರ್.ಅಶೋಕ್ ವಿರುದ್ಧ ಅಸಮಾಧಾನ ತೋಡಿಕೊಂಡಿದ್ದಾರೆ.

ಯಾವಾಗ ವಿಜಯೇಂದ್ರ ಅವರು ಈ ಮಾತು ಹೇಳಿದರೋ, ನಂತರ ಶುಕ್ರವಾರ ನಡೆದ ಕೋರ್ ಕಮಿಟಿ ಸಭೆಯಲ್ಲಿ ಮಾತನಾಡಿದ ರಾಧಾಮೋಹನ್‌ದಾಸ್ ಅಗರ್ವಾಲ್ ಅವರು, "ಸರಕಾರದ ವಿರುದ್ಧ ಪರಿಣಾಮಕಾರಿ ಹೋರಾಟ ನಡೆಯಬೇಕು. ಅದರ ಹಗರಣಗಳನ್ನು ಹಿಡಿದುಕೊಂಡು ರಾಜ್ಯಾದ್ಯಂತ ಪ್ರವಾಸ ಮಾಡಬೇಕು. ಹೀಗೆ ಪ್ರವಾಸ ಮಾಡಲು ಎರಡು ತಂಡಗಳನ್ನು ರಚಿಸಿಕೊಳ್ಳಿ. ಒಂದು ತಂಡ ಪಕ್ಷದ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಹೊರಡಲಿ. ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರ ನೇತೃತ್ವದಲ್ಲಿ ಮತ್ತೊಂದು ತಂಡ ಹೊರಡಲಿ" ಎಂದಿದ್ದಾರೆ.

ಯಾವಾಗ ಅಗರ್ವಾಲ್ ಎರಡು ತಂಡಗಳ ರಚನೆ ಬಗ್ಗೆ ಮಾತನಾಡಿದರೋ, ಅಗ ಕೋರ್ ಕಮಿಟಿ ಸಭೆಯಲ್ಲಿದ್ದವರು ಮಂಕಾದರಂತೆ. ಕಾರಣ? ರಾಜ್ಯ ಸರಕಾರದ ವಿರುದ್ಧ ಪಕ್ಷ ನಡೆಸುವ ಹೋರಾಟ ಸಂಘಟಿತವಾಗಿರಬೇಕು. ಅದನ್ನು ಬಿಟ್ಟು ಅವರನ್ನು ಕಂಡರೆ ಇವರಿಗೆ, ಇವರನ್ನು ಕಂಡರೆ ಅವರಿಗೆ ಆಗುವುದಿಲ್ಲ ಅಂತ ಎರಡು ತಂಡ ರಚನೆ ಮಾಡಿದರೆ ಪಕ್ಷವನ್ನು ಅಧಿಕೃತವಾಗಿ ಒಡೆದಂತಾಗುತ್ತದೆ ಎಂಬುದು ಕೋರ್ ಕಮಿಟಿಯ ಬಹುತೇಕರ ಅಭಿಪ್ರಾಯ. ಹೀಗಾಗಿ ರಾಧಾಮೋಹನದಾಸ್ ಅವರು ಪಕ್ಷಕ್ಕೆ ಟಾನಿಕ್ ನೀಡಿ ಹೋದ ನಂತರವೂ ರಾಜ್ಯ ಬಿಜೆಪಿ ಪಾಳಯದಲ್ಲಿ ತಲ್ಲಣ ಉಳಿದೇ ಇದೆ.

ಅಮಿತ್ ಶಾ ಆತುರಕ್ಕೇನು ಕಾರಣ?

ಅಂದ ಹಾಗೆ, ರಾಜ್ಯ ಬಿಜೆಪಿಯ ವಿಷಯದಲ್ಲಿ ಕೇಂದ್ರ ಸಚಿವ ಅಮಿತ್ ಶಾ ಚಿಂತಿತರಾಗಿರುವುದು ಏಕೆ? ಬಿಜೆಪಿ ಮೂಲಗಳ ಪ್ರಕಾರ, ಕರ್ನಾಟಕದ ರಾಜಕಾರಣದ ಬಗ್ಗೆ ಅವರಿಗೆ ತಲುಪುತ್ತಿರುವ ಸಂದೇಶಗಳೇ ಇದಕ್ಕೆ ಕಾರಣ. ಅದರ ಪ್ರಕಾರ, ಮುಂದಿನ ಕೆಲವೇ ದಿನಗಳಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ನಡುವಣ ಸಂಘರ್ಷ ತೀವ್ರರೂಪ ಪಡೆಯಲಿದೆ ಮತ್ತು ಈ ಸಂಘರ್ಷವನ್ನು ತಡೆಯಲು ಕಾಂಗ್ರೆಸ್ ಹೈಕಮಾಂಡ್ ವಿಫಲವಾಗಲಿದೆ. ಯಾಕೆಂದರೆ ಸಂಘರ್ಷಕ್ಕೆ ಸಜ್ಜಾಗಿರುವ ಸಿದ್ದರಾಮಯ್ಯ ಅವರೇ ಆಗಲೀ, ಡಿ.ಕೆ.ಶಿವಕುಮಾರ್ ಅವರೇ ಆಗಲಿ ತಮ್ಮ ತಮ್ಮ ಹೆಜ್ಜೆಗಳನ್ನು ಹಿಂದೆ ಸರಿಸಲು ತಯಾರಿಲ್ಲ. ಈ ಪೈಕಿ ಡಿಕೆಶಿ ಕ್ಯಾಂಪಿನ ಪ್ರಕಾರ, 2023ರ ಮೇ ಮೂರನೇ ವಾರ ಕಾಂಗ್ರೆಸ್ ಹೈಕಮಾಂಡ್ ಅಧಿಕಾರ ಹಂಚಿಕೆಯ ಒಪ್ಪಂದ ಮಾಡಿಸಿದೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಸುರ್ಜೇವಾಲ, ಕೆ.ಸಿ.ವೇಣುಗೋಪಾಲ್ ಅವರ ಉಪಸ್ಥಿತಿಯಲ್ಲಿ ಆದ ಈ ಅಧಿಕಾರ ಹಂಚಿಕೆ ಒಪ್ಪಂದದ ಪ್ರಕಾರ ಸಿದ್ದರಾಮಯ್ಯ ಮೂವತ್ತು ತಿಂಗಳು ಸಿಎಂ ಆಗಿರಬೇಕು, ಆನಂತರದ ಮೂವತ್ತು ತಿಂಗಳು ಡಿಕೆಶಿ ಸಿಎಂ ಆಗಬೇಕು. ಹೀಗೆ ಅವತ್ತು ಆಗಿರುವ ಒಪ್ಪಂದ ಜಾರಿಯಾಗಲೇಬೇಕು. ಒಂದು ವೇಳೆ ಇದು ಸಾಧ್ಯವಾಗದೆ ಇದ್ದರೆ ಡಿಕೆಶಿ ನೇತೃತ್ವದ ಗುಂಪು ಕೈ ಪಾಳಯ ತೊರೆಯುವುದು ನಿಶ್ಚಿತ.

ಇದು ಒಂದು ಕಡೆಗಾದರೆ ಮತ್ತೊಂದು ಕಡೆ ಸಿದ್ದರಾಮಯ್ಯ ಕ್ಯಾಂಪು, "ಅಧಿಕಾರ ಹಂಚಿಕೆಯ ವಿಷಯದಲ್ಲಿ ಇಂಥ ಒಪ್ಪಂದವೇ ಆಗಿಲ್ಲ, ಎಲ್ಲಕ್ಕಿಂತ ಮುಖ್ಯವಾಗಿ ಸಿದ್ದರಾಮಯ್ಯ ಅವರೇನಾದರೂ ಕೆಳಗಿಳಿಯುವ ಸನ್ನಿವೇಶ ಸೃಷ್ಟಿಯಾದರೆ ಶಾಸಕರ ದೊಡ್ಡ ಗುಂಪು ಪಕ್ಷ ತೊರೆಯುವುದು ಗ್ಯಾರಂಟಿ. ಈ ಪೈಕಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ನೇತೃತ್ವದಲ್ಲಿ ಐವತ್ತೇಳು ಮಂದಿಯ ತಂಡ ಸಜ್ಜಾಗಿದ್ದರೆ, ಕೈ ಪಾಳಯದಲ್ಲಿರುವ ಮೂವತ್ತೆರಡರಷ್ಟು ಶಾಸಕರು ನಮಗೆ ಡಿಕೆಶಿ ಸಿಎಂ ಆಗುವುದು ಬೇಡ ಅಂತ ಔಟ್‌ರೈಟಾಗಿ ಹೇಳಲು ನಿರ್ಧರಿಸಿದ್ದಾರೆ" ಎನ್ನುತ್ತಿದೆ.

ಅಂದ ಹಾಗೆ, ಈ ರೀತಿ ಕಾಂಗ್ರೆಸ್ಸಿನ ಎರಡು ಬಣಗಳಿಂದ ತಲುಪುತ್ತಿರುವ ವರ್ತಮಾನ ಸಹಜವಾಗಿಯೇ ಅಮಿತ್ ಶಾ ಅವರಿಗೆ ಖುಷಿ ಕೊಟ್ಟಿದೆ. ಇದೇ ರೀತಿ, ಇಂಥ ಮಾಹಿತಿಗೆ ಪೂರಕವಾಗಿ ಸನ್ನಿವೇಶವನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ನೇತೃತ್ವದ ಒಂದು ಟೀಮು, ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ರಾಜನಾಥ್ ಸಿಂಗ್ ನೇತೃತ್ವದ ಮತ್ತೊಂದು ಟೀಮು ರೆಡಿಯಾಗಿವೆ. ಈ ಪೈಕಿ ಒಂದು ಟೀಮು ಸಿದ್ದು ಕ್ಯಾಂಪಿನ ಮೇಲೆ ಕಣ್ಣಿಟ್ಟಿದ್ದರೆ, ಮತ್ತೊಂದು ಟೀಮು ಡಿಕೆಶಿ ಕ್ಯಾಂಪಿನ ಮೇಲೆ ಕಣ್ಣಿಟ್ಟಿದೆ. ಹೀಗಾಗಿ ಯಾವ ಟೀಮು ಹೊರಬಂದರೂ ತಮ್ಮಿಚ್ಛೆಯಂತೆ ದಾಳ ಉರುಳುತ್ತದೆ. ಆದರೆ ಹೀಗೆ ಉರುಳುವ ದಾಳ ಕರ್ನಾಟಕದಲ್ಲಿ ಮಧ್ಯಂತರ ಚುನಾವಣೆಯನ್ನು ಅನಿವಾರ್ಯಗೊಳಿಸಿದರೆ ರಾಜ್ಯ ಬಿಜೆಪಿ ಅದಕ್ಕೆ ಅಣಿಯಾಗಿರಬೇಕಲ್ಲ? ಇವತ್ತು ಅಮಿತ್ ಶಾ ಅವರ ಚಿಂತೆಗೆ ಕಾರಣವಾಗಿರುವುದೇ ಈ ಅಂಶ. ಹೀಗಾಗಿ ಇವತ್ತು ಕರ್ನಾಟಕದಿಂದ ಪಕ್ಷದ ನಾಯಕರ ಬಗ್ಗೆ ಕಂಪ್ಲೇಂಟು ಹೋದರೆ ಸಾಕು, ಅವರು ಅಗರ್ವಾಲ್ ಅವರಿಗೆ ಕಿರಿಕಿರಿ ಮಾಡುತ್ತಿದ್ದಾರೆ. ಅದೇ ರೀತಿ ಅವರು ಕಿರಿಕಿರಿ ಮಾಡಿದಾಗಲೆಲ್ಲ ಅಗರ್ವಾಲ್ ಕರ್ನಾಟಕಕ್ಕೆ ಓಡಿಬಂದು ಸ್ಥಳೀಯ ನಾಯಕರಿಗೆ ಪಾಠ ಮಾಡಿ ಹೋಗುತ್ತಿದ್ದಾರೆ.

ಕೋರ್ ಕಮಿಟಿಯಲ್ಲಿ ಇವರಿಗೆ ಜಾಗವಿಲ್ಲ

ಈ ಮಧ್ಯೆ ಬಿಜೆಪಿಯ ಹಿಂದುಳಿದ ವರ್ಗಗಳ ನಾಯಕರು ಕೋಪ ಮಾಡಿಕೊಂಡಿದ್ದಾರೆ. ಕೋರ್ ಕಮಿಟಿಯ ರಚನೆ ಸಂದರ್ಭದಲ್ಲಿ ತಮ್ಮನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ ಎಂಬುದು ಅವರ ಕೋಪಕ್ಕೆ ಕಾರಣ.

ಅಂದ ಹಾಗೆ, ಪುನರ್‌ರಚಿತ ಕೋರ್ ಕಮಿಟಿಯಲ್ಲಿ ಲಿಂಗಾಯತ ಸಮುದಾಯದ ಬಿ.ಎಸ್.ಯಡಿಯೂರಪ್ಪ, ಬಿ.ವೈ.ವಿಜಯೇಂದ್ರ, ಬಸವರಾಜ ಬೊಮ್ಮಾಯಿ ಅವರುಗಳಿದ್ದರೆ, ಒಕ್ಕಲಿಗರ ಕೋಟಾದಲ್ಲಿ ಡಿ.ವಿ.ಸದಾನಂದಗೌಡ, ಡಾ.ಅಶ್ವತ್ಥ ನಾರಾಯಣ, ಸಿ.ಟಿ.ರವಿ ಇದ್ದಾರೆ. ಇದೇ ರೀತಿ ಪರಿಶಿಷ್ಟ ಜಾತಿಯ ಕೋಟಾದಲ್ಲಿ ಎಡಗೈ ಸಮುದಾಯದ ಗೋವಿಂದ ಕಾರಜೋಳ, ಬಲಗೈನ ಛಲವಾದಿ ನಾರಾಯಣಸ್ವಾಮಿ ಅವರುಗಳಿದ್ದರೆ, ಪರಿಶಿಷ್ಟ ಪಂಗಡದ ಕೋಟಾದಲ್ಲಿ ಬಿ.ಶ್ರೀರಾಮುಲು ಅವರಿದ್ದಾರೆ. ಉಳಿದಂತೆ ಬಂಟ ಸಮುದಾಯಕ್ಕೆ ಸೇರಿದ ನಳಿನ್ ಕುಮಾರ್ ಕಟೀಲ್, ಜೈನ ಸಮುದಾಯಕ್ಕೆ ಸೇರಿದ ನಿರ್ಮಲ್ ಕುಮಾರ್ ಸುರಾನಾ ಮತ್ತು ರೆಡ್ಡಿ ಸಮುದಾಯದ ನಂದೀಶ್ ರೆಡ್ಡಿ ಕೋರ್ ಕಮಿಟಿಯಲ್ಲಿ ಜಾಗ ಪಡೆದಿದ್ದಾರೆ.

ಹೀಗೆ ನೋಡುತ್ತಾ ಹೋದರೆ ರಾಜ್ಯ ಬಿಜೆಪಿಯಲ್ಲಿ ಹಿಂದುಳಿದ ವರ್ಗದ ನಾಯಕರಿಗೆ ಅವಕಾಶವೇ ಸಿಗುತ್ತಿಲ್ಲ, ಹಾಗೆ ನೋಡಿದರೆ ಕಾಂಗ್ರೆಸ್‌ನಲ್ಲಿ ಸಿಎಂ ಸಿದ್ದರಾಮಯ್ಯ ಅವರು ಕಟ್ಟಿದ ಹಿಂದುಳಿದ ವರ್ಗಗಳ ಕೋಟೆಯ ಮೇಲೆ ಲಗ್ಗೆ ಹಾಕುವುದು ಬಿಜೆಪಿಗೆ ಆದ್ಯತೆಯಾಗಬೇಕಿತ್ತು. ಆದರೆ ಉದ್ದೇಶಪೂರ್ವಕವಾಗಿ ಹಿಂದುಳಿದ ವರ್ಗಗಳನ್ನು ಪಕ್ಷ ನಿರ್ಲಕ್ಷಿಸುತ್ತಿದೆ ಎಂಬುದು ಈ ನಾಯಕರ ಆಕ್ರೋಶ. ಹಾಗಂತಲೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜಗತ್‌ಪ್ರಕಾಶ್ ನಡ್ಡಾ ಅವರಿಗೆ ಪತ್ರ ಬರೆದು ತಮ್ಮ ಅಸಮಾಧಾನ ತೋಡಿಕೊಳ್ಳಲು ಈ ನಾಯಕರು ಮುಂದಾಗಿದ್ದಾರಂತೆ.

ಕುಮಾರಣ್ಣ ಯಶಸ್ವಿ ಆಗುತ್ತಿರುವುದು ಹೇಗೆ?

ಇನ್ನು ಕೇಂದ್ರ ಸಂಪುಟದಲ್ಲಿ ಉಕ್ಕು ಮತ್ತು ಕೈಗಾರಿಕಾ ಸಚಿವರಾಗಿರುವ ಎಚ್.ಡಿ.ಕುಮಾರಸ್ವಾಮಿ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಖುಷಿಯಾಗಿದ್ದಾರೆ. ಕಾರಣ? 'ಮೇಕ್ ಇನ್ ಇಂಡಿಯಾ' ಮತ್ತು 'ಆತ್ಮನಿರ್ಭರ ಭಾರತ್' ಅಡಿ ತಾವು ಕೊಟ್ಟ ಟಾರ್ಗೆಟ್ ಮುಟ್ಟಲು ಕುಮಾರಸ್ವಾಮಿ ಹಾರ್ಡ್‌ವರ್ಕ್ ಮಾಡುತ್ತಿದ್ದಾರೆ ಎಂಬುದು.

ಅಂದ ಹಾಗೆ, 2020-30ರ ಅವಧಿಯಲ್ಲಿ ದೇಶದಲ್ಲಿ 300 ದಶಲಕ್ಷ ಟನ್‌ಗಳಷ್ಟು ಉಕ್ಕು ಉತ್ಪಾದಿಸಬೇಕು ಅಂತ ಈ ಹಿಂದೆ ಮೋದಿ ಟಾರ್ಗೆಟ್ ಫಿಕ್ಸ್ ಮಾಡಿದ್ದರು. ಇದಕ್ಕೆ ಪೂರಕವಾಗಿ ಉಕ್ಕು ಉತ್ಪಾದನೆ ನಡೆಯುತ್ತಿತ್ತಾದರೂ ಕುಮಾರಸ್ವಾಮಿ ಉಕ್ಕು ಸಚಿವರಾದ ನಂತರ ಅದಕ್ಕೆ ವೇಗ ಬಂದಿದೆ. ಉದಾಹರಣೆಗೆ ಆಂಧ್ರದ ವೈಜಾಗ್ ಕಾರ್ಖಾನೆಯನ್ನೇ ತೆಗೆದುಕೊಳ್ಳಿ. ಸಂಕಷ್ಟದಲ್ಲಿದ್ದ ಈ ಕಾರ್ಖಾನೆ ಕುಮಾರಸ್ವಾಮಿ ಅವರು ಮಂತ್ರಿಯಾದ ನಂತರ ಮರುಜೀವ ಪಡೆದಿದೆ. ಈ ಕಾರ್ಖಾನೆಯ ಪುನರುಜ್ಜೀವನಕ್ಕಾಗಿ ಸತತ ಪ್ರಯತ್ನ ನಡೆಸಿದ ಕುಮಾರಸ್ವಾಮಿ ಕೇಂದ್ರದಿಂದ ಸುಮಾರು 11,500 ಕೋಟಿ ರು.ಗಳ ಪ್ಯಾಕೇಜ್ ಕೊಡಿಸಿದ್ದಲ್ಲದೆ, ಉಕ್ಕು ಉತ್ಪಾದನೆಗೆ ದೊಡ್ಡ ಮಟ್ಟದಲ್ಲಿ ಚಾಲನೆ ಕೊಡಿಸಿದ್ದಾರೆ.

ಇದೇ ರೀತಿ ಬೊಕಾರೋ, ಭಿಲಾಯ್, ನಗರ್‌ನಾರ್, ಸೇಲಂ ಸೇರಿದಂತೆ ದೇಶದ ಪ್ರಮುಖ ಘಟಕಗಳು ಹಿಂದೆಂದಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ನೋಡಿಕೊಂಡಿದ್ದಾರೆ. ಈ ಮಧ್ಯೆ ಕರ್ನಾಟಕದ ಭದ್ರಾವತಿಯಲ್ಲಿರುವ ವಿಐಎಸ್‌ಎಲ್ ಕಾರ್ಖಾನೆಗೆ ಬಂಪರ್ ಪ್ಯಾಕೇಜ್ ಕೊಡಿಸಲು ಹೊರಟಿರುವ ಕುಮಾರಸ್ವಾಮಿ, ಈ ಕಾರ್ಖಾನೆಗೆ ಶಕ್ತಿ ತುಂಬುವ ಕ್ರಿಯಾಯೋಜನೆಗೆ ಸೂಚಿಸಿದ್ದಾರೆ. ಮೂಲಗಳ ಪ್ರಕಾರ ವಿಐಎಸ್‌ಎಲ್ ಫ್ಯಾಕ್ಟರಿಗೆ ಹದಿನೈದರಿಂದ ಹದಿನೆಂಟು ಸಾವಿರ ಕೋಟಿ ರು.ಗಳ ಪ್ಯಾಕೇಜ್ ಕೊಡಿಸುವುದು ಕುಮಾರಸ್ವಾಮಿ ಯೋಚನೆ.

ಹೀಗೆ ದೇಶಾದ್ಯಂತ ಸಂಕಷ್ಟದಲ್ಲಿರುವ ಕಾರ್ಖಾನೆಗಳಿಗೆ ಶಕ್ತಿ ತುಂಬಿ ಉತ್ಪಾದನೆಯ ಕಾರ್ಯವನ್ನು ಚುರುಕುಗೊಳಿಸಿದರೆ ಉಕ್ಕು ಉತ್ಪಾದನೆಯ ವಿಷಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನಿಗದಿ ಮಾಡಿದ ಟಾರ್ಗೆಟ್ ಏನಿದೆ, ಅದನ್ನು ಮೂರು ವರ್ಷ ಮುಂಚಿತವಾಗಿಯೇ ತಲುಪಬಹುದು ಎಂಬುದು ಕುಮಾರಸ್ವಾಮಿಯವರ ಯೋಚನೆ. ಅವರ ವಿಷಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಖುಷಿಯಾಗಿರುವುದು ಇದೇ ಕಾರಣಕ್ಕಾಗಿ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮತ್ತೆ ಕಾಡುವ ಎಚ್‌ಎಸ್‌ವಿ

ರವಿ ಕಾಣದ್ದನ್ನು ಕವಿ ಕಂಡ ಎಂಬ ಮಾತಿನಂತೆ, ಕವಿಗಳ ಕಲ್ಪನೆಗೆ ನಿಲುಕದ ಸಂಗತಿಗಳಿಲ್ಲ. ಕವಿಯ ಕಲ್ಪನೆಯಲ್ಲಿ ಮೂಡಿಬಂದ ಸಾಲುಗಳು ಹೇಳುವ ಭಾವಗಳು ಅಪಾರ. ಇತ್ತೀಚೆಗೆ ನಮ್ಮನ್ನು ಅಗಲಿದ ಕವಿ ಎಚ್.ಎಸ್.ವೆಂಕಟೇಶಮೂರ್ತಿಯವರ 'ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ' ಎಂಬ ಕವನವು ನಮ್ಮನ್ನು ಮತ್ತೆ ಮತ್ತೆ ಕಾಡುತ್ತದೆ. ಬದುಕಿನ ಸಂಕಷ್ಟಗಳೆಡೆಗೆ ಒಂದು ಹೊಸ ದೃಷ್ಟಿಕೋನದಿಂದ ನೋಡಲು ಈ ಕವನದ ಸಾಲುಗಳು ನಮಗೆ ಸ್ಫೂರ್ತಿ ನೀಡುತ್ತವೆ. ಪ್ರಕೃತಿಯು ತನ್ನ ಕಾಯಕದಿಂದ ನಮಗೆ ಹೇಳುವ ಜೀವನಪಾಠವನ್ನು 'ಎಚ್‌ಎಸ್‌ವಿ' ಅವರು ತಮ್ಮ ಲೇಖನಿಯ ಮೂಲಕ ಬಲು ಸುಂದರವಾಗಿ ಹೊರತಂದಿದ್ದಾರೆ. ಬರಿಯ ತತ್ವಜ್ಞಾನದ ಮಾತುಗಳಲ್ಲದೆ, ನೋವಿನಲ್ಲೂ ಸಾರ್ಥಕತೆಯನ್ನು ಹೇಗೆ ಹೊಂದಬಹುದು ಎಂಬುದನ್ನು ಹೊಂಗೆ ಮರದ ಉದಾಹರಣೆಯಿಂದ ಬಹಳ ಮಾರ್ಮಿಕವಾಗಿ ಅವರು ಹೇಳಿದ್ದಾರೆ. ದಿನನಿತ್ಯದ ಚಿಕ್ಕ ಚಿಕ್ಕ ಅಡೆತಡೆಗಳಿಗೆ ಬಲು ಬೇಗ ರೋಸಿಹೋಗುವ ಅಸಹನೆಯ ಪರಿಸ್ಥಿತಿಗೆ ನಾವಿಂದು ತಲುಪಿದ್ದೇವೆ. ಅಪಾರ ಜೀವನಮೌಲ್ಯಗಳನ್ನು ಸಾರುವ ಇಂಥ ಸಾಹಿತ್ಯವು ನಮಗೆ ಬಹಳ ಬಲ ನೀಡುವುದರಲ್ಲಿ ಸಂದೇಹವಿಲ್ಲ. ಇಂಥ ಹಲವು ಕವನಗಳಿಂದ ನಮ್ಮ ಮನವನ್ನು ಆಪ್ತವಾಗಿ ತಟ್ಟುವ ಎಚ್.ಎಸ್.ವೆಂಕಟೇಶ ಮೂರ್ತಿಯವರು ಕನ್ನಡಿಗರ ನೆನಪಿನಲ್ಲಿ ಸದಾ ಹಚ್ಚ ಹಸಿರಾಗಿರುತ್ತಾರೆ.

- ವಿದ್ಯಾಶಂಕರ ಶರ್ಮ, ಬೆಂಗಳೂರು

ನೋಡಲಾಗದವರ ಸಣ್ಣಮತಿ

ಮೋಹನ್ ವಿಶ್ವ ಅವರು ತಮ್ಮ 'ವೀಕೆಂಡ್ ವಿತ್ ಮೋಹನ್' ಅಂಕಣದಲ್ಲಿ (ಮೇ 31), ಭಾರತದ ಇಂದಿನ ಪ್ರಗತಿಯ ಪರ್ವದ ಸಂಪೂರ್ಣ ವೃತ್ತಾಂತವನ್ನು ಬಿಡಿಸಿ ಇಟ್ಟಿದ್ದಾರೆ. 1947ರ ಸ್ವಾತಂತ್ರ್ಯದ ನಂತರ ದೇಶವು 2014ರವರೆಗೆ ಎಷ್ಟು ಸಾಧಿಸಿತು ಎಂಬ ಮಾಹಿತಿಯನ್ನು ನೀಡಿದ್ದಾರೆ. ತದನಂತರ, 2014ರಿಂದ 2025ರ ತನಕ ಸರ್ವಕ್ಷೇತ್ರದಲ್ಲೂ ದಾಖಲೆಯ ಪ್ರಗತಿ ಮಾಡಿ, ಇಂದು ವಿಶ್ವದ 4ನೇ ಅತಿದೊಡ್ಡ ಆರ್ಥಿಕ ದೇಶವಾಗಿದ್ದೂ ಹೆಮ್ಮೆಯ ವಿಚಾರ ಅಂತಲೂ ಹೇಳಿದ್ದಾರೆ. ಉತ್ತಮ, ಯೋಗ್ಯ, ದೂರದೃಷ್ಟಿಯ, ಎಲ್ಲಕ್ಕಿಂತ ಮಿಗಿಲಾಗಿ ದೇಶವನ್ನು-ದೇಶವಾಸಿಗಳನ್ನು ಪ್ರೀತಿಸುವ ನಿಸ್ವಾರ್ಥಿ ನಾಯಕನ ಕೈಗೆ ಅಧಿಕಾರ ಸಿಕ್ಕಾಗ ಆಗುವ ಬದಲಾವಣೆಯನ್ನು ಭಾರತ ಮಾತ್ರವಲ್ಲದೆ ಜಗತ್ತೇ ಕಂಡಿದೆ. ಇನ್ನು, ಆನೆ ನಡೆವಾಗ ನೋಡಲು ಆಗದ ಪ್ರಾಣಿಗಳ ಕೂಗು, ಅರಣ್ಯರೋದನ ಸಾಮಾನ್ಯ.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಸೂಕ್ತ ಕ್ರಮ ಕೈಗೊಳ್ಳಲಿ

ಕರ್ನಾಟಕ ಕಂಡ ಅಪರೂಪದ ರಾಜಕಾರಣಿ, ಹಿಂದುಳಿದ ವರ್ಗಗಳ ಜನಪ್ರಿಯ ನಾಯಕ, ನಿಸ್ವಾರ್ಥದಲ್ಲಿ ಸಮಾಜವಾದದ ಹರಿಕಾರ, 'ಉಳುವವನೇ ಭೂಮಿಯ ಒಡೆಯ' ಎಂಬ ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಮಹತ್ವಾಕಾಂಕ್ಷಿ ಯೋಜನೆಯನ್ನು ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಅನುಷ್ಠಾನಕ್ಕೆ ತಂದವರು ಎಂಬೆಲ್ಲ ಕೀರ್ತಿಗಳು ದಿವಂಗತ ಡಿ.ದೇವರಾಜ ಅರಸು ಅವರಿಗೆ ಸಲ್ಲುತ್ತವೆ. ಜೀತಪದ್ಧತಿಯ ನಿರ್ಮೂಲನೆಗೆ ಕಾನೂನು ಜಾರಿಮಾಡುವ ಮೂಲಕ ಹಿಂದುಳಿದ ವರ್ಗಗಳಿಗೆ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿದ ಅವರು, ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವ ಮೂಲಕ ಇಂದಿಗೂ ಜನಮಾನಸದಲ್ಲಿ ಉಳಿದಿದ್ದಾರೆ. ರಾಜ್ಯಕ್ಕೆ 'ಕರ್ನಾಟಕ' ಎಂದು ಮರುನಾಮಕರಣ ಮಾಡಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಅರಸರ ವಿಚಾರಧಾರೆಗಳನ್ನು ಮತ್ತು ಆಶಯಗಳನ್ನು ಯುವಪೀಳಿಗೆಗೆ ಪರಿಚಯಿಸುವ ದೃಷ್ಟಿಯಿಂದ, ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದ ಕಾಲಘಟ್ಟದಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ 'ದೇವರಾಜ ಅರಸು ಪೀಠ'ವನ್ನು ಸ್ಥಾಪಿಸಲಾಗಿದೆ. ಇದು ಆರಂಭಿಕ ನಾಲ್ಕೈದು ವರ್ಷಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿತು. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಪೀಠ ಸಂಪೂರ್ಣ ನಿಷ್ಕ್ರಿಯವಾಗಿದೆ. ಇದೇ ಜೂನ್ ತಿಂಗಳ 6ನೇ ತಾರೀಖು ದೇವರಾಜ ಅರಸರ 43ನೇ ವರ್ಷದ ಪುಣ್ಯಸ್ಮರಣೆಯ ದಿನವಾಗಿರುವುದರಿಂದ, ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳು ಈಗಲಾದರೂ ಸದರಿ ಪೀಠವು ಪುನಃ ಸಕ್ರಿಯವಾಗಿ ಕಾರ್ಯನಿರ್ವಹಿಸುವಂತಾ ಗುವಲ್ಲಿ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು.

- ಬೂಕನಕೆರೆ ವಿಜೇಂದ್ರ, ಮೈಸೂರು

ಇದು ಆತ್ಮನಿರ್ಭರತೆಗೆ ದಕ್ಕಿದ ಅದ್ಭುತ ಯಶಸ್ಸು

ಪ್ರಕಾಶಪಥ

ಪ್ರಕಾಶ್ ಶೇಷರಾಘವಾಚಾರ್

vveditoped@gmail.com

ನಿಮಗೆ ಗೊತ್ತಿರಬೇಕು, 1999ರ ಕಾರ್ಗಿಲ್ ಯುದ್ಧದಲ್ಲಿ ಪಾಕಿಸ್ತಾನಿ ಸೈನಿಕರು ಆಕ್ರಮಿಸಿಕೊಂಡ ಪ್ರದೇಶಗಳ ನಿಖರವಾದ ಮಾಹಿತಿ ಕಲೆಹಾಕಿ, ಪರಿಣಾಮಕಾರಿಯಾಗಿ ಸೇನಾಕಾರ್ಯಾಚರಣೆ ನಡೆಸಲು ಅಗತ್ಯವಿದ್ದ ಸಾಧನ- 'ಜಿಪಿಎಸ್' ಅಂದರೆ 'ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್'. ಶತ್ರುಗಳು ಬೀಡುಬಿಟ್ಟಿದ್ದ ನೆಲೆಗಳ ಮೇಲೆ ವೈಮಾನಿಕ ಅಥವಾ ಕ್ಷಿಪಣಿ ದಾಳಿ ಕೈಗೊಂಡು ಅವನ್ನು ತೆರವುಗೊಳಿಸಲು 'ಜಿಪಿಎಸ್'ನ ಸಹಾಯ ಬೇಕಿತ್ತು. ಆದರೆ ಅಮೆರಿಕ, ತನ್ನ ನಿಯಂತ್ರಣದಲ್ಲಿದ್ದ ಜಿಪಿಎಸ್ ಸಾಧನವನ್ನು ಭಾರತವು ಬಳಸುವುದಕ್ಕೆ ಅನುಮತಿ ನೀಡಲು ನಿರಾಕರಿಸಿತು.

ಜಿಪಿಎಸ್ ಎನ್ನುವುದು ಜಾಗತಿಕ ನ್ಯಾವಿಗೇಷನ್ ಉಪಗ್ರಹ ವ್ಯವಸ್ಥೆಯಾಗಿದ್ದು (ಜಿಎನ್‌ಎಸ್‌ಎಸ್), ಇದು ಪ್ರಪಂಚದಾದ್ಯಂತದ ಮಿಲಿಟರಿ, ನಾಗರಿಕ ಮತ್ತು ವಾಣಿಜ್ಯ ಬಳಕೆದಾರರಿಗೆ ನಿಖರವಾದ ಸ್ಥಾನದ ಮಾಹಿತಿಯನ್ನು ಒದಗಿಸುತ್ತದೆ. ಕಾರ್ಗಿಲ್ ಯುದ್ಧದ ವೇಳೆ ಇದರ ಸೇವೆ ಲಭ್ಯವಿದ್ದಿದ್ದರೆ, ಕಳೆದುಹೋದ ಅಥವಾ ಗಾಯಗೊಂಡ ಸೈನಿಕರನ್ನು ಪತ್ತೆಹಚ್ಚುವುದು ಸುಲಭವಾಗುತ್ತಿತ್ತು. ಸೈನಿಕರ ಸಾವು-ನೋವು ಕೂಡ ಕಡಿಮೆಯಾಗಿ, ಕಾರ್ಗಿಲ್ ಕಾರ್ಯಾಚರಣೆ ಇನ್ನಷ್ಟು ಬೇಗ ಅಂತ್ಯ ಕಾಣುತ್ತಿತ್ತು.

'ನಾವಿಕ್' ನ್ಯಾವಿಗೇಷನ್ ಸಿಸ್ಟಮ್

ಕಾರ್ಗಿಲ್ ಯುದ್ಧದ ವೇಳೆ ಅಮೆರಿಕ ಕಲಿಸಿದ ಪಾಠದಿಂದ ತನ್ನದೇ ಆದ ನ್ಯಾವಿಗೇಷನ್ ವ್ಯವಸ್ಥೆಯನ್ನು ಇಸ್ರೋ ನೆರವಿನಿಂದ ಅಭಿವೃದ್ಧಿ ಪಡಿಸಲು ನಿರ್ಧರಿಸಿದ ಭಾರತವು 2015ರಲ್ಲಿ 'ನಾವಿಕ್' ('ನ್ಯಾವಿಗೇಷನ್ ವಿತ್ ಇಂಡಿಯನ್ ಕಾನ್ಸ್‌ಟೆಲ್ಲೇಷನ್' ಅಂತ ಇದರ ಪೂರ್ಣರೂಪ) ಹೆಸರಿನಲ್ಲಿ ಈ ಉಪಗ್ರಹ ಆಧರಿತ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾಯಿತು. 'ಆಪರೇಷನ್ ಸಿಂದೂರ' ಕಾರ್ಯಾಚರಣೆಯ ಯಶಸ್ಸಿನಲ್ಲಿ ಪ್ರಧಾನ ಪಾತ್ರ ವಹಿಸಿದ್ದ 'ನಾವಿಕ್', ಶತ್ರುವಿನ ನೆಲೆಗಳನ್ನು ಗುರುತಿಸಲು ನೆರವಾಗಿದ್ದರ ಜತೆಗೆ ಪ್ರತಿದಾಳಿ ನಡೆಸುವಲ್ಲೂ ಉಪಯುಕ್ತವಾಯಿತು. ವೈಮಾನಿಕ ದಾಳಿಯ ಮೂಲಕ ಭಯೋತ್ಪಾದಕರ 8 ನೆಲೆಗಳನ್ನು ಧ್ವಂಸಮಾಡುವಲ್ಲಿ 'ನಾವಿಕ್'ನ ಪಾತ್ರ ಮಹತ್ವದ್ದಾಗಿತ್ತು.

'ಆತ್ಮನಿರ್ಭರ್ ಭಾರತ್' ಮತ್ತು 'ಮೇಕ್ ಇನ್ ಇಂಡಿಯಾ' ಎಂಬ ಎರಡು ಪ್ರಬಲ ಅಸ್ತ್ರಗಳು, ಆಪರೇಷನ್ ಸಿಂದೂರದ ವೇಳೆ ಅತ್ಯಾಧುನಿಕ ಮತ್ತು ಅತ್ಯುನ್ನತ ತಂತ್ರಜ್ಞಾನವು ಭಾರತೀಯ ಸೇನೆಯ ಕೈಗೆಟಕುವಂತೆ ಮಾಡಿದವು. ಭಾರತವು ಪರಾವಲಂಬಿಯಾಗದೆ ಸೇನಾ ಕಾರ್ಯಾಚರಣೆಯನ್ನು ತನ್ನ ಯೋಜನೆಯ ಪ್ರಕಾರವೇ ಕೈಗೆತ್ತಿಕೊಳ್ಳಲು ಸಾಧ್ಯವಾಗಿ ಆಪರೇಷನ್ ಸಿಂದೂರ ಯಶಸ್ವಿಯಾಯಿತು, ಭಾರತದ ಹಿರಿಮೆಯೂ ಮುಗಿಲಿನೆತ್ತರಕ್ಕೆ ಏರಿತು.

ಬ್ರಹ್ಮೋಸ್ ಕ್ಷಿಪಣಿ

ಆಪರೇಷನ್ ಸಿಂದೂರ ಕಾರ್ಯಾಚರಣೆಯಲ್ಲಿ ಭಾರತೀಯ ಸೇನೆಯ ಪ್ರಮುಖ ಅಸ್ತ್ರ ಎನಿಸಿಕೊಂಡಿದ್ದು 'ಬ್ರಹ್ಮೋಸ್ ಮಿಸೈಲ್'. ಪಾಕಿಸ್ತಾನದ ವೈಮಾನಿಕ ನೆಲೆಗಳನ್ನು ಛಿದ್ರಗೊಳಿಸಲು ಇದನ್ನು ಬಳಸಲಾಯಿತು. ಬ್ರಹ್ಮೋಸ್ ಕ್ಷಿಪಣಿ ದಾಳಿಯಿಂದ ಇಂಥದೊಂದು ಭಾರಿ ಹಾನಿಯಾಗಿರುವುದನ್ನು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಸ್ವತಃ ಒಪ್ಪಿಕೊಂಡಿದ್ದಾರೆ.

ಭಾರತ ಮತ್ತು ರಷ್ಯಾದ ಜಂಟಿ ಸಹಯೋಗದಲ್ಲಿ ಈ ಮಿಸೈಲ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಯೋಜನೆಗೆ, 1998ರಲ್ಲಿ ಐ.ಕೆ.ಗುಜ್ರಾಲ್ ಪ್ರಧಾನಿಯಾಗಿದ್ದಾಗ ಸಹಿ ಹಾಕಲಾಯಿತು. ಭಾರತದ 'ಡಿಆರ್‌ಡಿಒ' ಮತ್ತು ರಷ್ಯಾದ ಮಶಿನೊಸ್ಟ್ರೋಯೇನಿಯಾ ನಡುವೆ 1999ರಲ್ಲಿ ನಡೆದ ಮೊದಲ ಒಡಂಬಡಿಕೆಗೆ ವಾಜಪೇಯಿ ಸರಕಾರವು ಸಹಿ ಹಾಕಿತು. ಭಾರತದ ಬ್ರಹ್ಮಪುತ್ರ ಮತ್ತು ರಷ್ಯಾದ ಮಸ್ಕ್ವಾ ನದಿಗಳ ಹೆಸರುಗಳನ್ನು ಸೇರಿಸಿ ಕ್ಷಿಪಣಿಗೆ 'ಬ್ರಹ್ಮೋಸ್' ಎಂದು ನಾಮಕರಣ ಮಾಡಲಾಯಿತು. ಭಾರತಕ್ಕಿದ್ದ ಕ್ಷಿಪಣಿ ಕೊರತೆಯನ್ನು ಬ್ರಹ್ಮೋಸ್ ನೀಗಿತು.

ವಿಶೇಷವೆಂದರೆ, ಬ್ರಹ್ಮೋಸ್ ತಯಾರಿಗೆ ಬೇಕಾಗುವ ಶೇ.85ರಷ್ಟು ಉಪಕರಣಗಳನ್ನು ಭಾರತದಲ್ಲೇ ಉತ್ಪಾದಿಸಲಾಗುತ್ತಿದೆ. ಇದೀಗ ಹೊರದೇಶಗಳೂ ಬ್ರಹ್ಮೋಸ್‌ನ ಖರೀದಿಗೆ ಆಸಕ್ತಿ ತೋರಿದ್ದು, ಇಂಡೋನೇಷ್ಯಾ ಮತ್ತು ಫಿಲಿಪೈನ್ಸ್ ದೇಶಗಳು ಈ ನಿಟ್ಟಿನಲ್ಲಿ ಒಪ್ಪಂದ ಮಾಡಿಕೊಂಡಿವೆ. ಬೇಡಿಕೆ ಹೆಚ್ಚಾಗಿರುವ ಕಾರಣದಿಂದ ಮತ್ತೊಂದು ಉತ್ಪಾದನಾ ಘಟಕವು ಲಖನೌನ ರಕ್ಷಣಾ ಕಾರಿಡಾರ್‌ನಲ್ಲಿ ತಲೆಯೆತ್ತುತ್ತಿದೆ. ಆಪರೇಷನ್ ಸಿಂದೂರ್ ಕಾರ್ಯಾಚರಣೆಯಲ್ಲಿ ಪಾಕಿಸ್ತಾನದ 9 ವೈಮಾನಿಕ ನೆಲೆಗಳನ್ನು ಧ್ವಂಸಗೊಳಿಸಲು ಬ್ರಹ್ಮೋಸ್ ಸೂಪರ್‌ಸಾನಿಕ್ ಮಿಸೈಲ್ ವ್ಯವಸ್ಥೆಯು ಬ್ರಹ್ಮಾಸ್ತ್ರದ ರೀತಿಯಲ್ಲಿ ಕೆಲಸ ಮಾಡಿತು. ವಾಯುಪಡೆಯು ಇದರ ನೆರವಿನಿಂದಾಗಿ, ಪಾಕಿಸ್ತಾನದ ಒಳಗೆ ಪ್ರವೇಶಿಸದೆಯೇ ಅದರ ನೆಲೆಗಳ ಮೇಲೆ ಮಾರಕ ದಾಳಿಯನ್ನು ನಡೆಸಲು ಸಾಧ್ಯವಾಯಿತು ಹಾಗೂ ಪಾಕಿಸ್ತಾನವು ಕೇವಲ ಮೂರೂವರೆ ದಿನದಲ್ಲೇ ಕದನವಿರಾಮಕ್ಕೆ ಗೋಗರೆಯುವಂತಾಯಿತು! 2004ರಿಂದ 2018ರವರೆಗೆ, ಈ ಮಿಸೈಲ್ ಸಿದ್ಧವಾದ ತರುವಾಯ ಹಲವು ಬಗೆಯ ಪರೀಕ್ಷೆಗೆ ಒಳಪಟ್ಟಿತ್ತು. ಅಂತಿಮವಾಗಿ, ಪ್ರಧಾನಿ ಮೋದಿಯವರ ಅಧಿಕಾರಾವಧಿಯಲ್ಲಿ ಈ ಕ್ಷಿಪಣಿಯು ಪೂರ್ಣಪ್ರಮಾಣದ ಸೇನಾಸೇವೆಗೆ ಸೇರ್ಪಡೆಯಾಯಿತು.

ಆಕಾಶ್ ಕ್ಷಿಪಣಿ

ಇದು ಭಾರತದ ಡಿಆರ್‌ಡಿಒ ಸಂಸ್ಥೆ ಅಭಿವೃದ್ಧಿಪಡಿಸಿದ ಮತ್ತೊಂದು ಅಸ್ತ್ರ. ಮೇ 8ರ ರಾತ್ರಿ ಪಾಕಿಸ್ತಾನವು ಅಲೆ ಅಲೆಯಾಗಿ ರವಾನಿಸಿದ ಡ್ರೋನ್‌ಗಳನ್ನು ಹೊಡೆದುರುಳಿಸಿ ಭಾರತದ ಆಸ್ತಿಗಳನ್ನು ಕಾಪಾಡುವಲ್ಲಿ ಇದು ಮಹತ್ವದ ಪಾತ್ರವನ್ನು ವಹಿಸಿತು. ಕೇವಲ 2.5 ಕೋಟಿ ರು. ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಕ್ಷಿಪಣಿಯು ದೇಶದ ಬತ್ತಳಿಕೆಯಲ್ಲಿನ ಪ್ರಮುಖ ಅಸ್ತ್ರವಾಗಿ ಹೊರಹೊಮ್ಮಿದೆ.

ಡಿ-4 ವ್ಯವಸ್ಥೆ

ಇದೊಂದು ಡ್ರೋನ್ ನಿರೋಧಕ ವ್ಯವಸ್ಥೆ. ಇದನ್ನು ಡಿಆರ್‌ಡಿಒ ಅಭಿವೃದ್ಧಿಪಡಿಸಿದ್ದರೆ, 'ಮೇಕ್ ಇನ್ ಇಂಡಿಯಾ' ಉಪಕ್ರಮದ ಅಡಿಯಲ್ಲಿ ಬಿಇಎಲ್ ಸಂಸ್ಥೆ ಇದನ್ನು ನಿರ್ಮಿಸುತ್ತಿದೆ. ಆಪರೇಷನ್ ಸಿಂದೂರ ಕಾರ್ಯಾಚರಣೆಯ ವೇಳೆ, ಪಾಕಿಸ್ತಾನವು ತೂರಿಬಿಡುತ್ತಿದ್ದ ಟರ್ಕಿ ನಿರ್ಮಿತ ಡ್ರೋನ್‌ಗಳನ್ನು ಪತ್ತೆಹಚ್ಚಿ ಹೊಡೆದುರುಳಿಸುವಲ್ಲಿ ಹಾಗೂ ಪಾಕ್ ಸೇನೆಯ ರಣತಂತ್ರವನ್ನು ನಿಷ್ಫಲಗೊಳಿಸಿ ನಮ್ಮ ವೈಮಾನಿಕ ವ್ಯವಸ್ಥೆಗಳನ್ನು ಕಾಪಾಡುವಲ್ಲಿ ಇದು ಮಹತ್ವದ ಪಾತ್ರ ವಹಿಸಿತು. ಅಪ್ಪಟ ಭಾರತೀಯ ತಂತ್ರಜ್ಞಾನದಿಂದ ತಯಾರಾದ ಈ ಡ್ರೋನ್-ನಿರೋಧಕ ವ್ಯವಸ್ಥೆಯು 'ಆತ್ಮನಿರ್ಭರ ಭಾರತ' ಪರಿಕಲ್ಪನೆಗೆ ಮತ್ತೊಂದು ಕೊಡುಗೆಯಾಗಿದೆ.

ನೇತ್ರ ಎಂಬ ಪ್ರತ್ಯಸ್ತ್ರ

ಡಿಆರ್‌ಡಿಒ ಅಭಿವೃದ್ಧಿಪಡಿಸಿರುವ 'ನೇತ್ರ' AEWC ವ್ಯವಸ್ಥೆಯು, ಆಪರೇಷನ್ ಸಿಂದೂರ ಕಾರ್ಯಾಚರಣೆಯ ಸಮಯದಲ್ಲಿ ವಾಯುಗಾಮಿ ಕಣ್ಗಾವಲು ಮತ್ತು ಸಮನ್ವಯ ಸಾಧಿಸಲು ಅನಿವಾರ್ಯವಾಗಿತ್ತು. ಪಾಕಿಸ್ತಾನದ ವಿರುದ್ಧದ ಸಂಘರ್ಷವು ಏಕಕಾಲದಲ್ಲಿ ಬಹುವಲಯಗಳಿಗೆ ಹರಡುವ ಬೆದರಿಕೆಯಿತ್ತು. ಈ ಸಮಸ್ಯೆಗೆ ಪರಿಹಾರವಾಗಿ ಭಾರತದ ಸ್ಥಳೀಯ 'ನೇತ್ರ' ವಾಯುಗಾಮಿ ಆರಂಭಿಕ ಎಚ್ಚರಿಕೆ ಮತ್ತು ನಿಯಂತ್ರಣ (AEWC) ವ್ಯವಸ್ಥೆಯು ಶತ್ರುಗಳ ಚಲನವಲನಗಳ ಮೇಲೆ ನಿಗಾ ಇರಿಸಿ ಪ್ರತಿದಾಳಿಗೆ ಸಜ್ಜುಗೊಳಿಸುತ್ತಿತ್ತು.

ಸ್ಕೈ ಸ್ಟ್ರೈಕರ್ ಡ್ರೋನ್

ಭಾರತ ಮತ್ತು ಇಸ್ರೇಲ್‌ನ ಜಂಟಿ ಸಹಯೋಗದಲ್ಲಿ ರೂಪುಗೊಂಡಿರುವ ಈ ಡ್ರೋನ್‌ಗಳನ್ನು, ಪಾಕಿಸ್ತಾನದ ಬಹಾವಲ್ಪುರ್ ಮತ್ತು ಮುರಿಡ್ಕೆಯಲ್ಲಿನ ಭಯೋತ್ಪಾದಕ ಅಡ್ಡಾಗಳ ಮೇಲೆ ದಾಳಿ ಮಾಡಲು ಬಳಸಲಾಗಿತ್ತು. ಯುದ್ಧಭೂಮಿಯ ಮೇಲೆ ಸುಳಿದಾಡಲು, ಶತ್ರು ಗುರಿಗಳನ್ನು ಪತ್ತೆಹಚ್ಚಲು ಮತ್ತು ಆನ್‌ಬೋರ್ಡ್ ಸ್ಫೋಟಕಗಳಿಂದ ಅವನ್ನು ನಾಶಗೊಳಿಸಲು ಅನುವಾಗುವಂತೆ ಈ ಮಾನವರಹಿತ ವಾಯುವಾಹನಗಳನ್ನು (ಯುಎವಿ) ವಿನ್ಯಾಸಗೊಳಿಸಲಾಗಿದೆ. ಆಪರೇಷನ್ ಸಿಂದೂರ ಕಾರ್ಯಾಚರಣೆಯ ವೇಳೆ, ದೇಶೀಯವಾಗಿ ನಿರ್ಮಿಸಿದ ಈ ಡ್ರೋನ್‌ಗಳ ಅಟ್ಟಹಾಸಕ್ಕೆ ಪಾಕಿಸ್ತಾನಿಗಳು ನಿರುತ್ತರರಾಗಿದ್ದು ಭಾರತದ ಪಾಲಿಗೆ ಹೆಮ್ಮೆಯ ಸಂಗತಿ.

ರಫೇಲ್ ಖರೀದಿ

"ಫೈಟರ್ ಜೆಟ್ ಖರೀದಿಸಲು ಭಾರತದ ಬಳಿ ಹಣವೆಲ್ಲಿದೆ?" ಎನ್ನುವ ಮೂಲಕ 2013ರಲ್ಲಿ ಅಂದಿನ ರಕ್ಷಣಾ ಸಚಿವ ಎ.ಕೆ. ಆ್ಯಂಟನಿಯವರು ಜೆಟ್ ಖರೀದಿ ವಿಷಯದಲ್ಲಿ ದೇಶಕ್ಕೆ 'ತಾರಮ್ಮಯ್ಯ' ಮಾಡಿದ್ದರು. ಆದರೆ 2014ರಲ್ಲಿ ಬಂದ ಮೋದಿ ಸರಕಾರ ನೇರವಾಗಿ ಫ್ರೆಂಚ್ ಸರಕಾರದೊಂದಿಗೆ ಖರೀದಿ ಸಂಬಂಧದ ಒಡಂಬಡಿಕೆಗೆ ಸಹಿ ಹಾಕಿ, 28 ರಫೇಲ್ ವಿಮಾನಗಳನ್ನು ಖರೀದಿಸಿತು. ಪಾಕಿಸ್ತಾನದ ಮೇಲಿನ ಪ್ರತಿದಾಳಿಗೆ ಭಾರತದ ವೈಮಾನಿಕ ಪಡೆಗೆ ವಿಶೇಷ ಮೊನಚು ನೀಡಿದ್ದು ಈ ರಫೇಲ್ ವಿಮಾನಗಳೇ.

ಎಸ್-400 ವ್ಯವಸ್ಥೆ

ರಷ್ಯಾದಿಂದ ಖರೀದಿಸಲಾಗಿರುವ 'ಎಸ್-400' ಸಾಧನವು ಅತ್ಯಂತ ಮುಂದುವರಿದ ವಾಯುರಕ್ಷಣಾ ವ್ಯವಸ್ಥೆ. ಇದಕ್ಕೆ ಭಾರತವು 'ಸುದರ್ಶನ ಚಕ್ರ' ಎಂದು ಮರುನಾಮಕರಣ ಮಾಡಿದೆ. ಇದೊಂದು ಕ್ಷಿಪಣಿ ವ್ಯವಸ್ಥೆಯಾಗಿದ್ದು, ರಹಸ್ಯ ವಿಮಾನಗಳು, ಡ್ರೋನ್‌ಗಳು, ಕ್ರೂಸ್ ಕ್ಷಿಪಣಿಗಳು ಮತ್ತು ಬ್ಯಾಲಿಸ್ಟಿಕ್ ಕ್ಷಿಪಣಿಗಳು ಸೇರಿದಂತೆ ವೈಮಾನಿಕ ಬೆದರಿಕೆಗಳನ್ನು ಪತ್ತೆಹಚ್ಚಿ, ಅದರ ಹಿಂದೆ ಬಿದ್ದು ನಾಶಮಾಡುವ ಸಾಮರ್ಥ್ಯವನ್ನು ಹೊಂದಿದೆ. ರಷ್ಯಾ ಉತ್ಪಾದಿಸುವ ಈ ರಕ್ಷಣಾ ವ್ಯವಸ್ಥೆಯನ್ನು ಖರೀದಿಸುವ ರಾಷ್ಟ್ರಗಳ ಮೇಲೆ ಅಮೆರಿಕವು ಆರ್ಥಿಕ ದಿಗ್ಬಂಧನವನ್ನು ಹೇರುತ್ತಿತ್ತು. ಆದರೆ, ಭಾರತದ ಸುರಕ್ಷತೆಗೆ ಇದರ ಅಗತ್ಯವಿರುವುದನ್ನು ಮೋದಿಯವರು ಮನವರಿಕೆ ಮಾಡಿಕೊಟ್ಟರು ಹಾಗೂ ಇದು ಎಂಥ ಅದ್ಭುತ ಕೆಲಸ ಮಾಡುತ್ತದೆ ಎಂಬುದನ್ನು ಮೂರೇ ದಿನಗಳಲ್ಲಿ ಜಗತ್ತಿಗೆ ತೋರಿಸಿಕೊಟ್ಟರು.

'ಆತ್ಮನಿರ್ಭರ್ ಭಾರತ್' ಮತ್ತು 'ಮೇಕ್ ಇನ್ ಇಂಡಿಯಾ' ಎಂಬ ಎರಡು ಉಪಕ್ರಮಗಳು ಕೂಡ ಪ್ರಮುಖ ವಿರೋಧ ಪಕ್ಷಗಳ ಟೀಕೆಗೆ ಒಳಗಾಗಿದ್ದವು. ವಿಪಕ್ಷ ನಾಯಕ ರಾಹುಲ್ ಗಾಂಧಿಯವರು ಸಂಸತ್ತಿನಲ್ಲಿ ಮಾತನಾಡುತ್ತಾ, "ಮೇಕ್ ಇನ್ ಇಂಡಿಯಾ ಯಶಸ್ವಿಯಾಗಲು ಅಸಾಧ್ಯ" ಎಂದು ಬಲವಾಗಿ ಪ್ರತಿಪಾದಿಸಿದ್ದರು ಹಾಗೂ 'ಆತ್ಮನಿರ್ಭರ್ ಭಾರತ್' ಅನ್ನು 'ಚೀನಾ ನಿರ್ಭರ್ ಭಾರತ್' ಎಂದು ಲೇವಡಿ ಮಾಡಿದ್ದರು.

ಆಪರೇಷನ್ ಸಿಂದೂರ ಕಾರ್ಯಾಚರಣೆಯಿಂದಾಗಿ, ಭಾರತೀಯ ರಕ್ಷಣಾ ಉಪಕರಣಗಳಿಗೆ ವಿಶ್ವದ ಬಾಗಿಲು ತೆರೆದಂತಾಗಿದೆ. ಅತ್ಯಾಧುನಿಕ ಉಪಕರಣಗಳ ಸಂಶೋಧನೆ ಮತ್ತು ಅಭಿವೃದ್ಧಿಗೆ ಸುವರ್ಣಕಾಲ ಪ್ರಾಪ್ತವಾಗಿದೆ. ಆತ್ಮನಿರ್ಭರತೆಯ ಮಂತ್ರಜಪದಿಂದಾಗಿ ಭಾರತದ ರಕ್ಷಣಾ ವ್ಯವಸ್ಥೆಗೆ ಇತರ ದೇಶವನ್ನು ಅಂಗಲಾಚುವ ಪರಿಸ್ಥಿತಿ ಇಲ್ಲದಾಗಿದೆ. ನಮ್ಮ ರಕ್ಷಣೆಯು ನಮ್ಮ ಹೊಣೆ ಮಾತ್ರವೇ, ಅದಕ್ಕಾಗಿ ಬಲಿಷ್ಠ ರಾಷ್ಟ್ರಗಳನ್ನು ನಂಬಿಕೊಂಡು ಕೂರುವ ಕಾಲವಿದಲ್ಲ. ಭಾರತವು ರಕ್ಷಣಾ ಉಪಕರಣಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸುತ್ತಿರುವುದರಿಂದ, ಇತರ ದೇಶಗಳು ನಮ್ಮ ಮೇಲೆ ಒತ್ತಡ ಹಾಕುವುದಕ್ಕೆ ಅಥವಾ ತುರ್ತು ಸಮಯದಲ್ಲಿ ಸೇವೆ ನೀಡಲು ಕೈಕೊಡುವಂಥ ಚೇಷ್ಟೆಗೆ ಅವಕಾಶವಿಲ್ಲದಾಗಿದೆ. ಇದಕ್ಕೆಲ್ಲಾ ಕಾರಣ, ನಮ್ಮ ಕಾಲ ಮೇಲೆ ನಾವು ನಿಲ್ಲಲು ಆಗಿರುವುದೇ ಆಗಿದೆ. ಆತ್ಮನಿರ್ಭರ್ ಭಾರತ್ ಮತ್ತು ಮೇಕ್ ಇನ್ ಇಂಡಿಯಾ ಉಪಕ್ರಮಗಳು ಇದರ ನೇಪಥ್ಯದಲ್ಲಿವೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ, ಅಲ್ಲವೇ?!

(ಲೇಖಕರು ಬಿಜೆಪಿಯ ವಕ್ತಾರರು)

ಭಟ್ಟರ್ ಸ್ಕಾಚ್

- **ಹರಿ ಓಂ ಶಾಸ್ತ್ರೀ, ಶಂಕರಪುರ**
  ಭಟ್ರೇ, ಐಪಿಎಲ್ ಫೈನಲ್‌ನಲ್ಲಿ ಆರ್‌ಸಿಬಿ ಗೆಲುವನ್ನು ಸಂಭ್ರಮಿಸಲು ಮಲ್ಯ ವೇಷ ಮರೆಸಿ ಬೆಂಗಳೂರಿಗೆ ಬರುವ ಸಾಧ್ಯತೆ ಇದೆಯಾ?
  – **ಕಪ್ ಎತ್ತಿಕೊಂಡು ಓಡಿಹೋಗದಿದ್ದರೆ ಸಾಕು!**

- **ರಾಘಣ್ಣ, ಮೈಸೂರು**
  ಭಟ್ರೇ, ಅಂಗ, ವಂಗ (ಬಂಗಾಳ), ಕಳಿಂಗ (ಒರಿಸ್ಸಾ) ರಾಜ್ಯದವರು ಕನ್ನಡದ ತಂಟೆಗೆ ಬಂದವರಲ್ಲ, ಈಗ ಸಮಸ್ಯೆ ಎದುರಾಗಿರುವುದು ಯಾರಿಂದ?
  – **ಕೊಂಗರಿಂದ!**

- **ಸರ್ಪಭೂಷಣ ಶಾಸ್ತ್ರೀ, ನಂಜನಗೂಡು**
  ಭಟ್ರೇ, ಔಟ್ ಲಾವ್ ಮತ್ತು ಇನ್ ಲಾವ್ ಮಧ್ಯೆ ವ್ಯತ್ಯಾಸವೇನು?
  – **ಔಟ್ ಲಾವ್‌ಗಳನ್ನು ಸಹಿಸಿಕೊಳ್ಳಬಹುದು!**

- **ರವಿ, ಸಕ್ಕರೆಪಟ್ಟಣ**
  ಭಟ್ರೇ, ನನ್ನ ಅತ್ತೆ ಏಂಜಲ್ ಅಂತ ಇಲ್ಲೊಬ್ಬ ಹೇಳ್ತಾನಲ್ಲ?
  – **ನೀನು ಅದೃಷ್ಟವಂತ, ನನ್ನ ಅತ್ತೆ ಇನ್ನೂ ಬದುಕಿದ್ದಾಳೆ ಅಂತ ಹೇಳಬೇಕಿತ್ತು!**

- **ಸುಧಾಕರ ರೆಡ್ಡಿ, ಯಲಹಂಕ**
  ಭಟ್ರೇ, ಕೆಲವರು ತಮ್ಮ ಹೆಂಡತಿ ಜತೆ ಮಾತಾಡುವುದಿಲ್ಲವಲ್ಲ?
  – **ಅವರು ಹೆಂಡತಿ ಮಾತಾಡುತ್ತಿರುವಾಗ ಮಧ್ಯೆ ಬಾಯಿ ಹಾಕಲು ಇಷ್ಟಪಡುವುದಿಲ್ಲ!**

- **ಜೆ.ಮಧು, ತುಮಕೂರು**
  ಭಟ್ರೇ, ನಾನು ನಿದ್ದೆಯಲ್ಲಿ ಸಹಜವಾಗಿ ಸತ್ತು ಹೋಗಬೇಕು ಎಂದು ನನ್ನ ಸ್ನೇಹಿತನೊಬ್ಬ ಹೇಳ್ತಾನಲ್ಲ?
  – **ಅದು ಈಡೇರದಿದ್ದರೆ, ಆತನನ್ನು ಸಾಯಿಸಲು ನೀನಾದರೂ ಸಹಾಯ ಮಾಡಬೇಕಿತ್ತು!**

- **ಮಮತಾ ಹೆಗಡೆ, ಶಿರಸಿ**
  ಭಟ್ರೇ, ಹೆಂಗಸರು ಹೆಚ್ಚಾಗಿ ಬಳಸುವ ಸಾಮಾನ್ಯ ಪಿನ್ನನ್ನು ಸೇಫ್ಟಿ ಪಿನ್ ಅಂತ ಯಾಕೆ ಕರೆಯುತ್ತಾರೆ?
  – **ಅದು ಸೇಫ್ ಆದ ಜಾಗವನ್ನು ರಕ್ಷಿಸುತ್ತದಲ್ಲ?**

- **ಬೆಂ.ಮು.ಮಾರುತಿ, ಬೆಂಗಳೂರು**
  ಭಟ್ರೇ, ಕನ್ನಡದಿಂದ ತಮಿಳು ಭಾಷೆ ಹುಟ್ಟಿತು ಎಂದು ಕನ್ನಡ ನಟರು ಟಾಂಗ್ ಕೊಡಬಹುದಿತ್ತಲ್ಲ?
  – **ಅಷ್ಟು ಮಾಡಿದ್ದರೆ ವಿವಾದ ಮುಗಿದು ಹೋಗುತ್ತಿತ್ತಲ್ಲ?!**

- **ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)**
  ಭಟ್ರೇ, ಕೋರ್ಟ್‌ನಲ್ಲಿ ಜಡ್ಜ್ ಎದುರು ವಕೀಲರು ಸುಳ್ಳು ಹೇಳ್ತಾರಲ್ಲಾ ಅವ್ರಿಗೆ ಶಿಕ್ಷೆ ಆಗಲ್ವಾ?
  – **ಅದಕ್ಕೆ ಫೀಸ್ ತೆಗೆದುಕೊಳ್ತಾರಲ್ಲಾ?!**

- **ದೇಶಹಳ್ಳಿ ಗುರು, ಬೆಂಗಳೂರು**
  ಭಟ್ರೇ, ಅತ್ತೆ ಮತ್ತು ವಕೀಲ ಮುಳುಗುತ್ತಿರುವಾಗ ನೀವು ಯಾರನ್ನು ರಕ್ಷಿಸುತ್ತೀರಿ?
  – **ನಂಗೆ ಈಜು ಬರೊಲ್ಲ ಅಂತ ಬೊಬ್ಬೆ ಹೊಡೆಯುತ್ತೇನೆ!**

ಕೊನೆಗೂ ಅವರಿಗೆ ಪದ್ಮಶ್ರೀ ಬರಲಿಲ್ಲ...

ಅನಂತ ನಾಗ್ ಕೇವಲ ಒಳ್ಳೆಯ ನಟ, ಅಭಿನಯವನ್ನು ಮಾತ್ರ ಮಾಡಬಲ್ಲರು ಎಂದರೆ ಅದು ತಪ್ಪು. ಅವರು ಹಾಡಬಲ್ಲರು, ತಬಲಾ ನುಡಿಸಬಲ್ಲರು, ಸಂಸ್ಕೃತ ಶ್ಲೋಕಗಳನ್ನು ಹೇಳಬಲ್ಲರು, ರುದ್ರ, ಅಥರ್ವಶೀರ್ಷ, ಮಂತ್ರಪುಷ್ಪವನ್ನು ಪಠಿಸಬಲ್ಲರು. ಭಗವದ್ಗೀತೆಯ ಶ್ಲೋಕಗಳು ಅವರಿಗೆ ಕಂಠಪಾಠ.

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಸುಮಾರು ನಾಲ್ಕು ದಶಕದ ಹಿಂದಿನ ಮಾತು. ಆಗ ಹೊತ್ತೋಟ ಮಂಜುನಾಥ ಭಾಗವತರ ಬಳಿ ಯಕ್ಷಗಾನ ಕಲಿಯುತ್ತಿದ್ದ ಕಾಲ. 'ಸಮಯ ಸಮೂಹ' (ಸಹ್ಯಾದ್ರಿ ಮಕ್ಕಳ ಯಕ್ಷಗಾನ ಸಮೂಹ) ಎಂಬ ಹೆಸರಿನಲ್ಲಿ ಆಗಾಗ ಯಕ್ಷಗಾನ ಪ್ರದರ್ಶನವನ್ನು ನಮ್ಮ ತಂಡ ಕೊಡುತ್ತಿತ್ತು. ಒಮ್ಮೆ ಸಿದ್ದಾಪುರದಲ್ಲಿ ನಮ್ಮ ಯಕ್ಷಗಾನ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಅಂದು ಚೌಕಿಯಲ್ಲಿ ಬಣ್ಣಕ್ಕೆ ಕುಳಿತಾಗ, ಸಮೂಹದ ಮುಂದಾಳತ್ವ ವಹಿಸಿದ್ದ ಶ್ರೀಮತಿ ವಿಜಯನಳಿನಿ ಮತ್ತು ಪ್ರೊಫೆಸರ್ ರಮೇಶ್ ದಂಪತಿ ಚೌಕಿಗೆ ಬಂದು, ''ಇವತ್ತು ನಿಮಗೆಲ್ಲ ಒಂದು ಸರ್‌ಪ್ರೈಸ್ ಇದೆ, ಕನ್ನಡ ಚಲನಚಿತ್ರರಂಗದ ಪ್ರಸಿದ್ಧ ನಟರೊಬ್ಬರು ನಮ್ಮ ಯಕ್ಷಗಾನವನ್ನು ವೀಕ್ಷಿಸಲು ಬರುತ್ತಿದ್ದಾರೆ, ಬರಲು ಎಷ್ಟು ಹೊತ್ತಾಗುತ್ತದೆಯೋ ಗೊತ್ತಿಲ್ಲ, ಎಷ್ಟು ಹೊತ್ತು ಕುಳಿತು ಆಟ ನೋಡುತ್ತಾರೆಯೋ ಗೊತ್ತಿಲ್ಲ, ಯಾವುದಕ್ಕೂ ಎಲ್ಲರೂ ಚೆನ್ನಾಗಿ ಮಾಡಿ'' ಎಂದು ಹೇಳಿದರು. ಯಾರು ಎಂಬ ಗುಟ್ಟು ಮಾತ್ರ ಬಿಟ್ಟುಕೊಟ್ಟಿರಲಿಲ್ಲ.

ಯಕ್ಷಗಾನ ಆರಂಭವಾಯಿತು. ಅಂದು ಕಂಸ ವಧೆ ಪ್ರಸಂಗವಾದದ್ದರಿಂದ ಬಲರಾಮನ ಪಾತ್ರ ಮಾಡಿದ್ದ ನನ್ನ ಪ್ರವೇಶ ಪ್ರಥಮಾರ್ಧದ ನಂತರವೇ ಇತ್ತು. ಬಲರಾಮನ ಪ್ರವೇಶ ಮಾಡಿ, ರಂಗಸ್ಥಳದಲ್ಲಿ ನಿಂತು ಸಭಿಕರ ಕಡೆ ನೋಡಿದಾಗ, ಮೊದಲನೇ ಸಾಲಿನಲ್ಲಿ ಶುಭ್ರ, ಶ್ವೇತವರ್ಣದ ಜುಬ್ಬಾ ಪೈಜಾಮು ಧರಿಸಿದ್ದ ಸ್ಫುರದ್ರೂಪಿಯೊಬ್ಬರು ಕುಳಿತಿದ್ದರು. ನಮ್ಮ ಯಕ್ಷಗಾನ ನೋಡಲು ಬರಬೇಕಾಗಿದ್ದ ಚಿತ್ರನಟ ಅವರೇ ಎಂಬುದು ಕ್ಷಣಾರ್ಧದಲ್ಲಿ ಗ್ರಹಿಕೆಗೆ ಬಂತು. ಒಮ್ಮೆಲೇ ಕೈಕಾಲು ಥರಗುಟ್ಟಲು ಆರಂಭಿಸಿದವು. ಇಂಥ ಅಗ್ರಗಣ್ಯ ನಟನ ಎದುರು ನಾನು ಅಭಿನಯಿಸುವುದಲ್ಲ, ನಿಲ್ಲಲೂ ಸಾಧ್ಯವಿಲ್ಲ ಎಂದೆನಿಸಿಬಿಟ್ಟಿತು. ಅಂದು ಏನು ಮಾತನಾಡಿದೆನೋ, ಏನು ಅಭಿನಯ ಮಾಡಿದೆನೋ, ಒಂದೂ ನೆನಪಿಲ್ಲ.

ಅಂತೂ ಇಂತೂ ಅಂದಿನ ಪ್ರಸಂಗದ ಪಾತ್ರ ಮುಗಿಸಿ ರಂಗಸ್ಥಳ ಇಳಿಯುತ್ತಿದ್ದಂತೆ, ''ಎಲ್ಲರೂ ಗ್ರೂಪ್ ಫೋಟೋಕ್ಕೆ ಬಂದು ನಿಲ್ಲಬೇಕು'' ಎಂದು ಅಪ್ಪಣೆಯಾಯಿತು. ನಮ್ಮ ತಂಡದವರೆಲ್ಲ ಸಮೂಹ ಛಾಯಾಚಿತ್ರಕ್ಕಾಗಿ ನಿಲ್ಲುತ್ತಿದ್ದಂತೆಯೇ, ಅಷ್ಟು ಹೊತ್ತೂ ಎದುರು ಕುಳಿತಿದ್ದ ನಟ ಅನಂತ ನಾಗ್ ವೇದಿಕೆಯ ಮೇಲೆ ಬಂದರು. ಎಲ್ಲ ಬಾಲ ಕಲಾವಿದರ ಕೈಕುಲುಕಿ, ಚೆನ್ನಾಗಿ ಮಾಡಿದ್ದೀರಿ ಎಂದು ಹೇಳುತ್ತಾ ಮಧ್ಯದಲ್ಲಿ ನಿಂತರು. ಅಂದು ನಾವೆಲ್ಲ ಬಣ್ಣ ಬಣ್ಣದ ಯಕ್ಷಗಾನದ ವೇಷ ತೊಟ್ಟು ಫೋಟೋಗೆ ನಿಂತಿದ್ದೆವು, ಅನಂತ ನಾಗ್ ತಮ್ಮ ಬಿಳಿಯ ಉಡುಪಿನಲ್ಲಿ ನಿಂತಿದ್ದರು. ಇಂದಿಗೂ ಆ ಭಾವಚಿತ್ರದಲ್ಲಿ ಎದ್ದು ಕಾಣುವುದು ಅನಂತ ನಾಗ್ ಅವರೇ ಹೊರತು ಉಳಿದವರ್ಯಾರೂ ಅಲ್ಲ. ಅಂದು ಮೊದಲ ಬಾರಿಗೆ ನಾನು ಅನಂತ ನಾಗ್ ಅವರನ್ನು ಎದುರು ಬದುರಾಗಿ ಕಂಡದ್ದು. ಅಂದು ನನ್ನ ಪಾತ್ರ ಚೆನ್ನಾಗಿ ಆಗಿರಲಿಲ್ಲ ಎಂಬ ಸತ್ಯ ನನಗೆ ತಿಳಿದಿದ್ದರೂ, ಅವರು ಆಡಿದ 'ಚೆನ್ನಾಗಿ ಮಾಡಿದ್ದೀರಿ' ಎಂಬ ಎರಡೇ ಪದ ಕೆಲವು ತಿಂಗಳುಗಳವರೆಗೆ ನನಗೆ ಪ್ರೋತ್ಸಾಹದ ಚುಚ್ಚುಮದ್ದಾಗಿತ್ತು. ಅಂದು ಮೊದಲಬಾರಿ ನಾನು ಒಬ್ಬ ಜನಪ್ರಿಯ ಚಿತ್ರನಟನನ್ನು, ಅದರಲ್ಲೂ ನನಗೆ ಇಷ್ಟವಾದ ನಟನನ್ನು ಎದುರುಬದುರಾಗಿ ಭೇಟಿಯಾಗಿದ್ದೆ. ಅದರ ನಂತರ ಮತ್ತೊಮ್ಮೆ ಅವರನ್ನು ಇನ್ನೂ ಹತ್ತಿರದಿಂದ ಭೇಟಿಯಾಗುವ ಅವಕಾಶ ಸಿಕ್ಕಿತ್ತು, ಅದು ಈ ಸಂದರ್ಭದಲ್ಲಿ ಅಪ್ರಸ್ತುತ.

ಒಂದೇ ವ್ಯಕ್ತಿಯಲ್ಲಿ ಎಷ್ಟು ಗುಣಗಳು ಅಡಕವಾಗಿರಬಲ್ಲದು ಎಂಬುದಕ್ಕೆ ಜೀವಂತ ಉದಾಹರಣೆ ಅನಂತ್ ನಾಗ್. ವಿದ್ಯೆ, ವಿಧೇಯತೆ, ವಿವೇಕ, ಸಮಯ ಪ್ರಜ್ಞೆ, ಸ್ಥಿತಪ್ರಜ್ಞೆ, ಭ್ರಾತೃತ್ವ, ಕಲೆ, ನೇರ ನಡೆ-ನುಡಿ, ತಾಳ್ಮೆ ಎಲ್ಲವೂ ಅಡಕವಾಗಿರುವವ ಕೆಲವೇ ಜನರನ್ನು ಪಂಕ್ತಿಯಲ್ಲಿ ನಿಲ್ಲಿಸಿದರೆ, ಅದರಲ್ಲಿ ಸ್ಥಾನ ಪಡೆಯುವವರು ಅನಂತ ನಾಗ್. ಪ್ರಾಥಮಿಕ ಶಾಲೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗುತ್ತಿದ್ದಂಥ ವಿದ್ಯಾರ್ಥಿ. ನಂತರ ಮುಂಬೈಗೆ ಹೋಗಿ, ಪ್ರೌಢ ಶಿಕ್ಷಣ ಪಡೆಯುವಾಗ ಹತ್ತನೇ ತರಗತಿಯಲ್ಲಿ ಅನುತ್ತೀರ್ಣ. ಇಂಗ್ಲಿಷ್ ಎಂದರೆ ಮೈಲುದ್ದ ಓಡುತ್ತಿದ್ದ ಅವರು ಇಂಗ್ಲಿಷ್ ಸಿನಿಮಾಗಳನ್ನು ನೋಡಿ, ಆ ಭಾಷೆಯ ಕುರಿತು ಆಸಕ್ತಿ ಹೊಂದಿ, ಅದನ್ನು ಕಲಿಯಲು ಆರಂಭಿಸಿದರು. ಚಿತ್ರರಂಗಕ್ಕೆ ಕಾಲಿಡುವುದಕ್ಕಿಂತ ಮೊದಲು ನಾಲ್ಕೈದು ವರ್ಷ ರಂಗಭೂಮಿಯಲ್ಲಿ ಕೆಲಸ ಮಾಡಿದವರು. ಕನ್ನಡ, ಹಿಂದಿ, ಮರಾಠಿ, ಕೊಂಕಣಿ ಭಾಷೆಯಲ್ಲಿ ನಾಟಕ ಮಾಡುತ್ತಿದ್ದರು. ಅಮೋಲ್ ಪಾಲೇಕರ್, ಸತ್ಯದೇವ್ ದುಬೆ, ಗಿರೀಶ್ ಕಾರ್ನಾಡ್ ಜತೆ ಅಭಿನಯಿಸಿದವರು. ಆ ಐದು ವರ್ಷಗಳಲ್ಲಿ ಸುಮಾರು ಎರಡು ನೂರಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿ ಸೈ ಎನಿಸಿಕೊಂಡವರು.

ಅನಂತ ನಾಗ್ ಕೇವಲ ಒಳ್ಳೆಯ ನಟ, ಅಭಿನಯವನ್ನು ಮಾತ್ರ ಮಾಡಬಲ್ಲರು ಎಂದರೆ ಅದು ತಪ್ಪು. ಅವರು ಹಾಡಬಲ್ಲರು, ತಬಲಾ ನುಡಿಸಬಲ್ಲರು, ಸಂಸ್ಕೃತ ಶ್ಲೋಕಗಳನ್ನು ಹೇಳಬಲ್ಲರು, ರುದ್ರ, ಅಥರ್ವಶೀರ್ಷ, ಮಂತ್ರಪುಷ್ಪವನ್ನು ಪಠಿಸಬಲ್ಲರು. ಭಗವದ್ಗೀತೆಯ ಶ್ಲೋಕಗಳು ಅವರಿಗೆ ಕಂಠಪಾಠ. ಅಷ್ಟೇ ಅಲ್ಲ, ಅದರ ಅರ್ಥವನ್ನೂ ಅವರು ವಿವರಿಸಬಲ್ಲರು.

ಅನಂತ ನಾಗ್ 1948ರಂದು ಮುಂಬೈನ ಚೌಪಾಟಿಯಲ್ಲಿ ಶ್ರೀಮತಿ ಆನಂದಿ ಮತ್ತು ಶ್ರೀ ಸದಾನಂದ ನಾಗರಕಟ್ಟೆಯವರ ಸುಪುತ್ರನಾಗಿ ಜನಿಸಿದರು. ಅಕ್ಕ ಶ್ಯಾಮಲಾ, ತಮ್ಮ ಶಂಕರ್ ನಾಗ್. ಮಡದಿ ಗಾಯತ್ರಿ. 1973ರಲ್ಲಿ ನಂಜರಾಜ್ ಅರಸ್ ನಿರ್ದೇಶನದಲ್ಲಿ ಬಿಡುಗಡೆಯಾದ 'ಸಂಕಲ್ಪ' ಇವರ ಮೊದಲ ಚಿತ್ರ. ಒಂದು ವರ್ಷದ ನಂತರ ಶ್ಯಾಮ್ ಬೆನೆಗಲ್ ನಿರ್ದೇಶನದ 'ಅಂಕುರ್' ಚಿತ್ರದಿಂದ ಹಿಂದಿಗೂ ಪದಾರ್ಪಣೆ ಮಾಡಿದರು. ಶ್ಯಾಮ್ ಬೆನೆಗಲ್ ಜತೆ ಆರು ಚಿತ್ರಗಳಲ್ಲಿ ಕೆಲಸ ಮಾಡಿದರು. ಅವರ ಅಡ್ಡ ಹೆಸರಾದ 'ನಾಗರಕಟ್ಟೆ'ಯನ್ನು ಹಿಂದಿ ಚಿತ್ರರಂಗಕ್ಕೆ ಬೇಕಾಗಿ 'ನಾಗ್' ಎಂದು ಬದಲಾಯಿಸಿದ್ದು ಅದೇ ಶ್ಯಾಮ್ ಬೆನೆಗಲ್. ಇರಲಿ, ಅಲ್ಲಿಂದ ಹಿಂತಿರುಗಿ ನೋಡದ ಅವರು ಸುಮಾರು ಇನ್ನೂರ ಐವತ್ತಕ್ಕೂ ಹೆಚ್ಚು ಕನ್ನಡ, ಸುಮಾರು ಐವತ್ತರಷ್ಟು ಹಿಂದಿ, ಮಲಯಾಳಂ, ತೆಲುಗು, ತಮಿಳು, ಮರಾಠಿ ಚಿತ್ರಗಳಲ್ಲಿ ಅಭಿನಯಿಸಿ ಸೈ ಅನ್ನಿಸಿಕೊಂಡಿದ್ದಾರೆ.

'ಮಿಂಚಿನ ಓಟ', 'ಹೊಸ ನೀರು', 'ಅವಸ್ಥೆ', 'ಗಂಗವ್ವ ಗಂಗಾಮಾಯಿ' ಚಿತ್ರಗಳಲ್ಲಿನ ಅಭಿನಯಕ್ಕಾಗಿ ಕರ್ನಾಟಕ ರಾಜ್ಯ ಚಲನಚಿತ್ರದ 'ಶ್ರೇಷ್ಠ ನಟ' ಪ್ರಶಸ್ತಿ ಪಡೆದರೆ, 'ನಾ ನಿನ್ನ ಬಿಡಲಾರೆ', 'ಬರ', 'ಗೌರಿ ಗಣೇಶ', 'ಹೆಂಡ್ತಿಗ್ಹೇಳ್ಬೇಡಿ', 'ಉದ್ಭವ', 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರಗಳಿಗೆ ದಕ್ಷಿಣ ಭಾರತ ಫಿಲಂಫೇರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಜೀವಮಾನದ ಸಾಧನೆಗಾಗಿ ಡಾ. ವಿಷ್ಣುವರ್ಧನ್ ಪ್ರಶಸ್ತಿಯನ್ನೂ ಪಡೆದಿದ್ದಾರೆ. ಅವರು ಬರೆದಿರುವ 'ನನ್ನ ತಮ್ಮ ಶಂಕರ' ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಲಭಿಸಿದೆ.

ಇದರ ಹೊರತಾಗಿ ಅವರು ಅಭಿನಯಿಸಿದ 'ಬಯಲು ದಾರಿ', 'ಕನ್ನೇಶ್ವರ ರಾಮ', 'ನಾ ನಿನ್ನ ಬಿಡಲಾರೆ', 'ಚಂದನದ ಗೊಂಬೆ', 'ಬೆಂಕಿಯ ಬಲೆ', 'ನಾರದ ವಿಜಯ', 'ಬೆಳದಿಂಗಳ ಬಾಲೆ', 'ಇಬ್ಬನಿ ಕರಗಿತು', 'ಮುದುಡಿದ ತಾವರೆ ಅರಳಿತು', 'ಗಾಳಿಪಟ', 'ವಾಸ್ತು ಪ್ರಕಾರ', 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ: ಕಾಸರಗೋಡು', 'ಕೆಜಿಎಫ್' ಅಬ್ಬಾ, ಒಂದಾ, ಎರಡಾ... ನೂರಾರು ಜನಪ್ರಿಯ ಚಿತ್ರಗಳು. ಒಂದು ಕಾಲದಲ್ಲಿ ಅನಂತ ನಾಗ್ ಮತ್ತು ಜ್ಯೂಲಿ ಲಕ್ಷ್ಮೀ ಜೊತೆಯಾದ ಚಿತ್ರಗಳು ಎಂದರೆ ಗಲ್ಲಾಪೆಟ್ಟಿಗೆಯಲ್ಲಿ ಸೋಲಿಲ್ಲ ಎಂದೇ ಆಗಿತ್ತು. ಇಬ್ಬರೂ ಜೊತೆಯಾಗಿ ಇಪ್ಪತ್ತೈದು ಚಿತ್ರಗಳಲ್ಲಿ ನಟಿಸಿರುವುದು ಇದಕ್ಕೆ ಸಾಕ್ಷಿ. ನನ್ನ ದೃಷ್ಟಿಯಲ್ಲಿ ಅನಂತ ನಾಗ್ ಕನ್ನಡ ಚಿತ್ರರಂಗದ ಮೊದಲ 'ಚಾಕಲೇಟ್ ಹೀರೋ'. ನಂತರದ ದಿನಗಳಲ್ಲಿ ಅವರು ಹಾಸ್ಯಮಿಶ್ರಿತ ಹೀರೋ ಪಾತ್ರಕ್ಕೂ ಒಗ್ಗಿಕೊಂಡು ಸೈ ಎನ್ನಿಸಿಕೊಂಡರು.

ಅನಂತ ನಾಗ್ ಕರ್ನಾಟಕದ ರಾಜಕೀಯ ಪುಟಗಳಲ್ಲೂ ತಮ್ಮ ಹೆಸರನ್ನು ದಾಖಲಿಸಿದ್ದಾರೆ. 1994ರಲ್ಲಿ ಮಲ್ಲೇಶ್ವರಂ ವಿಧಾನಸಭೆ ಕ್ಷೇತ್ರದಿಂದ ಆರಿಸಿ ಬಂದು, ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ರಾಜಕೀಯ ತಮಗೆ ಹೇಳಿಸಿದ್ದಲ್ಲ ಎಂದು ಅರಿವಾದಾಗ, ಅದನ್ನು ಬಿಟ್ಟು ಪುನಃ ನಟನೆಗೆ ಮರಳಿದ್ದಾರೆ.

ಇದನ್ನೆಲ್ಲ ಯಾಕೆ ಹೇಳುತ್ತಿದ್ದೇನೆ ಎಂದರೆ, ಇಷ್ಟೆಲ್ಲ ಇದ್ದರೂ ಅನಂತ ನಾಗ್ ಅವರ ಹೆಸರನ್ನು ಭಾರತ ಸರಕಾರ ನೀಡುವ 'ಪದ್ಮಶ್ರೀ' ಪ್ರಶಸ್ತಿಗೆ ಪರಿಗಣಿಸುತ್ತಿಲ್ಲ ಎಂಬ ಬೇಸರ ನನ್ನನ್ನೂ ಸೇರಿದಂತೆ ಅವರ ಅಭಿಮಾನಿಗಳನ್ನು ಕಾಡುತ್ತಿತ್ತು. ಎಂಥ ವಿಪರ್ಯಾಸವೆಂದರೆ, ಸತತ ಐದು ದಶಕಗಳ ಕಾಲ ಚಿತ್ರರಂಗದಲ್ಲಿದ್ದು, ಬಹು ಭಾಷೆಯ ಚಲನಚಿತ್ರಗಳಲ್ಲಿ ನಟಿಸಿ, ತಮ್ಮದೇ ಆದ ಛಾಪು ಮೂಡಿಸಿದ ಅನಂತ ನಾಗ್ ಅವರಿಗೆ ಪದ್ಮ ಪ್ರಶಸ್ತಿ ಬರಲಿಲ್ಲ ಎಂದರೆ ಹೇಗೆ? ಕಳೆದ ಎರಡು ಮೂರು ವರ್ಷಗಳಿಂದಂತೂ ಅನಂತ್ ನಾಗ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ದೊರಕಬೇಕು ಎಂಬುದು ಅವರ ಅಭಿಮಾನಿಗಳ ಒತ್ತಾಸೆಯಾಗಿತ್ತು. ಅದಕ್ಕಾಗಿ ಅಭಿಯಾನೋಪಾದಿಯಲ್ಲಿ ಕೆಲಸಗಳೂ ನಡೆದವು. ಅನಂತ ನಾಗ್ ಹಿತೈಷಿಗಳು ತಮ್ಮ ಕೈಲಾದದ್ದನ್ನೆಲ್ಲ ಮಾಡಿದರು. ಆದರೆ ಅನಂತ ನಾಗ್ ಇದಕ್ಕೆ ಎಂದೂ ತಲೆಕೆಡಿಸಿಕೊಂಡವರಂತೆ ಕಾಣಲಿಲ್ಲ. ಎಲ್ಲಿಯೂ ಲಾಬಿ ಮಾಡಿದ್ದು ಕಂಡುಬರಲಿಲ್ಲ, ಪ್ರಶಸ್ತಿಗಾಗಿ ಯಾರಿಗೂ ಬೆಣ್ಣೆ ಹೊಸೆಯಲಿಲ್ಲ, ಅವರಲ್ಲಿ ಆ ಹಪಾಹಪಿಯೇ ಇರಲಿಲ್ಲ. ಅನಂತ ನಾಗ್ ಆ ರೀತಿಯ ಜನವೇ ಅಲ್ಲ. ನೇರವಾದ ನಡೆ, ಅದಕ್ಕಿಂತಲೂ ನೇರವಾದ, ಖಾರವಾದ ನುಡಿ ಇರುವವರಿಗೆ ಇಂದಿನ ದಿನಗಳಲ್ಲಿ ಪ್ರಶಸ್ತಿಗಳು ಸುಲಭವಾಗಿ ಒಲಿದು ಬರುವುದಿಲ್ಲ, ಅನಂತ ನಾಗ್ ಆ ದರ್ಜೆಗೆ ಸೇರಿದವರು.

ಅನಂತ ನಾಗ್ ಅಭಿನಯಿಸಿದ ಅರ್ಧಕ್ಕಿಂತಲೂ ಹೆಚ್ಚು ಚಿತ್ರಗಳಲ್ಲಿ ನಾಯಕನ ಪಾತ್ರದಲ್ಲಿ ಕಾಣಿಸಿಕೊಂಡವರು. ಆದರೂ ಇಂದಿಗೂ ಅವರ ಹೆಸರಿನಲ್ಲಿ ಅಭಿಮಾನಿಗಳ ಸಂಘಗಳಿಲ್ಲ. ಅವರ ಚಲನಚಿತ್ರ ಬಿಡುಗಡೆಯಾದರೆ ದೊಡ್ಡ ದೊಡ್ಡ ಕಟೌಟ್, ಹೋರ್ಡಿಂಗ್‌ಗಳು ತಲೆಯೆತ್ತಿ ನಿಲ್ಲುವುದಿಲ್ಲ, ಕೊರಳಿಂದ ಹಿಡಿದು ನೆಲಕ್ಕೆ ತಾಗುವಷ್ಟು ದೊಡ್ಡ ಹೂವಿನ ಹಾರ ಬೀಳುವುದಿಲ್ಲ, ಹಾಲಿನ ಅಭಿಷೇಕವಿಲ್ಲ. ಯಾಕೆ ಇರಬೇಕು ಹೇಳಿ? ಅವರು ನಾಯಕರಾದ ಬಹುತೇಕ ಚಿತ್ರಗಳಲ್ಲಿ ಹೊಡೆದಾಟ ಬಡಿದಾಟಗಳಿಲ್ಲ, ಅನಂತ ನಾಗ್ ಒಬ್ಬರೇ ನೂರಾರು ರೌಡಿಗಳನ್ನು ಹೊಡೆದು ಓಡಿಸಿದ್ದಿಲ್ಲ, ಮಚ್ಚು ಲಾಂಗು ಕೈಯಲ್ಲಿ ಹಿಡಿದಿದ್ದಿಲ್ಲ, ಗುಂಡು ಹೊಡೆದು ಐವತ್ತು ಜನರನ್ನು ಸಾಯಿಸಿದ್ದಿಲ್ಲ, ಹೆಲಿಕಾಪ್ಟರ್‌ನಿಂದ ಜೋತಾಡಿ ಕಳ್ಳರನ್ನು ಬೆನ್ನಟ್ಟಲಿಲ್ಲ, ವಿಮಾನದಿಂದ ಜಿಗಿದು ನಾಯಕಿಯನ್ನು ರಕ್ಷಿಸಲಿಲ್ಲ, ಅವರದ್ದೇನಿದ್ದರೂ ಸೀದಾಸಾದಾ ನಮ್ಮ ಮನೆಯಲ್ಲಿಯೋ, ಪಕ್ಕದ ಮನೆಯಲ್ಲಿಯೋ ನಡೆಯುವ ಕಥೆಯಲ್ಲಿನ ಒಂದು ಪಾತ್ರ. ಎಷ್ಟೋ ಬಾರಿ ಅವರೇ ಖಳನಾಯಕರಿಂದ ಪೆಟ್ಟು ತಿಂದು ಬಂದಿರುವ, ರಸ್ತೆ ಬದಿಯಲ್ಲಿ ಹೋಗುವವರಿಂದಲೂ ಬೈಗುಳ ಕೇಳಿಸಿಕೊಂಡು, ಅವಮಾನಿತನಾಗಿ ಬರುವ ಪಾತ್ರಗಳು. ಅದಕ್ಕೆಲ್ಲ ಪದ್ಮಶ್ರೀ ಯಾರು ಕೊಡಬೇಕು? ಯಾಕೆ ಕೊಡಬೇಕು ಹೇಳಿ?

ಕೊನೆಗೂ ಅವರಿಗೆ 'ಪದ್ಮಶ್ರೀ' ಪ್ರಶಸ್ತಿ ಒಲಿಯಲೇ ಇಲ್ಲ, ಇನ್ನು ಮುಂದೆಯೂ ಅದು ಅವರಿಗೆ ಸಿಗುವುದಿಲ್ಲ. ಕಾರಣ, ಅನಂತ ನಾಗ್ ಈ ವರ್ಷ 'ಪದ್ಮ' ಪ್ರಶಸ್ತಿಯಿಂದ 'ಭೂಷಣ'ರಾಗಿದ್ದಾರೆ. ತಡವಾದರೂ ಪದ್ಮಶ್ರೀಗಿಂತ ಒಂದು ಅಟ್ಟ ಎತ್ತರದ 'ಪದ್ಮಭೂಷಣ' ಪ್ರಶಸ್ತಿಯೇ ಅವರಿಗೆ ದೊರಕಿದೆ. ಮೊನ್ನೆ ಅದನ್ನು ಅವರು ಸ್ವೀಕರಿಸಲು ಬಿಳಿ ಕುರ್ತಾ ಪೈಜಾಮ ತೊಟ್ಟು ನಡೆಯುತ್ತಿದ್ದಾಗ, ನಾಲ್ಕು ದಶಕದ ಹಿಂದೆ ಸಿದ್ದಾಪುರದಲ್ಲಿ ಮೊದಲ ಬಾರಿಗೆ ಕಂಡ ಅನಂತ ನಾಗ್ ನೆನಪಾದರು!

ಅಭಿಮತ

ರಮಾನಂದ ಶರ್ಮಾ

ಅನಗತ್ಯ ಯಾತ್ರೆಗಳನ್ನು ಇನ್ನಾದರೂ ನಿಲ್ಲಿಸಿ

ಒಂದು ಕಾಲಕ್ಕೆ ಪಶ್ಚಿಮ ಬಂಗಾಳ ರಾಜ್ಯದಲ್ಲಿ ನಿರಂತರವಾಗಿ 'ಬಂದ್'ಗಳನ್ನು ನಡೆಸಲಾಗುತ್ತಿತ್ತು. ಯಾವುದಾದರೂ ಒಂದು ಕಾರಣಕ್ಕೆ ಒಂದು ರಾಜಕೀಯ ಪಕ್ಷವು ಬಂದ್ ನಡೆಸಿದರೆ, ಆ ಸುದ್ದಿಯು ಜನಮಾನಸದಿಂದ ಮಾಸುವ ಮೊದಲೇ ಅಥವಾ ಮಾಧ್ಯಮಗಳ ಸುದ್ದಿವ್ಯಾಪ್ತಿಯಿಂದ ಮರೆಯಾಗುವ ಮೊದಲೇ, ಇನ್ನೊಂದು ರಾಜಕೀಯ ಪಕ್ಷವು ಬಂದ್‌ಗೆ ಕರೆ ನೀಡುತ್ತಿತ್ತು. ಇದು ವಾಸ್ತವ!

ಇಂಥ ಬಂದ್‌ಗಳಿಗೆ ಏನಾದರೂ ಕಾರಣಗಳು ಇರುವುದು ಬೇರೆ ಮಾತು. ಪಶ್ಚಿಮ ಬಂಗಾಳದಲ್ಲಿ ಬಂದ್ ವಿರುದ್ಧ 'ಬಂದ್' ನಡೆಸುತ್ತಾರೆ ಎನ್ನುವ ಜೋಕ್ ಕೂಡ ಆಗಾಗ ಕೇಳಿಬರುತ್ತಿತ್ತು. ಆದರೆ, ಹೀಗೆ ಬಂದ್ ಮಾಡುವುದಕ್ಕೆಂದು ರಾಜಕೀಯ ಪಕ್ಷಗಳು ನೀಡುತ್ತಿದ್ದ ಕರೆಯ ನೇಪಥ್ಯದಲ್ಲಿ, ತಮ್ಮ ಶಕ್ತಿ ಕುಂದಿದೆಯೇ, ಇನ್ನೊಂದು ಪಕ್ಷಕ್ಕಿಂತ ಹೆಚ್ಚಾಗಿದೆಯೇ ಅಥವಾ ಹಾಗೆಯೇ ಇದೆಯೇ? ಎಂಬ ಅಂಶವನ್ನು ದೃಢಪಡಿಸಿಕೊಳ್ಳುವ ಅಜೆಂಡಾ ಕೂಡ ಇರುತ್ತಿತ್ತಂತೆ!

ಈಗ ಇದು ಕರ್ನಾಟಕ ರಾಜ್ಯದ ಸರದಿ. ಕೊಂಚ ಮಟ್ಟಿನ ಬದಲಾವಣೆ ಎನ್ನುವಂತೆ ನಮ್ಮಲ್ಲಿ 'ಬಂದ್'ನ ಜಾಗವನ್ನು 'ಯಾತ್ರೆ'ಗಳು ಆಕ್ರಮಿಸಿಕೊಂಡಿವೆ. ಎರಡು ರಾಜಕೀಯ ಪಕ್ಷಗಳ ನಡುವೆ ಪೈಪೋಟಿ ಎಂಬಂತೆ ಯಾತ್ರೆಗಳು ನಡೆಯುತ್ತಿವೆ. ಬಳ್ಳಾರಿ ಯಾತ್ರೆ, ಮುಡಾ ಯಾತ್ರೆ, ಕಲಬುರ್ಗಿ ಯಾತ್ರೆ, ಜೈಹಿಂದ್ ಯಾತ್ರೆ, ತಿರಂಗಾ ಯಾತ್ರೆ, ಜನಸಂಪರ್ಕ ಯಾತ್ರೆ, ಜನಸ್ಪಂದನ ಯಾತ್ರೆ, ಜನಾಕ್ರೋಶ ಯಾತ್ರೆ.... ಅಬ್ಬಬ್ಬಾ! ಯಾತ್ರೆಗಳ ಸಂಖ್ಯೆ ಒಂದೇ ಎರಡೇ?!!

ಹಾಗೆ ನೋಡಿದರೆ, ಎಲ್ಲ ಜನಪ್ರತಿನಿಧಿಗಳು, ಸಚಿವರು ಮತ್ತು ಅಧಿಕಾರಿ ವರ್ಗದವರು ತಂತಮ್ಮ ಪಾಲಿನ ಕೆಲಸಗಳನ್ನು ಸಮರ್ಥವಾಗಿ ಮತ್ತು ಸಮರ್ಪಕವಾಗಿ ನಿರ್ವಹಿಸಿಕೊಂಡು ಹೋಗುತ್ತಿದ್ದರೆ ಹಾಗೂ ಜನಕಲ್ಯಾಣದ ಕಾರ್ಯಗಳಿಗೆ ಒತ್ತುನೀಡಿಕೊಂಡು, ಅಭಿವೃದ್ಧಿ ಕಾರ್ಯಗಳೆಡೆಗೆ ಆದ್ಯತೆಯನ್ನು ಕೊಡುತ್ತಾ ಬಂದರೆ, ಸಮಾಜದಲ್ಲಿನ ಬಗೆಬಗೆಯ ಸಮಸ್ಯೆಗಳು ತಾವೇ ತಾವಾಗಿ ಕಡಿಮೆಯಾಗಲು ಶುರುವಾಗುತ್ತವೆ. ರಾಜಕೀಯ ಎದುರಾಳಿಗಳ ಆರೋಪ-ಪ್ರತ್ಯಾರೋಪಗಳಿಗೂ ಅಲ್ಲಿ ಆಸ್ಪದ ಇರುವುದಿಲ್ಲ. ಆದರೆ, ಅಂಥದೊಂದು ವಾತಾವರಣವೇ ನಮ್ಮಲ್ಲಿ ಕಾಣುತ್ತಿಲ್ಲ. ಹೀಗಾಗಿ ಜನಸಾಮಾನ್ಯರ ವತಿಯಿಂದಲೋ, ರಾಜಕೀಯ ಪ್ರೇರಿತವಾಗಿಯೋ ಇಂಥ 'ಯಾತ್ರೆ'ಗಳು ನಡೆಯುವಂತಾಗಿಬಿಟ್ಟಿದೆ. ಇದರ ಅಗತ್ಯ ಎಷ್ಟರ ಮಟ್ಟಿಗಿದೆ? ಎಂಬುದು ಇಂಥ ಕಸರತ್ತುಗಳಲ್ಲಿ ತೊಡಗಿಸಿಕೊಳ್ಳುವವರು ಕೇಳಿಕೊಳ್ಳಬೇಕಾದ ಪ್ರಶ್ನೆ!

ಇಂದಿನ ಜನರು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಸುಶಿಕ್ಷಿತರು. ದೇಶದಲ್ಲಿನ ಆಗುಹೋಗುಗಳನ್ನು ಇಂಥ ಯಾತ್ರೆಗಳಿಂದ ತಿಳಿದುಕೊಳ್ಳುವ ಅವಶ್ಯಕತೆ ಅವರಿಗೆ ಇರುವುದಿಲ್ಲ ಎಂಬುದನ್ನು ನಮ್ಮ ರಾಜಕೀಯ ಕ್ಷೇತ್ರದ ಪ್ರಭೃತಿಗಳು ಇನ್ನಾದರೂ ಅರ್ಥಮಾಡಿಕೊಳ್ಳಬೇಕಾಗಿದೆ. ಜನಸಾಮಾನ್ಯರ ದೈನಂದಿನ ಬದುಕಿಗೆ ಅನುಕೂಲ ಉಂಟುಮಾಡುವ, ಇಲ್ಲವೇ ಸಂಚಕಾರವನ್ನು ತಂದೊಡ್ಡುವ ಇಂಥ ಅನಪೇಕ್ಷಿತ ಯಾತ್ರೆಗಳಿಗೆ ಆಯಾ ರಾಜಕೀಯ ಪಕ್ಷಗಳು ದಂಡಿಯಾಗಿ ಹಣವನ್ನು ಖರ್ಚುಮಾಡುವ ಬದಲು, ಅದೇ ಮೊತ್ತವನ್ನು ರಚನಾತ್ಮಕ ಕಾರ್ಯಗಳಿಗೆ ಅಥವಾ ಸಮಾಜದ ಔನ್ನತ್ಯಕ್ಕೆ ವಿನಿಯೋಗಿಸಬಹುದಲ್ಲವೇ? ಈ ಕುರಿತು ನಮ್ಮ ರಾಜಕೀಯ ಪಕ್ಷಗಳಿಗೆ ಸರಿಯಾಗಿ ತಿಳಿಹೇಳುವವರಾರು? ಬೆಕ್ಕಿಗೆ ಗಂಟೆಯನ್ನು ಕಟ್ಟುವವರಾರು?

(ಲೇಖಕರು ರಾಜಕೀಯ ವಿಶ್ಲೇಷಕರು)

ಬೀದಿಯಲ್ಲಿ ಹೋಗೋ ಮಾರಿಯನ್ನು ಮನೆಯೊಳಗೆ ಕರೆತರೋದ್ಯಾಕೆ..?!

ಕಳಕಳಿ

ಡಾ.ಗುರುರಾಜ ಅರಕೇರಿ
vveditoped@gmail.com

ಅದೊಂದು ಬೆಳಗ್ಗೆ 16ರ ಹುಡುಗನೊಬ್ಬ ತಪಾಸಣೆಗೆಂದು ನನ್ನಲ್ಲಿಗೆ ಬಂದ. ಆತನ ಬಾಯಿಯೊಳಗಿನ ಲೋಳೆ ಪೊರೆಯಲ್ಲಿ ನಾರುಗಟ್ಟುವಿಕೆಯನ್ನು, ಅಂದರೆ ಬಾಯಿ ಬಿಗಿತದ ಆರಂಭಿಕ ಸ್ಥಿತಿಯನ್ನು ಗಮನಿಸಿದೆ. ಗುಟ್ಕಾ, ಪಾನ್ ಮಸಾಲಾಗಳನ್ನು ಜಗಿಯುವ ಚಟದಿಂದ ಹುಟ್ಟುವ ಈ ಕಾಯಿಲೆ, ನಮ್ಮ ಗ್ರಾಮೀಣ ಭಾಗದ ಜನರಲ್ಲಿ ಸರ್ವೇಸಾಮಾನ್ಯ. ಆ ಸ್ಥಿತಿ ಇನ್ನೂ ಪ್ರಾರಂಭಿಕ ಹಂತದಲ್ಲಿರುವುದನ್ನು ಕಂಡು, ಆ ಚಟವನ್ನು ತೊರೆಯುವಂತೆ ಅವನಿಗೆ ಬುದ್ಧಿಮಾತು ಹೇಳಿ, ಕೆಲವು ಮಾತ್ರೆಗಳನ್ನು ಸೂಚಿಸಿ ಮತ್ತೆ ಬರಲು ತಿಳಿಸಿದೆ.

ಮಿಕ್ಕ ರೋಗಿಗಳ ತಪಾಸಣೆ ಮುಗಿಸಿ ಹೊರಬಂದಾಗ ಆ ಹುಡುಗ ಇನ್ನೂ ಅಲ್ಲೇ ಕಾದುಕೂತಿರುವುದು ಗೋಚರಿಸಿತು. ನನ್ನನ್ನು ನೋಡುತ್ತಿದ್ದಂತೆ ಮಾತಾಡಲು ಧಾವಿಸಿ ಬಂದ. ''ಏನಾಯಿತು?'' ಎಂದು ಕೇಳಿದ್ದಕ್ಕೆ ''ಸ್ವಲ್ಪ ಮಾತನಾಡಬೇಕಿತ್ತು'' ಎಂದ ತೊದಲುತ್ತ. ''ಸರಿ ಬಾ ಇಲ್ಲಿ'' ಎಂದು ಒಂದೆಡೆಗೆ ಕರೆದೊಯ್ದು ಧೈರ್ಯತುಂಬಿದಾಗ ಆತ ಮನದಾಳದಿಂದ ಮಾತಾಡತೊಡಗಿದ- ''ಸರ್, ಕಳೆದ 3 ತಿಂಗಳಿಂದ ವಸಡಿನಲ್ಲಿ ತಾಳಲಾಗದ ಉರಿ, ಯಾತನೆ. ಸರಿಯಾಗಿ ಊಟವನ್ನೂ ಮಾಡಲಾಗದೆ ಒದ್ದಾಡುತ್ತಿರುವೆ. ಬೆಳಗ್ಗೆ ಅಣ್ಣ ಜತೆಯಲ್ಲಿದ್ದ ಕಾರಣ ಮನಬಿಚ್ಚಿ ಮಾತನಾಡಲಾಗಲಿಲ್ಲ. ಸರ್, ಇದು ವಾಸಿಯಾಗುತ್ತದೆ ತಾನೇ?'' ಎಂದು ಕೇಳಿದ. ಆತನ ಕಣ್ಣುಗಳಲ್ಲಿ ಭಯದ ನೆರಳು. ಆ ಕ್ಷಣ ನನಗೆ ಸ್ಪಷ್ಟವಾಯಿತು- ಆತನನ್ನು ಕ್ಯಾನ್ಸರ್ ಭೀತಿ ಕಾಡುತ್ತಿತ್ತು. ಆತ ಚಿಕ್ಕ ವಯಸ್ಸಿನಲ್ಲೇ ಗುಟ್ಕಾ ಜಗಿಯುವ ಚಟಕ್ಕೆ ಬಿದ್ದು, ಬಾಯಿಯ ಆ ಸಮಸ್ಯೆಯಿಂದಾಗಿ ಗಾಬರಿಗೊಂಡಿದ್ದ. 'ಅದು ಕ್ಯಾನ್ಸರ್‌ಗೆ ತಿರುಗಿರಬಹುದೇ?' ಎಂದು ಶಂಕೆಗೊಂಡು, ಅದನ್ನು ಯಾರಲ್ಲೂ ಹೇಳಿಕೊಳ್ಳಲಾಗದೆ, ಮನದೊಳಗೇ ಒದ್ದಾಡುತ್ತಿದ್ದ. ಅಂದು ಧೈರ್ಯ ಕೂಡಿಕೊಂಡು ನನ್ನಲ್ಲಿಗೆ ಬಂದು ತನ್ನ ಆತಂಕವನ್ನು ತೋಡಿಕೊಂಡಿದ್ದ. ನಾನು ಆತನನ್ನು ಉದ್ದೇಶಿಸಿ, ''ಏನೂ ಆಗಿಲ್ಲ. ಸಮಸ್ಯೆಯಿನ್ನೂ ಆರಂಭಿಕ ಹಂತದಲ್ಲಿದೆ. ಈ ಚಟವನ್ನು ತೊರೆದರೆ ಯಾವ ಅಪಾಯವೂ ಇಲ್ಲ'' ಎಂದು ಸಾಂತ್ವನದ ಮಾತುಗಳನ್ನಾಡಿ ನಂತರ, ''ನೀನು ಎಂಥ ಗುಟ್ಕಾವನ್ನು ತಿನ್ನುತ್ತಿದ್ದೆ?'' ಎಂದು ಪ್ರಶ್ನಿಸಿದೆ.

ಈ ಪ್ರಶ್ನೆಗೆ ಉತ್ತರಿಸಲಾಗದೆ ಸುಮ್ಮನೆ ತಲೆ ತಗ್ಗಿಸಿದ ಆತನ ಕಣ್ಣುಗಳು ಹೊರಗೆ ನಿಂತಿದ್ದ ಸಾರ್ವಜನಿಕ ಸಾರಿಗೆ ವಾಹನದ ಮೇಲಿದ್ದ ಜಾಹೀರಾತಿನತ್ತ ಹೊರಳಿದವು. ಅದನ್ನು ಆತ ತೋರಿಸುತ್ತಾ, ''ಸರ್, ಅದೇ...'' ಎಂದ. ಅರೆಕ್ಷಣ ಗೊಂದಲಗೊಂಡ ನಾನು ನಂತರ ಖಾತ್ರಿಪಡಿಸಿಕೊಳ್ಳಲೆಂದು, ''ಅರೆ! ಅದು ಗುಟ್ಕಾ ಅಲ್ಲವಲ್ಲ?'' ಎಂದೆ. ಅದಕ್ಕೆ ಆತ, ''ಸರ್, ಅದರ ಜತೆಗೆ ತಂಬಾಕು ಕೇಳಿದರೆ ಉಚಿತವಾಗಿ ಕೊಡುತ್ತಾರೆ; ಎರಡನ್ನೂ ಬೆರೆಸಿಕೊಂಡರೆ ಗುಟ್ಕಾ ಆಗುತ್ತದೆ'' ಅಂದ. ನನಗೆ ಯಾರೋ ಝಾಡಿಸಿ ಎದೆಗೆ ಒದ್ದಂತಾಯಿತು, ಮನದಲ್ಲಿ ಆಘಾತದ ಅಲೆ ಮೂಡಿತು. ವಾಹನದ ಮೇಲಿನ ಅಂಥ ಜಾಹೀರಾತುಗಳನ್ನು ಪ್ರತಿನಿತ್ಯ ನೋಡುತ್ತಿದ್ದರೂ, ಅವು ಇಷ್ಟೊಂದು ಆಳವಾದ ಪರಿಣಾಮ ಬೀರುತ್ತವೆ ಎಂದು ನಾನು ಊಹಿಸಿರಲಿಲ್ಲ.

'ಕ್ಯಾನ್ಸರ್ ರಾಜಧಾನಿ' ಎಂದೇ ಇತ್ತೀಚೆಗೆ ಗುರುತಿಸಲ್ಪಟ್ಟಿರುವ ಭಾರತವು ಈ ಕಾಯಿಲೆಯ ಕಗ್ಗಂಟಿನಿಂದ ಹೊರಬರಲು ಹೆಣಗಾಡುತ್ತಿದೆ. ಗುಟ್ಕಾದಂಥ ಉತ್ಪನ್ನಗಳು ನಿಷೇಧಿಸಲ್ಪಟ್ಟಿದ್ದರೂ, ಬೇರೆ ಬೇರೆ ರೂಪಗಳಲ್ಲಿ ಮತ್ತೆ ತಲೆಯೆತ್ತಿ ಯುವಕರನ್ನು, ವಿಶೇಷವಾಗಿ ಗ್ರಾಮೀಣ ಭಾಗದವರನ್ನು ಕ್ಯಾನ್ಸರ್‌ನ ವಿಷವ್ಯೂಹಕ್ಕೆ ತಳ್ಳುತ್ತಿವೆ. ಅಚ್ಚರಿಯ ಸಂಗತಿಯೆಂದರೆ, ಸಾರಿಗೆ ಬಸ್ಸುಗಳ ಮೇಲೆ ಲಗತ್ತಿಸಲಾಗುವ ಪರೋಕ್ಷ ಜಾಹೀರಾತುಗಳು ಗುಟ್ಕಾ, ಪಾನ್ ಮಸಾಲಾದಂಥ ಚಟಗಳಿಗೆ ಪ್ರಚೋದನೆ ನೀಡುತ್ತಿವೆ. ಇದೊಂದು ದುರಂತ ಸತ್ಯ.

ಸರಕಾರವು ಬ್ಲಾಕ್ ಆ್ಯಂಡ್ ವೈಟ್ ಟಾಪಿಂಗ್ ಯೋಜನೆಯಂಥ ಉಪಕ್ರಮಗಳಿಂದ ರಸ್ತೆಗಳನ್ನು ಸುಗಮಗೊಳಿಸಿ, ಜನರ ಸಂಚಾರ ಸುರಕ್ಷತೆಯನ್ನು ಕಾಪಾಡುವ ಗುರಿಯಿಟ್ಟುಕೊಂಡಿದೆ. ಆದರೆ, ಅದೇ ರಸ್ತೆಗಳಲ್ಲಿ ಓಡಾಡುವ ಬಸ್ಸುಗಳ ಮೇಲೆ ಬಿಂಬಿತವಾಗುವ ಇಂಥ ಜಾಹೀರಾತುಗಳು ಜನರ ಆರೋಗ್ಯಕ್ಕೆ ಗಂಭೀರ ಕಂಟಕವಾಗಿರುವುದು ವಿಪರ್ಯಾಸವಲ್ಲವೇ?! ಭಾರತದಲ್ಲಿ 'ಬಾಯಿ ಕ್ಯಾನ್ಸರ್' ಪ್ರಕರಣಗಳು ಜಾಗತಿಕ ಸರಾಸರಿಗಿಂತ ಎರಡು ಪಟ್ಟು ಜಾಸ್ತಿಯಾಗಿದ್ದು, ಕರ್ನಾಟಕದ ಉತ್ತರ ಹಾಗೂ ಈಶಾನ್ಯ ಭಾಗಗಳಲ್ಲಿ ಅವು ತಾರಕಕ್ಕೆ ಏರಿವೆ. ಒಂದು ಅಂದಾಜಿನಂತೆ, ದೇಶದಲ್ಲಿ ವರ್ಷಕ್ಕೆ 77 ಸಾವಿರಕ್ಕೂ ಹೆಚ್ಚು ಬಾಯಿ ಕ್ಯಾನ್ಸರ್ ಪ್ರಕರಣಗಳು ದಾಖಲಾಗುತ್ತವೆ ಹಾಗೂ 52 ಸಾವಿರಕ್ಕೂ ಅಧಿಕ ಜನರು ಈ ಕಾಯಿಲೆಗೆ ಬಲಿಯಾಗುತ್ತಾರೆ. ಇದು ವಿಶ್ವದ ಬಾಯಿ ಕ್ಯಾನ್ಸರ್‌ನ ಮೂರನೇ ಒಂದು ಭಾಗವನ್ನು ಪ್ರತಿನಿಧಿಸುತ್ತದೆ. ದೇಶದ ಒಟ್ಟು ಕ್ಯಾನ್ಸರ್ ಪ್ರಕರಣಗಳಲ್ಲಿ ಶೇ.30ರಷ್ಟು ಬಾಯಿಯ ಕ್ಯಾನ್ಸರ್‌ಗಳೇ ಆಗಿದ್ದು, ಕರ್ನಾಟಕದಲ್ಲಿ ಈ ಸಂಖ್ಯೆ ಗಮನಾರ್ಹವಾಗಿದೆ.

ಗುಟ್ಕಾ ಎಂಬ ಮಾರಕ ಉತ್ಪನ್ನವು ತಂಬಾಕು ಸೇರಿದಂತೆ ವಿವಿಧ 'ಘಾತಕ ಘಟಕಾಂಶ'ಗಳನ್ನು ಒಳಗೊಂಡಿದ್ದು, ಈ ಬಾಯಿ ಕ್ಯಾನ್ಸರ್‌ಕಾರಕವನ್ನು 2013ರಲ್ಲಿ ಆಹಾರ ಸುರಕ್ಷತಾ ಕಾನೂನಿನ ಅಡಿಯಲ್ಲಿ ನಿಷೇಧಿಸಲಾಗಿದೆ. ಆದರೆ, ನಗರದಿಂದ ಹಳ್ಳಿಗಳವರೆಗೆ ಇದು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಲಭ್ಯವಾಗುತ್ತಲೇ ಇದೆ. ಜನರನ್ನು ಈ ಚಟಕ್ಕೆ ಬೀಳಿಸುವಲ್ಲಿ ಪರೋಕ್ಷ ಜಾಹೀರಾತುಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಕಾನೂನಿನ ಎಲ್ಲೆಯೊಳಗೆ, ತಂಬಾಕು ಇಲ್ಲದಿರುವ ಇಲಾಯ್ಚಿ ಅಥವಾ ಬಾಯಿ ತಾಜಾಗೊಳಿಸುವ ಉತ್ಪನ್ನಗಳ ಹೆಸರಿನಡಿ, ಈ ಜಾಹೀರಾತುಗಳು ಜಾಣತನದಿಂದ ಪ್ರದರ್ಶನಗೊಳ್ಳುತ್ತವೆ/ಬಿತ್ತರಗೊಳ್ಳುತ್ತವೆ, ಗುಟ್ಕಾದ ಛಾಪನ್ನು ಜನರ ಮನದಲ್ಲಿ ಗಾಢವಾಗಿ ಒತ್ತುತ್ತವೆ. ಡಿಜಿಟಲ್ ಪರದೆಗಳ ಮೇಲೆ ಸೊಗಸಾದ ಸಂಗೀತದೊಂದಿಗೆ ಬಿಂಬಿತವಾಗುವ ಇಂಥ ಜಾಹೀರಾತುಗಳು 'ತಂಬಾಕು' ಎಂಬ ಪದವನ್ನು ಉಚ್ಚರಿಸದಿದ್ದರೂ, ಅಗತ್ಯವಿದ್ದವರಿಗೆ ಅವು ನೀಡುವ ಸಂದೇಶ ಸ್ಪಷ್ಟವಾಗಿರುತ್ತದೆ! ಇಂಥ ಪರೋಕ್ಷ ಜಾಹೀರಾತುಗಳು ಈಚೀಚೆಗೆ ಸಾರ್ವಜನಿಕ ಸಾರಿಗೆ ಬಸ್ಸುಗಳ ಮೇಲೆ ಸರ್ವೇಸಾಮಾನ್ಯವಾಗಿದ್ದು, ನಗರದಿಂದ ಗ್ರಾಮಾಂತರ ಪ್ರದೇಶದವರೆಗಿನ ಲಕ್ಷಾಂತರ ಪ್ರಯಾಣಿಕರ ಕಣ್ಣಿಗೆ ರಾಚುತ್ತಿವೆ. ಇತ್ತೀಚಿನ ಸಮೀಕ್ಷೆಗಳಂತೆ, ಶೇ.68ರಷ್ಟು ಜನರು ಇಂಥ ಉತ್ಪನ್ನಗಳ ಜಾಹೀರಾತುಗಳಲ್ಲಿನ ಚಿತ್ರತಾರೆಯರನ್ನು ಗುರುತಿಸಿದ್ದಾರೆ. ಇದು ಯುವಕರ ಮೇಲೆ, ವಿಶೇಷವಾಗಿ ಮಕ್ಕಳ ಮೇಲೆ ಪ್ರಭಾವ ಬೀರಿ, ಇಂಥ ಉತ್ಪನ್ನಗಳೆಡೆಗಿನ ಆಕರ್ಷಣೆಯನ್ನು ಗಣನೀಯವಾಗಿ ಹೆಚ್ಚಿಸುತ್ತದೆ.

ಇಂಥ ಜಾಹೀರಾತುಗಳಲ್ಲಿನ ಖ್ಯಾತನಾಮರ ಪಾಲ್ಗೊಳ್ಳುವಿಕೆಯು ಈ ಸಮಸ್ಯೆಯನ್ನು ಇನ್ನಷ್ಟು ಸಂಕೀರ್ಣಗೊಳಿಸುತ್ತದೆ. ಸೂಪರ್‌ಸ್ಟಾರ್‌ಗಳನ್ನು ಇಟ್ಟುಕೊಂಡು ಇಂಥ ಉತ್ಪನ್ನಗಳನ್ನು ಚಿತ್ತಾಕರ್ಷಕವಾಗಿ ಚಿತ್ರಿಸಿದಾಗ, 'ಇವು ಸುರಕ್ಷಿತ' ಎಂಬ ತಪ್ಪುಕಲ್ಪನೆ ಜನರಲ್ಲಿ ಮೂಡುತ್ತದೆ. ಇದರಿಂದಾಗಿ ಈ ಚಟದತ್ತ ಅವರು ಸಲೀಸಾಗಿ ಸೆಳೆಯಲ್ಪಡುತ್ತಾರೆ. ದೇಶಾದ್ಯಂತ ನಡೆದ ವಿವಿಧ ಸಮೀಕ್ಷೆಗಳು ತಿಳಿಸುವಂತೆ, ತಂಬಾಕು ಉತ್ಪನ್ನಗಳಿಗೆ ಒಡ್ಡಿಕೊಂಡಿರುವ ಮಕ್ಕಳಲ್ಲಿ ಶೇ.24ರಷ್ಟು ಮಂದಿ ಏಳರ ಹರೆಯಕ್ಕಿಂತ ಮೊದಲೇ ಗುಟ್ಕಾ ಎಂಬ ವಿಷದ ರುಚಿ ನೋಡಿರುತ್ತಾರೆ. ವಿವಿಧ ಮಾಧ್ಯಮಗಳಲ್ಲಿ ಕಾಣಬರುವ ರಂಗುರಂಗಿನ ಪರೋಕ್ಷ ಜಾಹೀರಾತುಗಳ ಪ್ರಭಾವದ ಗಂಭೀರತೆಯನ್ನು ಇದು ಸ್ಪಷ್ಟಪಡಿಸುತ್ತದೆ. ಕರ್ನಾಟಕದ ವಿವಿಧೆಡೆ ಶಾಲೆಗಳ ಸುತ್ತಮುತ್ತ ಈ ಉತ್ಪನ್ನಗಳು ಲಭ್ಯವಿರುವುದು ಮತ್ತೊಂದು ಆತಂಕಕಾರಿ ಸಂಗತಿ. ಕಾನೂನು ಜಾರಿಯನ್ನು ಮತ್ತಷ್ಟು ಬಿಗಿಗೊಳಿಸಬೇಕಿರುವ ಅನಿವಾರ್ಯತೆಯನ್ನು ಇದು ಸೂಚಿಸುತ್ತದೆ.

ಗುಟ್ಕಾ ಎಂಬ ಮಹಾಮಾರಿಯು ಆರೋಗ್ಯದ ಮೇಲೆ ಬೀರುವ ದುಷ್ಪರಿಣಾಮಗಳು ನಿಜಕ್ಕೂ ಆಘಾತಕಾರಿಯಾಗಿವೆ. ಇತ್ತೀಚಿನ ಜಾಗತಿಕ ಬಾಯಿ ಆರೋಗ್ಯ ವರದಿಯ ಪ್ರಕಾರ, ಭಾರತವು ಆಗ್ನೇಯ ಏಷ್ಯಾ ವಲಯದಲ್ಲಿ ಬಾಯಿ ಕ್ಯಾನ್ಸರ್‌ನ ಕೇಂದ್ರವಾಗಿ ಗುರುತಿಸಲ್ಪಟ್ಟಿದೆ. ಗುಟ್ಕಾದ ಪ್ರಮುಖ ಘಟಕಗಳಾದ ತಂಬಾಕು, ಅಡಕೆ, ಸುಣ್ಣ ಮತ್ತು ಸಿಹಿಕಾರಕ ಮಸಾಲೆಗಳು ಒಂದಾಗಿ, ಕ್ಯಾನ್ಸರ್‌ಗೆ ದಾರಿ ಮಾಡಿಕೊಡುವ 'ಘಾತಕ ಮಿಶ್ರಣ'ವನ್ನು ರೂಪಿಸುತ್ತವೆ. ಅಡಕೆಯನ್ನು ಸಾಮಾನ್ಯವಾಗಿ ಜೀರ್ಣಕಾರಕವಾಗಿ ಮತ್ತು ತಾಂಬೂಲದ ಜತೆಗೆ ಸಾಂಪ್ರದಾಯಿಕವಾಗಿ ಬಳಸಲಾಗುತ್ತದೆಯಾದರೂ, ಅದು ತಂಬಾಕು, ಸುಣ್ಣ ಮತ್ತು ಇತರ ಹಾನಿಕಾರಕ ರಾಸಾಯನಿಕಗಳೊಂದಿಗೆ ಸೇರಿಕೊಂಡಾಗ ಮಾರಕವಾಗುತ್ತದೆ. ಅಂದರೆ, ಬಾಯಿಯ ಒಳಗಿನ ಲೋಳೆಪೊರೆಯನ್ನು ನಾರುಗೆಡಿಸುವ, ಚಟಕ್ಕೆ ಒಡ್ಡುವ ವಿಷಕಾರಿ ಸಂಯೋಗವಾಗಿ ಅದು ಬದಲಾಗುತ್ತದೆ. ಗುಟ್ಕಾದ ನಿರಂತರ ಬಳಕೆಯಿಂದ ಬಾಯಿಯ ಒಳಗಿನ ಪೊರೆ ನಾರುಗಟ್ಟಿ, 'ಓರಲ್ ಸಬ್‌ಮ್ಯೂಕಸ್ ಫೈಬ್ರೋಸಿಸ್'ನಂಥ ಕ್ಯಾನ್ಸರ್‌ನ ಪೂರ್ವಸ್ಥಿತಿಗಳು ಉದ್ಭವಿಸುತ್ತವೆ, ಇವು ಕಾಲಾಂತರದಲ್ಲಿ ಕ್ಯಾನ್ಸರ್‌ಗೆ ತಿರುಗುತ್ತವೆ. ಭಾರತದಲ್ಲಿ ಪ್ರತಿ ಗಂಟೆಗೆ ಐವರು ಬಾಯಿಯ ಕ್ಯಾನ್ಸರ್‌ಗೆ ಬಲಿಯಾಗುತ್ತಿರುವ ದುರಂತಸತ್ಯವು ಈ ಸಮಸ್ಯೆಯ ಗಂಭೀರತೆಯನ್ನು ಎತ್ತಿ ಹಿಡಿಯುತ್ತದೆ.

ಕ್ಯಾನ್ಸರ್‌ಗೆ ಹಲವಾರು ಸಮರ್ಪಕ ಚಿಕಿತ್ಸೆಗಳಿದ್ದರೂ, ಗುಟ್ಕಾ ಬಳಕೆದಾರರಲ್ಲಿ ಕಾಣಬರುವ 'ಓರಲ್ ಸಬ್‌ಮ್ಯೂಕಸ್ ಫೈಬ್ರೋಸಿಸ್'ಗೆ ಇನ್ನೂ ಸಮರ್ಪಕವಾದ ಚಿಕಿತ್ಸೆ ಲಭ್ಯವಿಲ್ಲ; ಇದೊಂದು ದುಃಖಕರ ಸಂಗತಿ. ಈ ಸ್ಥಿತಿಯಿಂದಾಗಿ ಬಾಯಿಯನ್ನು ತೆರೆಯಲಾಗದಷ್ಟರ ಮಟ್ಟಿಗೆ ತೊಂದರೆಯಾಗುತ್ತದೆ, ಉರಿಯ ಯಾತನೆ ಕಾಡುತ್ತದೆ. ಇದು ವ್ಯಕ್ತಿಯನ್ನು ದೈಹಿಕವಾಗಿಯೂ ಮಾನಸಿಕವಾಗಿಯೂ ಕುಗ್ಗಿಸುತ್ತದೆ. ಈ ನೋವಿನಿಂದ ಪಾರಾಗಲು ಅನೇಕರು ಮತ್ತೆ ಗುಟ್ಕಾದೆಡೆಗೇ ಹೊರಳುತ್ತಾರೆ. ಜತೆಗೆ ಸಾಮಾಜಿಕ ಒತ್ತಡಗಳು, ಖಿನ್ನತೆ, ಮಾನಸಿಕ ತುಮುಲಗಳು ಸೇರಿಕೊಂಡು ಈ ಚಟವನ್ನು ಬಲಗೊಳಿಸಿ, ಕ್ರಮೇಣವಾಗಿ ಕ್ಯಾನ್ಸರ್‌ನ ವಿಷಚಕ್ರದತ್ತ ವ್ಯಕ್ತಿಯನ್ನು ತಳ್ಳುತ್ತವೆ. ಈ 'ಬಾಯಿಬಿಗಿತ' ಕಾಯಿಲೆಯ ಬಗ್ಗೆ ಸಮರ್ಪಕ ಜಾಗೃತಿಯ ಕೊರತೆಯಿರುವುದರಿಂದ, ಚಿಕಿತ್ಸೆಗೆ ಅಲೆದಾಡುವವರು ಪರಿಹಾರ ಕಾಣಲಾಗದೆ ನಿರಾಶೆಗೊಳಗಾಗುತ್ತಾರೆ. ಇಂಥ ಗಂಭೀರ ಪರಿಸ್ಥಿತಿಯ ನಡುವೆಯೂ ಗುಟ್ಕಾದ ಬಳಕೆಯನ್ನು ಮುಂದುವರಿಸಿದರೆ, ಕ್ಯಾನ್ಸರ್‌ನ ಭೀಕರ ಅಪಾಯಕ್ಕೆ ಒಡ್ಡಿಕೊಳ್ಳುವ ಸಾಧ್ಯತೆ ಅತಿಹೆಚ್ಚಾಗಿರುತ್ತದೆ.

ಮೊದಲೇ ಉಲ್ಲೇಖಿಸಿದಂತೆ, ಕರ್ನಾಟಕದ ಉತ್ತರ ಮತ್ತು ಈಶಾನ್ಯ ಭಾಗಗಳಲ್ಲಿ ಗುಟ್ಕಾ ಹಾಗೂ ಪಾನ್ ಮಸಾಲಾದ ದುಷ್ಪರಿಣಾಮಗಳು ತೀವ್ರವಾಗಿ ಕಾಡುತ್ತಿವೆ. ದುಃಖಕರ ಸಂಗತಿಯೆಂದರೆ, ಇಲ್ಲಿ ಹಲವೆಡೆ ಗುಟ್ಕಾ ಮತ್ತು ಪಾನ್ ಮಸಾಲಾದ ಬಳಕೆಯು ಸಾಮಾಜಿಕ ಸಂಪ್ರದಾಯವಾಗಿ ಮಾರ್ಪಟ್ಟಿದ್ದು, ಕಡಿಮೆ ಆದಾಯವರ್ಗದ ಕಾರ್ಮಿಕರು, ಬೀದಿಬದಿಯ ಅಂಗಡಿಯವರು, ವಾಹನ ಚಾಲಕರು, ರಾತ್ರಿಪಾಳಿಯ ಕೆಲಸಗಾರರು/ಕಾವಲುಗಾರರು ಮತ್ತು ಯುವಕರು ಈ ಚಟದತ್ತ ಸೆಳೆಯಲ್ಪಡುತ್ತಿದ್ದಾರೆ. ಈ ಸೆಳೆತವನ್ನು ಪರೋಕ್ಷ ಜಾಹೀರಾತುಗಳು ಮತ್ತಷ್ಟು ತೀವ್ರಗೊಳಿಸಿವೆ. ತಾಲೂಕು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 'ಬಾಯಿಬಿಗಿತ'ದ ಸಮಸ್ಯೆಯನ್ನು ಆರಂಭದಲ್ಲೇ ಗುರುತಿಸಬಲ್ಲಂಥ ಸೌಕರ್ಯಗಳ ಅಲಭ್ಯತೆ ಹಾಗೂ ಆರೋಗ್ಯ ಜಾಗೃತಿಯ ಕೊರತೆಯು ಕೂಡ ಇಂಥ ಕ್ಯಾನ್ಸರ್ ಪ್ರಕರಣಗಳನ್ನು ಗಣನೀಯವಾಗಿ ಹೆಚ್ಚಿಸಿವೆ. ಒಂದು ಅಧ್ಯಯನದಂತೆ, ಇಂಥ ಹಿಂದುಳಿದ ಪ್ರದೇಶಗಳಲ್ಲಿ ಶೇ.60-80ರಷ್ಟು ಬಾಯಿ ಕ್ಯಾನ್ಸರ್‌ಗಳು ಮುಂದುವರಿದ ಹಂತದಲ್ಲಿ ಪತ್ತೆಯಾಗುತ್ತವೆಯಾದ್ದರಿಂದ, ಇದು ಚಿಕಿತ್ಸೆಯನ್ನು ಜಟಿಲಗೊಳಿಸಿ ಸಾವಿನ ಸಂಖ್ಯೆಯನ್ನು ಏರಿಸುತ್ತಿದೆ.

ರಾಜ್ಯ ಮತ್ತು ಕೇಂದ್ರ ಸರಕಾರಗಳು ದಶಕಗಳಿಂದ ಗುಟ್ಕಾ ಉತ್ಪಾದನೆ ಮತ್ತು ಜಾಹೀರಾತುಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸಿದ್ದರೂ, ಕಾನೂನಿನೊಳಗಿನ ಸಣ್ಣಪುಟ್ಟ ಲೋಪಗಳು ಅಥವಾ ತಾಂತ್ರಿಕ ತೊಡಕುಗಳನ್ನು ಆಸರೆಯಾಗಿಟ್ಟುಕೊಂಡು ಪರೋಕ್ಷ ಜಾಹೀರಾತುಗಳು ವಿವಿಧ ಮಾಧ್ಯಮಗಳಲ್ಲಿ ನುಸುಳಿಕೊಂಡು, ಜನಮನವನ್ನು ತಮ್ಮೆಡೆಗೆ ಸೆಳೆಯುತ್ತಿವೆ. ಸಾರ್ವಜನಿಕ ಸಾರಿಗೆ ವಾಹನಗಳ ಮೇಲಿನ ಇಂಥ ಜಾಹೀರಾತುಗಳೇ ಈ ಮಾತಿಗೆ ಸ್ಪಷ್ಟ ಸಾಕ್ಷಿಯಾಗಿವೆ. ಈ ಸವಾಲನ್ನು ಎದುರಿಸುವಲ್ಲಿನ ಸಕಾರಾತ್ಮಕ ಕ್ರಮಗಳು ಹಿಂದೆಂದಿಗಿಂತ ಈಗ ಹೆಚ್ಚು ಅನಿವಾರ್ಯವಾಗಿವೆ.

ರಸ್ತೆ ಸಂಚಾರಿ ನಿಯಮಗಳ ಸುಧಾರಣೆಯೆಡೆಗೆ ತೋರುವ ಕಾಳಜಿಯನ್ನು ಆರೋಗ್ಯ ಕ್ಷೇತ್ರಕ್ಕೂ ವಿಸ್ತರಿಸಬೇಕಾದ ಕಾಲ ಸನ್ನಿಹಿತವಾಗಿದೆ. ವಿವಿಧ ಮಾಧ್ಯಮಗಳಲ್ಲಿ ಬಿತ್ತರವಾಗುವ ಪರೋಕ್ಷ ಜಾಹೀರಾತುಗಳನ್ನು ಸಂಪೂರ್ಣವಾಗಿ ತೊಡೆದು, 'ಗುಟ್ಕಾ-ಪಾನ್ ಮಸಾಲಾಗಳನ್ನು ತೊರೆಯಿರಿ, ಜೀವವನ್ನು ಕಾಪಾಡಿರಿ' ಎಂಬಂಥ ಜಾಗೃತಿಪೂರ್ವಕ ಉದ್ಘೋಷಗಳನ್ನು ಬಿಂಬಿಸಲು ಇದು ಸಕಾಲ. ಜತೆಗೆ, ಉತ್ತರ ಹಾಗೂ ಈಶಾನ್ಯ ಕರ್ನಾಟಕದ ಗ್ರಾಮೀಣ ಭಾಗದ ಜನರಿಗೆ, ಆರೋಗ್ಯ ಸಂರಕ್ಷಣೆ ಸಂಬಂಧಿತ ಅರಿವಿನ ಕಾರ್ಯಕ್ರಮಗಳನ್ನು ತೋರಿಸಿ, ಗುಟ್ಕಾದಿಂದ ಆಗುವ ಹಾನಿಯ ಬಗ್ಗೆ ಅವರನ್ನು ಮಾಹಿತಿವಂತರನ್ನಾಗಿಸಬೇಕಾದ ಅಗತ್ಯವಿದೆ. ಗ್ರಾಮೀಣ ಪ್ರದೇಶಗಳಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ಹಮ್ಮಿಕೊಳ್ಳುವ ಮೂಲಕ, ಕ್ಯಾನ್ಸರ್‌ಗೆ ಮುಂಚಿನ ಸ್ಥಿತಿಗಳನ್ನು ಸಕಾಲಕ್ಕೆ ಪತ್ತೆ ಹಚ್ಚಬಹುದು. ತಂಬಾಕು ಉತ್ಪನ್ನಗಳಿಗೆ ಸಂಬಂಧಿಸಿದ ಜಾಹೀರಾತುಗಳನ್ನು ನಿಯಂತ್ರಿಸುವ ಕಾನೂನುಗಳನ್ನು ನಿಷ್ಠುರವಾಗಿ ಜಾರಿಗೊಳಿಸುವ ಮೂಲಕವೂ ಈ ಬಿಕ್ಕಟ್ಟಿಗೆ ಕಡಿವಾಣ ಹಾಕಬಹುದು. ಶಾಲಾ-ಕಾಲೇಜುಗಳ ಸುತ್ತಮುತ್ತ ತಂಬಾಕು ಉತ್ಪನ್ನಗಳ ಮಾರಾಟವಾಗುವುದನ್ನು ತಡೆಯಲು, ನಿಯತಕ್ರಮದಲ್ಲಿ ಗಸ್ತುಕಾರ್ಯವನ್ನು ಹಮ್ಮಿಕೊಂಡು, ವಿದ್ಯಾರ್ಥಿಗಳನ್ನು ಈ ವಿಷಕಾರಿ ಚಾಳಿಯ ಸೆಳೆತದಿಂದ ಕಾಪಾಡಬಹುದು.

ಗುಟ್ಕಾ, ಪಾನ್ ಮಸಾಲಾ, ತಂಬಾಕಿನ ಪರೋಕ್ಷ ಜಾಹೀರಾತುಗಳು ಆರೋಗ್ಯಕ್ಕೆ ಮಾತ್ರವಲ್ಲದೆ ಸಮಾಜದ ಒಟ್ಟಾರೆ ಒಳಿತಿಗೂ ಕಂಟಕಪ್ರಾಯವಾಗಿವೆ. ಸಾರ್ವಜನಿಕ ಸಾರಿಗೆ ವಾಹನಗಳ ಮೇಲಿನ ಇಂಥ ಜಾಹೀರಾತುಗಳಿಗೆ ಆಕ್ಷೇಪಿಸಿ ತೆಗೆಯುವಂತೆ ವಿನಂತಿಸಿದರೂ, ಕೆಲವೆಡೆ ಇವು ಇನ್ನೂ ಕಾಣಸಿಗುವುದು ವಿಷಾದದ ಸಂಗತಿ. ಆದರೆ, ಸರಕಾರ, ಸಾರ್ವಜನಿಕರು ಮತ್ತು ಸಮಾಜದ ವಿವಿಧ ಸಂಘ-ಸಂಸ್ಥೆಗಳು ಒಗ್ಗಟ್ಟಿನಿಂದ ಕೈಜೋಡಿಸಿದರೆ, ಈ ಸವಾಲನ್ನು ಮೆಟ್ಟಿನಿಂತು ಆರೋಗ್ಯವಂತ ಸಮಾಜವನ್ನೂ ಭವಿಷ್ಯವನ್ನೂ ಕಟ್ಟಲು ಸಾಧ್ಯವಿದೆ. ಸಂಬಂಧಪಟ್ಟವರು ಇದನ್ನು ಅರ್ಥಮಾಡಿಕೊಳ್ಳಬೇಕಷ್ಟೇ...!

(ಲೇಖಕರು ವೈದ್ಯರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:139

ಸಮಾಚಾರ ಸಣ್ಣದಲ್ಲ

ರಷ್ಯಾ ಸೇತುವೆ ಕುಸಿದು ರೈಲು ಹಳಿತಪ್ಪಿ 7 ಸಾವು

ಮಾಸ್ಕೊ: ಉಕ್ರೇನ್ ಗಡಿಯಿಂದ 100 ಕಿಮೀ ಅಂತರದಲ್ಲಿರುವ ರಷ್ಯಾದ ಭೂಭಾಗದಲ್ಲಿ ಸೇತುವೆಯೊಂದು ಶನಿವಾರ ತಡರಾತ್ರಿ ಕುಸಿದ ಪರಿಣಾಮ ರೈಲು ಹಳಿತಪ್ಪಿ 7 ಪ್ರಯಾಣಿಕರು ಸಾವಿಗೀಡಾಗಿದ್ದಾರೆ. ಕ್ಲಿಮೊವೊ ಪಟ್ಟಣದಿಂದ ರಾಜಧಾನಿ ಮಾಸ್ಕೋಗೆ ತೆರಳುತ್ತಿದ್ದ ರೈಲು ಹಳಿತಪ್ಪಿದೆ. ಮೂವರು ಮಕ್ಕಳು ಸೇರಿದಂತೆ ಕನಿಷ್ಠ 69 ಜನರು ಗಾಯಗೊಂಡಿದ್ದಾರೆ. ಸೇತುವೆ ಕುಸಿತಕ್ಕೆ ಮಾನವ ಕೈವಾಡ ಕಾರಣವಾಗಿರಬಹುದು ಎಂದು ಅಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

ವಾಣಿಜ್ಯ ಬಳಕೆ ಅನಿಲ ಸಿಲಿಂಡರ್ ದರ ಇಳಿಕೆ

ದೆಹಲಿ: ಕೇಂದ್ರ ಸರಕಾರದ ಒಡೆತನದ ತೈಲೋತ್ಪನ್ನ ಕಂಪನಿಗಳು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ಜೂ.1ರಿಂದಲೇ ಜಾರಿಗೆ ಬರುವಂತೆ ಕಡಿಮೆ ಮಾಡಿವೆ. 19 ಕೆಜಿ ವಾಣಿಜ್ಯ ಸಿಲಿಂಡರ್ ದರ 24 ರು. ತಗ್ಗಿದೆ. ಆದರೆ, ಗೃಹ ಬಳಕೆಯ 14 ಕೆಜಿ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಏ.8ರಂದು ಗೃಹಬಳಕೆ ಸಿಲಿಂಡರ್ ದರ ಬದಲಾಗಿತ್ತು. ಇಂಡಿಯನ್ ಆಯಿಲ್ ಕಂಪನಿಯ 19 ಕೆಜಿ ಎಲ್‌ಪಿಜಿ ಸಿಲಿಂಡರ್‌ಗೆ ದೆಹಲಿಯಲ್ಲಿ 1723.50 ರು. ದರವಿದೆ. ಈ ಮೊದಲು 1747.50 ರು.ಗಳಷ್ಟಿತ್ತು. ಕೋಲ್ಕತ್ತದಲ್ಲಿ 1851.50 ರು.ನಿಂದ 1826 ರು.ಗೆ ತಗ್ಗಿದೆ. ಮುಂಬೈನಲ್ಲಿ 1674.50 ರು.ಗೆ, ಚೆನ್ನೈನಲ್ಲಿ 1881 ರು.ಗೆ ಇಳಿಕೆಯಾಗಿದೆ.

ಚಾರ್‌ಧಾಮ್: 16 ಲಕ್ಷ ಭಕ್ತರ ಭೇಟಿ

ಡೆಹ್ರಾಡೂನ್: ಚಾರ್‌ಧಾಮ್ ಯಾತ್ರೆ ಏ.30ರಂದು ಆರಂಭವಾದಾಗಿನಿಂದ ಉತ್ತರಾಖಂಡ್ ರಾಜ್ಯ 16 ಲಕ್ಷ ಭಕ್ತರನ್ನು ಆಕರ್ಷಿಸಿದೆ. ಕೇದಾರನಾಥ ಧಾಮದಲ್ಲಿ ಭಾರೀ ಜನದಟ್ಟಣೆ ಉಂಟಾಗಿತ್ತು. ಮೇ 2ರಂದು ಕೇದಾರನಾಥ ದೇವಾಲಯದ ಬಾಗಿಲು ತೆರೆದ ನಂತರ ಮೇ ಮಾಸದಲ್ಲಿ 6.5 ಲಕ್ಷಕ್ಕೂ ಹೆಚ್ಚು ಭಕ್ತರು ಭೇಟಿ ನೀಡಿದ್ದಾರೆ. ಬದರಿನಾಥ ಧಾಮ ಮೇ 4ರಂದು ಭಕ್ತರಿಗೆ ದರ್ಶನ ಅವಕಾಶ ಮಾಡಿಕೊಟ್ಟಿದೆ.

ಪಾಕ್‌ನ ದುರವಸ್ಥೆ ತೆರೆದಿಟ್ಟ ಷರೀಫ್

ಇಸ್ಲಾಮಾಬಾದ್: ಆಹಾರ ಪದಾರ್ಥಗಳ ಬೆಲೆ ಏರಿಕೆ, ನಿಯಂತ್ರಣಕ್ಕೆ ಸಿಗದ ಹಣದುಬ್ಬರ, ಆರ್ಥಿಕತೆ ಕುಸಿತ, ಸಾಲದ ಹೊರೆ ಮೊದಲಾದ ಸಮಸ್ಯೆಗಳಿಂದ ಪರಿತಪಿಸುತ್ತಿರುವ ಪಾಕಿಸ್ತಾನ, ಇತರೆ ದೇಶಗಳಿಂದ ಸಹಾಯ ಯಾಚಿಸುತ್ತಿದೆ.

ಅದನ್ನು ಖುದ್ದು ಪ್ರಧಾನಿ ಶೆಹಬಾಜ್ ಷರೀಫ್ ಅವರೇ ಒಪ್ಪಿಕೊಂಡಿದ್ದಾರೆ. ಪಾಕಿಸ್ತಾನ ಭಿಕ್ಷಾ ಪಾತ್ರೆಯೊಂದಿಗೆ ಮಿತ್ರ ದೇಶಗಳ ಬಳಿ ಹೋಗಲು ಬಯಸುವುದಕ್ಕೆ. ಬದಲಾಗಿ ವ್ಯಾಪಾರ, ಹೂಡಿಕೆಯಲ್ಲಿ ಸಮಾನ ಪಾಲುದಾರನಾಗಿ ಜಗತ್ತಿನ ಬಳಿ ಹೋಗಲು ಬಯಸುತ್ತದೆ ಎಂದು ಕ್ವೆಟ್ಟಾದಲ್ಲಿನ ಸಭೆಯಲ್ಲಿ ಶೆಹಬಾಜ್ ಷರೀಫ್ ಹೇಳಿದ್ದಾರೆ. ಆ ಮೂಲಕ ಪಾಕ್ ಭಿಕ್ಷಾ ಪಾತ್ರೆ ಹಿಡಿದು ದೇಶಗಳನ್ನು ಸುತ್ತುತ್ತಿರುವುದನ್ನು ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ಇನ್ನೊಂದೆಡೆ, ವಿದೇಶಿ ವಿನಿಮಯ ದರದಲ್ಲೂ ಪಾಕ್ ರುಪಾಯಿ ಅಪಮೌಲ್ಯಗೊಂಡಿದೆ. 282.20 ಪಾಕ್ ರುಪಾಯಿಗಳು ಅಮೆರಿಕದ 1 ಡಾಲರ್‌ಗೆ ಸಮನಾಗಿದೆ. ಪರಿಣಾಮ, ವಿದೇಶಗಳಿಂದ ಆಮದು ವಹಿವಾಟು ಪಾಕ್‌ಗೆ ದೊಡ್ಡ ಹೊರೆ ಎನಿಸುತ್ತಿದೆ.

ಉ.ಪ್ರ. ಮೀರತ್‌ನಲ್ಲಿ ಲಘು ಭೂಕಂಪ

ಮೀರತ್: ಉತ್ತರ ಪ್ರದೇಶದ ಮೀರತ್ ನಗರದಲ್ಲಿ ಭಾನುವಾರ ಬೆಳಗ್ಗೆ 8.44ಕ್ಕೆ ಲಘು ಭೂಕಂಪ ಸಂಭವಿಸಿದೆ. ಭೂಮಿ ಕಂಪಿಸಿದ ಅನುಭವವಾಗುತ್ತಲೇ ಜನರು ಗಾಬರಿಗೊಂಡು ಮನೆಯಿಂದ ಹೊರಗೆ ಓಡಿ ಬಂದಿದ್ದಾರೆ. ಭೂಕಂಪದ ತೀವ್ರತೆ ರಿಕ್ಟರ್ ಮಾಪಕದಲ್ಲಿ 2.7 ರಷ್ಟು ದಾಖಲಾಗಿದೆ. ಮೀರತ್ ಭೂಕಂಪದ ಕೇಂದ್ರಬಿಂದು 28.87 ಡಿಗ್ರಿ ಉತ್ತರ ಮತ್ತು 77.96 ಪೂರ್ವ ರೇಖಾಂಶಗಳಲ್ಲಿ 5 ಕಿ.ಮೀ. ಆಳದಲ್ಲಿದೆ ಎಂದು ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರ ಹೇಳಿದೆ.

{ಎನ್.ಚಂದ್ರಬಾಬು ನಾಯ್ಡು} ಆಂಧ್ರ ಸಿಎಂ

ಬಿಜೆಪಿ ಸ್ಫೂರ್ತಿದಾಯಕ ನಾಯಕತ್ವ ಹೊಂದಿದೆ. ಪ್ರಧಾನಿ ನರೇಂದ್ರ ಮೋದಿ, ಪರಿಣಾಮಕಾರಿ ಕಾರ್ಯವೈಖರಿ, ಕಾರ್ಯಕ್ಷಮತೆ ಆಧರಿಸಿ ಯುವಜನರು, ಪ್ರತಿಭಾವಂತರನ್ನೇ ನಾಯಕತ್ವಕ್ಕೆ ಆಯ್ಕೆ ಮಾಡುತ್ತಿದ್ದಾರೆ. ಹಾಗಾಗಿ ಬಿಜೆಪಿ ನಾಯಕತ್ವ ಚೈತನ್ಯ ಪೂರ್ಣವಾಗಿದೆ. ಪಕ್ಷ ಸಾಧಿಸುತ್ತಿರುವ ಸತತ ಚುನಾವಣಾ ಗೆಲುವುಗಳೇ ನಾಯಕತ್ವದ ಗುಣಮಟ್ಟಕ್ಕೆ ಸಾಕ್ಷಿ.



ಪ್ಯಾರಿಸ್‌ನಲ್ಲಿ ನಾಳೆ ವಿಶ್ವ ವ್ಯಾಪಾರ ಸಂಘಟನೆ ಸಭೆ

ಭಾರತದಿಂದ ಕೃಷಿ, ಮೀನುಗಾರಿಕೆ, ಹೂಡಿಕೆ ಸೌಲಭ್ಯ ಸಮಸ್ಯೆಗಳ ಪ್ರಸ್ತಾವ ನಿರೀಕ್ಷೆ
ವಿವಿಧ ದೇಶಗಳ ವಾಣಿಜ್ಯ ಸಚಿವರ ಜತೆ ಪ್ರತ್ಯೇಕ ಸಭೆ, ರೌಂಡ್ ಟೇಬಲ್ ಕಾನ್ಫರೆನ್ಸ್

ದೆಹಲಿ: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಶ್ವದ ವಿವಿಧ ದೇಶಗಳ ವಿರುದ್ಧ ಸಾರಿರುವ 'ಪ್ರತಿಸುಂಕ' ಸಮರದ ಮಧ್ಯೆಯೇ ಜೂನ್ 3ರಂದು 'ವಿಶ್ವ ವ್ಯಾಪಾರ ಸಂಘಟನೆ'(ಡಬ್ಲ್ಯುಟಿಒ) ಮಹತ್ವದ ಸಭೆ ಜರುಗಲಿದೆ.

ಭಾರತ ಸೇರಿದಂತೆ ಡಬ್ಲ್ಯುಟಿಒ ಜತೆಗಿನ ಒಪ್ಪಂದಕ್ಕೆ ಸಹಿ ಹಾಕಿರುವ ದೇಶಗಳು ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ನಲ್ಲಿ ಮಂಗಳವಾರ ನಡೆಯಲಿರುವ ಈ ಸಭೆಯಲ್ಲಿ ಭಾಗಿಯಾಗಲಿವೆ.

ಭಾರತದ ವಾಣಿಜ್ಯ ಸಚಿವ ಪಿಯೂಶ್ ಗೋಯಲ್ ಸಭೆಯಲ್ಲಿ ಭಾಗಿಯಾಗಲಿದ್ದಾರೆ. ಉಳಿದಂತೆ 25 ದೇಶಗಳ ವಾಣಿಜ್ಯ ಸಚಿವರು ಸಭೆಯಲ್ಲಿ ಚರ್ಚೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಹಳ ಸಮಯದ ನಂತರ ನಡೆಯುತ್ತಿರುವ ಡಬ್ಲ್ಯುಟಿಒ ಸಭೆಯಲ್ಲಿ ಭಾರತ ಕೃಷಿ ಕ್ಷೇತ್ರ, ಮೀನುಗಾರಿಕೆಗೆ ಸಂಬಂಧಿಸಿದ ವಿಚಾರಗಳನ್ನು ಪ್ರಸ್ತಾಪಿಸಲು ಸಜ್ಜಾಗಿದೆ.

ಇದೇ ವೇಳೆ, ಚೀನಾ ದೇಶ ಬಂಡವಾಳ ಹೂಡಿಕೆ ಕ್ಷೇತ್ರದಲ್ಲಿನ ಸೌಲಭ್ಯಗಳು ಮತ್ತು ಕಾರ್ಯವೈಫಲ್ಯದ ಕುರಿತು ಪ್ರಸ್ತಾಪಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಸಾರ್ವಜನಿಕ ಷೇರು ಬಂಡವಾಳದ ತೊಡಗಿಸುವಿಕೆ ವಿಚಾರ ಸೇರಿದಂತೆ ಭಾರತದ ಕೃಷಿ ಕ್ಷೇತ್ರದಲ್ಲಿನ ಹಲವು ಸಮಸ್ಯೆಗಳ ಕುರಿತು ಕೇಂದ್ರ ವಾಣಿಜ್ಯ ಸಚಿವರು ಸಭೆಯಲ್ಲಿ ಪ್ರಮುಖವಾಗಿ ಚರ್ಚೆ ಮಾಡಲಿದ್ದಾರೆ. ಮೀನುಗಾರಿಕೆ ಕ್ಷೇತ್ರದ ಒಪ್ಪಂದಗಳು ಕುರಿತೂ ಸಚಿವರು ಸಭೆಯಲ್ಲಿ ಪ್ರಮುಖವಾಗಿ ಪ್ರಸ್ತಾಪ ಮಾಡಲಿದ್ದಾರೆ. ಇದಿಷ್ಟೇ ಅಲ್ಲದೇ, ಜಿನೇವಾ ಮೂಲದ 'ವಿಶ್ವ ವ್ಯಾಪಾರ ಸಂಘಟನೆ'ಯಲ್ಲಿ ಸುಧಾರಣೆ ತರಬೇಕಿರುವುದು, 2009ರಿಂದಲೂ ಕಾರ್ಯಚಟುವಟಿಕೆಯನ್ನೇ ನಡೆಸದೇ ಇರುವ 'ಡಬ್ಲ್ಯುಟಿಒ ಮೇಲ್ಮನವಿ ಪ್ರಾಧಿಕಾರ'ದ ಕುರಿತೂ ಸಭೆಯ ಗಮನ ಸೆಳೆಯಲಿದ್ದಾರೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮೇಲ್ಮನವಿ ಪ್ರಾಧಿಕಾರ 2009ರಿಂದಲೂ ನಿಷ್ಕ್ರಿಯ

ಅಮೆರಿಕದ ಆಕ್ರಮಣಕಾರಿ ಧೋರಣೆಯ ಕಾರಣದಿಂದಾಗಿ ವಿಶ್ವ ವ್ಯಾಪಾರ ಸಂಘಟನೆಯ ಮೇಲ್ಮನವಿ ಪ್ರಾಧಿಕಾರಕ್ಕೆ ಸದಸ್ಯರ ನೇಮಕವೇ ಆಗಿಲ್ಲ. ಹಾಗಾಗಿ ಮೇಲ್ಮನವಿಗಳ ಪ್ರಾಧಿಕಾರ 2009ರಿಂದಲೂ ನಿಷ್ಕ್ರಿಯವಾಗಿದೆ. ಈ ವಿಚಾರದಲ್ಲಿ ಭಾರತ ಕಳವಳ ವ್ಯಕ್ತಪಡಿಸಿದ್ದು, ಮೇಲ್ಮನವಿ ಪ್ರಾಧಿಕಾರ ಚಟುವಟಿಕೆ ಆರಂಭಿಸಬೇಕು ಎಂದು ಆಗ್ರಹಿಸುತ್ತಿದೆ.

ಚೀನಾದ ಪ್ರಸ್ತಾವಕ್ಕೆ ವಿರೋಧ

ಹೂಡಿಕೆ ವಲಯದಲ್ಲಿನ ಸೌಕರ್ಯಗಳ ಕುರಿತು ನೆರೆಯ ಕಮ್ಯುನಿಸ್ಟ್ ದೇಶ ಚೀನಾ ನೇತೃತ್ವದಲ್ಲಿ 128 ದೇಶಗಳು ಮಂಡಿಸಲಿರುವ 'ಇನ್ವೆಸ್ಟ್‌ಮೆಂಟ್ ಫೆಸಿಲಿಟೇಷನ್ ಫಾರ್ ಡೆವಲಪ್‌ಮೆಂಟ್'(ಐಎಫ್‌ಡಿ) ಪ್ರಸ್ತಾವವನ್ನು ಭಾರತ ತೀವ್ರವಾಗಿ ವಿರೋಧಿಸಲಿದೆ. ಅದಕ್ಕೆ ಬೇಕಾದ ಸಿದ್ಧತೆಯನ್ನೂ ಮಾಡಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

WORLD TRADE ORGANIZATION

ಪ್ಯಾರಿಸ್‌ನಲ್ಲೇ 'ಒಇಸಿಡಿ' ಸಭೆ

ಡಬ್ಲ್ಯುಟಿಒ ಸಭೆಯ ಬಳಿಕ ಪ್ಯಾರಿಸ್ ನಗರದಲ್ಲಿಯೇ 'ಆರ್ಗನೈಸೇಷನ್ ಫಾರ್ ಎಕನಾಮಿಕ್ ಕೊ-ಆಪರೇಷನ್ ಅಂಡ್ ಡೆವಲಪ್‌ಮೆಂಟ್'(ಒಇಸಿಡಿ)ನ ಸಚಿವರ ಮಟ್ಟದ ವಿಶೇಷ ಸಭೆಯೂ ನಡೆಯಲಿದೆ ಎಂದು ಆತಿಥೇಯ ರಾಷ್ಟ್ರ ಫ್ರಾನ್ಸ್‌ನ ಅಧಿಕಾರಿಗಳು ತಿಳಿಸಿದ್ದಾರೆ.

ಸಚಿವ ಗೋಯಲ್ 5 ದಿನಗಳ ಪ್ರವಾಸ

ಡಬ್ಲ್ಯುಟಿಒ ಸಭೆಗಾಗಿ ಪ್ಯಾರಿಸ್‌ಗೆ ಭಾನುವಾರವೇ ತೆರಳಿರುವ ಕೇಂದ್ರದ ವಾಣಿಜ್ಯ ಸಚಿವ ಪಿಯೂಶ್ ಗೋಯಲ್, ಫ್ರಾನ್ಸ್ ಮತ್ತು ಇಟಲಿಯಲ್ಲಿ 5 ದಿನಗಳ ಕಾಲ ಪ್ರವಾಸದಲ್ಲಿರುವರು. ಈ ಸಂದರ್ಭ ಸಚಿವರು ಅಮೆರಿಕ,

ಸಿಂಗಾಪುರ, ಸೌದಿ ಅರೇಬಿಯ, ದಕ್ಷಿಣ ಕೊರಿಯ, ನೈಜೀರಿಯ, ಬ್ರೆಜಿಲ್ ಮತ್ತು ಇಸ್ರೇಲ್‌ನ ವಾಣಿಜ್ಯ ಸಚಿವರುಗಳು ಜತೆಗೆ ಪ್ರತ್ಯೇಕವಾಗಿ ಸಭೆಗಳನ್ನು ನಡೆಸಲಿದ್ದಾರೆ. ದ್ವಿಪಕ್ಷೀಯವಾಗಿ ವ್ಯಾಪಾರ ಸಂಬಂಧ ವೃದ್ಧಿಯ ಕುರಿತು ಮಾತುಕತೆ ನಡೆಸಲಿದ್ದಾರೆ.

ಅಲ್ಲದೇ, ಫ್ರಾನ್ಸ್ ಸರಕಾರದ ಅರ್ಥ ಸಚಿವರಾದ ಎರಿಕ್ ಲೊಂಬಾರ್ಡ್, ವಾಣಿಜ್ಯ ಸಚಿವರಾದ ಲಾರೆಂಟ್ ಸೇಂಟ್ ಮಾರ್ಟಿನ್ ಅವರ ಜತೆಗೂ ಪ್ರತ್ಯೇಕ ಸಭೆಗಳನ್ನು ನಿಗದಿಪಡಿಸಿಕೊಂಡಿದ್ದಾರೆ. ಇದೆಲ್ಲದರ ಹೊರತಾಗಿ ಫ್ರಾನ್ಸ್‌ನ ಪ್ರಮುಖ ವಾಣಿಜ್ಯೋದ್ಯಮ ಸಂಸ್ಥೆಗಳಾದ ವಿಕ್ಯಾಟ್, ಟೋಟಲ್ ಎನರ್ಜೀಸ್, ಲೋರಿಯಲ್, ರೆನಾಲ್ಟ್, ವಾಲೆವೊ, ಇಡಿಎಫ್, ಎಟಿಆರ್ ಕಂಪನಿಗಳ ಪ್ರಮುಖರ ಜತೆಗೂ ಸಭೆ ನಡೆಸಲಿದ್ದಾರೆ. ಇನ್ನೊಂದೆಡೆ ಭಾರತ-ಫ್ರಾನ್ಸ್‌ನ ಬಿಜಿನೆಸ್ ರೌಂಡ್ ಟೇಬಲ್ ಮತ್ತು ಭಾರತ-ಫ್ರಾನ್ಸ್ ಸಿಇಒ ಫೋರಂ ಸಭೆಗಳಲ್ಲಿಯೂ ಭಾಗಿಯಾಗಲಿದ್ದಾರೆ ಎಂದು ಕೇಂದ್ರದ ವಾಣಿಜ್ಯ ಸಚಿವಾಲಯದ ಅಧಿಕೃತ ಪ್ರಕಟಣೆ ಭಾನುವಾರ ತಿಳಿಸಿದೆ.

ಬಾಂಗ್ಲಾ ಪ್ರತಿಭಟನೆ ನಿಗ್ರಹ ವೇಳೆ 1400 ಜನರ ನರಮೇಧ
ಅಂತಾರಾಷ್ಟ್ರೀಯ ನ್ಯಾಯಮಂಡಳಿಗೆ ದೋಷಾರೋಪ ಪಟ್ಟಿ

ಹಸೀನಾ ವಿರುದ್ಧ ವಿಚಾರಣೆ ಶುರು, ಮರಣದಂಡನೆ ಭೀತಿ

ಢಾಕಾ: ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ವಿರುದ್ಧ '2024ರ ಜನಾಂದೋಲನ ಕಾಲದಲ್ಲಿ ವ್ಯವಸ್ಥಿತವಾಗಿ 1400 ಮಂದಿಯ ನರಮೇಧ' ನಡೆಸಿರುವ ದೋಷಾರೋಪವನ್ನು ಹೊರಿಸಲಾಗಿದ್ದು, 'ಬಾಂಗ್ಲಾ ದೇಶದ ಅಂತಾರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿ' ವಿಚಾರಣೆ ಆರಂಭಿಸಿದೆ.

ಬಾಂಗ್ಲಾದೇಶದಿಂದ ಹೊರಹಾಕಲ್ಪಟ್ಟ ಶೇಖ್ ಹಸೀನಾ ಅವರಿಗೆ ಬಾಂಗ್ಲಾ ನ್ಯಾಯಮಂಡಳಿ ವಿಚಾರಣೆ ಪೂರ್ಣಗೊಳಿಸಿದ ಬಳಿಕ ಮರಣದಂಡನೆ ವಿಧಿಸಬಹುದು ಎಂದು ಹೇಳಲಾಗುತ್ತಿದೆ. ಷೇಕ್ ಹಸೀನಾ ಪ್ರಸ್ತುತ ಭಾರತದಲ್ಲಿ ಆಶ್ರಯ ಪಡೆದಿದ್ದಾರೆ.

2024ರಲ್ಲಿ ಬಾಂಗ್ಲಾದೇಶದಲ್ಲಿ ನಡೆದ ವಿದ್ಯಾರ್ಥಿಗಳ ನೇತೃತ್ವದಲ್ಲಿ ಆಗಿನ ಸರಕಾರದ ವಿರುದ್ಧ ನಡೆದ ಚಳವಳಿಯಲ್ಲಿ ಹಿಂಸಾತ್ಮಕ ದಮನಕ್ಕೆ ಅಂದಿನ ಪ್ರಧಾನಿ ಶೇಖ್ ಹಸೀನಾ ಆದೇಶ ನೀಡಿದ್ದರು ಹಾಗೂ ಇಬ್ಬರು ಹಿರಿಯ ಅಧಿಕಾರಿಗಳು ಮಾನವೀಯತೆ ವಿರುದ್ಧದ ಅಪರಾಧಗಳಿಗೆ ಕಾರಣವಾಗಿದ್ದರು ಎಂದು ಹಾಲಿ ಮಧ್ಯಂತರ ಸರಕಾರದ ಪ್ರಾಸಿಕ್ಯೂಟರ್‌ಗಳು ಆರೋಪ ಹೊರಿಸಿದ್ದಾರೆ.

ಶೇಖ್ ಹಸೀನಾ ಸರಕಾರದ ಭದ್ರತಾ ಪಡೆಗಳು, ತಮ್ಮದೇ ನೇತೃತ್ವದ ರಾಜಕೀಯ ಪಕ್ಷ ಮತ್ತು ಗುಂಪುಗಳನ್ನು ಬಳಸಿಕೊಂಡು ದೊಡ್ಡ ಸಂಖ್ಯೆಯಲ್ಲಿ ನಾಗರಿಕರನ್ನು ಕೊಲ್ಲಿಸಿದ್ದಾರೆ ಎಂಬ ಗಂಭೀರ ಆರೋಪವಿರುವ ತನಿಖಾ ವರದಿಯನ್ನೂ ನ್ಯಾಯಮಂಡಳಿಗೆ ಸಲ್ಲಿಸಲಾಗಿದೆ.

ಸರಕಾರದ ಪರವಾದ ಮುಖ್ಯ ಪ್ರಾಸಿಕ್ಯೂಟರ್ ತಾಜುಲ್ ಇಸ್ಲಾಂ, ನರಹತ್ಯೆಗಳನ್ನು ದೊಡ್ಡ ಮಟ್ಟದಲ್ಲಿ ಯೋಜಿಸಲಾಗಿತ್ತು ಎಂದು ಭಾನುವಾರ ನಡೆದ ವಿಚಾರಣೆ ವೇಳೆ ಹೇಳಿದರು. ಜತೆಗೆ ವಿವಿಧ ಏಜೆನ್ಸಿಗಳ ವಿಡಿಯೊ ಪುರಾವೆಗಳು ಮತ್ತು ರಹಸ್ಯ ಸಂದೇಶಗಳನ್ನು ಉಲ್ಲೇಖಿಸಿದರು. ಪ್ರಕರಣದಲ್ಲಿ 81 ಜನರನ್ನು ಸಾಕ್ಷಿಗಳಾಗಿ ಹೆಸರಿಸಲಾಗಿದೆ ಎಂದರು.

ಬೈಗುಳ ಆತ್ಮಹತ್ಯೆಗೆ ಪ್ರೇರಣೆ ಎನ್ನಲಾಗದು: ಸುಪ್ರೀಂ

ದೆಹಲಿ: ವಿದ್ಯಾರ್ಥಿಯನ್ನು ಬೈದು ಆತ್ಮಹತ್ಯೆಗೆ ಪ್ರಚೋದನೆ ಉಂಟು ಮಾಡಿದ ಆರೋಪ ಹೊತ್ತಿದ್ದ ಹಾಸ್ಟೆಲ್ ಉಸ್ತುವಾರಿ ಅಧಿಕಾರಿಯೊಬ್ಬರನ್ನು ಸುಪ್ರೀಂ ಕೋರ್ಟ್ ಖುಲಾಸೆಗೊಳಿಸಿದೆ. ವಿದ್ಯಾರ್ಥಿಯ ಅಕಾಲಿಕ ಮರಣಕ್ಕೆ ಶಾಲೆ ಮತ್ತು ಹಾಸ್ಟೆಲ್ ಉಸ್ತುವಾರಿ ವಹಿಸಿಕೊಂಡಿದ್ದ ಆರೋಪಿಯನ್ನು ಹೊಣೆಗಾರನನ್ನಾಗಿ ಮಾಡಲು ಸಮರ್ಪಕ ಪುರಾವೆಗಳು ಪ್ರಕರಣದಲ್ಲಿ ಇಲ್ಲ ಎಂದು ಶನಿವಾರ ತೀರ್ಪು ನೀಡಿದೆ.

ಮತ್ತೊಬ್ಬ ವಿದ್ಯಾರ್ಥಿ ದೂರಿದ್ದಕ್ಕೆ ವಿದ್ಯಾರ್ಥಿಯನ್ನು ಹಾಸ್ಟೆಲ್ ವಾರ್ಡನ್ ಬೈದಿದ್ದರು. ನಂತರ ಬೈಸಿಕೊಂಡ ವಿದ್ಯಾರ್ಥಿ ಕೊಠಡಿಯಲ್ಲಿ ನೇಣು ಬಿಗಿದುಕೊಂಡು ಸಾವಿಗೀಡಾದ. ವಾರ್ಡನ್ ವಿರುದ್ಧ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 306ರಡಿ ಆತ್ಮಹತ್ಯೆಗೆ ಪ್ರಚೋದನೆ ಆರೋಪ ಹೊರಿಸಲಾಗಿತ್ತು. ವಿಚಾರಣಾ ನ್ಯಾಯಾಲಯ ವಾರ್ಡನ್‌ಗೆ ಶಿಕ್ಷೆ ವಿಧಿಸಿತ್ತು. ಮೇಲ್ಮನವಿ ವಿಚಾರಣೆ ನಡೆಸಿದ ಮದ್ರಾಸ್ ಹೈಕೋರ್ಟ್ ಪ್ರಕರಣ ರದ್ದುಗೊಳಿಸಲು ನಿರಾಕರಿಸಿತ್ತು. ಶಿಕ್ಷೆಗೊಳಗಾದ ವ್ಯಕ್ತಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ವಿಚಾರಣೆ ನಡೆಸಿದ ನ್ಯಾ. ಅಹ್ಸಾನುದ್ದೀನ್ ಅಮಾನುಲ್ಲಾ ಮತ್ತು ನ್ಯಾ.ಪ್ರಶಾಂತ್ ಕುಮಾರ್ ಮಿಶ್ರಾ ಅವರ ಪೀಠ, ಬೈಗುಳದಿಂದ ವಿದ್ಯಾರ್ಥಿ ಆತ್ಮಹತ್ಯೆಗೆ ಪ್ರಚೋದನೆ ಪಡೆದ. ಅದರಿಂದಲೇ ಈ ದುರಂತ ಸಂಭವಿಸಿತು ಎಂದು ಊಹಿಸಲೂ ಸಾಧ್ಯವಿಲ್ಲ ಎಂದು ಹೇಳಿ ಆರೋಪಿಯನ್ನು ಖುಲಾಸೆಗೊಳಿಸಿತು.

ಇಸ್ರೇಲ್ ಸೇನೆ ದಾಳಿಗೆ ಗಾಜಾದಲ್ಲಿ 30 ಸಾವು

ರಫಾ: ಗಾಜಾ ಸ್ಟ್ರಿಪ್‌ನ ದಕ್ಷಿಣ ಭಾಗದ ರಫಾ ನಗರದಲ್ಲಿರುವ ಅಮೆರಿಕ ಪ್ರಾಯೋಜಿತ ನೆರವು ವಿತರಣಾ ಕೇಂದ್ರದ ಬಳಿ ಇಸ್ರೇಲ್ ಸೇನಾಪಡೆ ಶೆಲ್ ದಾಳಿ ನಡೆಸಿದ್ದರಿಂದ 30 ಜನರು ಸಾವಿಗೀಡಾಗಿ 115 ಮಂದಿ ಗಾಯಗೊಂಡಿದ್ದಾರೆ. ಭಾನುವಾರ ಮುಂಜಾನೆ ಪರಿಹಾರ ಸಾಮಗ್ರಿ ಸ್ವೀಕರಿಸಲು ಸಾವಿರಾರು ಪ್ಯಾಲೆಸ್ತೀನಿಯನ್ನರು ಸಾಲುಗಟ್ಟಿದ್ದಾಗ ದಾಳಿಯಾಗಿದೆ.

ಏತನ್ಮಧ್ಯೆ, ಗಾಜಾದಲ್ಲಿ ಕದನ ವಿರಾಮಕ್ಕೆ ಅಮೆರಿಕ ಮಂಡಿಸಿದ ಪ್ರಸ್ತಾಪಕ್ಕೆ ಇಸ್ರೇಲ್ ಸರಕಾರ ಒಪ್ಪಿಗೆ ನೀಡಿದೆ, ಆದರೆ ಗಾಜಾದ ಉಗ್ರ ಸಂಘಟನೆ ಹಮಾಸ್ ಈ ಪ್ರಸ್ತಾವಕ್ಕೆ ಒಪ್ಪಿಗೆ ಸೂಚಿಸಿಲ್ಲ. ಪ್ರಸ್ತಾವನೆಯಲ್ಲಿ ಹಲವು ತಿದ್ದುಪಡಿಗಳಿಗೆ ಹಮಾಸ್ ನಾಯಕರು ಒತ್ತಾಯಿಸಿದ್ದಾರೆ.

2023ರ ಅ.7ರಂದು ಇಸ್ರೇಲ್‌ನ ದಕ್ಷಿಣ ಭಾಗದಲ್ಲಿ ನಡೆದಿದ್ದ ಸಂಗೀತ ಕಾರ್ಯಕ್ರಮದ ಮೇಲೆ ಗಾಜಾದ ಹಮಾಸ್ ಉಗ್ರರು ದಾಳಿ ನಡೆಸಿ 1200ಕ್ಕೂ ಅಧಿಕ ಜನರನ್ನು ಕೊಂದು, 250 ಜನರನ್ನು ಅಪಹರಿಸಿದರು. ಆ ಬಳಿಕ ಗಾಜಾ ವಿರುದ್ಧ ಇಸ್ರೇಲ್ ಸೇನೆ ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದು, ಸಾವಿರಾರು ಹಮಾಸ್ ಉಗ್ರರನ್ನು ಕೊಂದುಹಾಕಿದೆ. ಈ ಸೇನಾ ಕಾರ್ಯಾಚರಣೆಯಲ್ಲಿ ಈವರೆಗೆ ಹಮಾಸ್ ಉಗ್ರರು ಸೇರಿದಂತೆ 54,381 ಜನರು ಹತರಾಗಿದ್ದಾರೆ.

ಉಕ್ರೇನ್ ಡ್ರೋನ್ ದಾಳಿಗೆ ರಷ್ಯಾ ತತ್ತರ

ಮಾಸ್ಕೊ: 3 ವರ್ಷಗಳಿಂದ ನಡೆಯುತ್ತಿರುವ ರಷ್ಯಾ-ಉಕ್ರೇನ್ ಯುದ್ಧ ಮತ್ತೊಮ್ಮೆ ತಾರಕಕ್ಕೇರಿದೆ. ಮೊದಲ ಬಾರಿಗೆ ಉಕ್ರೇನ್‌ನಿಂದ ರಷ್ಯಾ ಮೇಲೆ ಅತಿ ದೊಡ್ಡ ಪ್ರಮಾಣದ ಡ್ರೋನ್ ದಾಳಿ ನಡೆದಿದೆ.

ತನ್ನ ಸೇನಾ ನೆಲೆಗಳ ಮೇಲೆ ದಾಳಿ ಮಾಡಿದ್ದ ರಷ್ಯಾ ವಿರುದ್ಧ ಸಿಟ್ಟಿಗೆದ್ದಿದ್ದ ಉಕ್ರೇನ್ ತಿರುಗಿ ಕೊಟ್ಟ ಹೊಡೆತಕ್ಕೆ ರಷ್ಯಾ ಅಕ್ಷರಶಃ ತತ್ತರಿಸಿಹೋಗಿದೆ. ಸೈಬಿರಿಯಾ ಪ್ರದೇಶದಲ್ಲಿರುವ ರಷ್ಯಾದ ಪ್ರಮುಖ ವಾಯುನೆಲೆಗಳ ಮೇಲೆ ಉಕ್ರೇನ್ ಸೇನಾಪಡೆಗಳು ಹಲವಾರು ಡ್ರೋನ್‌ಗಳನ್ನು ಬಳಸಿಕೊಂಡು ತೀವ್ರ ಸ್ವರೂಪದ ದಾಳಿ ಮಾಡಿವೆ. ಪರಿಣಾಮ ರಷ್ಯಾದ ವಾಯುಪಡೆಯ 40ಕ್ಕೂ ಅಧಿಕ ಯುದ್ಧ ವಿಮಾನಗಳು ನಾಶವಾಗಿವೆ.

ವಾಯುನೆಲೆಗೆ ದಾಳಿ, 40 ಯುದ್ಧ ವಿಮಾನ ನಾಶ

ಡ್ರೋನ್ ದಾಳಿಗೆ ರಷ್ಯಾ ವಾಯುನೆಲೆಗಳು ಬೆಂಕಿಯಲ್ಲಿ ಸುಟ್ಟು ಹೋಗಿರುವ, ಯುದ್ಧ ವಿಮಾನಗಳು ಹೊತ್ತಿ ಉರಿಯುತ್ತಿರುವ ವಿಡಿಯೊಗಳೂ ವೈರಲ್ ಆಗಿವೆ.

ದಾಳಿಯಲ್ಲಿ ನಾಶವಾದ ವಿಮಾನಗಳಲ್ಲಿ ರಷ್ಯಾದ ಪ್ರಮುಖ ಫೈಟರ್ ಜೆಟ್‌ಗಳಾದ ಟಿಯು-95 ಮತ್ತು ಟಿಯು-22ಎಂ3 ಬಾಂಬರ್ ಮತ್ತು ಎ-50 ವಿಮಾನಗಳು ಸೇರಿವೆ. ಉಕ್ರೇನ್ ಪ್ರಮುಖವಾಗಿ ರಷ್ಯಾದ ಅತ್ಯಂತ ಶಕ್ತಿಶಾಲಿಯಾದ ಬಾಂಬರ್ ಯುದ್ಧ ವಿಮಾನಗಳನ್ನೇ ಗುರಿಯಾಗಿಸಿಕೊಂಡು ಡ್ರೋನ್ ಮೂಲಕ ಪ್ರಬಲ ದಾಳಿ ನಡೆಸಿದೆ. ಬಳಿಕ ಬೆಲಾಯಾ ವಾಯುನೆಲೆಯಲ್ಲಿ ಬೆಂಕಿ ಕಾಣಿಸಿಕೊಂಡಿದೆ.

ಇದು ಸೈಬೀರಿಯಾದಲ್ಲಿ ನಡೆದ ಮೊದಲ ದಾಳಿ ಎಂದು ರಷ್ಯಾ ಅಧಿಕಾರಿಗಳು ತಿಳಿಸಿದ್ದಾರೆ. ರಷ್ಯಾದ ಸರಕಾರಿ ಮಾಧ್ಯಮ ಸಂಸ್ಥೆಯೂ ದಾಳಿಯನ್ನು ಖಾತ್ರಿ ಪಡಿಸಿ ವಿಡಿಯೊ ಹಂಚಿಕೊಂಡಿದೆ.

ದ್ವೇಷ ಭಾಷಣಕ್ಕೆ ಜೈಲು: ಅನ್ಸಾರಿ ಶಾಸಕತ್ವ ರದ್ದು

ಲಖನೌ: ಉತ್ತರ ಪ್ರದೇಶದ ಮೌಸರ್ದಾ ಕ್ಷೇತ್ರದ ಶಾಸಕ ಅಬ್ಬಾಸ್ ಅನ್ಸಾರಿ 2022ರಲ್ಲಿನ ಪ್ರಚೋದನಕಾರಿ ಭಾಷಣ ಮತ್ತು ಅಧಿಕಾರಿಗಳಿಗೆ ಬೆದರಿಕೆ ಹಾಕಿದ ಪ್ರಕರಣದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿರುವುದರಿಂದ ವಿಧಾನಸಭೆ ಸದಸ್ಯತ್ವವನ್ನು ಕಳೆದುಕೊಂಡಿದ್ದಾರೆ. ಮಾಜಿ ಶಾಸಕ ಮುಖ್ತಾರ್ ಅನ್ಸಾರಿ ಪುತ್ರ ಅಬ್ಬಾಸ್ ಅನ್ಸಾರಿಗೆ ಜನಪ್ರತಿನಿಧಿಗಳ ನ್ಯಾಯಾಲಯ 2 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಅದರ ಬೆನ್ನಲ್ಲೇ ಅಬ್ಬಾಸ್ ಅನ್ಸಾರಿ ವಿಧಾನಸಭೆ ಸದಸ್ಯತ್ವ ರದ್ದಾಗಿದೆ. ಉತ್ತರ ಪ್ರದೇಶ ವಿಧಾನಸಭೆ ಪ್ರಧಾನ ಕಾರ್ಯದರ್ಶಿ ಪ್ರದೀಪ್ ದುಬೆ ಅವರು ಮೌಸರ್ದಾ ವಿಧಾನಸಭಾ ಕ್ಷೇತ್ರ ಖಾಲಿಯಾಗಿದೆ ಎಂದು ಘೋಷಿಸಿ ಚುನಾವಣಾ ಆಯೋಗಕ್ಕೆ ಭಾನುವಾರ ಮಾಹಿತಿ ನೀಡಿದ್ದಾರೆ.

ಭಾರೀ ಮಳೆಗೆ ಈಶಾನ್ಯ ಭಾರತ ತತ್ತರ

ಸಿಕ್ಕಿಂ ರಾಜ್ಯದಲ್ಲಿ ಭೂಕುಸಿತ-ಪ್ರವಾಹ | ಅಸ್ಸಾಂ, ಮೇಘಾಲಯ ಸಂಪರ್ಕ ಕಡಿತ | 31 ಮಂದಿ ಸಾವು, 1500 ಪ್ರವಾಸಿಗರಿಗೆ ಸಂಕಷ್ಟ

ದೆಹಲಿ: ಅಸ್ಸಾಂ, ಮೇಘಾಲಯ, ಸಿಕ್ಕಿಂ ಸೇರಿದಂತೆ ಈಶಾನ್ಯ ಭಾರತದಲ್ಲಿ ಕಳೆದ 3 ದಿನಗಳಿಂದಲೂ ಭಾರೀ ಮಳೆಯಾಗುತ್ತಿದೆ. ಪರಿಣಾಮ ಪ್ರವಾಹ ಪರಿಸ್ಥಿತಿ ಸೃಷ್ಟಿಯಾಗಿದೆ. ಹಲವೆಡೆ ಭೂಕುಸಿತವಾಗಿದೆ. ರಾಷ್ಟ್ರೀಯ ಹೆದ್ದಾರಿ-17ರಲ್ಲಿ ಮೇಘಾಲಯದ ತುರಾ ಮತ್ತು ಅಸ್ಸಾಂನ ಗುವಾಹಟಿ ನಡುವಿನ ರಸ್ತೆ ಸಂಪರ್ಕ ಕಡಿತಗೊಂಡಿದೆ. ಟ್ರಕ್‌ಗಳು ಸೇರಿದಂತೆ ಸಾವಿರಾರು ಹೆದ್ದಾರಿಯಲ್ಲಿ ಮಳೆ, ಪ್ರವಾಹ, ಭೂಕುಸಿತದ ಮಧ್ಯೆ ಸಿಲುಕಿ ಮುಂದಕ್ಕೂ ಹೋಗಲಾಗದೇ, ಹಿಂದಕ್ಕೂ ಚಲಿಸಲಾಗದೇ ಸ್ಥಗಿತಗೊಂಡಿವೆ. ಅರುಣಾಚಲ ಪ್ರದೇಶದ ಪೂರ್ವ ಕಮೆಂಗ್ ಜಿಲ್ಲೆಯಲ್ಲಿಯೂ ರಾಷ್ಟ್ರೀಯ ಹೆದ್ದಾರಿ- 13ರಲ್ಲಿ ಭೂಕುಸಿತವಾಗಿದೆ.

ಸತತ ವರ್ಷ ಧಾರೆಯಿಂದ ಪ್ರವಾಹ-ಭೂಕುಸಿತ ಉಂಟಾಗಿ ಅಸ್ಸಾಂನಲ್ಲಿ 8 ಮಂದಿ, ಅರುಣಾಚಲ ಪ್ರದೇಶದಲ್ಲಿ 9 ಮಂದಿ ಸೇರಿದಂತೆ ಈಶಾನ್ಯ ಭಾರತದಲ್ಲಿ ಒಟ್ಟು 31 ಮಂದಿ ಮಳೆ ಸಂಬಂಧಿತ ಅವಘಡಗಳಲ್ಲಿ ಸಾವಿಗೀಡಾಗಿದ್ದಾರೆ.

ಭಾರೀ ಮಳೆ ಸುರಿಯುತ್ತಿರುವ ಪರಿಣಾಮ ಅಸ್ಸಾಂನ ಕೆಲವು ಭಾಗಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ರಾಜ್ಯದ 12 ಜಿಲ್ಲೆಗಳು ಪ್ರವಾಹ ಹಾಗೂ ಭೂಕುಸಿತದಿಂದ ನಷ್ಟ ಅನುಭವಿಸಿದೆ.

ವಾಹನ ನದಿಗುರುಳಿ 9 ಮಂದಿ ನಾಪತ್ತೆ

ಸಿಕ್ಕಿಂನಲ್ಲಿ ಮುನ್ಸಿಥಾಂಗ್ ಬಳಿ ಚಾಲಕ ಮತ್ತು 10 ಪ್ರವಾಸಿಗರಿದ್ದ ವಾಹನ 1,000 ಅಡಿಗೂ ಹೆಚ್ಚು ಆಳದ ನದಿಗೆ ಬಿದ್ದಿತ್ತು. ಒಡಿಶಾದ ಇಬ್ಬರು ಪ್ರವಾಸಿಗರನ್ನು ರಕ್ಷಿಸಿ ಗ್ಯಾಂಗ್‌ಟಕ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಒಡಿಶಾದ ನಾಲ್ವರು, ತ್ರಿಪುರ ಮತ್ತು ಉತ್ತರ ಪ್ರದೇಶದ ತಲಾ ಇಬ್ಬರು ಮತ್ತು ಚಾಲಕ ಕಾಣೆಯಾದವರು ಎಂದು ಮಂಗನ್ ಎಸ್‌ಪಿ ಸೋನಮ್ ಡೆಚು ಭುಟಿಯಾ ಸುದ್ದಿಸಂಸ್ಥೆಗೆ ಭಾನುವಾರ ತಿಳಿಸಿದ್ದಾರೆ. ಭಾರೀ ಮಳೆಯಿಂದಾಗಿ ತೀಸ್ತಾ ನದಿಯಲ್ಲಿ ನೀರಿನ ಮಟ್ಟ ಹೆಚ್ಚಾಗಿದ್ದು, ಹಲವೆಡೆ ಭೂಕುಸಿತವಾಗಿದೆ. ಮುಖ್ಯ ರಸ್ತೆಗಳು ಮುಚ್ಚಿಹೋಗಿರುವುದರಿಂದ ಉತ್ತರ ಸಿಕ್ಕಿಂನ ಲಾಚೆನ್‌ನಲ್ಲಿ 115 ಪ್ರವಾಸಿಗರು ಮತ್ತು ಲಾಚುಂಗ್‌ನಲ್ಲಿ 1,350 ಪ್ರವಾಸಿಗರು ಸಂಕಷ್ಟದಲ್ಲಿದ್ದಾರೆ. ರಸ್ತೆಗಳು ಸಂಚಾರಕ್ಕೆ ಸಿದ್ಧವಾದ ನಂತರ ಪ್ರವಾಸಿಗರನ್ನು ರಕ್ಷಿಸಿ ಕರೆತರಲಾಗುವುದು ಎಂದು ಮಂಗನ್ ಜಿಲ್ಲಾಧಿಕಾರಿ ಅನಂತ್ ಜೈನ್ ಹೇಳಿದ್ದಾರೆ.

ಶುಶ್ರೂಷಕಿಯ ನಿರ್ಲಕ್ಷ್ಯಕ್ಕೆ ಹಸುಗೂಸು ಬೆರಳೇ ಕಟ್

ವೆಲ್ಲೂರು: ತಮಿಳುನಾಡು ರಾಜ್ಯದ ಮುಲ್ಲಿಪಾಳ್ಯಂ ನಿವಾಸಿ ವಿಮಲ್ ರಾಜ್ (30) ಮತ್ತು ನಿವೇತಾ (24) ದಂಪತಿಗೆ ಮೇ 24ರಂದು ಅದುಕ್ಕಂಪರೈನಲ್ಲಿರುವ ವೆಲ್ಲೂರು ಸರಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಗಂಡು ಮಗು ಜನಿಸಿದೆ. ಆದರೆ, ಹಿರಿಯ ಶುಶ್ರೂಷಕಿಯ ಮೊಬೈಲ್ ಫೋನ್ ವ್ಯಸನದ ಕಾರಣ ಹಸುಗೂಸಿನ ಕೈ ಹೆಬ್ಬೆರಳೇ ಕತ್ತರಿಸಿಹೋಗಿದೆ.



ಪ್ರಸವದ ನಂತರ ಶಿಶುವನ್ನು ಇನ್ಕ್ಯುಬೇಟರ್‌ನಲ್ಲಿ ಇರಿಸಲಾಗಿತ್ತು. ಮಗು ಆಮ್ನಿಯೋಟಿಕ್ ದ್ರವ ನುಂಗಿದೆ ಎಂಬ ಕಾರಣಕ್ಕೆ ಐವಿ ಡ್ರಿಪ್ಸ್ ನೀಡಲಾಗಿತ್ತು. ಗ್ಲುಕೋಸ್ ನಳಿಕೆಯನ್ನು ಶಿಶುವಿನ ಬಲಗೈ ರಕ್ತನಾಳಕ್ಕೆ ಜೋಡಿಸಿದ್ದು, ಅದರ ಗಮ್‌ಟೇಪ್ ತೆಗೆಯಲು ಹಿರಿಯ ಶುಶ್ರೂಷಕಿ ಕತ್ತರಿ ಬಳಸಿದ್ದಾರೆ. ಮೊಬೈಲ್ ಫೋನಲ್ಲಿ ಮಾತನಾಡುತ್ತಲೇ ಕೆಲಸ ಮಾಡಿದ್ದರಿಂದ ಕತ್ತರಿ ಗಮ್‌ಟೇಪ್ ಕತ್ತರಿಸುವ ಬದಲು ಪುಟ್ಟ ಕಂದನ ಬಲಗೈ ಹೆಬ್ಬೆರಳನ್ನೇ ತುಂಡಾಗಿಸಿದೆ.

ಗಮ್‌ಟೇಪ್ ತೆಗೆಯಲು ನರ್ಸ್ ಕೈ ಬಳಸಬಹುದಿತ್ತು. ಆದರೆ, ಕತ್ತರಿ ಬಳಸಿ ನಮ್ಮ ಮಗುವನ್ನು ಅಂಗವಿಕಲನಾಗಿಸಿದರು. ಈ ಅವಘಡಕ್ಕೆ ನರ್ಸ್ ಮೊಬೈಲ್ ಫೋನ್ ವ್ಯಸನವೇ ಕಾರಣವಾಗಿದೆ. ಮಗುವಿನ ಕೈಯಿಂದ ರಕ್ತ ಹರಿಯುವುದನ್ನು ನೋಡಿದ ನರ್ಸ್ ಮಗುವನ್ನು ಐಸಿಯುಗೆ ಕರೆದೊಯ್ದರು. ನಂತರ ಮಗುವನ್ನು ಪ್ಲಾಸ್ಟಿಕ್ ಸರ್ಜರಿಗಾಗಿ ಸ್ಟಾನ್ಲಿ ಸರಕಾರಿ ಆಸ್ಪತ್ರೆಗೆ ಕರೆದೊಯ್ಯಲು ನಮಗೆ ಹೇಳಿದರು. ಶನಿವಾರ ಸ್ಟಾನ್ಲಿ ಆಸ್ಪತ್ರೆಯಲ್ಲಿ ಹೆಬ್ಬೆರಳನ್ನು ಕೈಗೆ ಜೋಡಿಸಿ ಹೊಲಿಗೆ ಹಾಕಲಾಗಿದೆ ಎಂದು ಶಿಶುವಿನ ತಂದೆ ವಿಮಲ್ ರಾಜ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಸ್ಕ್‌ಗೆ ಬೀಳ್ಕೊಡುಗೆ: ಕಣ್ಣಿನ ಗಾಯ ಬಗ್ಗೆ ಊಹಾಪೋಹ!

ವಾಷಿಂಗ್ಟನ್ ಡಿ.ಸಿ: ಉದ್ಯಮಿ ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷರಾಗಿ 2ನೇ ಬಾರಿ ಅಧಿಕಾರ ವಹಿಸಿಕೊಂಡಾಗ ಅವರ ಆಡಳಿತದಲ್ಲಿ ಸುಧಾರಣೆ ತರಲು ಮತ್ತು ಸರಕಾರದ ಅನಗತ್ಯ ವೆಚ್ಚ ತಪ್ಪಿಸಲೆಂದೇ ರಚಿಸಿದ 'ಡಿಪಾರ್ಟ್‌ಮೆಂಟ್ ಆಫ್ ಗವರ್ನಮೆಂಟ್ ಎಫಿಷಿಯನ್ಸಿ'(ಡಿಒಜಿಎ) ನೇತೃತ್ವ ವಹಿಸಿಕೊಂಡ ವಿಶ್ವದ ನಂ.1 ಶ್ರೀಮಂತ ಉದ್ಯಮಿ ಎಲಾನ್ ಮಸ್ಕ್, ಈಗ ಆ ಹುದ್ದೆಯಿಂದ ನಿರ್ಗಮಿಸಿದ್ದಾರೆ. ಹಾಗಾಗಿ ಅವರಿಗೆ ಶ್ವೇತಭವನ ಶನಿವಾರ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಿತ್ತು.

ಕಾರ್ಯಕ್ರಮದಲ್ಲಿ ಎಲ್ಲರ ಕಣ್ಣು ಕುಕ್ಕಿದ್ದು ಮಾತ್ರ ಅಡಿಯಿಂದ ಮುಡಿಯವರೆಗೂ ಕಡುಗಪ್ಪು ವರ್ಣದ ಶೂ, ಧಿರಿಸು, ಟೋಪಿ ಧರಿಸಿದ್ದ ಎಲಾನ್ ಮಸ್ಕ್ ಮತ್ತು ಅವರ ಎಡಗಣ್ಣಿನ ಪಕ್ಕದಲ್ಲಿದ್ದ ಕಪ್ಪು ಗಾಯದ ಗುರುತು!

ಮುಷ್ಟಿಯಿಂದ ಬಲವಾಗಿ ಗುದ್ದಿದರೆ ಆಗುವ ಗಾಯದಂತೆ ಮಸ್ಕ್ ಎಡಗಣ್ಣಿನ ಬಳಿ ಚರ್ಮ ನೀಲಿಗಟ್ಟಿದೆ. ಮಸ್ಕ್ ಮುಖದ ಮೇಲಿನ ಗಾಯದ ಗುರುತು ಸುದ್ದಿಗೋಷ್ಠಿಯಲ್ಲಿ ಹಲವು ಊಹಾಪೋಹಗಳಿಗೆ ಕಾರಣವಾಗಿದೆ. ಟೆಸ್ಲಾ ಕಾರು ಕಂಪನಿಯ ಸಿರಿವಂತ ಮಾಲೀಕನ ಮುಖಕ್ಕೆ ಗುದ್ದಿದವರು ಯಾರು? ಎಂಬ ಪ್ರಶ್ನೆ ಮೂಡಿದೆ.

'ಕಣ್ಣಿನ ಬಳಿಯ ಗಾಯ ಹೇಗಾಯಿತು?' ಎಂಬ ಮಾಧ್ಯಮದ ಪ್ರಶ್ನೆಗೆ 'ಮಗ 'ಎಕ್ಸ್' ಜತೆ ಆಟವಾಡುತ್ತಿದ್ದಾಗ ಆತ ಮುಖಕ್ಕೆ ಮುಷ್ಟಿಯಿಂದ ಗುದ್ದಿದ' ಎಂದು ಮಸ್ಕ್ ಉತ್ತರಿಸಿದ್ದಾರೆ. ಆ ಮೂಲಕ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ. ಎಲಾನ್ ಮಸ್ಕ್ 'ಡಿಒಜಿಇ'ಯಿಂದ ನಿರ್ಗಮಿಸಿದ್ದರೂ ಅವರು ನನ್ನ ಸ್ನೇಹಿತರಾಗಿಯೇ ಇರುತ್ತಾರೆ. ನನ್ನ ಸಲಹೆಗಾರನಾಗಿಯೂ ಮುಂದುವರಿಯುತ್ತಾರೆ ಎಂದು ಟ್ರಂಪ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ಕೋವಿಡ್-19 ಸಕ್ರಿಯ ಪ್ರಕರಣ 3,758ಕ್ಕೆ ಏರಿಕೆ

ದೆಹಲಿ: ಕೋವಿಡ್-19 ರೂಪಾಂತರಿ ವೈರಸ್‌ಗಳು ದೇಶದಲ್ಲಿ ಮರಳಿ ಹಾವಳಿ ಎಬ್ಬಿಸಿವೆ. ಈವರೆಗೂ ಚೀನಾ ಮೂಲದ ವೈರಸ್ ಹಾವಳಿಯಿಂದ ದೂರ ಉಳಿದು ಸುರಕ್ಷಿತವಾಗಿದ್ದ ಈಶಾನ್ಯ ಭಾರತದ ರಾಜ್ಯ ಸಿಕ್ಕಿಂ ಕೂಡಾ ಈಗ 3 ಸಕ್ರಿಯ ಪ್ರಕರಣಗಳೊಂದಿಗೆ ಕರೋನಾ ಸೋಂಕಿತ ರಾಜ್ಯಗಳ ಪಟ್ಟಿಗೆ ಸೇರಿಕೊಂಡಿದೆ.



ದಕ್ಷಿಣದ ತುತ್ತ ತುದಿಯ ಕೇರಳದಿಂದ ಆರಂಭಿಸಿ ದೇಶಾದ್ಯಂತ ಕರೋನಾ ಸೋಂಕು ವೇಗವಾಗಿ ಹರಡುತ್ತಿದೆ. ಭಾನುವಾರ ಮುಂಜಾನೆ 8ರ ವೇಳೆ ಪ್ರಕಟವಾದ ಕೇಂದ್ರದ ಆರೋಗ್ಯ ಸಚಿವಾಲಯದ ಅಂಕಿ ಅಂಶಗಳ ಪ್ರಕಾರ ಕಳೆದ 24 ಗಂಟೆಗಳ ಅವಧಿಯಲ್ಲಿ ಹೊಸದಾಗಿ 363 ಕೋವಿಡ್-19 ಪಾಸಿಟಿವ್ ಪ್ರಕರಣಗಳು ವರದಿಯಾಗಿವೆ. ಪರಿಣಾಮ ದೇಶದಲ್ಲಿನ ಕರೋನಾ ಸಕ್ರಿಯ ಪ್ರಕರಣಗಳ ಸಂಖ್ಯೆ 3758ಕ್ಕೆ ಮುಟ್ಟಿದೆ. ಶನಿವಾರ 3395 ಸಕ್ರಿಯ ಪ್ರಕರಣಗಳಿದ್ದವು.

ಕರೋನಾ ಪೀಡಿತರ ಸಂಖ್ಯೆಯಲ್ಲಿ ಕೇರಳ 1400ಕ್ಕೂ ಅಧಿಕ ಕೋವಿಡ್-19 ಕೇಸ್‌ಗಳೊಂದಿಗೆ ಮೊದಲ ಸ್ಥಾನದಲ್ಲಿದ್ದರೆ, ಮಹಾರಾಷ್ಟ್ರ 485 ಪಾಸಿಟಿವ್ ಪ್ರಕರಣ ಮತ್ತು 7 ಸಾವುಗಳ ಕಾರಣ ಕರೋನಾ ಪಟ್ಟಿಯಲ್ಲಿ 2ನೇ ಸ್ಥಾನದಲ್ಲಿದೆ. ದೆಹಲಿಯಲ್ಲಿನ ಕರೋನಾ ಸಕ್ರಿಯ ಪ್ರಕರಣಗಳ ಸಂಖ್ಯೆ 436ಕ್ಕೇರಿದೆ. ಗುಜರಾತ್‌ನಲ್ಲಿ ಒಂದೇ ದಿನದಲ್ಲಿ ಹೊಸದಾಗಿ 82 ಪ್ರಕರಣಗಳು ದಾಖಲಾಗುವುದರೊಂದಿಗೆ ಕರೋನಾ ಪ್ರಕರಣಗಳ ಒಟ್ಟು ಸಂಖ್ಯೆ 287ಕ್ಕೆ ಮುಟ್ಟಿದೆ. ಕರ್ನಾಟಕ, ಪಶ್ಚಿಮ ಬಂಗಾಳ 200ರ ಗಡಿ ದಾಟಿವೆ. ತಮಿಳುನಾಡು-199, ಉತ್ತರ ಪ್ರದೇಶ -149 ಪ್ರಕರಣ ವರದಿಯಾಗಿವೆ.

ಮಹಾರಾಷ್ಟ್ರದಲ್ಲಿ 7 ಸಾವು ಸೇರಿದಂತೆ ದೇಶದಲ್ಲಿನ ಒಟ್ಟು 26 ಸೋಂಕಿತರು ಅಸುನೀಗಿದ್ದಾರೆ.

ಸಮಾಚಾರ ಸಣ್ಣದಲ್ಲ

ಮಹಿಳಾ ಉದ್ಯಮಿಗಳಿಗೆ ಪ್ರಶಸ್ತಿ ಪ್ರದಾನ ಜೂ.4ಕ್ಕೆ

ಬೆಂಗಳೂರು: ಮಹಿಳಾ ಉದ್ಯಮಿಗಳಾಗ ಬಯಸುವವರಿಗೆ ಸಲಹೆ, ಕೌಶಲ್ಯ ಅಭಿವೃದ್ಧಿ ಕಾರ್ಯಾಗಾರ, ಆರ್ಥಿಕ ಬೆಂಬಲವನ್ನು ನೀಡುತ್ತಾ ಭಾರತದಾದ್ಯಂತ ಮಹಿಳಾ ಉದ್ಯಮಿಗಳಿಗೆ ಕ್ರಿಯಾತ್ಮಕ ವೇದಿಕೆಯನ್ನು ಕಲ್ಪಿಸುತ್ತಿರುವ ಉಬುಂಟು ಮಹಿಳಾ ನಿಯೋಗವು ಅಂತರಾಷ್ಟ್ರೀಯ ಮಹಿಳಾ ದಿನದ ಹಿನ್ನೆಲೆಯಲ್ಲಿ ಜೂನ್ 4 ಬೆಂಗಳೂರಿನ ಯಶವಂತಪುರದಲ್ಲಿರುವ ತಾಜ್ ವಿವಂತ ಹೋಟೆಲ್‌ನಲ್ಲಿ ವುಮೆನ್ ಆಫ್ ವರ್ತ್ (ವಾವ್) 2025ರ 5ನೇ ಆವೃತ್ತಿಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಸಾರ್ವಜನಿಕ ಉದ್ಯಮಗಳ ಖಾತೆಯ ಸಚಿವ ಶರಣಬಸಪ್ಪ ದರ್ಶನಾಪುರ, ಉಬುಂಟು ಸಂಸ್ಥಾಪಕಿ ಕೆ.ರತ್ನಪ್ರಭಾ ಭಾಗವಹಿಸಲಿದ್ದಾರೆ.

ತಂಬಾಕಿನ ದುಷ್ಪರಿಣಾಮ ಸಿಗ್ನಲ್‌ನಲ್ಲಿ ಜಾಗೃತಿ

ಬೆಂಗಳೂರು: ವಿಶ್ವ ತಂಬಾಕು ರಹಿತ ದಿನ ನಿಮಿತ್ತ ಶಿಲ್ಪಾ ಫೌಂಡೇಶನ್, ಬನಶಂಕರಿ 2ನೇ ಹಂತದ ಬ್ರಿಗೇಡ್ ಸಾಫ್ಟ್‌ಟೆಕ್ ಪಾರ್ಕ್ ಸೇರಿ ಸುತ್ತಮುತ್ತಲಿನ ಟ್ರಾಫಿಕ್ ಸಿಗ್ನಲ್‌ನಲ್ಲಿ ತಂಬಾಕುನಿಂದ ಆಗುವ ಪರಿಣಾಮ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು. 'ದಮ್ ಇದ್ರೆ ಧಮ್ ಬಿಟ್ಟುಬಿಡಿ', ಧೂಮಪಾನ ನಿಲ್ಲಿಸಿ ಬದುಕಲು ಆರಂಭಿಸಿ', 'ನಿಮಗಾಗಿ ನಿಮ್ಮವರಿಗಾಗಿ ತಂಬಾಕು ತ್ಯಜಿಸಿ' ಮತ್ತು 'ತಂಬಾಕು ಮುಕ್ತ ಜೀವನ' ಲಕ ಹಿಡಿದು ಜಾಥಾ ನಡೆಸಲಾಯಿತು. ಶಿಲ್ಪಾ ಫೌಂಡೇಶನ್‌ನ ಸ್ವಯಂ ಸೇವಕರು ವಾಹನ ಸವಾರರಿಗೆ ಮತ್ತು ಸಾರ್ವಜನಿಕರಿಗೆ ಹೂ,ಹಣ್ಣು ನೀಡಿ ತಂಬಾಕು ವ್ಯಸನಗಳ ಬಗ್ಗೆ ಜಾಗೃತಿ ಮೂಡಿಸಿದರು. ಸಂಸ್ಥೆ ಸಂಸ್ಥಾಪಕ ಅಚ್ಚುತ್‌ಗೌಡ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಶಾಲಾ-ಕಾಲೇಜಿನ ಮಕ್ಕಳಿಗೆ ತಂಬಾಕು ಉತ್ಪನ್ನಗಳು ಸುಲಭವಾಗಿ ಸಿಗುತ್ತಿರುವುದು ಅಪಾಯಕಾರಿ ಬೆಳವಣಿಗೆ.ಯುವ ಜನಾಂಗವೂ ಚಟ ಬೆಳಸಿಕೊಂಡು ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿದೆ. ತಂಬಾಕು ಉತ್ಪನ್ನಗಳ ಮಾರಾಟ ತಡೆಗೆ ಸರಕಾರವು ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕಿದೆ. ತಂಬಾಕು ಸೇವನೆ ತ್ಯಜಿಸುವ ಮೂಲಕ ಆರೋಗ್ಯಯುತ ಜೀವನಶೈಲಿ ರೂಪಿಸಿಕೊಳ್ಳಬೇಕು. ಇವುಗಳ ಸೇವನೆ ಬದಲಾಗಿ ಪುಸ್ತಕಗಳನ್ನು ಅಭ್ಯಾಸಿಸಿದರೆ ಜ್ಞಾನಾರ್ಜನೆ ವೃದ್ಧಿಯಾಗುತ್ತದೆ ಎಂದು ಸಲಹೆ ನೀಡಿದರು.

ಆಪರೇಷನ್ ಸಿಂದೂರ ಕುರಿತು ಪ್ರಬಂಧ ಸ್ಪರ್ಧೆ

ದೆಹಲಿ: 'ಆಪರೇಷನ್ ಸಿಂದೂರ' ವಿಷಯದ ಬಗ್ಗೆ ಜೂನ್ 1ರಿಂದ 30ರವರೆಗೆ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿದೆ ಎಂದು ರಕ್ಷಣಾ ಸಚಿವಾಲಯ ಭಾನುವಾರ ಘೋಷಿಸಿದೆ. ಸಚಿವಾಲಯವು ತನ್ನ 'ಎಕ್ಸ್' ಖಾತೆಯಲ್ಲಿ, ಮೊದಲ ಮೂರು ಸ್ಥಾನ ಪಡೆಯುವ ವಿಜೇತರಿಗೆ ತಲಾ ₹10,000 ನಗದು ಮತ್ತು ದೆಹಲಿಯ ಕೆಂಪುಕೋಟೆಯಲ್ಲಿ ನಡೆಯಲಿರುವ 78ನೇ ಸ್ವಾತಂತ್ರ್ಯೋತ್ಸವ ಸಂಭ್ರಮಾಚರಣೆಯಲ್ಲಿ ಭಾಗಿಯಾಗುವ ಅವಕಾಶ ನೀಡಲಾಗುವುದು. ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪ್ರಬಂಧ ಬರೆಯಬಹುದಾಗಿದೆ ಎಂದು ತಿಳಿಸಿದೆ. 'ಆಪರೇಷನ್ ಸಿಂದೂರ' ಲೋಗೊ ಮತ್ತು ಸ್ಪರ್ಧೆಯ ವಿವರಗಳಿರುವ ಪೋಸ್ಟರ್ ಅನ್ನು ಹಂಚಿಕೊಂಡಿದೆ.

ಇಸ್ರೇಲ್ ದಾಳಿ: 31 ನಾಗರಿಕರು ಸಾವು

ರಫಾ: ಗಾಜಾಪಟ್ಟಿಯಲ್ಲಿ ಇಸ್ರೇಲ್ ಸೇನೆಯು ನಡೆಸಿದ ದಾಳಿಯಲ್ಲಿ ನಡೆಸಿದ್ದು, 31 ಜನರು ಮೃತಪಟ್ಟಿದ್ದಾರೆ ಹಾಗೂ ಹಲವರು ಗಾಯಗೊಂಡಿದ್ದಾರೆ. ಆಹಾರ ಸ್ವೀಕರಿಸಲು ತೆರಳುತ್ತಿದ್ದ ಜನರ ಗುಂಪಿನ ಮೇಲೆ ದಾಳಿ ನಡೆದಿದೆ ಎಂದು ಗಾಜಾದ ಆರೋಗ್ಯ ಸಚಿವಾಲಯ ಭಾನುವಾರ ತಿಳಿಸಿದೆ. ಮಾನವೀಯ ನೆರವು ವಿತರಣಾ ಕೇಂದ್ರದ ಬಳಿ ಗುಂಡಿನ ದಾಳಿ ನಡೆದಿರುವ ಬಗ್ಗೆ ಮಾಹಿತಿ ಇಲ್ಲ ಎಂದು ಇಸ್ರೇಲ್ ಸೇನೆ ತಿಳಿಸಿದೆ. ಅಲ್ಲದೇ ನಾಗರಿಕರ ಮೇಲೆ ಇಸ್ರೇಲ್ ಸೇನೆ ದಾಳಿ ನಡೆಸಿದೆ ಎನ್ನುವುದನ್ನು ತಳ್ಳಿ ಹಾಕಿದೆ. ಸ್ಥಳದಲ್ಲಿ ಯಾವುದೇ ಗುಂಡಿನ ದಾಳಿ ಭಾನುವಾರ ನಡೆದಿಲ್ಲ ಎಂದು ಆಹಾರ ವಿತರಿಸುತ್ತಿದ್ದ ಸಂಸ್ಥೆಯು ಹೇಳಿದೆ. ಇದು ಇಸ್ರೇಲ್ ಬೆಂಬಲಿತ ಸಂಸ್ಥೆಯಾಗಿದೆ.

2026ರ ಬಳಿಕ ದೀದಿ ಸಿಎಂ ಆಗಿರುವುದಿಲ್ಲ



ಕೋಲ್ಕತ್ತ: 2026ರವರೆಗೆ ವಕ್ಫ್ ತಿದ್ದುಪಡಿ ಕಾಯ್ದೆಯನ್ನು ಮಮತಾ ಬ್ಯಾನರ್ಜಿಯವರು ವಿರೋಧಿಸಬಹುದು, ಆ ಬಳಿಕ ಅವರು ಮುಖ್ಯಮಂತ್ರಿಯಾಗಿ ಇರುವುದಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಕೋಲ್ಕತ್ತದಲ್ಲಿ ನಡೆದ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ವಕ್ಫ್ ಕಾಯ್ದೆಯಲ್ಲಿ ಏನಾದರೂ ಸಮಸ್ಯೆ ಇದೆಯೇ? ವಕ್ಫ್ ಕಾರಣದಿಂದಾಗಿ ಬಂಗಾಳದ ಭೂಮಿಯನ್ನು ತ್ಯಾಗ ಮಾಡಬೇಕೇ? ಎಂದು ಪ್ರಶ್ನಿಸಿದ್ದಾರೆ. ವಕ್ಫ್ ಕಾಯ್ದೆಯನ್ನು ವಿರೋಧಿಸಿ ಮಮತಾ ಬ್ಯಾನರ್ಜಿ ಯಾರ ಪರವಾಗಿ ನಿಲ್ಲುತ್ತಿದ್ದಾರೆ? ಎಂದು ಕೇಳಿದ್ದಾರೆ.

{ **ಯೋಗಿ ಆದಿತ್ಯನಾಥ** } ಉತ್ತರ ಪ್ರದೇಶ ಸಿಎಂ

ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸಶಸ್ತ್ರ ಪಡೆ ಪಾಕಿಸ್ತಾನದ ಮೇಲೆ ನಡೆಸಿರುವ 'ಆಪರೇಷನ್ ಸಿಂದೂರ' ಕಾರ್ಯಾಚರಣೆಯು ಮರಾಠಾ ಸಾಮ್ರಾಜ್ಯದ ರಾಣಿ ಅಹಲ್ಯಾಬಾಯಿ ಹೋಳ್ಕರ್ ಅವರು ಪ್ರತಿಪಾದಿಸಿರುವ ಆತ್ಮರಕ್ಷಣೆಯ ತತ್ವಗಳಿಂದ ಪ್ರೇರಿತವಾಗಿದೆ.

ಸಿಂಗಪುರದಲ್ಲಿ ಸಿಡಿಎಸ್ ಅನಿಲ್ ಚೌಹಾಣ್ ಹೇಳಿಕೆ ಬೆನ್ನಲ್ಲೇ ಆಗ್ರಹ

ಸಂಸತ್ತಿನ ವಿಶೇಷ ಅಧಿವೇಶನ ಕರೆಯಲು ಕಾಂಗ್ರೆಸ್ ಒತ್ತಾಯ

ದೆಹಲಿ: ಆಪರೇಷನ್ ಸಿಂದೂರ ಕಾರ್ಯಾಚರಣೆಯಲ್ಲಿ ದೇಶದ ಯುದ್ಧ ವಿಮಾನಗಳ ನಷ್ಟದ ಕುರಿತು ರಕ್ಷಣಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಅನಿಲ್ ಚೌಹಾಣ್ ಹೇಳಿಕೆಯ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಕಾಂಗ್ರೆಸ್, ರಕ್ಷಣಾ ಮತ್ತು ವಿದೇಶಾಂಗ ನೀತಿಗಳ ಕಾರ್ಯತಂತ್ರದ ಕುರಿತು ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯುವಂತೆ ಆಗ್ರಹಿಸಿದೆ.

'ಸಿಡಿಎಸ್ ಅನಿಲ್ ಚೌಹಾಣ್ ಅವರು ಸಿಂಗಪುರದಲ್ಲಿ ಕೆಲವು ಪ್ರಮುಖ ಹೇಳಿಕೆಗಳನ್ನು ನೀಡಿದ್ದಾರೆ. ಮೊದಲೇ ನಡೆದಿದ್ದ ಸರ್ವಪಕ್ಷಗಳ ಸಭೆಯಲ್ಲಿ ಪ್ರಧಾನಿ ಅಥವಾ ರಕ್ಷಣಾ ಸಚಿವರು ಈ ಸಂಗತಿಗಳನ್ನು ಪ್ರತಿಪಕ್ಷಗಳ ನಾಯಕರಿಗೆ ತಿಳಿಸಿದ್ದರೆ ಚೆನ್ನಾಗಿತ್ತು' ಎಂದು ಎಐಸಿಸಿಯ ಸಂವಹನ ವಿಭಾಗದ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಹೇಳಿದರು.

'ಆಪರೇಷನ್ ಸಿಂದೂರ ಕಾರ್ಯಾಚರಣೆಯ ನಂತರದಲ್ಲಿ ವಿದೇಶಾಂಗ ನೀತಿಯ ಕಾರ್ಯತಂತ್ರ ಮತ್ತು ಆರ್ಥಿಕ ವಿಚಾರಗಳಿಗೆ ಸಂಬಂಧಿಸಿದಂತೆ ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯಬೇಕೆಂಬ ಬೇಡಿಕೆಗೆ ಅನಿಲ್ ಚೌಹಾಣ್ ಅವರ ಹೇಳಿಕೆಗಳು ಬಲ ತುಂಬಿವೆ' ಎಂದು ತಿಳಿಸಿದರು.

'ಪಾಕಿಸ್ತಾನದ ಜತೆಗೆ ಈಚೆಗೆ ನಡೆದ ಮಿಲಿಟರಿ ಸಂಘರ್ಷದ ಆರಂಭದಲ್ಲಿ ಭಾರತ ಕೆಲವು ಯುದ್ಧ ವಿಮಾನಗಳನ್ನು ಕಳೆದುಕೊಂಡಿದೆ. ಬಳಿಕ ನಾವು ತಂತ್ರಗಾರಿಕೆಯನ್ನು ಬದಲಿಸಿಕೊಂಡೆವು' ಎಂದು ಚೌಹಾಣ್ ಸಿಂಗಪುರದಲ್ಲಿ ಶನಿವಾರ ಹೇಳಿದ್ದರು.

ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಈ ವಿಷಯಗಳನ್ನು ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಚರ್ಚಿಸಬೇಕು. ಅಮೆರಿಕ ಯುದ್ಧ ವಿರಾಮ ಪ್ರಕಟಿಸುತ್ತಿದ್ದಂತೆಯೇ ನಾಯಕರು ಆಪರೇಷನ್ ಸಿಂದೂರ ಕುರಿತು ಚರ್ಚಿಸಲು ವಿದೇಶಗಳಿಗೆ ತೆರಳಿದ್ದಾರೆ. ಪ್ರಶ್ನೆಗಳಿಗೆ ಯಾರು ಉತ್ತರಿಸುತ್ತಾರೆ? ಉತ್ತರ ಸರಕಾರದಿಂದ ಬರಬೇಕು, ಸೇನಾಪಡೆಗಳಿಂದ ಅಲ್ಲ.

-ಪವನ್ ಖೇರಾ
ಎಐಸಿಸಿ ಮಾಧ್ಯಮ, ಪ್ರಚಾರ ವಿಭಾಗದ ಮುಖ್ಯಸ್ಥ



ಇತ್ತೀಚಿನ ಮಿಲಿಟರಿ ಸಂಘರ್ಷದ ಕುರಿತು ಜನರಿಗೆ ಒಗ್ಗಟ್ಟಿನ ಉತ್ತರ ಬೇಕಿದೆ. ನಾಯಕರು ಭಿನ್ನವಾದ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಸಿಡಿಎಸ್, ನಮ್ಮ ಯುದ್ಧ ವಿಮಾನ ನಷ್ಟವಾಗಿರುವುದನ್ನು ಒಪ್ಪಿಕೊಂಡು ಬೇರೊಂದು ರೀತಿಯಲ್ಲಿ ಮಾತನಾಡಿದ್ದಾರೆ. ಸರಕಾರ ಇದನ್ನು ಸ್ಪಷ್ಟಪಡಿಸಬೇಕು.

-ಪ್ರಮೋದ್ ತಿವಾರಿ
ರಾಜ್ಯಸಭೆ ಪ್ರತಿಪಕ್ಷದ ಉಪನಾಯಕ

ಸರ್ವಪಕ್ಷಗಳ ಸಭೆ ಮತ್ತು ವಿಶೇಷ ಅಧಿವೇಶನವನ್ನು ಕರೆಯುವಂತೆ ನಾವು ಆಗ್ರಹಿಸುತ್ತಲೇ ಇದ್ದೇವೆ. ಕಾರ್ಗಿಲ್ ಯುದ್ಧದ ಬಳಿಕ ನಡೆಸಿದ ಮಾದರಿಯಲ್ಲೇ ವಿಶೇಷ ಅಧಿವೇಶನ ಕರೆದು ಈ ಬಗ್ಗೆ ಚರ್ಚಿಸಬೇಕು. ಕಾರ್ಗಿಲ್ ಯುದ್ಧ ಅಂತ್ಯವಾದ ಬಳಿಕ ಈಗಿನ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರ ತಂದೆಯ ಅಧ್ಯಕ್ಷತೆಯಲ್ಲಿ ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಪರಿಶೀಲನಾ ಸಮಿತಿಯೊಂದನ್ನು ರಚಿಸಿದ್ದರು. ಸಮಿತಿಯ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಿ ಚರ್ಚಿಸಲಾಗಿತ್ತು. ಈಗ ಅಂತಹ ಸಮಿತಿ ರಚಿಸಲಾಗುವುದೇ?

-ಜೈರಾಂ ರಮೇಶ್ ಎಐಸಿಸಿ ಸಂವಹನ ವಿಭಾಗದ ಪ್ರಧಾನ ಕಾರ್ಯದರ್ಶಿ

ಐಐಟಿಯಿಂದ ಬ್ರೈಲ್ ಮಾದರಿಯ ರಿಮೋಟ್ ಡಿವೈಸ್ ಅಭಿವೃದ್ಧಿ

ಅಂಧ ಪ್ರಯಾಣಿಕರಿಗಾಗಿ ಬಿಎಂಟಿಸಿ ಹೊಸ ಪ್ರಯೋಗ

ಬೆಂಗಳೂರು: ಬಿಎಂಟಿಸಿಯಲ್ಲಿ ಪ್ರಯಾಣಿಸುವ ಅಂಧ ಪ್ರಯಾಣಿಕರಿಗೆ ಪ್ರಯಾಣಿಸಬೇಕಾಗಿದ್ದ ಬಸ್ ಎಲ್ಲಿದೆ? ಯಾವುದು ಎಂದು ತಿಳಿಯುವುದು ಸಮಸ್ಯೆಯಾಗುತ್ತಿರುವ ಹಿನ್ನೆಲೆ ಐಐಟಿಯು ಹೊಸ ಡಿವೈಸ್‌ನ್ನು ಅಭಿವೃದ್ಧಿಪಡಿಸಿದೆ.

ನಿಗಮದಲ್ಲಿ 6800 ಬಸ್‌ಗಳಿದ್ದು, 40 ಲಕ್ಷ ಪ್ರಯಾಣಿಕರು ಸಂಚರಿಸುತ್ತಿದ್ದು, ನೂರಾರು ಅಂಧರು ಸೇರಿದ್ದಾರೆ. ನಗರದಲ್ಲಿ ದೃಷ್ಟಿ ಮಾಂದ್ಯರು ಸಂಚಾರ ನಡೆಸುವಲ್ಲಿ, ಯಾವ ಬಸ್‌ನಲ್ಲಿ ಸಂಚರಿಸುತ್ತಾರೆ ಅದು ಯಾವ ನಿಲ್ದಾಣಕ್ಕೆ ಬರುತ್ತದೆ ಎಂಬುದರ ಮಾಹಿತಿಯನ್ನು ತಿಳಿಯಲು ಹೊಸ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ. ದೃಷ್ಟಿ ಚೇತನರಿಗಾಗಿ ವಿಶೇಷವಾಗಿ ರಿಮೋಟ್ ಡಿವೈಸ್‌ನ್ನು ಸಿದ್ಧಪಡಿಸಿದ್ದು, ಬ್ರೈಲ್ ಮಾದರಿಯಲ್ಲಿ ಅಂಧರಿಗಾಗಿ ವ್ಯವಸ್ಥೆ ಮಾಡಲಾಗಿದೆ.

ಈ ಮೂಲಕ ಅಂಧರಿಗೆ ಸುರಕ್ಷಿತ ಹಾಗೂ ಸುಲಭ ಸಂಚಾರಕ್ಕೆ ಅನುವು ಮಾಡಿಕೊಡಲು ಬಿಎಂಟಿಸಿ ಮುಂದಾಗಿದೆ.

ಅಂಧರು ನಗರದ ಯಾವುದೇ ಬಸ್ ಸ್ಟ್ಯಾಂಡ್‌ನಲ್ಲಿ ನಿಂತು ಈ ರಿಮೋಟ್ ಡಿವೈಸ್ ಪ್ರೆಸ್ ಮಾಡಿದರೂ ಸಾಕು, ಬಿಎಂಟಿಸಿ ಬಸ್‌ಗಳು ಅವರು ಇರುವ ಜಾಗದಲ್ಲಿ ನಿಲ್ಲಲಿವೆ. ಈ ವಿಶೇಷವಾಗಿ ಸಿದ್ಧವಾಗಿರುವ ರಿಮೋಟ್ ಡಿವೈಸ್‌ನಲ್ಲಿ ಬ್ರೈಲ್ ಮಾದರಿಯ ವ್ಯವಸ್ಥೆಯಿದ್ದು, ಆ ರಿಮೋಟ್‌ನ ಬಟನ್ ಪ್ರೆಸ್ ಮಾಡಿದರೆ, ಆ ಮಾರ್ಗದ ಬಸ್‌ಗಳಿಗೆ ಮಾಹಿತಿ ಗೊತ್ತಾಗಲಿದೆ ಎಂದು ಬಿಎಂಟಿಸಿ ಮೂಲಗಳು ತಿಳಿಸಿವೆ.

ಮೊದಲ ಹಂತದಲ್ಲಿ 25 ಬಸ್‌ಗಳಲ್ಲಿ ಸಾಧನ ಅಳವಡಿಕೆ

ಮೊದಲ ಹಂತದಲ್ಲಿ ಬಿಎಂಟಿಸಿಯ 25 ಬಸ್‌ಗಳಲ್ಲಿ ಕಮ್ಯುನಿಕೇಷನ್ ಡಿವೈಸ್‌ಗಳನ್ನು ಅಳವಡಿಸಲಾಗಿದ್ದು, ಈಗಾಗಲೇ 401ಓ ಯಲಹಂಕ ಟು ಕೆಂಗೇರಿ, 401ಓಆಯಶವಂತಪುರ ಟು ಕೆಂಗೇರಿ ಮಾರ್ಗದಲ್ಲಿ ಸಂಚಾರ ಮಾಡುವ ಬಿಎಂಟಿಸಿ ಬಸ್‌ಗಳಲ್ಲಿ ಈ ವ್ಯವಸ್ಥೆ ಅಳವಡಿಸಲಾಗಿದೆ. ಯಶವಂತಪುರ ಟು ಕೆಂಗೇರಿ ಮಾರ್ಗದಲ್ಲಿ ಅತಿ ಹೆಚ್ಚಿನ ದೃಷ್ಟಿಮಾಂದ್ಯರು ಸಂಚಾರ ಮಾಡುವುದು ಬಿಎಂಟಿಸಿಗೆ ಗೊತ್ತಾಗಿದೆ. ಈ ನವೆಂಬರ್ ಒಳಗೆ ಬಿಎಂಟಿಸಿಯ 500 ಬಸ್‌ಗಳಿಗೆ ಈ ಆನ್ ಬೋರ್ಡ್ ಟೆಕ್ನಾಲಜಿ ಅಳವಡಿಸಲಾಗುತ್ತದೆ.ಮುಂದಿನ ದಿನಗಳಲ್ಲಿ ಎಲ್ಲಾ ಬಸ್‌ಗಳಲ್ಲಿ ಅಳವಡಿಸಲು ಚಿಂತನೆ ನಡೆಸಲಾಗಿದೆ.

ಗೃಹ ಆರೋಗ್ಯ ಯೋಜನೆ ವಿಸ್ತರಣಾ ಕಾರ್ಯಕ್ರಮಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ಇಂದು

ರೋಗ ತಡೆಗಟ್ಟಲು ಆರೋಗ್ಯ ಇಲಾಖೆ ವಿಶಿಷ್ಟ ಯೋಜನೆ

ಬೆಂಗಳೂರು: ಅಸಾಂಕ್ರಾಮಿಕ ರೋಗ ನಿಯಂತ್ರಣಕ್ಕಾಗಿ ಸರಕಾರದ ಮಹತ್ವಾಕಾಂಕ್ಷಿ ಗೃಹ ಆರೋಗ್ಯ ಯೋಜನೆಯ ಕಾರ್ಯಾಗಾರ ಹಾಗೂ ವಿಸ್ತರಣಾ ಕಾರ್ಯಕ್ರಮಕ್ಕೆ ಇಂದು (ಜೂ.2) ಚಾಲನೆ ನೀಡಲಾಗುತ್ತದೆ.

ಬೆಳಗ್ಗೆ 11 ಗಂಟೆಗೆ ವಿಕಾಸಸೌಧದ ಕೊಠಡಿ ಸಂಖ್ಯೆ 419ರಲ್ಲಿ ಕಾರ್ಯಕ್ರಮಕ್ಕೆ ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಅವರು ಚಾಲನೆ ನೀಡಲಿದ್ದಾರೆ. ಈ ಯೋಜನೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ 30ಕ್ಕೂ ಹೆಚ್ಚು ವಯಸ್ಸಿನ ಜನರಿಗೆ 14 ಅಸಾಂಕ್ರಾಮಿಕ ರೋಗಗಳ ತಪಾಸಣೆ ಮತ್ತು ನಿರ್ವಹಣೆ ಒದಗಿಸಲಾಗುತ್ತದೆ. ಈ ಯೋಜನೆಯಿಂದಾಗಿ ಆರಂಭಿಕ ತಪಾಸಣೆ, ಉಚಿತ ಮತ್ತು ನಿರಂತರ ಔಷಧಿ ಒದಗಿಸುವಿಕೆಯಿಂದಾಗಿ ಅಸಾಂಕ್ರಾಮಿಕ ರೋಗಗಳ ಅಡ್ಡ ಪರಿಣಾಮ ಮತ್ತು ಅಕಾಲಿಕ ಮರಣ ತಡೆಗಟ್ಟಬಹುದಾಗಿದೆ.

ಗ್ರಾಮೀಣ ಜನರ ಆರೋಗ್ಯ ಕಾಳಜಿಗಾಗಿ ಕ್ರಮ

ರಾಜ್ಯದ ಗ್ರಾಮೀಣ ಭಾಗ ಸೇರಿದಂತೆ ಅನೇಕರು ತಮಗೆ ರಕ್ತದೊತ್ತಡ, ಸಕ್ಕರೆ ಕಾಯಿಲೆಯ ಲಕ್ಷಣಗಳಿದ್ದರೂ ತಪಾಸಣೆ ಮಾಡಿಸಿಕೊಳ್ಳದೆ ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಇದೇ ಅನೇಕರ ಜೀವಕ್ಕೆ ಕುತ್ತು ತರುತ್ತಿದೆ. ಸಕ್ಕರೆ ಕಾಯಿಲೆ ಮತ್ತು ರಕ್ತದೊತ್ತಡದಿಂದ ಹೃದಯಾಘಾತ ಸೇರಿದಂತೆ ಅನೇಕ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿವೆ. ಅನೇಕ ಆರೋಗ್ಯ ಸಮಸ್ಯೆಗಳಿಗೆ ರಕ್ತದೊತ್ತಡ, ಸಕ್ಕರೆ ಖಾಯಿಲೆಯೇ ಪ್ರಮುಖವಾಗಿ ಕಾರಣವಾಗಿದೆ. ಇದನ್ನು ಪರಿಗಣಿಸಿ ಆರೋಗ್ಯ ಇಲಾಖೆ, ರಾಜ್ಯದಲ್ಲಿ ಹೊಸದೊಂದು ಆರೋಗ್ಯ ಯೋಜನೆಯನ್ನು ಜಾರಿಗೊಳಿಸಿದೆ.

ಏನಿದು ಗೃಹ ಆರೋಗ್ಯ ಯೋಜನೆ?

ಗೃಹ ಆರೋಗ್ಯ ಸರಕಾರದ ನೂತನ ಆರೋಗ್ಯ ಯೋಜನೆ. ಮನೆ ಬಾಗಿಲಿನಲ್ಲೇ ಆರೋಗ್ಯ ತಪಾಸಣೆ ನಡೆಸಿ, ಔಷಧ ವಿತರಿಸುವ ಮೂಲಕ ಜನರ ಆರೋಗ್ಯ ಸುಧಾರಿಸುವುದು ಯೋಜನೆಯ ಉದ್ದೇಶ. ಸಮುದಾಯ ಆರೋಗ್ಯ ಕೇಂದ್ರದ ವೈದ್ಯರು, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಸೇರಿದಂತೆ ಆಶಾ ಕಾರ್ಯಕರ್ತೆಯರು ಗ್ರಾಮೀಣ ಪ್ರದೇಶದ ಪ್ರತಿ ಮನೆಗಳಿಗೆ ಭೇಟಿ ನೀಡಿ ಉಚಿತವಾಗಿ 30 ವರ್ಷ ಮೇಲ್ಪಟ್ಟವರ ಆರೋಗ್ಯ ತಪಾಸಣೆ ಮಾಡುತ್ತಾರೆ. ಪ್ರತಿ ಮಂಗಳವಾರ, ಬುಧವಾರ, ಶುಕ್ರವಾರ ಮತ್ತು ಶನಿವಾರದಂದು ದಿನಕ್ಕೆ 15 ಮನೆಗಳಿಗೆ ಭೇಟಿ ನೀಡಿ ಆರೋಗ್ಯ ತಪಾಸಣೆ ಕಾರ್ಯ ನಡೆಸಲಿದ್ದಾರೆ.

ಯಾವೆಲ್ಲಾ ಕಾಯಿಲೆ ಪರೀಕ್ಷೆ ಲಭ್ಯ?

ಆರೋಗ್ಯ ಕಾರ್ಯಕರ್ತರ ತಂಡವು ರಕ್ತದೊತ್ತಡ, ಮಧುಮೇಹ ಮತ್ತು ಬಾಯಿ, ಗರ್ಭ ಕಂಠ ಮತ್ತು ಸ್ತನ ಕ್ಯಾನ್ಸರ್ ಸ್ಕ್ರೀನಿಂಗ್, ವೇಸ್ಟ್ ಹಿಪ್ ರೇಷಿಯೋ ಅನುಪಾತ, ಸ್ಲೀಪ್ ಅಪ್ನಿಯಾ (ನಿದ್ದೆಯಲ್ಲಿ ಉಸಿರುಗಟ್ಟುವಿಕೆ) ಮತ್ತು ಮಾನಸಿಕ ಆರೋಗ್ಯ ಅಸ್ವಸ್ಥತೆಗಳ ತಪಾಸಣೆ ನಡೆಸಲಿದೆ. ಹಲವು ಕಾಯಿಲೆಗಳಿಗೆ ಉಚಿತ ಔಷಧ ನೀಡಿ, ಆಹಾರ, ನಿಯಮಿತದ ವ್ಯಾಯಾಮಕ್ಕೆ ಸಲಹೆ ನೀಡಲಿದ್ದಾರೆ. ಬಾಯಿ ಕ್ಯಾನ್ಸರ್, ಮಹಿಳೆಯರ ಗರ್ಭಕಂಠ ಮತ್ತು ಸ್ತನ ಕ್ಯಾನ್ಸರ್ ಕಾಯಿಲೆಯನ್ನು ಪರೀಕ್ಷಿಸಲಾಗುತ್ತದೆ. ಈಗಾಗಲೇ ವಿಶೇಷ ಆರೋಗ್ಯ ಶಿಬಿರಗಳು, ಸಾಂಕ್ರಾಮಿಕ ಕಾಯಿಲೆಗಳ ಮೇಲ್ವಿಚಾರಣೆಯನ್ನೂ ಆಶಾ ಕಾರ್ಯಕರ್ತರು ನಡೆಸುತ್ತಿದ್ದಾರೆ.

ಆರ್‌ಎಸ್‌ಎಸ್, ವಿಹಿಂಪ, ಬಿಜೆಪಿಯಿಂದ ಕೋಮುದ್ವೇಷ

ಬೆಂಗಳೂರು: ರಾಜ್ಯದಲ್ಲಿ ಬಿಜೆಪಿ, ಆರ್‌ಎಸ್‌ಎಸ್ ಹಾಗೂ ವಿಶ್ವ ಹಿಂದೂ ಪರಿಷತ್ ಕೋಮು ದ್ವೇಷ ಹರಡುತ್ತಿವೆ. ಧರ್ಮಗಳ ಮಧ್ಯೆ ವೈಮನಸ್ಸು ಹುಟ್ಟು ಹಾಕುವ ಕಾರ್ಖಾನೆಗಳಂ ತಾಗಿವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಪಕ್ಷ ಕೋಮುದ್ವೇಷ ಹುಟ್ಟು ಹಾಕುತ್ತಿದೆ ಎಂಬ ಬಿಜೆಪಿ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಎರಡು ದಶಕಗಳಿಂದ ದ್ವೇಷ ಭಾಷಣ ಹಾಗೂ ನಕಲಿ ಸುದ್ದಿ ಹಂಚುವುದನ್ನು ಬಿಜೆಪಿ ಬೆಂಬಲಿತ ಗುಂಪುಗಳು ಸಾಂಸ್ಥಿಕವಾಗಿ ಮಾಡುತ್ತಿವೆ. ಇದು ಕೇವಲ ಕರಾವಳಿ ಪ್ರದೇಶಕ್ಕೆ ಸೀಮಿತ ಆಗಿಲ್ಲ. ಈ ಸಂಘಟನೆಗಳು ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಉತ್ತರ ಕನ್ನಡ ಹಾಗೂ ಮಲೆನಾಡು ಪ್ರದೇಶಗಳನ್ನು ದ್ವೇಷ ಹುಟ್ಟು ಹಾಕುವ ಪ್ರಯೋಗಾಲಯಗಳನ್ನಾಗಿ ಮಾಡಿವೆ. ಇದರಿಂದಾಗಿ ಸಾಮಾಜಿಕ ಸ್ವಾಸ್ಥ್ಯ ಕೆಡುತ್ತಿದೆ. ದ್ವೇಷ ಭಾಷಣಕ್ಕೆ ಕಡಿವಾಣ ಹಾಕಲೇಬೇಕಿದೆ ಎಂದರು.

ಆತ್ಮಸ್ತುತಿ ನಿಲ್ಲಿಸಿ: ಪ್ರಧಾನಿ ಮೋದಿಗೆ ಖರ್ಗೆ ಸಲಹೆ

ಬೆಂಗಳೂರು: ದೇಶದ ವಿಚಾರದಲ್ಲಿ ಒಗ್ಗಟ್ಟು ಇರಬೇಕು. ನಾವು ಎಲ್ಲಿ ಮಾತನಾಡಬೇಕು ಎನ್ನುವುದು ಗೊತ್ತಿರಬೇಕು. ದೇಶದ ಭದ್ರತೆ ವಿಚಾರದಲ್ಲಿ ಎಲ್ಲ ನಾಯಕರು ಬಾಯಿ ಮುಚ್ಚಿಕೊಂಡು ಇರಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನಮ್ಮ ವಿರೋಧಿಗಳನ್ನು ಓಡಿಸುವ ಕೆಲಸ ಮಾಡಬೇಕು. ಏನು ಘಟನೆ ಆಗಿದೆಯೊ ಆ ಬಗ್ಗೆ ತಿಳಿದುಕೊಂಡು ಮಾತನಾಡುವುದು ಒಳ್ಳೆಯದು ಎಂದರು.

ಭಾರತದ ವಾದವನ್ನು ಜಗತ್ತಿನ ಮುಂದೆ ಮಂಡಿಸಲು ತೆರಳಿರುವ ವಿವಿಧ ಪಕ್ಷಗಳ ಸದಸ್ಯರನ್ನು ಒಳಗೊಂಡ ಸಂಸದೀಯ ನಿಯೋಗದ ವರದಿಗಳು ಹೊರಬರುವ ಮೊದಲು, ನರೇಂದ್ರ ಮೋದಿಯವರು ಚುನಾವಣಾ ಭಾಷಣ ಮಾಡಬಾರದು. ನಾನು ಅದನ್ನು ಮಾಡಿದ್ದೇನೆ, ಇದನ್ನು ಮಾಡಿದ್ದೇನೆಂದು ಅವರು ಸ್ವಯಂ ಘೋಷಣೆ ಮಾಡಬಾರದು ಎಂದು ಖರ್ಗೆ ಅಭಿಪ್ರಾಯಪಟ್ಟರು.

ಇಡೀ ದೇಶ ನಮ್ಮ ಸೇನೆಯ ಹಿಂದೆ ಇದೆ. ಸೇನೆಗೆ ಸಂಪೂರ್ಣ ಅಧಿಕಾರ ಕೊಟ್ಟಿದ್ದೇನೆ ಎಂದು ಮೋದಿ ಈ ಹಿಂದೆ ಹೇಳಿದ್ದರು. ಮತ್ತೆ ಈಗ ಯಾಕೆ ಮಾತನಾಡುತ್ತಿದ್ದಾರೆ? ಅವರು ಸ್ವಯಂ ಪ್ರತಿಷ್ಠೆಯ ಭಾಷಣ ಮಾಡಬಾರದು ಎಂದರು. ಸಂಸತ್ ಅಧಿವೇಶನ ಕರೆದು ಚರ್ಚೆ ಮಾಡೋಣವೆಂದು ಹೇಳಿದ್ದೇವೆ. ಪಾಕಿಸ್ತಾನ ಕೂಡ ಸಂಸತ್ ಅಧಿವೇಶನ ಕರೆದು ಚರ್ಚೆ ನಡೆಸಿದೆ. ನಾವು ಯಾರೂ ದೇಶದ ವಿರುದ್ಧ ಮಾತನಾಡುವುದಿಲ್ಲ ಎಂದು ತಿಳಿಸಿದರು.

ಒಲಿಂಪಿಯಾಡ್ ಪರೀಕ್ಷೆ ನಗರದ ಮಕ್ಕಳ ಸಾಧನೆ

ಬೆಂಗಳೂರು: 2024-25ನೇ ಸಾಲಿನ ಸೈನ್ಸ್ ಒಲಿಂಪಿಯಾಡ್ ಫೌಂಡೇಶನ್ ಒಲಿಂಪಿಯಾಡ್ ಪರೀಕ್ಷೆಯಲ್ಲಿ ಬೆಂಗಳೂರಿನ ಇಬ್ಬರು ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಗೋಪಾಲನ್ ಇಂಟರ್‌ನ್ಯಾಷನಲ್ ಶಾಲೆಯ ನಾಲ್ಕನೇ ತರಗತಿಯ ವಿದ್ಯಾರ್ಥಿ ತರುಣ್ ತಿಮ್ಮವಜ್ಜಲ ಅಂತಾರಾಷ್ಟ್ರೀಯ ಗಣಿತ ಒಲಿಂಪಿಯಾಡ್‌ನಲ್ಲಿ ಎರಡನೇ ರ‍್ಯಾಂಕ್ ಪಡೆದು ಬೆಳ್ಳಿ ಪದಕ ಮತ್ತು ಮೆರಿಟ್ ಪ್ರಮಾಣಪತ್ರ ಗಳಿಸಿದ್ದಾರೆ. ವೈಟ್‌ಫೀಲ್ಡ್ ಗ್ಲೋಬಲ್ ಶಾಲೆಯ ಐದನೇ ತರಗತಿಯ ವಿದ್ಯಾರ್ಥಿ ಅದ್ರಿತ್ ಮುಡ್ಳೆ ಅಂತರಾಷ್ಟ್ರೀಯ ಗಣಿತ ಒಲಿಂಪಿಯಾಡ್‌ನಲ್ಲಿ ಮೂರನೇ ರ‍್ಯಾಂಕ್ ಪಡೆದು ಕಂಚಿನ ಪದಕ ಮತ್ತು ಮೆರಿಟ್ ಪ್ರಮಾಣಪತ್ರ ಪಡೆದಿದ್ದಾರೆ..

ಈ ವರ್ಷದ ಎಸ್‌ಓಎಫ್ ಒಲಿಂಪಿಯಾಡ್‌ನಲ್ಲಿ ಬೆಂಗಳೂರಿನ 5,50,500 ವಿದ್ಯಾರ್ಥಿಗಳು ಸೇರಿದಂತೆ 72 ದೇಶಗಳ ಲಕ್ಷಾಂತರ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಬೆಥನಿ ಪ್ರೌಢಶಾಲೆ, ಕೇಂದ್ರೀಯ ವಿದ್ಯಾಲಯ ಡಿಆರ್‌ಡಿಓ, ಪ್ರೆಸಿಡೆನ್ಸಿ ಶಾಲೆ, ಯುರೋ ಶಾಲೆ ಸೇರಿದಂತೆ ಬೆಂಗಳೂರಿನ ಪ್ರಮುಖ ಶಾಲೆಗಳು ಎಸ್‌ಓಎಫ್ ಒಲಿಂಪಿಯಾಡ್‌ನಲ್ಲಿ ಭಾಗವಹಿಸಿದ್ದವು. 2024-25ರ ಶೈಕ್ಷಣಿಕ ವರ್ಷಕ್ಕೆ ವಿಜೇತರು, ಅವರ ಶಿಕ್ಷಕರು ಮತ್ತು ಪ್ರಾಂಶುಪಾಲರನ್ನು ಗೌರವಿಸಲು ಸೈನ್ಸ್ ಒಲಿಂಪಿಯಾಡ್ ಫೌಂಡೇಶನ್ ದೆಹಲಿಯ ಡಾ. ಅಂಬೇಡ್ಕರ್ ಅಂತರಾಷ್ಟ್ರೀಯ ಕೇಂದ್ರದಲ್ಲಿ ಪ್ರಶಸ್ತಿ ಸಮಾರಂಭ ಆಯೋಜಿಸಿತ್ತು. 750 ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಕೇಸಿ ಕಾರ್ಟಿಯಾ ದಾಖಲೆ

ಕಾರ್ಡಿಫ್: ಇಂಗ್ಲೆಂಡ್ ಹಾಗೂ ವೆಸ್ಟ್ ಇಂಡೀಸ್ ನಡುವಿನ ಪಂದ್ಯದಲ್ಲಿ ರೋಚಕ ಹಣಾಹಣಿಯಲ್ಲಿ ವೆಸ್ಟ್ ಇಂಡೀಸ್ ತಂಡದ 28 ವರ್ಷದ ಆಟಗಾರ ಕೇಸಿ ಕಾರ್ಟಿಯ ಶತಕಗಳ ಮೇಲೆ ಶತಕ ಸಿಡಿಸಿ ಹೊಸ ದಾಖಲೆ ಬರೆದಿದ್ದಾರೆ. ಮೂರು ಪಂದ್ಯಗಳ ಸರಣಿಯಲ್ಲಿ ಭಾನುವಾರ ಇಂಗ್ಲೆಂಡ್ ವಿರುದ್ಧ ನಡೆದ ಎರಡನೇ ಏಕದಿನ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಆಟಗಾರ ಕೇಸಿ ಕಾರ್ಟಿಯ ತನ್ನ ಶತಕದೊಂದಿಗೆ ಮಿಂಚಿದ್ದಾರೆ.

ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಆಯ್ದುಕೊಂಡ ವೆಸ್ಟ್ ಇಂಡೀಸ್ ತಂಡವು 47.4 ಓವರ್‌ಗಳಲ್ಲಿ 308 ರನ್‌ಗಳಿಗೆ ಆಲೌಟ್ ಆಯಿತು. ಕಾರ್ಟಿ 105 ಎಸೆತಗಳಲ್ಲಿ 13 ಬೌಂಡರಿಗಳ ನೆರವಿನಿಂದ 103 ರನ್ ಗಳಿಸಿದರು. ಕಳೆದ 4 ಪಂದ್ಯಗಳಲ್ಲಿ ಇದು ಅವರ 3ನೇ ಶತಕವಾಗಿದೆ. ಈ ಪಂದ್ಯದಲ್ಲಿ ಕೇಸಿ ಕಾರ್ಟಿ ಜೊತೆಗೆ, ಆರಂಭಿಕ ಆಟಗಾರ ಬ್ರೆಂಡನ್ ಕಿಂಗ್ (67 ಎಸೆತಗಳಲ್ಲಿ 59, 10 ಬೌಂಡರಿಗಳು) ಮತ್ತು ನಾಲ್ಕನೇ ಕ್ರಮಾಂಕದ ಶಾಯ್ ಹೋಪ್ (66 ಎಸೆತಗಳಲ್ಲಿ 78, 4 ಬೌಂಡರಿಗಳು, 4 ಸಿಕ್ಸರ್‌ಗಳು) ಕೂಡ ಅರ್ಧಶತಕಗಳನ್ನು ಗಳಿಸಿದರು. ವೆಸ್ಟ್ ಇಂಡೀಸ್ ಇನ್ನಿಂಗ್ಸ್‌ನಲ್ಲಿ ಜ್ಯುವೆಲ್ ಆಂಡ್ರ್ಯೂ 0, ಶಿಮ್ರಾನ್ ಹೆಟ್ಮೆಯರ್ 4, ಜಸ್ಟಿನ್ ಗ್ರೀವ್ಸ್ 22, ಮ್ಯಾಥ್ಯೂ ಫೋರ್ಡ್ 1, ರೋಸ್ಟನ್ ಚೇಸ್ 0, ಗುಡಕೇಶ್ ಮೋಟಿ 18, ಅಲ್ಜಾರಿ ಜೋಸೆಫ್ 10 ರನ್ ಗಳಿಸಿ ಔಟಾದರು. ಕಾರ್ಟಿ ಮತ್ತು ಹೋಪ್ ಕ್ರೀಸ್‌ನಲ್ಲಿದ್ದಾಗ, ವೆಸ್ಟ್ ಇಂಡೀಸ್ ಇನ್ನೂ ಹೆಚ್ಚಿನ ರನ್ ಗಳಿಸುವ ನಿರೀಕ್ಷೆಯಿತ್ತು, ಆದರೆ ಅವರ ವಿಕೆಟ್ ನಂತರ ಇಂಗ್ಲೆಂಡ್ ಬೌಲರ್?ಗಳು ಅವಕಾಶ ನೀಡಲಿಲ್ಲ.

ಇಂಗ್ಲೆಂಡ್ ಬೌಲರ್‌ಗಳಾದ ಆದಿಲ್ ರಶೀದ್ 4 ವಿಕೆಟ್ ಮತ್ತು ಶಕೀಬ್ ಮಹಮೂದ್ 3 ವಿಕೆಟ್ ಪಡೆದು ವೆಸ್ಟ್ ಇಂಡೀಸ್ ತಂಡವನ್ನು 308 ರನ್‌ಗಳಿಗೆ ನಿರ್ಬಂಧಿಸಿದರು. ಇಂಗ್ಲೆಂಡ್ ಬೌಲರ್‌ಗಳಲ್ಲಿ ಬ್ರೈಡನ್ ಕಾರ್ಸ್, ಜಾಕೋಬ್ ಬೆಥೆಲ್ ಮತ್ತು ವಿಲ್ ಜಾಕ್ಸ್ ಕೂಡ ತಲಾ ಒಂದು ವಿಕೆಟ್ ಪಡೆದರು.

ಮೇ ತಿಂಗಳ ಜಿಎಸ್‌ಟಿ ಸಂಗ್ರಹ: 16.4ರಷ್ಟು ಹೆಚ್ಚಳ

ನವದೆಹಲಿ: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ ಮೂಲಕ ಸಂಗ್ರಹ ಆಗುವ ವರಮಾನವು ಮೇ ತಿಂಗಳಲ್ಲಿ ಶೇಕಡ 16.4ರಷ್ಟು ಹೆಚ್ಚಳ ಆಗಿದ್ದು, 2.01 ಲಕ್ಷ ಕೋಟಿಯಷ್ಟು ಆಗಿದೆ. ಜಿಎಸ್‌ಟಿ ವರಮಾನ ಸಂಗ್ರಹವು ಸತತ ಎರಡನೆಯ ತಿಂಗಳಲ್ಲಿಯೂ 2 ಲಕ್ಷ ಕೋಟಿಗಿಂತ ಹೆಚ್ಚಾಗಿದೆ.

ಜಿಎಸ್‌ಟಿ ಮೂಲಕ ಸಂಗ್ರಹವಾದ ವರಮಾನದ ಮೊತ್ತವು ಏಪ್ರಿಲ್‌ನಲ್ಲಿ ದಾಖಲೆಯ 2.37 ಲಕ್ಷ ಕೋಟಿ ಆಗಿತ್ತು. ಕಳೆದ ವರ್ಷದ ಮೇ ತಿಂಗಳಲ್ಲಿ ಸಂಗ್ರಹವು 1.72 ಲಕ್ಷ ಕೋಟಿ ಆಗಿತ್ತು.

ಈ ವರ್ಷದ ಮೇ ತಿಂಗಳಲ್ಲಿ ಆಂತರಿಕ ವಹಿವಾಟುಗಳಿಂದ ಬರುವ ಜಿಎಸ್‌ಟಿ ವರಮಾನವು ಶೇ 13.7ರಷ್ಟು ಏರಿಕೆ ಕಂಡಿದ್ದು, ಅಂದಾಜು 1.50 ಲಕ್ಷ ಕೋಟಿಗೆ ತಲುಪಿದೆ. ಆಮದು ಮೂಲಕ ಬರುವ ಜಿಎಸ್‌ಟಿ ವರಮಾನವು ಶೇ 25.2ರಷ್ಟು ಹೆಚ್ಚಳ ಕಂಡು 51 ಸಾವಿರ ಕೋಟಿಗೆ ತಲುಪಿದೆ.

ದೊಡ್ಡ ರಾಜ್ಯಗಳಾದ ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಜಿಎಸ್‌ಟಿ ವರಮಾನ ಸಂಗ್ರಹದಲ್ಲಿನ ಏರಿಕೆಯು ಶೇ 17ರಿಂದ ಶೇ 25ರವರೆಗೆ ಇದೆ. ಆದರೆ ಈ ರಾಜ್ಯಗಳಂತೆಯೇ ದೊಡ್ಡದಾಗಿರುವ ಗುಜರಾತ್, ಆಂಧ್ರಪ್ರದೇಶ, ತೆಲಂಗಾಣದಲ್ಲಿ ಜಿಎಸ್‌ಟಿ ವರಮಾನ ಸಂಗ್ರಹದಲ್ಲಿನ ಹೆಚ್ಚಳವು ಶೇ 6ರವರೆಗೆ ಮಾತ್ರ ಇದೆ.

ಬೇರೆ ಬೇರೆ ರಾಜ್ಯಗಳ ಜಿಎಸ್‌ಟಿ ವರಮಾನ ಸಂಗ್ರಹದ ಏರಿಕೆ ಪ್ರಮಾಣದಲ್ಲಿನ ವ್ಯತ್ಯಾಸದ ವಿಚಾರವಾಗಿ, ಆಯಾ ರಾಜ್ಯಗಳಿಗೆ ಮುಖ್ಯವಾದ ವಲಯಗಳನ್ನು ಗಮನದಲ್ಲಿ ಇರಿಸಿಕೊಂಡು ಆಳವಾದ ಪರಿಶೀಲನೆ ಆಗಬೇಕಿದೆ ಎಂದು ಡೆಲಾಯ್ಟ್ ಇಂಡಿಯಾ ಪಾಲುದಾರ ಎಂ.ಎಸ್. ಮಣಿ ಹೇಳಿದ್ದಾರೆ.

ಮಧ್ಯಪ್ರದೇಶ, ಹರಿಯಾಣ, ಪಂಜಾಬ್, ರಾಜಸ್ಥಾನದಲ್ಲಿ ವರಮಾನ ಸಂಗ್ರಹದ ಏರಿಕೆ ಪ್ರಮಾಣವು ಶೇ 10ರಷ್ಟು ಇದೆ.

ದೇಶದಾದ್ಯಂತ ವರಮಾನ ಏರಿಕೆ ಪ್ರಮಾಣವು ಒಂದೇ ಆಗಿಲ್ಲ. ಇದಕ್ಕೆ ವಲಯವಾರು ಕಾರಣಗಳು ಇರಬಹುದು. ಇದರ ಬಗ್ಗೆ ದತ್ತಾಂಶ ಆಧರಿಸಿ ವಿಶ್ಲೇಷಣೆ ಆಗಬೇಕು ಎಂದು ಅವರು ಹೇಳಿದ್ದಾರೆ.

ಜಿಎಸ್‌ಟಿ ವರಮಾನ ಸಂಗ್ರಹದ ಪ್ರಮಾಣವು ಇದೇ ಮಟ್ಟದಲ್ಲಿ ಇನ್ನೂ ಒಂದೆರಡು ತಿಂಗಳು ಮುಂದುವರಿದರೆ, ಜಿಎಸ್‌ಟಿ ದರಗಳನ್ನು ಇನ್ನಷ್ಟು ಸರಳಗೊಳಿಸಲು ಸರಕಾರಕ್ಕೆ ಅನುವಾಗಬಹುದು ಎಂದು ಪಿಡಬ್ಲ್ಯುಸಿ ಎಲ್‌ಎಲ್‌ಪಿ ಪಾಲುದಾರ ಪ್ರತೀಕ್ ಜೈನ್ ಹೇಳಿದ್ದಾರೆ.

ವಿದ್ಯುತ್ ಸಂಬಂಧಿತ ದೂರು ದಾಖಲಿಸಲು ಸಹಾಯವಾಣಿ

ಬೆಂಗಳೂರು: ಬೆಸ್ಕಾಂ ಗ್ರಾಹಕರಿಗೆ ವಿದ್ಯುತ್ ಸಂಬಂಧಿತ ದೂರು ದಾಖಲಿಸುವ ವ್ಯವಸ್ಥೆಯನ್ನು ಮತ್ತಷ್ಟು ಸರಳೀಕರಿಸಿದ್ದು, ಜಿಲ್ಲಾವಾರು ವಾಟ್ಸ್ ಆಪ್ ಸಹಾಯವಾಣಿ ಸಂಖ್ಯೆಯನ್ನು ಬಿಡುಗಡೆ ಮಾಡಲಾಗಿದೆ. ಬೆಸ್ಕಾಂ ವ್ಯಾಪ್ತಿಯ ಪ್ರತಿ ಜಿಲ್ಲೆಗಳಿಗೂ ವಿಶೇಷ ವಾಟ್ಸ್ ಆಪ್ ಸಹಾಯವಾಣಿ ಸಂಖ್ಯೆಗಳನ್ನು ಬಿಡುಗಡೆ ಮಾಡಲಾಗಿದ್ದು, ಜಿಲ್ಲೆಯ ವಿದ್ಯುತ್ ಸಂಬಂಧಿತ ಸಮಸ್ಯೆಗಳ ಫೋಟೋ, ವೀಡಿಯೋಗ ಳನ್ನು ವಾಟ್ಸ್‌ಅಪ್ ಮೂಲಕ ಸಹಾಯವಾಣಿ ಸಂಖ್ಯೆಗೆ ಕಳುಹಿಸಿದರೇ, ಕ್ಷಣಾರ್ಧದಲ್ಲಿ ಪರಿಹಾರ ಸಿಗಲಿದೆ. ನಿಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳ ಫೋಟೋ ಅಥವಾ ವಿಡಿಯೋಗಳನ್ನು ನಿಮ್ಮ ಜಿಲ್ಲೆಗೆ ಸಂಬಂಧಪಟ್ಟ ವಾಟ್ಸ್‌ಆ್ಯಪ್ ಸಹಾಯ ವಾಣಿ ಸಂಖ್ಯೆಗೆ ಕಳುಹಿಸಿ, ತ್ವರಿತ ಪರಿಹಾರ ಪಡೆಯಬಹುದು. ಹೆಚ್ಚಿನ ಮಾಹಿತಿಗೆ 1912 ಸಂಪರ್ಕಿಸಿ.

ಜಿಲ್ಲಾವಾರು ವಾಟ್ಸ್‌ಅಪ್ ಸಹಾಯವಾಣಿ ಸಂಖ್ಯೆಗಳು

ಕೋಲಾರ : 8277884015
ಚಿಕ್ಕಬಳ್ಳಾಪುರ : 8277884016
ಬಿ.ಆರ್.ಸಿ : 8277884017
ರಾಮನಗರ : 8277884018
ತುಮಕೂರು : 8277884019
ಚಿತ್ರದುರ್ಗ : 8277884020
ದಾವಣಗೆರೆ : 8277884021
ಬೆಂಗಳೂರು ನಗರ
ದಕ್ಷಿಣ ವೃತ್ತ :8277884011
ಪಶ್ಚಿಮ ವೃತ್ತ : 8277884012
ಪೂರ್ವ ವೃತ್ತ : 8277884013
ಉತ್ತರ ವೃತ್ತ : 8277884014

ವಿಶ್ವ ಹಾಲು ದಿನಾಚರಣೆ | ಮಾರುಕಟ್ಟೆಗೆ ನಂದಿನಿ ಕೇಕ್, ಮಫಿನ್‌ಗಳ ಬಿಡುಗಡೆ

ಕೆಎಂಎಫ್‌ನಿಂದ 18 ಮಾದರಿ ಕೇಕ್ ಪರಿಚಯ

ಬೆಂಗಳೂರು: ವಿಶ್ವ ಹಾಲು ದಿನಾಚರಣೆಯ ಪ್ರಯುಕ್ತ ಕೆಎಂಎಫ್ 18 ವಿವಿಧ ಮಾದರಿಯ ನಂದಿನಿ ಕೇಕ್‌ಗಳು ಹಾಗೂ ಮಫಿನ್‌ಗಳನ್ನು ಪರಿಚಯಿಸಿದೆ.

ಮಾರುಕಟ್ಟೆಯಲ್ಲಿ ದೊರೆಯುವ ಬೇರೆ ಬೇರೆ ಬ್ರ್ಯಾಂಡ್‌ನ ಖಾಸಗಿ ಕೇಕ್‌ಗಳು ಹಾಗೂ ಮಫಿನ್‌ಗಳಿಗಿಂತ ನಂದಿನಿ ಕೇಕ್ ಹಾಗೂ ಮಫಿನ್‌ಗಳು ಉತ್ತಮ ಗುಣಮಟ್ಟದ್ದಾಗಿರಲಿದ್ದು, ಇತರೆ ಕೇಕ್ ಮಫಿನ್‌ಗಳಿಗಿಂತ ಸ್ಪರ್ಧಾತ್ಮಕ ಬೆಲೆಯಲ್ಲಿರಲಿದೆ. ಹಾಲು, ಮೊಸರು, ಮಜ್ಜಿಗೆ, ಲಸ್ಸಿ, ಸಿಹಿ ಹಾಗೂ ಖಾರಾ ಉತ್ಪನ್ನಗಳು ಮಾತ್ರವಲ್ಲದೆ ಬ್ರೆಡ್, ಬನ್‌ಮ ಐಸ್‌ಕ್ರೀಂ ಸೇರಿದಂತೆ ಈಗಾಗಲೇ ನಂದಿನಿಯ 150ಕ್ಕೂ ಅಧಿಕ ಉತ್ಪನ್ನಗಳು ಮಾರುಕಟ್ಟೆಯಲ್ಲಿದ್ದು, ಈಗಾಗಲೇ ಶಿಮುಲ್ ವತಿಯಿಂದ 100 ಗ್ರಾಂ ಪ್ಯಾಕ್‌ನಲ್ಲಿ ಖೋವಾ ಕಡಲೇ ಮಿಠಾಯಿಯನ್ನು ಮಾರಾಟ ಮಾಡಲಾಗುತ್ತಿದೆ. ಇದರೊಂದಿಗೆ 5 ರು. ನ 12 ಗ್ರಾಂನ ಹಾಗೂ 10 ರು.ಗಳಲ್ಲಿ 25 ಗ್ರಾಂನ ಪ್ಯಾಕ್‌ಗಳಲ್ಲಿ ಸಹ ಖೋವಾ ಕಡಲೆ ಮಿಠಾಯಿಯನ್ನು ಉತ್ಪಾದಿಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದೆ. ಉತ್ಪನ್ನದ ಗುಣಮಟ್ಟದ ಬಗ್ಗೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ರಾಜ್ಯ, ರಾಷ್ಟ್ರ ಹಾಗೂ ವಿದೇಶಗಳಲ್ಲಿ ಜನಪ್ರಿಯತೆ ಹೊಂದಿರುವ ನಂದಿನಿ ಉತ್ಪನ್ನಗಳು ಗ್ರಾಹಕರ ಮನ್ನಣೆ ಗಳಿಸಿದ್ದು, ಈ ಸಾಲಿಗೆ ವಿಶ್ವ ಹಾಲು ದಿನದಂದು ನಂದಿನಿ ಕೇಕ್ ಮತ್ತು ಮಫಿನ್‌ಗಳು ಸೇರ್ಪಡೆಯಾಗುತ್ತಿದೆ.

ಯಾವುದಕ್ಕೆ ಎಷ್ಟು ಬೆಲೆ?

ಸ್ಪಾಂಜಿ ವೆನಿಲ್ಲಾ ಕೇಕ್ 25 ಗ್ರಾಂ ಗೆ ರು.10, ಫ್ರೂಟಿ ಸ್ಲೈಸ್‌ಕೇಕ್ 30 ಗ್ರಾಂ ಗೆ ರು.1-5, ಚಾಕೋ ಕಿತ್ತಲೆ ಸ್ಲೈಸ್ ಕೇಕ್, ವೆನಿಲ್ಲಾ ಸ್ಲೈಸ್ ಕೇಕ್, ಅನಾನಸ್ ಸ್ಲೈಸ್ ಕೇಕ್ 50 ಗ್ರಾಂ ಗೆ ರು.15- ರಿಂದ 20 ಹಾಗೂ ವೆನಿಲ್ಲಾ ಮಫಿನ್, ಚಾಕಲೇಟ್ ಮಫಿನ್, ಅನಾನಸ್ ಮಫಿನ್, ಸ್ಟ್ರಾಬೆರಿ ಮಫಿನ್, ಮಾವಾ ಮಫಿನ್ 150 ಗ್ರಾಂ ಗೆ ರು.50, ಪ್ಲಮ್ ಕೇಕ್, ಚಾಕೋ ವೆನಿಲ್ಲಾ ಕೇಕ್ , ಫ್ರೂಟ್ ಕೇಕ್, ವೆನಿಲ್ಲಾ ಕೇಕ್, ಚಾಕೊಲೇಟ್ ಕೇಕ್, ವಾಲ್ನಟ್ ಬನಾನಾ ಕೇಕ್, ಚಾಕಲೇಟ್ ಬೆಲ್ಲದ ಕೇಕ್ ಹಾಗೂ ಕೊಬ್ಬರಿ ಬೆಲ್ಲದ ಕೇಕ್ 200 ಗ್ರಾಂ ಗೆ ರು.110 ದರವನ್ನು ನಿಗದಿಪಡಿಸಲಾಗಿದೆ.

ಫ್ರೆಂಚ್ ಓಪನ್ 2025 ನೊವಾಕ್ 4ನೇ ಸುತ್ತಿಗೆ

ಪ್ಯಾರಿಸ್: ದಾಖಲೆಯ 25ನೇ ಗ್ರ್ಯಾನ್ ಸ್ಲಾಮ್ ಪ್ರಶಸ್ತಿಯ ಹುಡುಕಾಟದಲ್ಲಿರುವ ಸರ್ಬಿಯಾದ ತಾರೆ ನೊವಾಕ್ ಜೊಕೊವಿಚ್, ಪ್ರತಿಷ್ಠಿತ ಫ್ರೆಂಚ್ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯಲ್ಲಿ ನಾಲ್ಕನೇ ಸುತ್ತಿಗೆ ಪ್ರವೇಶಿಸಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಆರನೇ ಶ್ರೇಯಾಂಕಿತ ಜೊಕೊವಿಚ್ ಅವರು ಆಸ್ಟ್ರೀಯಾದ ಫಿಲಿಪ್ ಮಿಸೋಲಿಕ್ ವಿರುದ್ಧ 6-3, 6-4, 6-2ರ ನೇರ ಸೆಟ್‌ಗಳಲ್ಲಿ ಗೆದ್ದು ಪ್ರಿ-ಕ್ವಾರ್ಟರ್‌ಗೆ ಮುನ್ನಡೆದಿದ್ದಾರೆ. ಇದರೊಂದಿಗೆ ಮೂರು ಬಾರಿಯ ಚಾಂಪಿಯನ್ ಜೊಕೊವಿಚ್, ರಾಲೆಂಡ್ ಗ್ಯಾರೋಸ್ ಅಂಗಣದಲ್ಲಿ 99 ಗೆಲುವುಗಳ ಸಾಧನೆ ಮೆರೆದಿದ್ದಾರೆ. 2016, 2021 ಹಾಗೂ 2023ನೇ ಸಾಲಿನಲ್ಲಿ ಜೊಕೊವಿಚ್ ಚಾಂಪಿಯನ್ ಆಗಿದ್ದರು. ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲೂ ಜೊಕೊವಿಚ್ 99 ಗೆಲುವುಗಳನ್ನು ಹೊಂದಿದ್ದಾರೆ.

ಬೆಳಗುತ್ತಿರುವ ಭಾರತ ಪತರಗುಟ್ಟುತ್ತಿರುವ ಪಾಕ್



ಯಗಟಿ ರಘು ನಾಡಿಗ್

ಪಹಲ್ಗಾಮ್‌ನಲ್ಲಿ ಪೈಶಾಚಿಕ ಕೃತ್ಯ ಮೆರೆದ ಉಗ್ರರಿಗೆ ಹಾಗೂ ಅವರಿಗೆ ಚಿತಾವಣೆ ನೀಡಿದ ಮಗ್ಗುಲುಮುಳ್ಳು ಪಾಕಿಸ್ತಾನಕ್ಕೆ ತಕ್ಕ ಶಾಸ್ತಿ ಮಾಡಲೆಂದು ಭಾರತವು 'ಆಪರೇಷನ್ ಸಿಂದೂರ' ಕಾರ್ಯಾಚರಣೆಗೆ ಶುರುವಿಟ್ಟುಕೊಂಡಿತು. ಇದಕ್ಕೂ ಕೆಲ ದಿನಗಳ ಮುನ್ನ ಭಾರತದ ಮೇಲೆ ಮಾರಕಾಸ್ತ್ರಗಳನ್ನು ಪ್ರಯೋಗಿಸುವುದಾಗಿ 'ಉತ್ತರ ಕುಮಾರ'ನಂತೆ ಪ್ರತಾಪ ಕೊಚ್ಚಿಕೊಂಡಿದ್ದ ಪಾಕಿಸ್ತಾನವು, 'ಸಿಂದೂರ' ಕಾರ್ಯಾಚರಣೆಯ ಮೂಲಕ ಭಾರತವು ತನ್ನ ಬುಡಕ್ಕೆ ಹಾಕಿದ ಬರೆಯನ್ನು ತಡೆದುಕೊಳ್ಳಲಾಗದೆ ದಮ್ಮಯ್ಯ ಗುಡ್ಡೆ ಹಾಕಿ 'ಕದನ ವಿರಾಮ'ದ ಘೋಷಣೆಯಾಗುವಂತೆ ನೋಡಿಕೊಂಡಿತು. ಇದರ ತರುವಾಯದ ಕೆಲ ಬೆಳವಣಿಗೆಗಳ ಕಡೆಗಿನ ಪಕ್ಷಿನೋಟವಿದು.

ಭಾರತದ ರಕ್ಷಣಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್

ಮತ್ತೆ ಬಿಚ್ಚಿಕೊಂಡ ಬಾಲ

ಆಪರೇಷನ್ ಸಿಂದೂರದ ಘಾಟಿಗೆ ತತ್ತರಿಸಿಹೋಗಿ ಕೆಲ ಕಾಲ ಬಾಲಮುದುರಿಕೊಂಡಿದ್ದ ಪಾಕಿಸ್ತಾನ ಈಗ ತನ್ನ ಹಳೆಯ ವರಸೆಯನ್ನು ಶುರುಹಚ್ಚಿಕೊಂಡಿದೆ. ''ಸಿಂಧೂ ನದಿಯ ನೀರನ್ನು ಭಾರತವು ಒಂದು ಆಯುಧವಾಗಿ ಬಳಸಲು ಯತ್ನಿಸುತ್ತಿದೆ; ಸಿಂಧೂ ಜಲ ಒಪ್ಪಂದವನ್ನು ಮುರಿದು ಲಕ್ಷಾಂತರ ಜನರ ಜೀವಕ್ಕೆ ಅಪಾಯವನ್ನು ಉಂಟುಮಾಡುವ ಮೂಲಕ ಭಾರತವು ಕೆಂಪುರೇಖೆಯನ್ನು ದಾಟಲು ಯತ್ನಿಸುತ್ತಿದೆ. ಭಾರತದ ಈ ಹೆಜ್ಜೆ ಏಕಪಕ್ಷೀಯವೂ ಕಾನೂನು ಬಾಹಿರವೂ ಆಗಿದೆ. ಆದರೆ ಇದಕ್ಕೆ ನಾವು ಬಿಡುವುದಿಲ್ಲ'' ಎಂದು ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ ಅವರು ಮೊನ್ನೆ ಗುಟುರು ಹಾಕಿರುವುದೇ ಇದಕ್ಕೆ ಸಾಕ್ಷಿ. ತಜಕಿಸ್ತಾನ್‌ನ ರಾಜಧಾನಿ ದುಶಾಂಬೆಯಲ್ಲಿ ಹಿಮನದಿಗಳ ಸಂರಕ್ಷಣೆ ಕುರಿತು ನಡೆದ 3 ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಷರೀಫ್ ಹೀಗೆ ಅಬ್ಬರಿಸಿದ್ದಾರೆ ಎಂಬುದು ಗಮನಾರ್ಹ.

ಬಲೂಚಿ ಬಿಸಿತುಪ್ಪ

ಮತ್ತೊಂದೆಡೆ ಪಾಕಿಸ್ತಾನದ ಪಾಲಿಗೆ 'ಸೆರಗಿನ ಕೆಂಡ'ವೇ ಆಗಿಬಿಟ್ಟಿರುವ 'ಬಲೂಚ್ ಲಿಬರೇಷನ್ ಆರ್ಮಿ'ಯ (ಬಿಎಲ್‌ಎ) ಹೋರಾಟಗಾರರು, ಬಲೂಚಿಸ್ಥಾನದಲ್ಲಿನ ಪ್ರಮುಖ ನಗರ 'ಸುರಬ್'ಅನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಪಾಕ್ ಆಳುಗರಿಗೆ ಬಿಸಿ ಮುಟ್ಟಿಸಿದ್ದಾರೆ. ಈ ನಗರದಲ್ಲಿನ ಬ್ಯಾಂಕುಗಳು, ಪೊಲೀಸ್ ಠಾಣೆಗಳು ಸೇರಿದಂತೆ ಪ್ರಮುಖ ಸರಕಾರಿ ಸಂಸ್ಥೆಗಳನ್ನು ತಮ್ಮ ಬಿಗಿಮುಷ್ಟಿಯಲ್ಲಿ ಅವರು ಬಂಧಿಸಿಟ್ಟುಕೊಂಡಿರುವುದು ಹಾಗೂ ಪಾಕಿಸ್ತಾನಿ ಸೇನೆಯನ್ನು ಅನೇಕ ಸ್ಥಳಗಳಿಂದ ಓಡಿಸಿರುವುದು ಪಾಕ್‌ನ ಆಳುಗರಿಗೆ ಈಗ ತಲೆನೋವಾಗಿದೆ. ಪಾಕ್‌ನ ಪಾಲಿಗೆ ಬಲೂಚಿ ಹೋರಾಟಗಾರರು ಬಿಸಿತುಪ್ಪವೇ ಆಗಿಬಿಟ್ಟಿದ್ದಾರೆ. ಇತ್ತಕಡೆ, 'ಸುಮ್ಮನಿರಲಾರದೆ ಇರುವೆ ಬಿಟ್ಕೊಂಡ್ರು' ಅನ್ನುವ ರೀತಿಯಲ್ಲಿ, ಭಾರತವನ್ನೂ ಕೆಣಕಿ ತಪರಾಕಿ ತಿನ್ನಬೇಕಾಗಿ ಬಂತು ಪಾಕ್. ಹೀಗಾಗಿ ಅಲ್ಲೀಗ ಅಯೋಮಯ ಪರಿಸ್ಥಿತಿ!

ಪಾಕ್ ಬಾಯಿಗೆ ಬೀಗ

ಈಗ ದೇಶದ ಪರಿಸ್ಥಿತಿಯು ಹೀಗೆ ಹರಿದು ದಿಡ್ಡಿ ಬಾಗಿಲಿನ ರೀತಿ ಆಗಿರುವುದನ್ನು ಹೊರಗೆಲ್ಲೂ ಅಧಿಕೃತವಾಗಿ ಹೇಳಿಕೊಳ್ಳಲಾಗದ ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫರು, ಸಿಂಧೂ ನದಿ ನೀರಿನ ಹಂಚಿಕೆಯ ವಿಷಯದಲ್ಲಿ ಪಾಕಿಸ್ತಾನಕ್ಕೆ ಅನ್ಯಾಯವಾಗಿದೆ ಎಂದು ಅಲವತ್ತುಕೊಂಡು ಭಾರತದ ಮೇಲೆ ಗೂಬೆ ಕೂರಿಸಿ ತನ್ಮೂಲಕ ಜಗದ ಸಹಾನುಭೂತಿಯನ್ನು ದಕ್ಕಿಸಿಕೊಳ್ಳುವ ಹರಸಾಹಸ ದಲ್ಲಿದ್ದಾರೆ. ಆದರೆ ಜಾಗತಿಕ ಸಮುದಾಯವು ಪಾಕ್‌ನ ಮಾತುಗಳನ್ನು ನಂಬುವ ಸ್ಥಿತಿಯಲ್ಲಿಲ್ಲ!

ಬಲೂಚಿ ದಾಳಿ ನಿರಂತರ

ಬಲೂಚಿಗಳ ದಾಳಿಯು 'ಆಪರೇಷನ್ ಸಿಂದೂರ' ಕಾರ್ಯಾಚರಣೆಯ ಆಸುಪಾಸಿನಲ್ಲಿ ಶುರುವಾಗಿರುವಂಥದ್ದಲ್ಲ; ಇದು ಸಾಕಷ್ಟು ವರ್ಷಗಳಿಂದ ಅಬಾಧಿತವಾಗಿ ನಡೆದುಕೊಂಡು ಬಂದಿರುವಂಥದ್ದೇ. ಕಳೆದ ವರ್ಷದಿಂದ ದಾಳಿಯ ಪ್ರಮಾಣ ಹೆಚ್ಚಾಗಿದೆಯಷ್ಟೇ. ಉದ್ದೇಶಿತ ಗುರಿಯ ಆಯಕಟ್ಟಿನ ಪ್ರದೇಶಗಳು ಮತ್ತು ಪ್ರಮುಖ ಹೆದ್ದಾರಿಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವುದು ಕೂಡ ಬಲೂಚಿಗಳ ದಾಳಿಯ ವೈಖರಿಯ ಭಾಗವೇ ಆಗಿದೆ. ಬಲೂಚಿಸ್ತಾನವನ್ನು 'ಪಾಕಿಸ್ತಾನದಿಂದ ಪ್ರತ್ಯೇಕವಾದ ಸ್ವತಂತ್ರ ರಾಷ್ಟ್ರ' ಎಂದು ಘೋಷಿಸಬೇಕು ಎಂಬ ಆಗ್ರಹ ದಿನಗಳೆದಂತೆ ತೀವ್ರವಾಗುತ್ತಿದ್ದು, ಇದನ್ನು ಹಣಿಯುವ ಪಾಕ್ ಆಳುಗರ ಕಸರತ್ತು ಫಲ ಕೊಟ್ಟಿಲ್ಲ. ಇಂಥ ಅನೇಕ ಬೆಳವಣಿಗೆಗಳು ಪಾಕಿಸ್ತಾನದಲ್ಲಿ ಸಾಕಷ್ಟು ವ್ಯತಿರಿಕ್ತ ಕದಲಿಕೆಗಳನ್ನು ಹುಟ್ಟುಹಾಕಿವೆ.

ಜಲ-ಜಟಾಪಟಿ

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ 26 ಮಂದಿ ಅಮಾಯಕರ ಮಾರಣಹೋಮದಲ್ಲಿ ತನ್ನ ಪಾತ್ರವಿಲ್ಲ ಎಂದು ಪಾಕಿಸ್ತಾನ ಕುಂಟುನೆಪ ಹೇಳಿ ಕೊಂಡೇ ಬಂದಿತ್ತು. ಆದರೆ ಪಾಕ್-ಪಾತ್ರವನ್ನು ಸಾಬೀತುಪಡಿಸುವಂಥ ಪುರಾವೆಗಳು ಸಿಕ್ಕ ಹಿನ್ನೆಲೆಯಲ್ಲಿ ಭಾರತವು ಪಾಕಿಸ್ತಾನದ ವಿರುದ್ಧ ಐದು ಕಠಿಣ ಕ್ರಮಗಳನ್ನು ಘೋಷಿಸಿತು ಮತ್ತು ಈ ಪೈಕಿ ಸಿಂಧೂ ನದಿ ಜಲ ಹಂಚಿಕೆಯ ಒಡಂಬಡಿಕೆಯ ರದ್ದತಿಯೂ ಸೇರಿತ್ತು. ಸದರಿ ಒಡಂಬಡಿಕೆಯ ಅನ್ವಯ,

ಸಟ್ಲೇಜ್, ಬಿಯಾಸ್ ಮತ್ತು ರಾವಿಯಂಥ ಪೂರ್ವನದಿಗಳ ನೀರನ್ನು ಬಳಸುವ ಹಕ್ಕು ಭಾರತಕ್ಕಿದ್ದು, ಇದರ ನ್ವಯ ಸುಮಾರು 33 ದಶಲಕ್ಷ ಎಕರೆ ಅಡಿಯಷ್ಟು ನೀರನ್ನು ಭಾರತ ಬಳಸಬಹುದಾಗಿದೆ. ಮತ್ತೊಂದೆಡೆ, ಸಿಂಧೂ, ಚೆನಾಬ್ ಮತ್ತು ಝೀಲಂ ನಂಥ ಪಶ್ಚಿಮ ನದಿಗಳ ನೀರನ್ನು ಬಳಸುವ ಹಕ್ಕು ಪಾಕಿಸ್ತಾನಕ್ಕಿದ್ದು, ಇದು ಸುಮಾರು 135 ದಶಲಕ್ಷ ಎಕರೆ ಅಡಿಯಷ್ಟು ನೀರನ್ನು ಬಳಸಿಕೊಳ್ಳುವುದಕ್ಕೆ ಅನುವು ಮಾಡಿಕೊಡುತ್ತದೆ. ಪಹಲ್ಗಾಮ್ ಹತ್ಯಾಕಾಂಡದಲ್ಲಿ ಪಾಕಿಸ್ತಾನದ ಪಾತ್ರ ಇರುವುದನ್ನು ಮನಗಂಡ ಭಾರತ, ಈ ನದಿನೀರಿನ ಬಳಕೆಗೆ ಇಕ್ಕಳ ಹಾಕಿಬಿಟ್ಟಿದೆ. ಅದು ಈಗ ಪಾಕಿಸ್ತಾನದ ಉಸಿರುಗಟ್ಟಿಸುತ್ತಿದೆ.

ಕಂಡೆಯಾ, ಬೆಳಗುತ್ತಿದೆ ಇಂಡಿಯಾ

ಹಾಗೆ ನೋಡಿದರೆ, 1947ರಲ್ಲಿ ಬ್ರಿಟಿಷರ ಬಿಗಿಮುಷ್ಟಿಯಿಂದ ಬಿಡಿಸಿಕೊಂಡ ನಂತರ ಭಾರತ ಮತ್ತು ಪಾಕಿಸ್ತಾನ ದೇಶಗಳು ಸ್ವತಂತ್ರ ಅಸ್ತಿತ್ವವನ್ನು ಕಂಡುಕೊಂಡ ಕಾಲಘಟ್ಟದಲ್ಲಿ ಪಾಕಿಸ್ತಾನವು ಸಾಮಾಜಿಕ, ಆರ್ಥಿಕ, ತಲಾವಾರು ಜಿಡಿಪಿ ಸೇರಿದಂತೆ ಅನೇಕ ಪ್ರಮುಖ ಕ್ಷೇತ್ರಗಳಲ್ಲಿ ಸದೃಢವಾಗಿತ್ತು. ಆದರೆ, ತನ್ನ ವಿಧ್ವಂಸಕ ಚಿತ್ತಸ್ಥಿತಿಯಿಂದ ಹಾಗೂ ದ್ವೇಷಭಾವದಿಂದ ಹೊರಬರಲಾಗದ ಕಾರಣದಿಂದಾಗಿ ಪಾಕಿಸ್ತಾನ ಇಂಥ ಒಂದೊಂದೇ ರೆಕ್ಕೆಗಳನ್ನು ಕಳೆದುಕೊಳ್ಳುತ್ತಾ ಬಂತು. ಇದಕ್ಕೆ ಪ್ರತಿಯಾಗಿ ಭಾರತವು ತನ್ನ ರಚನಾತ್ಮಕ ಹಾಗೂ ಸುಸ್ಥಿರ ಕಾರ್ಯತಂತ್ರಗಳಿಂದಾಗಿ ಪಾಕಿಸ್ತಾನವನ್ನು ಎಲ್ಲ ಕ್ಷೇತ್ರಗಳಲ್ಲೂ ಹಿಂದಕ್ಕೆ ಹಾಕಿತು. ಇದು ಕೇವಲ ಭಾವಾವೇಶದ ಮಾತಲ್ಲ; ಭಾರತದ ರಕ್ಷಣಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಅವರು ಇತ್ತೀಚೆಗೆ ಸಿಂಗಾಪುರದಲ್ಲಿ ವ್ಯಕ್ತಪಡಿಸಿದ ಮುಕ್ತ ಅಭಿಪ್ರಾಯದ ಸಾರವಿದು. ಸಿಂಗಾಪುರದಲ್ಲಿ ಆಯೋಜಿಸಲಾಗಿದ್ದ 'ಶಾಂಗ್ರಿ-ಲಾ' ಸಂವಾದದಲ್ಲಿ ಅವರು ಮಾತನಾಡಿ, ''ದ್ವಿಪಕ್ಷೀಯ ಬಾಂಧವ್ಯಕ್ಕಾಗಿ ಭಾರತ ನಿರಂತರ ಯತ್ನಿಸುತ್ತಲೇ ಇತ್ತು; ಆದರೆ ಒಂದು ಕೈಯಲ್ಲಿ ಚಪ್ಪಾಳೆ ಆಗುವುದಿಲ್ಲವಲ್ಲಾ? ನಮಗೆ ಪ್ರತಿಯಾಗಿ ಸಿಗುವುದು ಹಗೆತನವೇ ಆದಾಗ, ಸಂಪರ್ಕವನ್ನು ಕಡಿತಗೊಳಿಸುವುದೇ ಉತ್ತಮ ತಂತ್ರವಾಗುತ್ತದೆ'' ಎಂದು ಅವರು ಸೂಚ್ಯವಾಗಿ ಹೇಳಿದ್ದು ಇದಕ್ಕೆ ಸಾಕ್ಷಿ.

ಖರೀದಿದಾರರ ಡಾರ್ಲಿಂಗ್!

ರಕ್ಷಣಾ ಸಾಮಗ್ರಿಗಳ ಉತ್ಪಾದನೆ ಮತ್ತು ಮಾರಾಟದ ವಿಷಯದಲ್ಲಿ ಭಾರತವೀಗ ವಿಶ್ವ ಭೂಪಟದಲ್ಲಿ ಗುರುತಿಸಿಕೊಂಡಿದೆ. ಒಂದು ಕಾಲಕ್ಕೆ ರೆಡಾರ್/ ಜಿಪಿಎಸ್ ಸಾಧನಗಳಿಗೂ ಪರರಾಷ್ಟ್ರಗಳನ್ನು ನೆಚ್ಚಬೇಕಾದ ಸ್ಥಿತಿಯಲ್ಲಿದ್ದ ಭಾರತವಿಂದು ರಕ್ಷಣಾ ಸಾಮಗ್ರಿಗಳ ಖರೀದಿದಾರರ ಪಾಲಿನ 'ಡಾರ್ಲಿಂಗ್' ಆಗಿ ಪರಿಣಮಿಸಿದೆ. ಇದಕ್ಕೆ ಭೂಮಿಕೆ ಒದಗಿಸಿದ್ದು ಪಾಕಿಸ್ತಾನದ ಮೇಲೆ ಭಾರತ ಕೈಗೊಂಡ 'ಆಪರೇಷನ್ ಸಿಂದೂರ' ಕಾರ್ಯಾಚರಣೆ. ಹೌದು, ಈ ವೇಳೆ ಅತ್ತ ಕಡೆಯಿಂದ ಪಾಕಿಸ್ತಾನವು ತೂರಿಬಿಡುತ್ತಿದ್ದ ಕ್ಷಿಪಣೆಗಳು, ಹಾರಿಬಿಡುತ್ತಿದ್ದ ಡ್ರೋನ್‌ಗಳನ್ನು ಅವು ಭಾರತದ ನೆಲೆಗಳನ್ನು ಅಪ್ಪಳಿಸುವುದಕ್ಕೂ ಮುನ್ನವೇ, ಬಾನಂಗಳದಲ್ಲೇ ತರಿದು ಬಿಸಾಡುತ್ತಿದ್ದುದು ಭಾರತದ ಬ್ರಹ್ಮೋಸ್ ಕ್ಷಿಪಣಿಗಳು. ರಷ್ಯಾದ ಸಹಯೋಗದೊಂದಿಗೆ ರೂಪುಗೊಂಡಿರುವ ಈ ಕ್ಷಿಪಣಿ ವ್ಯವಸ್ಥೆಗಳನ್ನು ಖರೀದಿಸಲು ವಿಶ್ವದ ವಿವಿಧ ದೇಶಗಳು ಈಗ ಭಾರತದ ಮುಂದೆ ಸಾಲುಹಚ್ಚಿ ನಿಂತಿರುವುದು ವಾಸ್ತವ.

ಬ್ರಹ್ಮೋಸ್‌ಗೆ ಫಿದಾ..

ಶತ್ರುಪಾಳಯದ ದಾಳಿಕಾರಕಗಳನ್ನು ಹುಡಿಗಟ್ಟುವಲ್ಲಿ ಅಪ್ರತಿಮ ನೈಪುಣ್ಯ ಮೆರೆದಿರುವ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿ ವ್ಯವಸ್ಥೆಯನ್ನು ತಮ್ಮದಾಗಿಸಿಕೊಳ್ಳಲು ತವಕಿಸುತ್ತಿರುವ ದೇಶಗಳಿವು.

- ಫಿಲಿಪೈನ್ಸ್
- ಇಂಡೋನೇಷ್ಯಾ
- ವಿಯೆಟ್ನಾಂ
- ಮಲೇಷ್ಯಾ
- ಥಾಯ್ಲೆಂಡ್
- ಸಿಂಗಪೂರ್
- ಬ್ರೂನಿ
- ಈಜಿಪ್ಟ್
- ಸೌದಿ ಅರೇಬಿಯಾ
- ಯುಎಇ
- ಕತಾರ್
- ಒಮನ್
- ಬ್ರೆಜಿಲ್
- ಚಿಲಿ
- ಅರ್ಜೆಂಟೀನಾ
- ವೆನೆಜುವೆಲಾ
- ದಕ್ಷಿಣ ಆಫ್ರಿಕಾ
- ಬಲ್ಗೇರಿಯಾ



ಕನಸೆಲ್ಲವೂ ನನಸಾಯಿತು..

- ದಶಕದ ಹಿಂದೆ ಶೇ.65ರಿಂದ 70ರಷ್ಟು ರಕ್ಷಣಾ ಸಾಧನಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ಭಾರತವಿಂದು ಇಂಥ ಉಪಕರಣಗಳ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿರುವುದರ ಜತೆಗೆ, ಪರದೇಶಗಳ ಬೇಡಿಕೆಯನ್ನು ಪೂರೈಸುವಷ್ಟರ ಮಟ್ಟಿಗೆ ಸಾಮರ್ಥ್ಯವನ್ನು ವೃದ್ಧಿಸಿಕೊಂಡಿದೆ ಮತ್ತು ದೇಶದ ಬೊಕ್ಕಸವನ್ನು ತನ್ಮೂಲಕ ಶ್ರೀಮಂತವಾಗಿಸುತ್ತಿದೆ.
- ಬದಲಾದ ಈ ಚಿತ್ರಣದಿಂದಾಗಿ ನಮ್ಮ ರಕ್ಷಣಾ ರಫ್ತುಗಳು ಗಣನೀಯವಾಗಿ ಹೆಚ್ಚಾಗಿರುವುದರ ಜತೆಗೆ, ವಿವಿಧ ದೇಶಗಳೊಂದಿಗೆ ಹೊಸ ಪಾಲುದಾರಿಕೆ/ ಒಡಂಬಡಿಕೆಗಳು ರೂಪುಗೊಳ್ಳುವಂತಾಗಿದೆ.

- ಉತ್ಪಾದನೆ ಮತ್ತು ಖರೀದಿ ವಲಯಗಳಿಗೆ ಸಿಕ್ಕಿದ ಉತ್ತೇಜನದಿಂದಾಗಿ ಇಂದು ದೇಶವು ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ವಲಯದ 16 ಉದ್ಯಮಗಳು, ಪರವಾನಗಿ ಪಡೆದ 430 ಕಂಪನಿಗಳು ಮತ್ತು 16,000ದಷ್ಟು ಕಿರು-ಸಣ್ಣ-ಮಧ್ಯಮ ಗಾತ್ರದ ಉದ್ಯಮಗಳನ್ನು (ಎಂಎಸ್‌ಎಂಇ) ಒಳಗೊಂಡ ಸದೃಢ ರಕ್ಷಣಾ ಕೈಗಾರಿಕಾ ಸಮುಚ್ಚಯವನ್ನು ಹೊಂದುವಂತಾಗಿದೆ.
- ಪ್ರಸ್ತುತ, ದೇಶದ ಒಟ್ಟು ರಕ್ಷಣಾ ಉತ್ಪಾದನೆಯಲ್ಲಿ ಗಣನೀಯ ಕೊಡುಗೆ ನೀಡುವುದರೊಂದಿಗೆ ಸ್ವಾವಲಂಬನೆಯ ಗುರಿ ಸಾಧಿಸುವಲ್ಲಿ ಖಾಸಗಿ ವಲಯದ ಕಂಪನಿಗಳೂ ಕೈಜೋಡಿಸಿವೆ.
- ಪರಿವರ್ತನಾ ಯುಗಕ್ಕೆ ನಾಂದಿ ಹಾಡಿರುವ ಭಾರತವು, ರಕ್ಷಣಾ ಪರಿಕರಗಳ ಆವಿಷ್ಕಾರ, ಅಭಿವೃದ್ಧಿ/ ಸುಧಾರಣೆ ಹಾಗೂ ಏರೋಸ್ಪೇಸ್ ತಂತ್ರಜ್ಞಾನದ ಸಮರ್ಥ ಬಳಕೆಯೊಂದಿಗೆ ಈ ಕ್ಷೇತ್ರಗಳಲ್ಲಿ ವಿಶ್ವಗುರು ಆಗುವತ್ತ ದಾಪುಗಾಲಿಟ್ಟಿದೆ.

---

9 ಗ್ರಾ.ಪಂ.ಗಳ 19 ಹಳ್ಳಿಗಳ ಮಾರ್ಕಿಂಗ್ ರಿಯಲ್ ಎಸ್ಟೇಟ್ ಉದ್ಯಮ ವಿಸ್ತರಣೆ

ಹಿಗ್ಗಲಿದೆ ಶಿವಮೊಗ್ಗ ಪಾಲಿಕೆ ಸರಹದ್ದು ಹಳ್ಳಿಗೂ ಸ್ಮಾರ್ಟ್‌ಸಿಟಿ ಸೌಲಭ್ಯಗಳ ಸದ್ದು

ಜಿಲ್ಲಾ ನೋಟ

ಹೆಗ್ಗೆರೆ ರೇಣುಕಾರಾಧ್ಯ, ಶಿವಮೊಗ್ಗ

ಮಲೆನಾಡಿನ ಹೆಬ್ಬಾಗಿಲು ಶಿವಮೊಗ್ಗೆಗೆ ವಿಮಾನ ನಿಲ್ದಾಣ ಸಂಪರ್ಕ ಯಾವಾಗ ಲ್ಯಾಂಡ್ ಆಯಿತೋ, ಅಂದಿನಿಂದ ಈ ಸಿಟಿಯ ದಿಕ್ಕು ಬದಲಾವಣೆಗೆ ಹೊರಳುವ ದಾರಿಯಲ್ಲಿದೆ. ಅಂಥ ಹಾದಿಗೆ ಈಗ ಶಿವಮೊಗ್ಗ ನಗರ ತನ್ನ ವ್ಯಾಪ್ತಿ ಇನ್ನಷ್ಟು ವಿಸ್ತರಿಸಿಕೊಳ್ಳುವ ಪ್ರಯತ್ನಕ್ಕೆ ಕೈ ಹಾಕಿದೆ. ನಗರದ ಅಂಚಿನ ಹಳ್ಳಿಗಳನ್ನು ತನ್ನ ಪಾಲಿಕೆ ಗಡಿಯೊಳಗೆ ಸೆಳೆದುಕೊಳ್ಳಲಿದೆ. ನಗರದ ವಿಸ್ತೀರ್ಣವನ್ನು ಅಧಿಕೃತವಾಗಿ ಹಿಗ್ಗಿಸಲು ಸರಕಾರ ಮುಂದಾಗಿರುವುದು ಇಲ್ಲಿನ ರಿಯಲ್ ಎಸ್ಟೇಟ್ ಉದ್ಯಮವೂ ಸೇರಿದಂತೆ ವಾಣಿಜ್ಯ ವಲಯದ ಮಂದಿಗೆ ಸಂತಸ ತಂದಿದೆ. ವ್ಯಾಪಾರ ಬೆಳವಣಿಗೆಗೆ ಹೊಸ ಭರವಸೆ ಹುಟ್ಟು ಹಾಕಿದೆ.

ಪಾಲಿಕೆ ಗಡಿವಿಸ್ತರಣೆ

ಇದು ಬಹುದಿನದ ಬೇಡಿಕೆ. ನಗರದ ಸುತ್ತಮುತ್ತ ಇದ್ದ ಗ್ರಾಮಗಳನ್ನೂ ಪಾಲಿಕೆಯ ವ್ಯಾಪ್ತಿಗೆ ಒಳಪಡಿಸುವಂತೆ ಸತತ ಒತ್ತಾಯ ಇತ್ತು. ಕಳೆದ 20 ವರ್ಷಗಳಿಂದ ಈ ಮಹಾನಗರಪಾಲಿಕೆಯ ವ್ಯಾಪ್ತಿ ವಿಸ್ತರಿಸುವ ಕಾರ್ಯ ನಡೆದೇ ಇಲ್ಲ ಎಂಬುದೇ ಸೋಜಿಗದ ಸಂಗತಿ. 1993ರಲ್ಲಿ ಪಾಲಿಕೆಯ ವ್ಯಾಪ್ತಿ ಗುರುತಿಸುವ ಕಾರ್ಯ ನಡೆದಿತ್ತು. ಆದರೆ, ಒಂದು ದಶಕದಿಂದೀಚೆಗೆ ಕೃಷಿ ಪ್ರದೇಶದ ವ್ಯಾಪ್ತಿ ಕಡಿಮೆಯಾಗಿರುವ ಹಾಗೂ ಪಾಲಿಕೆ ವ್ಯಾಪ್ತಿಯಲ್ಲಿ ಅಭಿವೃದ್ಧಿಯಾಗಿರುವ ಪ್ರದೇಶಗಳನ್ನು ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಗೊಳಿಸುವ ಬಗ್ಗೆ ಸರಕಾರ ಮಾರ್ಗದರ್ಶನ ನೀಡಿದೆ.

ಸಮಿತಿ ವರದಿ

ನಗರಪಾಲಿಕೆ ವತಿಯಿಂದ 9 ಸಮಿತಿಗಳ ರಚಿಸಿ, ಸಮೀಕ್ಷೆ ನಡೆಸಿ, ಈ ಸಮಿತಿಗಳು ನೀಡಿದ ವರದಿಯ ಆಧಾರದ ಮೇಲೆ ವಿಸ್ತರಿಸಬಹುದಾದ ವ್ಯಾಪ್ತಿ ತಾತ್ಕಾಲಿಕವಾಗಿ ಗುರುತಿಸಿ, ಪ್ರಾದೇಶಿಕ ಆಯುಕ್ತರಿಗೆ ಸಲ್ಲಿಸಲಾಗಿತ್ತು. ಅವರ ಮಾರ್ಗದರ್ಶನದಂತೆ ಸಮಿತಿ ಸಭೆ ಸೇರಿ ಸಂಬಂಧಿತ ಇಲಾಖೆಯ ಅಧಿಕಾರಿಗಳೊಂದಿಗೆ ವ್ಯಾಪ್ತಿ ವಿಸ್ತರಣೆಯ ಸಾಧಕ-ಬಾಧಕಗಳ ಕುರಿತು ಸವಿಸ್ತಾರ ಚರ್ಚೆ ನಡೆಸಲಾಗಿದೆ.

ಹೊಸ ಜನಸಂಖ್ಯೆ ಸೇರ್ಪಡೆ

2011ರ ಜನಗಣತಿಯಂತೆ ಪಾಲಿಕೆ ವ್ಯಾಪ್ತಿ ಕನಿಷ್ಠ 3 ಲಕ್ಷ ಜನಸಂಖ್ಯೆ ಇತ್ತು. ಒಂದು ಅಂದಾಜಿನ ಪ್ರಕಾರ 2021ರ ಹೊತ್ತಿಗೆ 4.22 ಲಕ್ಷ ಜನಸಂಖ್ಯೆ, ಹಾಗೂ ಪಾಲಿಕೆ ಪ್ರದೇಶದ ವ್ಯಾಪ್ತಿಯಿಂದ 35,000 ಜನಸಂಖ್ಯೆ ಹೊಸದಾಗಿ ಸೇರ್ಪಡೆಗೊಳ್ಳುವ ಸಾಧ್ಯತೆ ಇದೆ. ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರ ಪರ-ವಿರೋಧದ ಅಭಿಪ್ರಾಯಗಳನ್ನು ಆಧರಿಸಿ, ಮುಂದಿನ 15ದಿನಗಳೊಳಗಾಗಿ ಅಂತಿಮ ಹಂತದ ಸಮಾಲೋಚನೆಯ ನಂತರ ಪಾಲಿಕೆ ಗಡಿ ಪ್ರದೇಶದ ನಕ್ಷೆ ಸಿದ್ಧವಾಗಲಿದೆ. ಆನಂತರ ಸರಕಾರಕ್ಕೆ ಅಂತಿಮ ವರದಿ ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು ಎನ್ನುತ್ತಾರೆ ಅಧಿಕಾರಿಗಳು ಅಭಿಪ್ರಾಯ.

ಗಡಿ ವಿಸ್ತರಣೆ ಲಾಭ-ನಷ್ಟ

ಈ ಪಾಲಿಕೆಯ ವ್ಯಾಪ್ತಿ ವಿಸ್ತರಣೆಯಿಂದ ನಗರ ನೀರು ಸರಬರಾಜು ಮತ್ತು ಒಳಚರಂಡಿಗಳ ವ್ಯವಸ್ಥಿತ ನಿರ್ವಹಣೆ, ನೈರ್ಮಲ್ಯ, ಬೀದಿ ದೀಪ ಅಳವಡಿಕೆ, ಆಸ್ತಿ ತೆರಿಗೆ ವಸೂಲಾತಿ, ನೀರಿನ ತೆರಿಗೆ ವಸೂಲಾತಿ, ಮಾರುಕಟ್ಟೆ ಸ್ಥಳಗಳು, ಅಗ್ನಿಶಾಮಕ ದಳಗಳು, ರಸ್ತೆಗಳು, ಸೇತುವೆಗಳು, ಘನತ್ಯಾಜ್ಯ ವಿಲೇವಾರಿ, ಉದ್ಯಾನಗಳು, ಶಿಕ್ಷಣ, ಜನನ-ಮರಣ ದಾಖಲೆಗಳ ನಿರ್ವಹಣೆ, ಮಳಿಗೆಗಳ ತೆರಿಗೆ ವಸೂಲಾತಿ, ಉದ್ದಿಮೆ ಪರವಾನಗಿ ಶುಲ್ಕ ಮತ್ತಿತರ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗಲಿದೆ. ಪಾಲಿಕೆ ಆಯುಕ್ತರ ಮೂಲಕ ಸ್ಥಳೀಯ 35 ವಾರ್ಡುಗಳ ಆಡಳಿತ ನಿರ್ವಹಿಸಲಾಗುತ್ತಿದೆ. ಇದು ವ್ಯಾಪಾರ ವಹಿವಾಟುಗಳ ಜತೆ ರಿಯಲ್ ಎಸ್ಟೇಟ್ ಉದ್ಯಮಕ್ಕೂ ಹೊಸ ಶಕ್ತಿ ತಂದು ಕೊಡಲಿದೆ.

19 ಗ್ರಾಮಗಳ ಸೇರ್ಪಡೆ

ಮಹಾನಗರಪಾಲಿಕೆ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸುವ ಸಂಬಂಧ ಶಿವಮೊಗ್ಗ ನಗರ ಮತ್ತು ಗ್ರಾಮಾಂತರ ಪ್ರದೇಶ ಹಾಗೂ ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಗೊಳಪಡುವ ಒಂಬತ್ತು ಗ್ರಾಮ ಪಂಚಾಯಿತಿಗಳ 19 ಹಳ್ಳಿಗಳನ್ನು ಗುರುತಿಸಲಾಗಿದೆ. ಪ್ರಸ್ತುತ ಅಬ್ಬಲಗೆರೆ, ಕೋಟೆಗಂಗೂರು, ಮುದ್ದಿನಕೊಪ್ಪ, ಮೇಲಿನ ಹನಸವಾಡಿ, ಗೋಂದಿ ಚಟ್ನಳ್ಳಿ, ನಿಧಿಗೆ, ಮಾಚೇನಹಳ್ಳಿ, ಸಂತೆಕಡೂರು, ಪುರದಾಳು, ಗುಡ್ಡದ ಅರೆಕೆರೆ, ತ್ಯಾವರೆಕೊಪ್ಪ. ಅಗಸವಳ್ಳಿ ಗ್ರಾಮ ಪಂಚಾಯಿತಿಗಳ ಭಾಗಶಃ ಮತ್ತು ಪೂರ್ಣ ಪ್ರಮಾಣದಲ್ಲಿ ಗ್ರಾಮಗಳು ಸೇರ್ಪಡೆಗೊಳ್ಳುವ ಸಂಭವವಿದೆ.

ಯಾವಾಗ ಘೋಷಣೆ?

ಮಹಾನಗರಪಾಲಿಕೆ ವ್ಯಾಪ್ತಿ ವಿಸ್ತರಿಸಲು ಜಿಲ್ಲಾ ಉಸ್ತುವಾರಿ ಸಚಿವರು, ಶಿವಮೊಗ್ಗ ನಗರ ಮತ್ತು ಗ್ರಾಮಾಂತರ ಹಾಗೂ ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಗೊಳಪಡುವ ಆಯಾ ಕ್ಷೇತ್ರಗಳ ಶಾಸಕರು ಹಾಗೂ ಆಯಾ ಗ್ರಾಮ ಪಂಚಾಯಿತಿಗಳ ಚುನಾಯಿತ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸಿ, ಮುಂದಿನ 15 ದಿನಗಳೊಳಗಾಗಿ ಸಲ್ಲಿಸುವಂತೆ ಸರಕಾರ ಆದೇಶ ನೀಡಿದೆ. ಇದು ಶೀಘ್ರ ಜಾರಿಗೆ ಬರುವ ಸಂಭವವಿದೆ. ಪಾಲಿಕೆಗೆ ಹೊಸ ಗ್ರಾಮಗಳ ಸೇರ್ಪಡೆಯಾಗಿ ಅಧಿಕೃತ ಆದೇಶ ಹೊರ ಬೀಳುತ್ತಿದ್ದಂತೆ ಮುಂದಿನ ಪಾಲಿಕೆಯ ಚುನಾವಣೆಗೆ ವಾರ್ಡ್‌ಗಳ ಸಂಖ್ಯೆ ಕೂಡ ಹೆಚ್ಚಳ ಆಗುವ ಸಾಧ್ಯತೆಗಳಿವೆ. ಒಟ್ಟಾರೆ ಮಲೆನಾಡಿಗರ ಪಾಲಿನ ಸ್ಮಾರ್ಟ್‌ಸಿಟಿಯಾಗಿರುವ ಶಿವಮೊಗ್ಗ ಈಗ ಮಹಾನಗರವಾಗಿ ತನ್ನ ಗಡಿಯ, ತನ್ನ ಸರಹದ್ದಿನ ರೇಖೆಯನ್ನ ಚಾಚಿಕೊಂಡು ಬೆಳೆಯುತ್ತಿರುವುದು ಆಶಾದಾಯಕ ಬೆಳವಣಿಗೆಯಂತೂ ಹೌದು.

ಮಾದೇಶ್ವರನ ನಾಡಿಗೆ ಸತತ ಮಳೆ ನೆಲ ಕಚ್ಚಿದೆ ಬಾಳೆ, ಸಾಂಬಾರ ಬೆಳೆ

ಜಿಲ್ಲಾ ನೋಟ

ದೇವನೂರು ಶ್ರೀನಿವಾಸ್, ಚಾಮರಾಜನಗರ

ಮುಂಗಾರಿಗೂ ಮುಂಚೆಯೇ ಜಿಲ್ಲೆಗೆ ಮಳೆರಾಯನ ಆಗಮನವಾಗಿದೆ. ಇದರಿಂದ ಒಂದೆಡೆ ಸಂಭ್ರಮ, ಒಂದೆಡೆ ಸಂಕಷ್ಟ. ಜಿಲ್ಲೆಯ ಗುಂಡ್ಲುಪೇಟೆ ಹಾಗೂ ಹನೂರು ಭಾಗದಲ್ಲಿ ರೈತರು ಬೆಳೆದ ಬೆಳೆಗಳು ನೆಲ ಕಚ್ಚಿದರೆ, ಮತ್ತೊಂದೆಡೆ ಪ್ರವಾಸಿ ಕೇಂದ್ರಗಳಾದ ಹಿಮವದ್ ಗೋಪಾಲಸ್ವಾಮಿ ಬೆಟ್ಟ ಹಾಗೂ ಬಿಳಿಗಿರಿರಂಗನ ಬೆಟ್ಟ ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿವೆ..!

ಹೌದು. ಚಾಮರಾಜನಗರ ಜಿಲ್ಲೆ ಸುಮಾರು ಶೇ.52ರಷ್ಟು ಅರಣ್ಯದಿಂದ ಸಮೃದ್ಧವಾಗಿದೆ. ಸಾಲು ಸಾಲು ಬೆಟ್ಟಗಳ ನಡುವೆ ಮೂರು ಬೆಟ್ಟಗಳ ಸಂಗಮ ಇಲ್ಲಿದೆ. ಮಳೆಗಾಲದಲ್ಲಿ ಇಲ್ಲಿನ ಅದ್ಭುತ ಪ್ರಕೃತಿ ಸೌಂದರ್ಯ ಗಮನ ಸೆಳೆಯುತ್ತದೆ. ಈ ಜಿಲ್ಲೆಗೆ ಎರಡೂ ತರಹದ ಲಾಭ - ನಷ್ಟಗಳ ವರದಾನಗಳಿವೆ. ಜಿಲ್ಲೆಯ ಶೇ.70ರಷ್ಟು ಭಾಗ ಮಳೆಯಾಶ್ರಿತ ಕೃಷಿ ಪ್ರದೇಶವಿದೆ.

ಕಾಡು ಪ್ರಾಣಿಗಳ ಉಪಟಳ

ಸರಿಯಾದ ಕಾಲಕ್ಕೆ ಮಳೆ ಬಂದರೆ ಬೆಳೆ, ಬೆಳೆದ ಬೆಳೆ ಮನೆ ಸುರಕ್ಷಿತವಾಗಿ ತಲುಪಿದರೆ ಮಾತ್ರ ಇಲ್ಲಿಯ ರೈತರದು ಸಾರ್ಥಕ ಜೀವನ. ಆದರೆ ಅಷ್ಟು ಸುಲಭವೂ ಅಲ್ಲ, ಏಕೆಂದರೆ ಉತ್ತಮ ಮಳೆ ಬಂದು ಬೆಳೆ ಬೆಳೆದರೂ ಕಾಡಂಚಿನ ಕಾಡು ಪ್ರಾಣಿಗಳ ಉಪಟಳದಿಂದ ಬೆಳೆ ರಕ್ಷಣೆ ಮಾಡಿಕೊಳ್ಳುವುದೇ ದೊಡ್ಡ ಸಾಹಸ..

ಮೂರು ದೇವರ ಬೆಟ್ಟಗಳು

ಜಿಲ್ಲೆಯಲ್ಲಿ ಬಿಳಿಗಿರಿರಂಗನ ಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಮಲೈಮಹದೇಶ್ವರ ಬೆಟ್ಟ ಈ ಮೂರು ಬೆಟ್ಟಗಳು ದಟ್ಟ ಅರಣ್ಯದ ನಡುವೆ ಇದ್ದು, ಮಳೆಗಾಲದಲ್ಲಿ ಮತ್ತಷ್ಟು ಪ್ರಕೃತಿಯ ಸೌಂದರ್ಯವನ್ನು ತೋರುತ್ತವೆ. ಅದು ಸಹ ಬೇರೆ ಲೋಕಕ್ಕೆ ಕರೆದುಕೊಂಡು ಹೋಗುತ್ತವೆ. ಹಚ್ಚ ಹಸಿರಿನ ಕಾಡಿನ ನಡುವೆ ಬೆಳ್ಳಿ ಮೋಡಗಳೊಂದಿಗೆ ಧರೆ ಸ್ವರ್ಗವನ್ನೇ ಇಳಿಸಿದಂತ್ತಾಗುತ್ತದೆ. ಈ ಕಾಲದಲ್ಲಿ ದೇವರ ದರ್ಶನಕ್ಕೆ ಬರುವವರಿಗೆ ದೇವರ ಕೃಪೆಯೊಂದಿಗೆ ವಿಶೇಷ ಪ್ರಕೃತಿ ಸೌಂದರ್ಯದ ದೃಶ್ಯವಕಾಶ ದೊರೆತಂತ್ತಾಗುತ್ತದೆ.

ಬೆಳ್ಳಿ ಬೆಟ್ಟ- ಹಸಿರು ಕಾಡು

ರಾಜ್ಯದ ಹಾಗೂ ಜಿಲ್ಲೆಯ ಮೂರು ಪ್ರಮುಖ ದೇವಾಲಯಗಳಾದ ಈ ಬೆಟ್ಟಗಳು ನಿಜಕ್ಕೂ ಈ ಕಾಲದಲ್ಲಿ ಭಕ್ತರು, ಪ್ರವಾಸಿಗರಿಗೆ ಸ್ವರ್ಗವನ್ನೇ ಕಾಣುವಂತೆ ಮಾಡುತ್ತವೆ. ಮೊದಲೇ ಎತ್ತರ ಪ್ರದೇಶದಲ್ಲಿರುವ ಬಿಳಿಗಿರಿ ರಂಗನ ಬೆಟ್ಟ ಹಾಗೂ ಹಿಮವದ್ ಗೋಪಾಲಸ್ವಾಮಿ ಬೆಟ್ಟ ಹಚ್ಚ ಹಸಿರಿನ ಕಾಡಿನ ನಡುವೆ ಕಂಗೊಳಿಸುತ್ತವೆ. ಬೆಳ್ಳಿ ಮೋಡಗಳನ್ನು ಹೊದಿಕೆಯಾಗಿ ಬೆಟ್ಟಕ್ಕೆ ಹಾಸಿದಂತೆ ಭಾಸವಾಗುವ ಈ ದೃಶ್ಯಗಳು ನಿಜಕ್ಕೂ ರುದ್ರ ರಮಣೀಯ. ಇನ್ನು ಮಲೆಮಹದೇಶ್ವರ ಬೆಟ್ಟ ಮಾತ್ರ, ಸುತ್ತ ಎತ್ತರವಾದ ಬೆಟ್ಟಗಳ ಮಧ್ಯೆ ಹಳ್ಳದಲ್ಲಿದ್ದು, ಪ್ರಶಾಂತವಾದ ತಣ್ಣನೆಯ ಪ್ರಪಂಚವನ್ನೇ ಸೃಷ್ಟಿ ಮಾಡಿದೆ.



ಮೂಲ ಸೌಕರ್ಯದ ಬರ

ಮಲೆಮಹದೇಶ್ವರ ಬೆಟ್ಟದಲ್ಲಿ ಬಹುತೇಕ ಸೌಕರ್ಯಗಳಿವೆ. ಆದರೆ ಬಿಳಿಗಿರಿರಂಗನ ಬೆಟ್ಟ ಹಾಗೂ ಗೋಪಾಲಸ್ವಾಮಿ ಬೆಟ್ಟದಲ್ಲಿ ಮಾತ್ರ ಮೂಲ ಸೌಕರ್ಯಗಳ ಕೊರತೆ ಮಾತ್ರ ಇಂದಿಗೂ ಕಾಡುತ್ತಿದೆ. ಇಲ್ಲಿ ಪ್ರಕೃತಿ ಸೌಂದರ್ಯ ನೋಡಬಹುದು. ಆದರೆ ಅಲ್ಲೇ ಉಳಿದು ಕಾಲ ಕಳೆಯುವ ಅವಕಾಶಕ್ಕೆ ಸರಕಾರ ಸೌಲಭ್ಯ ಕಲ್ಪಿಸಿಲ್ಲ. ಎರಡು ಕಡೆಯೂ ಉಳ್ಳವರಿಗೆ ಮಾತ್ರ ಎನ್ನುವ ಪರಿಸ್ಥಿತಿ ಇಲ್ಲಿದೆ. ಇದು ಬಡ ಜನರಿಗೂ ಸಿಗಬೇಕು ಎನ್ನುವುದು ಎಲ್ಲರ ಆಶಯವಾಗಿಯೇ ಉಳಿದಿದೆ. ಎರಡು ಕಡೆಯೂ ಪುರಾತನ ಕಾಲದ ವಿಷ್ಣು ದೇವಾಲಯಗಳಿದ್ದು, ಸಾಕಷ್ಟು ಭಕ್ತರ ಗಣವನ್ನೇ ಹೊಂದಿದೆ.

ಪ್ರವಾಸೋದ್ಯಮಕ್ಕಿಲ್ಲ ಆದ್ಯತೆ

ಜಿಲ್ಲೆಯಲ್ಲಿ ಎರಡು ಹುಲಿ ಸಂರಕ್ಷಿತ ಅರಣ್ಯ ಪ್ರದೇಶ, ಮೂರು ಜಲಪಾತ, ಸುಪ್ರಸಿದ್ಧ ಐತಿಹಾಸಿಕ ಮೂರು ದೇವಾಲಯಗಳು ಸಹ ಬಹು ಮುಖ್ಯ. ಸಮೃದ್ಧ ಕಾಡು, ಜಲಪಾತಗಳು ದೇವಾಲಯಗಳಿದ್ದರೂ ಏಕೋ ಏನೋ ಗೊತ್ತಿಲ್ಲ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ವಂಚಿತವಾಗಿಯೇ ಉಳಿದು ಬಿಟ್ಟಿದೆ. ಎಷ್ಟೇ ಸರಕಾರ ಬಂದರೂ ಇತ್ತ ಗಮನಹರಿಸುವಲ್ಲಿ ವಿಫಲವಾಗಿವೆ. ಹಿಂದುಳಿದ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಮಾಡಿ ಶ್ರೀಮಂತ ಜಿಲ್ಲೆ ಮಾಡಲು ಜನಪ್ರತಿನಿಧಿಗಳು, ಅಧಿಕಾರಿಗಳು ಮನಸ್ಸು ಮಾಡುತ್ತಿಲ್ಲ.

ಅತಿವೃಷ್ಟಿ ಅವಾಂತರ

ಜಿಲ್ಲೆಯ ಗುಂಡ್ಲುಪೇಟೆ ಹಾಗೂ ಹನೂರು ತಾಲೂಕಿನಲ್ಲಿ ರೈತರು ಫಸಲು ಬೆಳೆದು ಮನೆ ತರುವುದು ನಿಜಕ್ಕೂ ಒಂದು ದೊಡ್ಡ ಸಾಹಸವೇ ಸರಿ. ಮಳೆ ಬಂದರೆ ಈ ಭಾಗದ ರೈತರು ಉತ್ತಮ ರೀತಿ ವ್ಯವಸಾಯವನ್ನೇ ಮಾಡುತ್ತಾರೆ. ಆದರೆ ಬೇರೆ ಪ್ರದೇಶದ ಥರ ಇಲ್ಲಿ ನೇರವಾಗಿ ಫಸಲು ಕೈಗೆ ಸೇರಲ್ಲ. ಕಾಡುಪ್ರಾಣಿಗಳ ಕಾಟದಿಂದ ಫಸಲು ಕಾಪಾಡಲು ಹರಸಾಹಸ ಪಡಲೇಬೇಕು. ಇದನ್ನ ತಪ್ಪಿಸಲು ಜಮೀನಿನಲ್ಲಿ ಕಾವಲು ಕಾದರೆ ಪ್ರಾಣಕ್ಕೂ ಕುತ್ತು, ಆದರೂ ಶ್ರಮ ಪಡುವ ರೈತರಿಗೆ ಅರಣ್ಯಾಧಿಕಾರಿಗಳು ಆಶ್ರಯವಾಗ ಬೇಕಿದೆ.

ಪ್ರಾಣಿಗಳ ಜತೆ ಸಂಘರ್ಷ

ಕಾಡಂಚಿನ ಗ್ರಾಮಗಳ ಜಮೀನುಗಳಿಗೆ ಯಾವಾಗ ಅಂದರೆ ಅವಾಗ ಕಾಡುಪ್ರಾಣಿಗಳ ಲಗ್ಗೆ ಇಡುವುದು ತಪ್ಪುತ್ತಿಲ್ಲ. ರೈತರ ಸಾಹಸ ಜೀವನಕ್ಕೆ ಬೆಲೆಯೇ ಇಲ್ಲ ಎನ್ನುತ್ತಾರೆ ನೊಂದ ರೈತರು. ಅಷ್ಟೇ ಅಲ್ಲದೇ ಅರಣ್ಯ ಇಲಾಖೆ ಕಚೇರಿಗಳಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರೂ ಕಾಡುಪ್ರಾಣಿ ಹಾವಳಿ ತಪ್ಪಿಸದ ಅಧಿಕಾರಿಗಳ ವಿರುದ್ಧ ರೈತರು ಆಕ್ರೋಶ ಹೊರ ಹಾಕುತ್ತಿದ್ದಾರೆ. ಬಾಳೆ, ಕಬ್ಬು, ತೆಂಗು ಸೇರಿದಂತೆ ತೋಟಗಾರಿಕೆ ಬೆಳೆಗಳನ್ನ ನಾಶ ಪಡಿಸುವ ಕಾಡುಪ್ರಾಣಿಗಳು ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ.

ಬಾಳೆ ಬೆಳೆ ನಾಶ

ಜಿಲ್ಲೆಗೆ ಕಳೆದ ನಾಲ್ಕು ದಿನದಿಂದ ಬೀಳುತ್ತಿರುವ ಸ್ವಲ್ಪ ಪ್ರಮಾಣದ ಮಳೆಯಾದರೂ ಭಾರೀ ಗಾಳಿ ಬೀಸಿ ಜಿಲ್ಲೆಯಲ್ಲಿ ಬೆಳೆದಿದ್ದ ಅಪಾರ ಪ್ರಮಾಣದ ಬಾಳೆ ಬೆಳೆ ಸಂಪೂರ್ಣ ನೆಲ ಕಚ್ಚಿದೆ. ಅಲ್ಲದೇ ಬಿದ್ದ ಮಳೆಗೆ ಸಾಂಬಾರ ಬೆಳೆಗಳು ಸಹ ನಿಂತ ನೀರಲ್ಲಿ ಕೊಳೆಯುವಂತಾಗಿದೆ. ಇದರೊಂದಿಗೆ ಪ್ರವಾಹ ಭೀತಿ ಬೇರೆ ತಪ್ಪಿಲ್ಲ. ಕೇರಳ ಹಾಗೂ ಕೊಡಗಿನಲ್ಲಿ ಹೆಚ್ಚು ಮಳೆಯಾದರೆ ಕಾವೇರಿ ನದಿ ಒಳಹರಿವು ಹೆಚ್ಚಾಗಿ ನದಿ ಪಾತ್ರದ ಜಮೀನಿನ ಬೆಳೆ ಕೂಡ ನಾಶವಾಗುತ್ತದೆ. ಕೆಲ ಸಮಯ ಕೆಲ ಗ್ರಾಮಗಳು ಊರನ್ನೇ ತೊರೆಯಬೇಕಾಗಿದೆ. ಸದ್ಯಕ್ಕೆ ಮಳೆ ಗಾಳಿ ಹೊಡೆತಕ್ಕೆ ರೈತರು ಇದೀಗ ತತ್ತರಿಸಿ ಹೋಗಿದ್ದಾರೆ.

ತ್ಯಾಜ್ಯ ನಿರ್ವಹಣೆ

ಡಾ. ವಾಮನಾಚಾರ್ಯ ಅವರು, 'ಸನ್‌ರೇಸ್ ಕಾಂಪೋಸ್ಟ್ಸ್' ಎಂಬ ತ್ಯಾಜ್ಯ ನಿರ್ವಹಣೆ ವಲಯದ ಸಂಸ್ಥೆಯ ಸ್ಥಾಪಕರೂ ಆಗಿದ್ದಾರೆ. ನಾನಾ ಉದ್ದಿಮೆಗಳಿಗೆ ಅಗತ್ಯವಿರುವ ತ್ಯಾಜ್ಯ ನಿರ್ವಹಣೆಯ ಸೇವೆಯನ್ನು ಈ ಸಂಸ್ಥೆ ಒದಗಿಸುತ್ತದೆ. ತ್ಯಾಜ್ಯ ನಿರ್ವಹಣೆ ಮತ್ತು ಜೈವಿಕ ಇಂಧನ ವಲಯದಲ್ಲಿ ಅವರಿಗೆ ಅಪಾರವಾದ ಆಸಕ್ತಿ ಮತ್ತು ಅನುಭವ ಇದೆ. ಜೈವಿಕ ಅನಿಲ, ವಾಹನಗಳಿಗೆ ಸಿಎನ್‌ಜಿ ಅಳವಡಿಕೆ, ಕಾಂಪೋಸ್ಟ್ ಗೊಬ್ಬರ ತಯಾರಿಕೆಯ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ್ದಾರೆ.

ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ

ಪರಿಸರ ರಕ್ಷಣೆ, ತ್ಯಾಜ್ಯ ನಿರ್ವಹಣೆ ಕ್ಷೇತ್ರಗಳಲ್ಲಿ ಡಾ. ವಾಮನಾಚಾರ್ಯ ಅವರು ಸಾಧಿಸಿರುವ ಯಶಸ್ಸನ್ನು ಗುರುತಿಸಿ, ಇತ್ತೀಚೆಗೆ ಅವರಿಗೆ 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಸಿಮೆಂಟ್ ತಯಾರಿಕೆಯ ಉದ್ದಿಮೆಗಳಲ್ಲಿ ಬಳಸುವ ಪರಿಕಲ್ಪನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಿದವರು, ಡಾ. ವಾಮನಾಚಾರ್ಯ. ಸೇಡಂನಲ್ಲಿ ಸಿಮೆಂಟ್ ತಯಾರಿಕೆಯ ಉದ್ದಿಮೆಗಳಲ್ಲಿ ಕಲ್ಲಿದ್ದಲಿನ ಜತೆಗೆ ಪ್ಲಾಸ್ಟಿಕ್ ತ್ಯಾಜ್ಯಗಳನ್ನೂ ಬಳಸಿದ ಪ್ರಯೋಗ ಅಭೂತಪೂರ್ವ ಯಶಸ್ಸು ಕಂಡಿತು. ಈ ಪ್ರಯೋಗದಿಂದ ಸಿಮೆಂಟ್ ಉದ್ದಿಮೆಯಲ್ಲೀಗ ಕೋಟ್ಯಂತರ ರುಪಾಯಿ ಉಳಿತಾಯವಾಗುತ್ತಿದೆ. ಇವರು ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಬಹುಮುಖಿ ಸೇವಾ ಸಂಪನ್ನ ಡಾ. ವಾಮನಾಚಾರ್ಯ

• ಕೇಶವ್ ಪ್ರಸಾದ್

ಸಾಮಾನ್ಯವಾಗಿ ರಾಜಕೀಯದಲ್ಲಿ ಇರುವವರಿಗೆ ಒಂದಿಲ್ಲೊಂದು ದಿನ ಅಧಿಕಾರ ಹಿಡಿಯುವುದು ದೊಡ್ಡ ಗುರಿಯಾಗಿರುತ್ತದೆ. 'ತಾವೇನು ಸಂನ್ಯಾಸಿಯಲ್ಲ' ಎಂಬುದು ಅವರ ಸ್ವಾರ್ಥ ಲಾಲಸೆಗಳ ಸಮಜಾಯಿಷಿಯಾಗಿರುತ್ತದೆ. ಹಲವಾರು ರಾಜಕಾರಣಿಗಳು ಶಿಕ್ಷಣ, ಹೆಲ್ತ್ ಕೇರ್, ರಿಯಲ್ ಎಸ್ಟೇಟ್, ಹಣಕಾಸು ಮತ್ತು ಇತರ ಕ್ಷೇತ್ರಗಳಲ್ಲಿ ಬಿಸಿನೆಸ್ ಹಿತಾಸಕ್ತಿಯನ್ನೂ ಹೊಂದಿರುವುದು ಈಗ ಜಗಜ್ಜಾಹಿರ.

ಆದರೆ ರಾಜಕಾರಣದಲ್ಲಿದ್ದರೂ, ಅಧಿಕಾರಕ್ಕಾಗಿ ಹಪಹಪಿಸದೆ ಸೈದ್ಧಾಂತಿಕ ಬದ್ಧತೆಯನ್ನು ಉಳಿಸಿಕೊಳ್ಳುವುದು, ಅದರ ಜತೆಗೆ ಪರಿಸರ, ಮಾಲಿನ್ಯ ನಿಯಂತ್ರಣ, ನಿಸರ್ಗ ಸ್ನೇಹಿ ಉದ್ಯಮ ಮೊದಲಾದ ಸಂವೇದನಾಶೀಲ ಕ್ಷೇತ್ರಗಳಲ್ಲೂ ಆಸಕ್ತಿ ಮತ್ತು ಶ್ರದ್ಧೆಯಿಂದ ತೊಡಗಿಸಿಕೊಳ್ಳುವುದು ಅತ್ಯಂತ ಅಪರೂಪವಾಗಿ ಬಿಟ್ಟಿದೆ. ಅಂಥ ವಿಶಿಷ್ಟ ರಾಜಕಾರಣಿಗಳ ಸಾಲಿನಲ್ಲಿ ನಿಲ್ಲುವವರು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿಯ ಮಾಜಿ ವಕ್ತಾರರಾದ ಡಾ. ವಾಮನಾಚಾರ್ಯ. ಅವರು ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ 2012ರಿಂದ 2015ರ ತನಕ ಅಧ್ಯಕ್ಷರಾಗಿ ತಮ್ಮದೇ ಛಾಪು ಮೂಡಿಸಿದ್ದಾರೆ. ಅನೇಕ ಅವಿಸ್ಮರಣೀಯ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಹಲವು ದಶಕಗಳಿಂದಲೂ ಯಶಸ್ವಿ ಪರಿಸರಸ್ನೇಹಿ ಉದ್ಯಮಿಯಾಗಿಯೂ ಗುರುತಿಸಿಕೊಂಡಿದ್ದಾರೆ.

ಡಾ. ವಾಮನಾಚಾರ್ಯ ಅವರ ಬದುಕು-ಸಾಧನೆಯನ್ನು ರಾಜಕೀಯ, ಪರಿಸರ ಮಾಲಿನ್ಯ ನಿಯಂತ್ರಣ ಮತ್ತು ಪರಿಸರ ಸ್ನೇಹಿ ಉದ್ಯಮ ಕ್ಷೇತ್ರದಲ್ಲಿ ಅವಲೋಕಿಸಬಹುದು. 1950 ರಲ್ಲಿ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಬೊಮ್ಮನಹಳ್ಳಿಯಲ್ಲಿ ಜನಿಸಿದ ಡಾ. ವಾಮನಾಚಾರ್ಯ ಅವರು ಕಿರಿಯ ವಯಸ್ಸಿನಲ್ಲಿಯೇ ರಾಷ್ಟ್ರೀಯ ಸ್ವಯಂ ಸೇವಾ ಸಂಘದಲ್ಲಿ ಸಕ್ರಿಯರಾಗಿದ್ದರು. ಸಂಘದ ಶಾಖೆಗಳಿಗೆ ತಪ್ಪದೆ ಹೋಗುತ್ತಿದ್ದರು. ಅವರ ಕುಟುಂಬಕ್ಕೇನೂ ರಾಜಕೀಯ ಚಟುವಟಿಕೆಗಳ ಹಿನ್ನೆಲೆಯೇನೂ ಇದ್ದಿರಲಿಲ್ಲ. ತಂದೆ ವೈದಿಕರಾಗಿ ಪೌರೋಹಿತ್ಯ ಸೇವೆಯ ಕೈಂಕರ್ಯಗಳಲ್ಲಿ ನಿರತರಾಗಿದ್ದರು. ಸಾಮಾನ್ಯ ಮಧ್ಯಮ ವರ್ಗದ ಕುಟುಂಬದಲ್ಲಿ ಬಾಲ್ಯದ ದಿನಗಳನ್ನು ಕಳೆದ ವಾಮನಾಚಾರ್ಯ ಅವರಿಗೆ ಚಿಕ್ಕಂದಿನಲ್ಲೇ ಸಾಮಾಜಿಕ ಆಗು ಹೋಗುಗಳ ಬಗ್ಗೆ ತಿಳಿದುಕೊಳ್ಳುವ ಮತ್ತು ಸ್ಪಂದಿಸುವ ಆಸಕ್ತಿ ಇತ್ತು.

1971ರಲ್ಲಿ ಬಾಂಗ್ಲಾದೇಶ ವಿಮೋಚನಾ ಸಮರವು ದೇಶದಲ್ಲಿ ರಾಷ್ಟ್ರೀಯತೆಯನ್ನು ಬಡಿದೆಬ್ಬಿಸಿತ್ತು. ಭಾರತ-ಪಾಕಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿ ನಡೆಯುತ್ತಿದ್ದ ವಿದ್ಯಮಾನಗಳು, ಸಂಘರ್ಷಗಳು ದೇಶವಾಸಿಗಳಲ್ಲಿ ರಾಷ್ಟ್ರೀಯತೆಯ ಭಾವನೆಗಳನ್ನು ಮೂಡಿಸಿತ್ತು. ಪಕ್ಷಾತೀತವಾಗಿ ಜನರು ದೇಶ ಪರ ಚಿಂತನೆಗಳಲ್ಲಿ ವ್ಯಸ್ತರಾಗುತ್ತಿದ್ದರು. ಆಗ ಕಾಂಗ್ರೆಸ್ ಬಿಟ್ಟರೆ ಬೇರೆ ಪ್ರಬಲ ಪಕ್ಷಗಳೂ ಇದ್ದಿರಲಿಲ್ಲ ಎಂಬುದು ಬೇರೆ ಮಾತು. ಒಟ್ಟಿನಲ್ಲಿ ಬಾಂಗ್ಲಾ ವಿಮೋಚನೆಯ ಘಟನೆಗಳು ವಾಮನಾಚಾರ್ಯರ ಮೇಲೆ ಪ್ರಭಾವ ಬೀರಿತ್ತು.

ಪೂರ್ಣಾವಧಿಯ ಕಾರ್ಯಕರ್ತರು

ಬಳಿಕ 1975ರ ತುರ್ತು ಪರಿಸ್ಥಿತಿಯ ಸಂದರ್ಭವೂ ಅವರನ್ನು ಸಮಾಜಪರ ಚಟುವಟಿಕೆಗಳ ಬಗ್ಗೆ ಸೆಳೆಯಿತು. ಆಗ ಆರೆಸ್ಸೆಸ್ ಆದೇಶದ ಮೇರೆಗೆ ಜನ ಜಾಗೃತಿಯ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು. ಪ್ರತಿಭಾವಂತ ತರುಣರಾಗಿದ್ದ ವಾಮನಾಚಾರ್ಯ ಅವರು ಕರ್ನಾಟಕ ಮೆಡಿಕಲ್ ಕಾಲೇಜಿನಲ್ಲಿ 1974ರಲ್ಲಿ ಎಂಬಿಬಿಎಸ್ ಪೂರ್ಣಗೊಳಿಸಿದರು. 1976ರಲ್ಲಿ ಸಂಘದ ಪೂರ್ಣಾವಧಿಯ ಪ್ರಚಾರಕರಾದರು. ತುರ್ತುಪರಿಸ್ಥಿತಿ ವಿರುದ್ಧದ ಹೋರಾಟದ ದಿನಗಳಲ್ಲಿ, ಹಿರಿಯ ಜನ ನಾಯಕ ಜಯಪ್ರಕಾಶ ನಾರಾಯಣ, ಮಹಾರಾಷ್ಟ್ರ ಮೂಲದ ಖ್ಯಾತ ಲೇಖಕಿ ದುರ್ಗಾ ಭಾಗವತ್ ಅವರ ಚಿಂತನೆಗಳಿಂದ ಪ್ರಭಾವಿತರಾದರು. ಕರಪತ್ರಗಳನ್ನು ಹಂಚುವುದು, ಜನ ಸಂಘಟನೆ ಸೇರಿದಂತೆ ತುರ್ತುಪರಿಸ್ಥಿತಿ ವಿರುದ್ಧ ಆಂದೋಲನದಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು.

1977ರಲ್ಲಿ ವೈದ್ಯಕೀಯದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದ ಬಳಿಕ ಮುಂಬಯಿನಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. 1984ರಲ್ಲಿ ಬೆಂಗಳೂರಿಗೆ ಮರಳಿದರು. ಬಳಿಕ ಸನ್‌ರೇಸ್ ಎಂಬ ಪ್ರಿಂಟಿಂಗ್ ಇಂಕ್ ತಯಾರಿಸುವ ಘಟಕವನ್ನು ತೆರೆದರು. ಆಗ ದೇಶದೆಲ್ಲೆಡೆ ರಾಮಜನ್ಮ ಭೂಮಿ ಆಂದೋಲನ ದಿನೇದಿನೆ ತೀವ್ರ ಸ್ವರೂಪ ಪಡೆಯುತ್ತಿತ್ತು. ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿಯಾಗಿದ್ದ ಡಾ. ವಾಮನಾಚಾರ್ಯ ಅವರು ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಂಡರು. ಅವರಿಗೆ ಚುನಾವಣಾ ರಾಜಕಾರಣದ ಬಗ್ಗೆ ಒಲವು ಇದ್ದಿರಲಿಲ್ಲ. ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ಮೂರು ವರ್ಷ ಸೇವೆ ಸಲ್ಲಿಸಿದರು. ಬಳಿಕ 5-6 ವರ್ಷ ರಾಷ್ಟ್ರ ರಾಜಕಾರಣದಲ್ಲಿದ್ದರು. ಮಹಾರಾಷ್ಟ್ರ, ಆಂಧ್ರಪ್ರದೇಶದಲ್ಲಿ ಪಕ್ಷದ ಪ್ರಭಾರಿಯಾಗಿ ಸೇವೆ ಸಲ್ಲಿಸಿದರು.

ಪರಿಸರದ ಕುರಿತು ಕಾಳಜಿ

ಡಾ. ವಾಮನಾಚಾರ್ಯ ಅವರು ಪರಿಸರ ಮಾಲಿನ್ಯ ನಿಯಂತ್ರನ ಮಂಡಳಿಯ ಅಧ್ಯಕ್ಷರಾಗಿ 2012ರಿಂದ 3 ವರ್ಷಗಳ ಕಾಲ ಅಪೂರ್ವವಾದ ಸೇವೆಯನ್ನು ಸಲ್ಲಿಸಿದರು. ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಸ್ವಾಯತ್ತತೆಯನ್ನು ಎತ್ತಿ ಹಿಡಿದರು. ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಉದ್ದಿಮೆಗಳಿಗೆ ನೀಡುವ ಲೈಸೆನ್ಸ್ ಪ್ರಕ್ರಿಯೆಗಳಲ್ಲಿ ಸುಧಾರಣೆ ಜಾರಿಗೊಳಿಸಿದರು. ಮೊದಲೆಲ್ಲ ಕಂಪನಿಗಳಿಗೆ ಲೈಸೆನ್ಸ್ ರಾಜ್ ವ್ಯವಸ್ಥೆಯ ಕಪಿಮುಷ್ಠಿಯಿಂದ ಅನೇಕ ಬಗೆಯ ತೊಂದರೆಯಾಗುತ್ತಿತ್ತು. ಇದು ಭ್ರಷ್ಟಾಚಾರ, ಅಧಿಕಾರ ಶಾಹಿ ದುರ್ಬಳಕೆ, ಸಮಯ ನಷ್ಟ ಇತ್ಯಾದಿ ಸಂಕಷ್ಟಗಳಿಗೆ ಎಡೆ ಮಾಡಿಕೊಟ್ಟಿತ್ತು. ಇದನ್ನು ಮನಗಂಡ ವಾಮನಾಚಾರ್ಯರು ಸುಧಾರಣೆಗೆ ದಿಟ್ಟ ಕ್ರಮಗಳನ್ನು ಕೈಗೊಂಡರು. ಉದ್ದಿಮೆಗಳಿಗೆ ಪರವಾನಗಿಯಲ್ಲಿ 5-10-15 ವರ್ಷಗಳ ಅವಧಿಯಾಗಿ ವಿಂಗಡಿಸಿದರು. ಇದಕ್ಕೂ ಮೊದಲು ಪ್ರತಿ ವರ್ಷವೂ ನವೀಕರಿಸಬೇಕಿತ್ತು. ಇದರಿಂದ ಉದ್ದಿಮೆಗಳಿಗೆ ನಾನಾ ಸಮಸ್ಯೆಗಳು ಎದುರಾಗುತ್ತಿತ್ತು. ಮಾಲಿನ್ಯ ನಿಯಂತ್ರಣ ಮಂಡಳಿಯ ಸಾಂಸ್ಥಿಕ ಸ್ವರೂಪವನ್ನು ಬಲಪಡಿಸಿದರು. ಮೂಲಸೌಕರ್ಯಗಳನ್ನು ಕಲ್ಪಿಸಿದರು. ತ್ಯಾಜ್ಯ ವಸ್ತುಗಳ ನಿರ್ವಹಣೆಯಲ್ಲಿ ವಿನೂತನ ಸಂಶೋಧನೆಯನ್ನು ಕಾರ್ಯಗತಗೊಳಿಸಿದರು.

ಸಿಮೆಂಟ್ ಉದ್ದಿಮೆಯಲ್ಲಿ ಸುಧಾರಣೆ

ಮುಖ್ಯವಾಗಿ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಸಿಮೆಂಟ್ ತಯಾರಿಕೆಯ ಉದ್ದಿಮೆಗಳಲ್ಲಿ ಬಳಸುವ ಪರಿಕಲ್ಪನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಿದರು. ಸೇಡಂನಲ್ಲಿ ಸಿಮೆಂಟ್ ತಯಾರಿಕೆಯ ಉದ್ದಿಮೆಗಳಲ್ಲಿ ಕಲ್ಲಿದ್ದಲಿನ ಜತೆಗೆ ಪ್ಲಾಸ್ಟಿಕ್ ತ್ಯಾಜ್ಯಗಳನ್ನೂ ಬಳಸಿದ ಪ್ರಯೋಗ ಅಭೂತಪೂರ್ವ ಯಶಸ್ಸು ಕಂಡಿತು. ಈ ಪ್ರಯೋಗದಿಂದ ಸಿಮೆಂಟ್ ಉದ್ದಿಮೆಯಲ್ಲೀಗ ಕೋಟ್ಯಂತರ ರುಪಾಯಿ ಉಳಿತಾಯವಾಗುತ್ತಿದೆ.

ಬೆಂಗಳೂರಿನಲ್ಲಿ 1996ರಲ್ಲಿಯೇ ಮುನಿಸಿಪಲ್ ತ್ಯಾಜ್ಯ ಸಂಸ್ಕರಣೆ ಮತ್ತು ಕಂಪೋಸ್ಟಿಂಗ್ ಘಟಕವನ್ನು ರೂಪಿಸುವ ನಿಟ್ಟಿನಲ್ಲಿ ಡಾ. ವಾಮನ ಆಚಾರ್ಯ ಅವರ ಕೊಡುಗೆ ದೊಡ್ಡದು. ಅಪಾಯಕಾರಿಯಲ್ಲದ ಕೈಗಾರಿಕಾ ತ್ಯಾಜ್ಯಗಳನ್ನು ನಿರ್ವಹಿಸುವ ಅವಕಾಶಗಳನ್ನು ಅವರು ಯಶಸ್ವಿ ಉದ್ಯಮವನ್ನಾಗಿಸಿದರು. ಇದು ಸ್ಥಿರ ತ್ಯಾಜ್ಯ ನಿರ್ವಹಣೆಗೆ ಮಾದರಿಯೂ ಆಯಿತು. ಮಣ್ಣಿನಲ್ಲಿ ಹೂತು ಹಾಕಲಾಗುತ್ತಿದ್ದ ಸಾವಿರಾರು ಟನ್ ತ್ಯಾಜ್ಯವನ್ನು ಸಂಸ್ಕರಿಸಿದ್ದರಿಂದ ಮಣ್ಣಿನ ಸತ್ತ್ವ ರಕ್ಷಣೆಯೂ ಆಯಿತು.

ಅಪೂರ್ವ ಸಾಧನೆ

ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಾಗಿ ವಾಮನಾಚಾರ್ಯ ಅವರು ಮಾಡಿದ ಸಾಧನೆಗಳು ಪಕ್ಷಾತೀತವಾಗಿ ಜನಪ್ರಿಯವಾಗಿತ್ತು. ರಾಜ್ಯದಲ್ಲಿ ಬಿಜೆಪಿ ಸರಕಾರ ಬದಲಾವಣೆಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬಂದಾಗ, ತಾವಾಗಿಯೇ ರಾಜೀನಾಮೆ ನೀಡಲು ವಾಮನಾಚಾರ್ಯ ಅವರು ಮುಂದಾಗಿದ್ದರು. ಆದರೆ ರಾಜೀನಾಮೆ ಪತ್ರವನ್ನು ಸ್ವೀಕರಿಸದ ಸಿದ್ದರಾಮಯ್ಯನವರು, ವಾಮನಾಚಾರ್ಯ ಅವರನ್ನೇ ಮಂಡಳಿಯ ಅಧ್ಯಕ್ಷರಾಗಿ ಮುಂದುವರಿಯುವಂತೆ ತಿಳಿಸಿದ್ದರು.

2015ರ ಬಳಿಕ ವಾಮನಾಚಾರ್ಯ ಅವರು ಬಿಜೆಪಿಯ ಮಾಧ್ಯಮ ಪ್ರಮುಖ್ (ಮಾಧ್ಯಮ ವಕ್ತಾರ) ಆಗಿ 2023ರ ತನಕ ಸೇವೆ ಸಲ್ಲಿಸಿದರು. ಬಳಿಕ ಸಕ್ರಿಯ ರಾಜಕಾರಣದಿಂದ ದೂರ ಉಳಿದಿದ್ದಾರೆ. ಆದರೆ ಪರಿಸರ ಪರ ಚಿಂತನೆಗಳಿಗೆ ಮತ್ತಷ್ಟು ಹತ್ತಿರವಾಗಿದ್ದಾರೆ. ಯಾವುದೇ ದೇಶ ಅಭಿವೃದ್ಧಿಯನ್ನು ಸಾಧಿಸುವುದರ ಜತೆಗೆ ಪರಿಸರ ಸಂರಕ್ಷಣೆಗೂ ಆದ್ಯತೆ ನೀಡಬೇಕು. ಮತ್ತು ಹಲವಾರು ಆಯಾಮಗಳಿಂದ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಎರಡನ್ನೂ ಸಾಧಿಸಬಹುದು ಎಂಬುದು ಅವರ ದೃಢ ನಿಲುವು.

ಕಷ್ಟ ಬರಲು ಏನೇನೋ ಕಾರಣಗಳು!

ಸುರಪಸಭೆಯಲಿ ಗಾಧಿಸುತ ವಸಿಷ್ಠ ಸ್ಪರ್ಧೆ
ಧರೆಯೊಳದರಿಂ ಹರಿಶ್ಚಂದ್ರಂಗೆ ತಪನೆ
ಬರುವುದಿಂತೆತ್ತಣಿನೊ ಬೇಡದ ಪ್ರಾರಬ್ಧ
ಕರುಮಗತಿ ಕೃತ್ರಿಮವೊ

- ಮಂಕುತಿಮ್ಮ||

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಜೀವನದಲ್ಲಿ ಹಲವಾರು ಬಾರಿ ಘಟನೆಗಳು ಆಕಸ್ಮಿಕವಾಗಿ, ಅನೀರಿಕ್ಷಿತವಾಗಿ ಹಾಗೂ ಅನಪೇಕ್ಷಿತವಾಗಿ ನಡೆಯುತ್ತವೆ. ಹರಿಶ್ಚಂದ್ರನು ಅವನ ಪಾಡಿಗೆ ಅವನು ಅವನ ಹೆಂಡತಿ ಚಂದ್ರಮತಿ ಹಾಗೂ ಮಗನೊಂದಿಗೆ ಇದ್ದರೆ, ದೇವೇಂದ್ರನ ಸಭೆಯಲ್ಲಿ ವಸಿಷ್ಠರಿಗೂ ಹಾಗೂ ವಿಶ್ವಾಮಿತ್ರರಿಗೂ ನಡೆದ ಸಂವಾದದಲ್ಲಿ ಹರಿಶ್ಚಂದ್ರನ ಹೆಸರು ಪ್ರಸ್ತಾವನೆಗೊಂಡು, ಏನೂ ತಪ್ಪು ಮಾಡದ ಹರಿಶ್ಚಂದ್ರನಿಗೆ ಕಷ್ಟ ಕಾರ್ಪಣ್ಯ ಎದುರಾಗಲಿಲ್ಲವೇ? ಅದೇ ರೀತಿ, ಕೆಲವು ಸಮಯದಲ್ಲಿ ನಮಗರಿವಿರದೆ ಇದ್ದರೂ, ತಪ್ಪು ಮಾಡದಿದ್ದರೂ ಸಹ ನಮ್ಮ ಪಾಲಿನ ವಿಧಿ, ಸಮಯ, ಸಂಧರ್ಭಗಳು ಕ್ರೂರವಾಗಿ ನಮ್ಮನ್ನು ಕಾಡುತ್ತವೆ. ಇದಕ್ಕೆ ಯಾವ ನರನೂ ಹೊರತಾಗಿರುವುದಿಲ್ಲ.

ಮನುಷ್ಯನ ಜೀವನ ಎಂಬುದು ಆಕಸ್ಮಿಕಗಳ, ಅನಿರೀಕ್ಷಿತ ಹಾಗೂ ಅನಪೇಕ್ಷಿತ ಘಟನೆಗಳ ಆಗರ. ತನ್ನ ಜೀವನದಲ್ಲಿ ಮನುಷ್ಯ ಅಂದುಕೊಳ್ಳುವುದೇ ಒಂದಾದರೆ ಘಟಿಸುವುದೇ ಮತ್ತೊಂದಾಗಿರುತ್ತದೆ. ಈತನ ದೃಷ್ಟಿಯಲ್ಲಿಯ ನಿರೀಕ್ಷೆಗಳೇ ಒಂದಾದರೆ ಆತನ ಅರಿವಿಗೆ ಬಾರದೆ ಜರುಗುವುದು ಮತ್ತೊಂದಾಗಿರುತ್ತದೆ. ಯಾವುದೋ ಒಂದು ಶುಭ ಕಾರ್ಯ ಎಂದು ತೆರಳಿದವರು ಮಸಣಕ್ಕೆ ತೆರಳಿದ ಹಾಗೆ, ತಾನೇ ಬೆಳೆಸಿರುವ ಮರಗಳು ಬಿರುಗಾಳಿಗೆ ಸಿಕ್ಕಿ ಈತನ ತಲೆಯ ಮೇಲೆಯೇ ಬೀಳುವ ಹಾಗೆ, ತಾನೇ ಬೆಳೆಸಿದ ತಮ್ಮವರೇ ತನಗೆ ನೋವನಿಕ್ಕುವ ಹಾಗೆ , ಈ ಜೀವನದಲ್ಲಿ ಹಲವಾರು ಅನೀರೀಕ್ಷಿತ ಘಟನೆಗಳು ಜರುಗುತ್ತಲೇ ಇರುತ್ತವೆ. ಇಂಥಹ ಅನಪೇಕ್ಷಿತ, ಅನಿರೀಕ್ಷಿತ ಘಟನೆಗಳು ನಮ್ಮ ನಮ್ಮ ಕರ್ಮದ, ವಿಧಿಯ ಲೀಲೆಯ, ಸಂಧರ್ಭಾನುಸಾರದ, ಪೂರ್ವಜನ್ಮದ ಬುತ್ತಿಯೂ ಆಗಿರಬಹುದು. ಈ ಪೂರ್ವ ಜನ್ಮದ ಕರ್ಮದ ಬುತ್ತಿಯನ್ನು ನಾವುಣ್ಣಲಲ್ಲದೆ ಬೇರೆಯವರಿಗೆ ಉಣಿಸಲಾದೀತೆ!

ಹರಿಶ್ಚಂದ್ರ ಮಹಾರಾಜನು ತನ್ನ ಪಾಡಿಗೆ ತಾನು ತನ್ನ ಪತ್ನಿ ಚಂದ್ರಮತಿ ಹಾಗೂ ಮಗ ಲೋಹಿತಾಶ್ವನೊಂದಿಗೆ ಸತ್ಯ, ಧರ್ಮ, ನ್ಯಾಯ, ನಿಷ್ಠೆಯಿಂದ ರಾಜ್ಯಭಾರವನ್ನು ಮಾಡುತ್ತಾ ಪ್ರಜಾ ಸೇವೆಯೇ ಈಶ ಸೇವೆ ಎಂದು ಜೀವಿಸುತ್ತಲಿರುವಾಗ, ಸುರಸಭೆಯಾದ ಇಂದ್ರನ ಒಡ್ಡೋಲಗದಲ್ಲಿ ಮಹರ್ಷಿ ವಸಿಷ್ಠರಿಗೂ ಹಾಗೂ ವಿಶ್ವಾಮಿತ್ರರಿಗೂ ಮಾತಿನ ಪಂದ್ಯ ಜರುಗುತ್ತದೆ. ಆ ಸಮಯದಲ್ಲಿ ಹರಿಶ್ಚಂದ್ರನು ಸತ್ಯವಂತ ಎಂದು ಸಾಕ್ಷೀಕರಿಸಲು ವಿವಿಧ ಕಷ್ಟ ಕಾರ್ಪಣ್ಯ ಕೊಡುವೆನೆಂದು ವಿಶ್ವಾಮಿತ್ರ ಶಪಥಗೈಯ್ಯುತ್ತಾನೆ. ವಿಶ್ವಾಮಿತ್ರನು ಹರಿಶ್ಚಂದ್ರನನ್ನು ಇನ್ನಿಲ್ಲದಂತೆ ಕಾಡುತ್ತಾನೆ.

ಇದರಲ್ಲಿ ಹರಿಶ್ಚಂದ್ರನು ಮಾಡಿದ ತಪ್ಪಾದರೂ ಏನಿತ್ತು? ವಸಿಷ್ಠರು ಹರಿಶ್ಚಂದ್ರ ಅವನ ಪಾಡಿಗೆ ಅವನು ಸುಮ್ಮನೆ ಇದ್ದರೂ ಸಹ ಅವನ ಪಾಲಿನ ವಿಧಿಯು ವಿಶ್ವಾಮಿತ್ರನ ರೂಪದಲ್ಲಿ ಕಾಡಿತ್ತು. ಹರಿಶ್ಚಂದ್ರನ ಪಾಲಿನ ದೈವವು ಮೌನವಾಗಿಬಿಟ್ಟಿತು. ಹೀಗೆ ನಾವುಗಳು ನಮ್ಮ ಪಾಡಿಗೆ ನಾವು ಇದ್ದರೂ, ನಾವು ಬೇರೆ ಆಲೋಚನೆಗಳನ್ನು ಮಾಡದೇ ಇದ್ದರೂ ಸಹ ಕೆಲವು ಸಮಯ ಸಂಧರ್ಭಗಳಲ್ಲಿ ಆ ದೈವದ ಎಣಿಕೆಯೋ, ಸಂಧರ್ಭದ ಕವಳವಾಗಿಯೋ, ವಿಧಿಯೆಣಿಕೆಯ ಫಲವಾಗಿಯೋ, ಪೂರ್ವ ಜನ್ಮದ ಕರ್ಮವೋ ನಮಗೆ ಕಷ್ಟಕಾರ್ಪಣ್ಯಗಳನ್ನು ತಂದು ನಮ್ಮ ಜೀವನದಲ್ಲಿ ಆಡಿಸುತ್ತದೆ. ಕೆಲವು ಕಷ್ಟಗಳು, ನಮ್ಮಗಳ ತಪ್ಪುಗಳು ಇಲ್ಲದಿದ್ದರೂ ನಮ್ಮ ಬಾಳಿಗೆ ಬಂದೊದಗುತ್ತವೆ.

ಹನಿ ಮಳೆ

ಪ್ರೀತಿಯ ಬೆಳಕು

ಪ್ರೀತಿಯನೇ ಒಸರುವ ಗೀತೆಗಳು

ಭಾವಕೋಶ ಬೆಳಗುವ ಹಾಡುಗಳು

ನೀಡಿದಿರಿ ಎಮಗೆ ಎಚ್ಚೆಸ್ವಿ

ಹೋಗಿ ಬನ್ನಿ ನಮಸ್ತೆ

• ಕಿರಣ್ ಕೊಕ್ಕರ್ಣೆ



ಕೃಷ್ಣನ ಪರಮ ಭಕ್ತೆ ಕೃಷ್ಣಾಬಾಯಿ

ಒಂದೂರಿನಲ್ಲಿ ಕೃಷ್ಣಾಬಾಯಿ ಎಂಬ ಹೆಸರಿನ ವೃದ್ಧೆ ಒಂದು ಗುಡಿಸಿಲನಲ್ಲಿ ಇರುತ್ತಿದ್ದಳು. ಅವಳು ಶ್ರೀ ಕೃಷ್ಣ ಪರಮಾತ್ಮನ ಪರಮ ಭಕ್ತಳಾಗಿದ್ದಳು. ವಾಸ್ತವದಲ್ಲಿ ಅವಳ ಹೆಸರು ಸುಖಿ ಬಾಯಿ ಎಂದಾಗಿತ್ತು. ಆದರೆ ಕೃಷ್ಣನ ಪರಮ ಭಕ್ತಳಾಗಿದ್ದರಿಂದ ಊರವರೆಲ್ಲ ಕೃಷ್ಣಾಬಾಯಿ ಎನ್ನುತ್ತಿದ್ದರು. ಆ ಊರಿನ ಮನೆಮನೆಯ ಅಡುಗೆ ಕೆಲಸ, ಕಸ ಮುಸುರೆ ಅವಳ ಕಾಯಕವಾಗಿತ್ತು. ಅವಳು ನಿತ್ಯವೂ ಹೂವಿನ ಹಾರ ಮಾಡಿ ಎರಡು ಹೊತ್ತು ಕೃಷ್ಣನಿಗೆ ತೊಡಿಸುತ್ತಿದ್ದಳು. ತಾನು ಬಿಡುವಾಗಿದ್ದಾಗ ಗಂಟೆಗಟ್ಟಲೆ ಕೃಷ್ಣನೊಂದಿಗೆ ಮಾತನಾಡುತ್ತಿದ್ದಳು. ಇದನ್ನು ನೋಡಿ ಊರ ಜನರು ಅವಳಿಗೆ ಮರುಳು ಎಂದು ತಿಳಿದಿದ್ದರು. ಒಂದು ರಾತ್ರಿ ಶ್ರೀ ಕೃಷ್ಣನು ಅವಳ ಕನಸಲ್ಲಿ ಬಂದು 'ನಾಳೆ ಈ ಊರಲ್ಲಿ ಭೂಕಂಪವಾಗುತ್ತದೆ. ನೀನು ಈ ಊರು ಬಿಟ್ಟು ಬೇರೆ ಊರಿಗೆ ಹೋಗು' ಎಂದು ಹೇಳಿದ.

ಇನ್ನೇನು ಲೋಕ ರಕ್ಷಕನೇ ಈ ಮಾತು ಹೇಳಿದ ಮೇಲೆ ಕೃಷ್ಣಾಬಾಯಿ ಹೊರಡುವ ಸಿದ್ಧತೆ ನಡೆಸಿ ತನ್ನ ಎಲ್ಲ ಸಾಮಗ್ರಿಗಳನ್ನು ಕಟ್ಟಿಕೊಳ್ಳ ತೊಡಗಿದಳು. ಆಮೇಲೆ ಊರವರಿಗೂ ಕೂಡ ಈ ವಿಷಯ ತಿಳಿಸಿದಳು. ಆದರೆ ಊರಿನ ಜನ ಆ ಮುದುಕಿಯ ಮಾತನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಮೊದಲೇ ಅವಳು ಕೃಷ್ಣನೊಂದಿಗೆ ಮಾತನಾಡುವುದು ಕಂಡು ಅವಳಿಗೆ ಅರಳೋ ಮರಳೋ ಎನ್ನುತ್ತಿದ್ದ ಜನ ಅವಳ ಮಾತು ಕೇಳಿ ಅಪಹಾಸ್ಯ ಮಾಡಿ ನಕ್ಕರು. ನಗುವವರು ನಗಲಿ, ಉಳಿದುಕೊಳ್ಳುವವರು ಉಳಿಯಲಿ. ಇದು ನನ್ನ ಕೃಷ್ಣನ ಆದೇಶ, ನಾನಂತೂ ಅದನ್ನು ಪಾಲಿಸುವೆ ಎಂದುಕೊಂಡು ಒಂದು ಎತ್ತಿನ ಗಾಡಿ ತರಿಸಿ, ಅದರಲ್ಲಿ ಮನೆಯಲ್ಲಿಯ ಎಲ್ಲಾ ಸಾಮಗ್ರಿಗಳನ್ನು ಹಾಕಿಸಿ, ತನ್ನ ಕೃಷ್ಣನ ಮೂರ್ತಿ ಕೈಯಲ್ಲಿ ಹಿಡಿದು ಮುದುಕಿ ನಡೆದೇಬಿಟ್ಟಳು. ಅವಳನ್ನು ನೋಡಿ ಎಂಥ ಮೂರ್ಖತನ ಎಂದು ಜನ ನಗತೊಡಗಿದರು.

ಇನ್ನು ತನ್ನ ಊರಿನ ಸೀಮೆ ದಾಟಿ ಬೇರೆ ಊರಿನ ಸೀಮೆ ಪ್ರವೇಶಿಸುವವಳಿದ್ದಳು ಅಷ್ಟರಲ್ಲಿ ಹಿಂದಿನಿಂದ ಶ್ರೀ ಕೃಷ್ಣನ ಧ್ವನಿ ಬಂತು 'ಹಿಂತಿರುಗಿ ಹೋಗು. ನಿನ್ನ ಗುಡಿಸಲಲ್ಲಿ ಮರೆತು ಬಂದ ಆ ಸೂಜಿಯನ್ನು ತೆಗೆದುಕೊಂಡು ಬಾ. ಅದರಿಂದಲೇ ನೀನು ನನಗೆ ಹೂವಿನ ಮಾಲೆ ಮಾಡಿ ಹಾಕುತ್ತಿದ್ದೆ..!'

ಈ ಮಾತನ್ನು ಕೇಳಿ ಕೃಷ್ಣಾಬಾಯಿ ಬೇಸರಗೊಂಡಳು. ನನ್ನಿಂದ ಇಷ್ಟು ದೊಡ್ಡ ತಪ್ಪು ಹೇಗಾಯಿತು. ಇನ್ನು ನಾನು ನನ್ನ ಕೃಷ್ಣನಿಗೆ ಮಾಲೆಯಾದರೂ ಹೇಗೆ ಮಾಡಿ ಹಾಕಬಲ್ಲೆ..!? ಅವಳು ಕೂಡಲೇ ಎತ್ತಿನಗಾಡಿಯವನನ್ನು ತಡೆದು ನಿಲ್ಲಿಸಿ 'ನಾನು ಮರಳಿ ಬರುವವರೆಗೂ ಇಲ್ಲೇ ಇರು..!' ಎಂದು ಕಾಯಲು ಹೇಳಿ ತನ್ನ ಗುಡಿಸಿಲಿನತ್ತ ಅವಸರ ಅವಸರವಾಗಿ ಹೊರಟು ಬಂದಳು. ಊರವರೆಲ್ಲ ಅವಳ ಹುಚ್ಚುತನಕ್ಕೆ ಅಪಹಾಸ್ಯ ಮಾಡಿ ನಗುವುದೇ ಆಯಿತು. ಕೃಷ್ಣಾಬಾಯಿ ತನ್ನ ಗುಡಿಸಲಲ್ಲಿ ಕಸದಲ್ಲಿ ಸಿಲುಕಿಕೊಂಡ ಸೂಜಿಯನ್ನು ಹುಡುಕಿ ತೆಗೆದುಕೊಂಡು ಹುಚ್ಚೆಯಂತೆ ಎತ್ತಿನಗಾಡಿಯ ಬಳಿ ಓಡಿದಳು. ಗಾಡಿಯವ ಕೇಳಿದ 'ಅಜ್ಜಿ, ನೀನ್ಯಾಕೆ ಇಷ್ಟು ಚಿಂತೆಯಲ್ಲಿ ಇದ್ದಿ..?' ಕೃಷ್ಣಾಬಾಯಿ ಅವನ ಜೊತೆ ಹೆಚ್ಚು ಮಾತು ಬೆಳೆಸದೆ 'ಈಗ ನೀನು ಮೊದಲು ಈ ಊರಿನ ಸೀಮೆ ದಾಟು..!' ಎಂದು ಹೇಳಿ ಅವಸರ ಮಾಡಿದಳು. ಅವನು ಕೂಡ ಅಷ್ಟೇ ಅವಸರದಿಂದ ಎತ್ತಿನಗಾಡಿ ಓಡಿಸಿದ. ಆದರೇನು... ಅವರು ಆ ಊರಿನ ಸೀಮೆ ದಾಟಿ ಮುಂದೆ ಬರುವುದೇ ತಡ, ಆ ಊರು ಭೂಕಂಪದಿಂದ ಅಲ್ಲೋಲಕಲ್ಲೋಲವಾಯಿತು. ಎಲ್ಲಿಂದಲೋ ಪ್ರವಾಹದಂತೆ ಬಂದ ನೀರು ಆ ಊರನ್ನೇ ನುಂಗಿ ಹಾಕಿತು. ಎತ್ತಿನ ಗಾಡಿಯವನೂ ಕೂಡ ಕೃಷ್ಣ ಭಕ್ತನಾಗಿದ್ದ. ಹೀಗಾಗಿ ಯೋಗಾಯೋಗದಂತೆ ಭಗವಂತನು ಅವನ ರಕ್ಷಣೆಯನ್ನೂ ಮಾಡಿದ್ದ.

ಭಗವಂತನನ್ನು ನಂಬಿದರೆ ಅವನು ನಮ್ಮ ಬದುಕಿನ ಸಣ್ಣ ಸಣ್ಣ ವಿಷಯಗಳನ್ನೂ ಕೂಡ ಸರಿಪಡಿಸಿ ಜೀವನ ಸುಂದರವಾಗಿಸುತ್ತಾನೆ. ಅವನಿಗೆ ನೂರು ಪ್ರಾರ್ಥನೆಗಳ ಅಗತ್ಯವಿಲ್ಲ. ನಮ್ಮ ಸಮರ್ಪಣೆಯೊಂದೇ ಸಾಕು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಮರಳಿ ಬಾ ಶಾಲೆಗೆ

• ಮಲ್ಲಪ್ಪ. ಸಿ.ಖೊದ್ನಾಪೂರ (ತಿಕೋಟಾ)

ಪ್ರತಿ ಮಗು ಅಕ್ಷರ ಜ್ಞಾನ ಪಡೆಯಬೇಕು. ಶಿಕ್ಷಣದಿಂದ ವಂಚಿತ ಮತ್ತು ಶಾಲೆಯಿಂದ ದೂರ ಉಳಿಯಬಾರದೆಂಬ ಉದ್ದೇಶದಿಂದ ಸರ್ಕಾರವು ವಿನೂತನವಾದ ಯೋಜನೆಗಳನ್ನು ಜಾರಿಗೆ ತಂದಿದೆ. ಪ್ರಾಥಮಿಕ ಶಾಲೆಗೆ ಮಕ್ಕಳನ್ನು ಆಕರ್ಷಿಸುವ ಕಾರ್ಯ ಮಾಡುತ್ತಿದೆ. ನಲಿ-ಕಲಿ, ಚಿಣ್ಣರ ಅಂಗಳ, ನಮ್ಮ ನಡೆ ಶಾಲೆ ಕಡೆ, ಪ್ರತಿಭಾ ಕಾರಂಜಿ ಮತ್ತು ನಾನಾ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಮತ್ತೆ ಅಕ್ಷರ ಜ್ಞಾನ ನೀಡಿ, ಅವರ ಬೌದ್ಧಿಕ ಸಾಮರ್ಥ್ಯಕ್ಕೆ ತಕ್ಕಂತೆ ತರಗತಿಗೆ ಸೇರಿಸುವ ಕಾರ್ಯವನ್ನು ಮಾಡುತ್ತಿದೆ.

ಶಾಲೆ ಬಿಟ್ಟ ಮಕ್ಕಳ ಸಂಖ್ಯೆಯನ್ನಾಧರಿಸಿ ಚಿಣ್ಣರ ಅಂಗಳ ಕೇಂದ್ರಗಳನ್ನು ತೆರೆದು ಮಕ್ಕಳನ್ನು ಶಿಕ್ಷಣದ ಮುಖ್ಯವಾಹಿನಿಗೆ ತರುವ ಕಾರ್ಯವು ಸಾಗಿದೆ. ಸುಮಾರು ಒಂದೂವರೆ ತಿಂಗಳ ರಜೆ ನಂತರ, ಮೇ 29 ರಂದು ಪುನಃ ಶಾಲೆಗಳು ಪ್ರಾರಂಭಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಮಕ್ಕಳು ಶಾಲೆ ಕಡೆ ಹೆಜ್ಜೆ ಹಾಕುತ್ತಿದ್ದಾರೆ. ಈ ಶಾಲಾ ಪ್ರಾರಂಭೋತ್ಸವವನ್ನು ಒಂದು ಹಬ್ಬವನ್ನಾಗಿ ಆಚರಿಸಿ ಮಕ್ಕಳನ್ನು ಬಹು ಸಂತಸದಿಂದ ಮತ್ತು ಸಂಭ್ರಮದೊಂದಿಗೆ ಸ್ವಾಗತಿಸಲಾಗುತ್ತಿದೆ.

ಶಾಲೆ ಎಂದರೆ ಮಕ್ಕಳ ಹೂದೋಟದಂತಿರಬೇಕು. ಮಾವಿನ ತಳಿರು-ತೋರಣ ಕಟ್ಟಿ, ಬಾಳೆ ದಿಂಡಿನ ಸ್ವಾಗತ ಮಂಟಪದೊಂದಿಗೆ ಸಿಂಗರಿಸಿ, ಮಕ್ಕಳನ್ನು ಶಾಲೆಗೆ ಕರೆ ತರುವ, ಶಿಕ್ಷಣದ ಮಹತ್ವದ ಸಂದೇಶ ಸಾರುವ ಘೋಷಣೆಗಳನ್ನು ಕೂಗುತ್ತಾ, ಊರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪುಷ್ಪ ನೀಡಿ ಆತ್ಮೀಯವಾಗಿ ಮಕ್ಕಳನ್ನು ಬರಮಾಡಿಕೊಂಡಿದ್ದಾರೆ. ಶಾಲಾ ಪ್ರಾರಂಭೋತ್ಸವವು ಹಬ್ಬದ ವಾತಾವರಣವನ್ನು ಸೃಷ್ಟಿ ಮಾಡಿದೆ. ಅಂದು ಶಾಲಾವರಣವನ್ನು ಮನೆಯಲ್ಲಿ ಸ್ವಚ್ಛಗೊಳಿಸಿದಂತೆ, ಶಾಲೆಯ ಪರಿಸರವನ್ನು ಮಕ್ಕಳ ಮನ ಅರಳಿಸುವ ಕೇಂದ್ರವಾಗಿ ಪರಿವರ್ತಿಸಲಾಗುತ್ತಿದೆ. ಶಿಕ್ಷಕರು, ಮಕ್ಕಳು, ಎಸ್.ಡಿ.ಎಂ.ಸಿ ಸದಸ್ಯರು ಹಾಗೂ ಊರಿನ ಗಣ್ಯರು ಸೇರಿ ಶಿಕ್ಷಣ ಜಾಗೃತಿ ಮೂಡಿಸುವದರ ಜತೆಗೆ ದಾಖಲಾತಿ ಹೆಚ್ಚಿಸಿ, ಶೈಕ್ಷಣಿಕ ಪ್ರಗತಿಗೆ ಕೈ ಜೋಡಿಸಲಿದ್ದಾರೆ.

ಇಂದು ನಮ್ಮ ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಿಗಿಂತ ಯಾವುದರಲ್ಲಿಯೂ ಕಡಿಮೆಯಿಲ್ಲ. ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಮಧ್ಯಾಹ್ನ ಉಪಹಾರ ಯೋಜನೆ, ಕ್ಷೀರಭಾಗ್ಯ, ಶೂ-ಸಾಕ್ಸ್, ಬೈಸಿಕಲ್ ವಿತರಣೆ, ವಿದ್ಯಾರ್ಥಿ ವೇತನ ಸೇರಿದಂತೆ ಸರ್ಕಾರಿ ಸವಲತ್ತುಗಳನ್ನು ಒದಗಿಸಿ ಸರ್ಕಾರಿ ಶಾಲೆಗಳತ್ತ ಮಕ್ಕಳನ್ನು ಸೆಳೆಯುವ ಕಸರತ್ತನ್ನು ನಡೆಸಿದೆ.

ಸರ್ವ ಶಿಕ್ಷಣ ಯೋಜನೆಯ ಅಡಿಯಲ್ಲಿ ಶಿಕ್ಷಣ ಪ್ರತಿ ಮಗುವಿನ ಹಕ್ಕು ಎನ್ನುವ ಮಹತ್ವಾಕಾಂಕ್ಷೆಯೊಂದಿಗೆ 6 ರಿಂದ 14 ವರ್ಷ ವಯೋಮಾನದ ಎಲ್ಲ ಮಕ್ಕಳಿಗೆ ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣ ಒದಗಿಸುವುದು ಶಿಕ್ಷಣ ಕಾಯ್ದೆಯ ಉದ್ದೇಶವಾಗಿದೆ. ಜತೆಗೆ, ಈಗ ಸರಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಶಿಕ್ಷಣಕ್ಕೂ ಹೆಚ್ಚಿನ ಒತ್ತು ನೀಡಲಾಗಿದೆ. ಹಳ್ಳಿಯ ಮಕ್ಕಳು ಸಹ ಇಂಗ್ಲಿಷ್ ಭಾಷೆಯನ್ನು ಪ್ರಾಥಮಿಕ ಶಾಲೆಯಲ್ಲೇ ಕಲಿಯುವ ಅವಕಾಶ ದೊರಕಿದೆ.

ಓದಿನ ಜತೆಗೆ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಏನೇನು ಅವಕಾಶಗಳಿವೆ ಅವೆಲ್ಲವನ್ನು ಹುಡುಕಿ, ಗುರುಕುಲ ಮತ್ತು ನೂತನ ಶಿಕ್ಷಣ ಎರಡನ್ನೂ ಬೆರೆಸಿ ಮಕ್ಕಳಿಗೆ ಶಿಕ್ಷಣ ನೀಡುವ ಶಿಕ್ಷಣದ ಅಗತ್ಯವನ್ನು ಮನಗಾಣಬೇಕಾಗಿದೆ. ಶಾಲೆಗಳು ವಿಷಯ ಜ್ಞಾನ, ಮಾಹಿತಿ ಒದಗಿಸುವ ಮತ್ತು ಅಂಕ ಮತ್ತು ಪದವಿ ನೀಡುವ ಕೇಂದ್ರಗಳಾಗುವುದರ ಜತೆಯಲ್ಲೇ, ಮಕ್ಕಳಲ್ಲಿ ಸಂಸ್ಕೃತಿ-ಸಂಸ್ಕಾರಭರಿತ ಮೌಲ್ಯಗಳ ಕುರಿತು ತಿಳಿವು ಮೂಡಿಸಬೇಕು. ಆಗ ಮಾತ್ರ ಇಂದಿನ ಮಕ್ಕಳು ನಾಳಿನ ಭಾರತದ ಜವಾಬ್ದಾರಿಯುತ ಪ್ರಜೆಗಳಾಗಲು ಸಾಧ್ಯ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ತೊಂದರೆ (4)
5. ಸತಿ ಪತಿ ಜೊತೆಯಾಗಿದ್ದಾರೆ (3)
7. ಚೆಲುವಾದ (4)
11. ಅಕ್ಕನ ಗಂಡ (2)
12. ಚಿನ್ನಕ್ಕೆ ಹೀಗೊಂದು ಹೆಸರಿದೆ (3)
13. ಮೇಲಿನ ಆಕಾಶ (2)
14. ಅಡುಗೆಮನೆ (4)
18. ಮಹಾನ್ ಶಿಲ್ಪಿ (2)
19. ಚಳಿಯ ಕಂಪನ (3)
20. ದೇಶದ ಪ್ರಜೆ (4)

ಮೇಲಿಂದ ಕೆಳಕ್ಕೆ

1. ಬಲ್ಲಿಗೆ ಇನ್ನೊಂದು ಹೆಸರು (3)
2. ಇವರಿಗೆ ಗೌರವ ನೀಡಬೇಕು (3)
3. ಬೆಳದಿಂಗಳೇ ಇದಕ್ಕೆ ಆಹಾರ (3)
4. ತಿಳಿ ಅಥವಾ ಶತ್ರು (2)
6. ಪ್ರಧಾನ ಪಾತ್ರದಲ್ಲಿ ಅಭಿನಯಿಸುವವನು (5)
8. ಮತ್ತೇರಿದ ಆನೆ (4)
9. ಬದುಕುವುದಕ್ಕಾಗಿ ಮಾಡುವ ಉದ್ಯೋಗ (5)
10. ಮಾಂಸಾಹಾರಿಯಲ್ಲದವನು ಇಲ್ಲಿ ತಲೆಕೆಳಗಾಗಿದ್ದಾನೆ (4)
15. ಲೆಕ್ಕ ಬರೆಯುವವನು (3)
16. ತಮಟೆ, ಭೇರಿ ಇತ್ಯಾದಿ (3)
17. ಹೂವಿನ ಎಸಳು (3)
18. ಜೇನು (2)

ಉತ್ತರಗಳು

[illegible]

ನೀವೂ ಬರೆಯಬಹುದು | ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

ಜೂ.8ಕ್ಕೆ ರಿಂಕು-ಪ್ರಿಯಾ ನಿಶ್ಚಿತಾರ್ಥ

ಟೀಮ್ ಇಂಡಿಯಾದ ಆಟಗಾರ ರಿಂಕು ಸಿಂಗ್ ಹಸೆಮಣೆ ಏರಲು ಸಜ್ಜಾಗಿದ್ದು, ಸಮಾಜವಾದಿ ಪಕ್ಷದ ಸಂಸದೆ ಪ್ರಿಯಾ ಸರೋಜ್ ಅವರೊಂದಿಗೆ ಜೂನ್ 8ರಂದು ಭಾನುವಾರ ನಿಶ್ಚಿತಾರ್ಥ ಮಾಡಿ ಕೊಳ್ಳಲಿದ್ದಾರೆ. ಲಖನೌದ ಹೋಟೆಲ್ ಒಂದ ರಲ್ಲಿ ಕಾರ್ಯಕ್ರಮ ನಡೆಯಲಿದೆ. ಕಳೆದ ವರ್ಷವೇ ರಿಂಕು ಸಿಂಗ್ ಮತ್ತು ಪ್ರಿಯಾ ಸರೋಜ್ ನಿಶ್ಚಿತಾರ್ಥ ಮಾಡಿಕೊಂಡಿದ್ದಾರೆ ಎಂಬ ಸುದ್ದಿ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿತ್ತು. ಪ್ರಿಯಾ ಸರೋಜ್ ಅವರ ತಂದೆ ತೂಫಾನ್ ಸರೋಜ್, 'ನಾವಿನ್ನೂ ನಿರ್ಧಾರ ಮಾಡಿಲ್ಲ. ಮಾತುಕತೆಯ ಹಂತದಲ್ಲಿದೆ ಅಷ್ಟೇ. ಅದು ಬಿಟ್ಟರೆ ಬೇರೆ ಏನೂ ನಡೆದಿಲ್ಲ ಎಂದು ತಿಳಿಸಿದ್ದರು. ಇದೀಗ ನಿಶ್ಚಿತಾರ್ಥ ವಿಚಾರವನ್ನು ಅವರೂ ಖಚಿತಪಡಿಸಿದ್ದಾರೆ. ರಿಂಕು ಮತ್ತು ಪ್ರಿಯಾ ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ಪ್ರೀತಿಸುತ್ತಿದ್ದರು. ಎರಡೂ ಕುಟುಂಬಗಳು ಮದುವೆಗೆ ಒಪ್ಪಿಕೊಂಡಿವೆ ಎಂದು ತೂಫಾನ್ ಸರೋಜ್ ಹೇಳಿದ್ದಾರೆ. 26 ವರ್ಷದ ಪ್ರಿಯಾ ಸರೋಜ್ ದೇಶದ ಹಾಲಿ 2ನೇ ಅತಿ ಕಿರಿಯ ಸಂಸದೆ ಎನಿಸಿದ್ದಾರೆ.

ಊಹಾಪೋಹಗಳಿಗೆ ತೆರೆ

ಐಪಿಎಲ್ ಟೂರ್ನಿಯಲ್ಲಿ ಗುಜರಾತ್ ಟೈಟನ್ಸ್ ತಂಡದ ನಾಯಕ ಶುಭಮನ್ ಗಿಲ್ ಹಾಗೂ ಮುಂಬೈ ಇಂಡಿಯನ್ಸ್ ಕಪ್ತಾನ ಹಾರ್ದಿಕ್ ಪಾಂಡ್ಯ ನಡುವೆ ಎಲ್ಲವೂ ಸರಿಯಿಲ್ಲ ಎಂಬುದರ ಕುರಿತು ವರದಿಯಾಗಿತ್ತು. ಈ ಸಂಬಂಧ ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊ ವ್ಯಾಪಕವಾಗಿ ಹರಿದಾಡಿವೆ. ಆದರೆ ಈ ಎಲ್ಲ ಊಹಾಪೋಹಗಳಿಗೆ ಸ್ವತಃ ಗಿಲ್ ಹಾಗೂ ಹಾರ್ದಿಕ್ ಪಾಂಡ್ಯ ಅವರೇ ತೆರೆ ಎಳೆದಿದ್ದಾರೆ. 'ಪ್ರೀತಿ ಹೊರತಾಗಿ ಬೇರೇನೂ ಇಲ್ಲ, ಸಾಮಾಜಿಕ ಜಾಲತಾಣದಲ್ಲಿ ನೀವು ನೋಡುವ ಎಲ್ಲವನ್ನು ನಂಬಬೇಡಿ' ಎಂಬ ಅಡಿಬರಹದೊಂದಿಗೆ ಹಾರ್ದಿಕ್ ಅವರೊಂದಿಗಿನ ಚಿತ್ರವನ್ನು ಗಿಲ್ ತಮ್ಮ ಇನ್‌ಸ್ಟಾಗ್ರಾಂ ಸ್ಟೋರಿಯಲ್ಲಿ ಹಂಚಿಕೊಂಡಿದ್ದಾರೆ. ಇದನ್ನು ರಿಶೇರ್ ಮಾಡಿರುವ ಹಾರ್ದಿಕ್, 'ಯಾವತ್ತೂ, ಶುಭು ಬೇಬಿ' ಎಂದು ಹೃದಯದ ಇಮೋಜಿ ಹಂಚಿದ್ದಾರೆ.

ಸಮಾಚಾರ ಸಣ್ಣದಲ್ಲ

ಮಹಿಳಾ ಹಾಕಿ: ಭಾರತಕ್ಕೆ ಮಣಿದ ಉರುಗ್ವೆ

ದೆಹಲಿ: ಭಾರತ ಜೂನಿಯರ್ ಮಹಿಳಾ ತಂಡವು ಅರ್ಜೆಂಟೀನಾದ ರೊಸಾರಿಯೊದಲ್ಲಿ ನಡೆಯುತ್ತಿರುವ ಚತುಷ್ಕೋನ ಜೂನಿಯರ್ ಮಹಿಳಾ ಹಾಕಿ ಟೂರ್ನಿಯಲ್ಲಿ ಉರುಗ್ವೆ ತಂಡದ ವಿರುದ್ಧ ಶೂಟೌಟ್‌ನಲ್ಲಿ ಗೆಲುವು ಸಾಧಿಸಿತು. ನಿಗದಿತ ಅವಧಿಯ ಮುಕ್ತಾಯದ ವೇಳೆಗೆ ಉಭಯ ತಂಡಗಳು 2-2ರ ಸಮಬಲ ಸಾಧಿಸಿದವು. ಭಾರತ ತಂಡದ ಉಪನಾಯಕಿ ಹೀನಾ 10ನೇ ನಿಮಿಷದಲ್ಲಿ ಹಾಗೂ ಲಾಲರಿನ್‌ಪುಯಿ 24ನೇ ನಿಮಿಷದಲ್ಲಿ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. ಬಳಿಕ ಇನಾ ಡಿ ಪೊಸಾಡ (51ನೇ ನಿಮಿಷ) ಹಾಗೂ ಮಿಲಾಗ್ರೊಸ್ ಸೀಗಲ್ (57ನೇ ನಿಮಿಷ) ದಾಖಲಿಸಿದ ಗೋಲುಗಳ ನೆರವಿನಿಂದ ಉರುಗ್ವೆ ತಂಡವು ದ್ವಿತೀಯಾರ್ಧದಲ್ಲಿ ಪುಟಿದೆದ್ದು, ಸಮಬಲ ಸಾಧಿಸಿತು. ಶೂಟೌಟ್‌ನಲ್ಲಿ ಗೀತಾ, ಕನಿಕಾ ಹಾಗೂ ಲಾಲ್‌ತಂತಲುಅಂಗಿ ತಲಾ ಒಂದು ಗೋಲು ಗಳಿಸಿ 3-1ರಿಂದ ಭಾರತ ತಂಡವನ್ನು ಗೆಲುವಿನ ದಡ ಸೇರಿಸಿದರು. ಉರುಗ್ವೆ ತಂಡ ಕೇವಲ ಒಂದು ಗೋಲು ಗಳಿಸಲು ಶಕ್ತವಾಯಿತು. ಭಾರತ ತಂಡವು ಅತಿಥೇಯ ಅರ್ಜೆಂಟೀನಾ ತಂಡದ ಸವಾಲನ್ನು ಬುಧವಾರ ಎದುರಿಸಲಿದೆ.

ಸೇನಾ ಮುಖ್ಯಸ್ಥರಿಂದ ಆಹ್ವಾನ ತಿರಸ್ಕಾರ

ದೆಹಲಿ: ಮಂಗಳವಾರ ಅಹಮದಾಬಾದ್‌ನಲ್ಲಿ ನಡೆಯುವ ಐಪಿಎಲ್ ಫೈನಲ್‌ಸಮಾರೋಪ ಸಮಾರಂಭವನ್ನು ಬಿಸಿಸಿಐ ವಿಶೇಷ ರೀತಿಯಲ್ಲಿ ಆಚರಿಸುತ್ತಿದೆ. ಭಾರತೀಯ ಸೈನಿಕರಿಗೆ ಅರ್ಪಿಸುವ ಮೂಲಕ ಆಪರೇಷನ್ ಸಿಂದೂರ್ ವಿಜಯೋತ್ಸವವನ್ನು ಆಚರಿಸುವುದಾಗಿ ಈಗಾಗಲೇ ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯ ತಿಳಿಸಿದ್ದಾರೆ. ಆದರೆ ಭಾರತೀಯ ಭೂಸೇನೆ, ನೌಕಾಪಡೆ ಹಾಗೂ ವಾಯುಪಡೆಯ ಮುಖ್ಯಸ್ಥರಾದ ಜನರಲ್ ಉಪೇಂದ್ರ ದ್ವಿವೇದಿ, ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಮತ್ತು ಏರ್ ಚೀಫ್ ಮಾರ್ಷಲ್ ಅಮರ್‌ಪ್ರೀತ್ ಸಿಂಗ್ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ಅನುಮಾನ ಎಂದು ತಿಳಿದುಬಂದಿದೆ.

ಮಳೆಯಿಂದಾಗಿ ಪಂದ್ಯ ವಿಳಂಬ | ಮುಂಬೈಯನ್ನು ಸೋಲಿಸಿ ಅಯ್ಯರ್ ಪಡೆ ಫೈನಲ್‌ಗೆ

ಆರ್‌ಸಿಬಿಗೆ ಪಂಜಾಬ್ ಎದುರಾಳಿ

ಅಹಮದಾಬಾದ್: ನಾಯಕ ಶ್ರೇಯಸ್ ಅಯ್ಯರ್ ಅವರ ಅತ್ಯಾಕರ್ಷಕ ಬ್ಯಾಟಿಂಗ್ ನೆರವಿನಿಂದ ಇಲ್ಲಿನ ನರೇಂದ್ರ ಮೋದಿ ಕ್ರಿಕೆಟ್ ಸ್ಟೇಡಿಯಂನಲ್ಲಿ ಭಾನುವಾರ ನಡೆದ ಐಪಿಎಲ್ ಕ್ವಾಲಿಫೈಯರ್ ಎರಡನೇ ಪಂದ್ಯದಲ್ಲಿ ಪಂಜಾಬ್ ತಂಡವು ಮುಂಬೈಯನ್ನು 5 ವಿಕೆಟ್‌ಗಳಿಂದ ಮಣಿಸಿ ಐಪಿಎಲ್ ಫೈನಲ್ ಪ್ರವೇಶಿಸಿದೆ.

ಮಂಗಳವಾರ ನಡೆಯುವ ಈ ಆವೃತ್ತಿಯ ಐಪಿಎಲ್ ಫೈನಲ್ ಪಂದ್ಯದಲ್ಲಿ ಆರ್‌ಸಿಬಿ ತಂಡವು ಪಂಜಾಬ್ ಅನ್ನು ಎದುರಿಸಲಿದೆ.

ಮುಂಬೈ ನೀಡಿದ ಗುರಿಯನ್ನು ಬೆಂಬತ್ತಿದ ಶ್ರೇಯಸ್ ಅಯ್ಯರ್ ಪಡೆಯು 19 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 206 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಪಂಜಾಬ್ ಪರ ಇನ್ನಿಂಗ್ಸ್ ಆರಂಭಿಸಿದ ಪ್ರಿಯಾಂಶ್ ಆರ್ಯ ಮತ್ತು ಪ್ರಭ್‌ಸಿಮ್ರಾನ್ ಜತೆಯಾಟ ಹೆಚ್ಚು ಹೊತ್ತು ಸಾಗಲಿಲ್ಲ. ಪ್ರಭ್‌ಸಿಮ್ರಾನ್ 9 ಬಾಲ್ ಎದುರಿಸಿ 6 ರನ್ ಅಷ್ಟೇ ಗಳಿಸಿದರು. ಪ್ರಿಯಾಂಶ್ 10 ಬಾಲ್‌ಗಳನ್ನು ಎದುರಿಸಿ 20 ರನ್ ಗಳಿಸುವಲ್ಲಿ ಯಶಸ್ವಿಯಾದರು. ಆ ಬಳಿಕ ಜೋಶ್ ಇಂಗ್ಲಿಸ್ 21 ಬಾಲ್‌ಗಳನ್ನು ಎದುರಿಸಿ 38 ರನ್ ಕಲೆ ಹಾಕಿದರು.

ಆ ಬಳಿಕ ಕ್ರೀಸ್‌ಗೆ ಬಂದ ನೆಹಲ್ ವಧೇರಾ ಬಹಳಷ್ಟು ಹೊತ್ತು ಕ್ರೀಸ್‌ನಲ್ಲಿ ನೆಯೂರಿದರು. 29 ಬಾಲ್‌ಗಳನ್ನು ಎದುರಿಸಿ 48 ರನ್ ಗಳಿಸಿ ಅಶ್ವನಿ ಕುಮಾರ್‌ಗೆ ವಿಕೆಟ್ ಒಪ್ಪಿಸಿದರು. ಪಂಜಾಬ್ ತಂಡದ ನಾಯಕ ಶ್ರೇಯಸ್ ಅಯ್ಯರ್ 39 ಬಾಲ್‌ಗಳಲ್ಲಿ 87 ರನ್ ಗಳಿಸಿ ಅಜೇಯರಾಗಿ

ಉಳಿದು ಪಂಜಾಬ್‌ಗೆ ಜಯವನ್ನು ದೊರಕಿಸಿಕೊಟ್ಟರು.

ಟಾಸ್ ಗೆದ್ದ ಪಂಜಾಬ್ ತಂಡವು ಮೊದಲು ಬೌಲಿಂಗ್ ಆಯ್ದುಕೊಂಡಿತು. ಇನ್ನೇನು 7.30ಕ್ಕೆ ಪಂದ್ಯ ಆರಂಭವಾಗಬೇಕು ಎನ್ನವಷ್ಟರಲ್ಲಿ ಭಾರೀ ಮಳೆ ಸುರಿಯಲಾರಂಭಿಸಿತು. ಹಾಗಾಗಿ ಪಂದ್ಯಾರಂಭಕ್ಕೆ ಅಡಚಣೆ ಉಂಟಾಯಿತು. ಎರಡು ತಾಸು ವಿಳಂಬವಾಗಿ 9.45ಕ್ಕೆ ಪಂದ್ಯ ಪ್ರಾರಂಭವಾದರೂ ಓವರ್‌ಗಳ ಸಂಖ್ಯೆಯಲ್ಲಿ ಕಡಿತ ಮಾಡಲಾಗಿಲ್ಲ.

ಮುಂಬೈ ಪರ ರೋಹಿತ್ ಶರ್ಮಾ ಮತ್ತು ಬೈರ್‌ಸ್ಟೋವ್ ಬ್ಯಾಟಿಂಗ್ ಆರಂಭಿಸಿರು. 7 ಬಾಲ್‌ಗಳನ್ನು ಎದುರಿಸಿದ ರೋಹಿತ್ ಶರ್ಮಾ 1 ಬೌಂಡರಿ ಒಳಗೊಂಡ 8 ರನ್ ಗಳಿಸಿ ಸ್ಟೋಯಿನಿಸ್ ಬೌಲಿಂಗ್‌ನಲ್ಲಿ ವೈಶಾಖ್ ವಿಜಯ್ ಕುಮಾರ್‌ಗೆ ಕ್ಯಾಚ್ ನೀಡಿ ಔಟ್ ಆದರು.

ಆ ಬಳಿಕ ಬಂದ ತಿಲಕ್ ವರ್ಮಾ ಅವರು ಬೈರ್‌ಸ್ಟೋವ್ ಜೊತೆ ಜತೆಯಾಟ ಆಡಿದರು. ಎರಡನೇ ವಿಕೆಟ್‌ಗೆ ಉತ್ತಮ ಜತೆಯಾಟ ಪ್ರದರ್ಶಿಸಿ ಮುಂಬೈ ತಂಡಕ್ಕೆ ಆಧಾರಸ್ತಂಭ ಎನಿಸಿಕೊಂಡರು. ಆದರೆ ತಂಡದ ಮೊತ್ತ 70 ರನ್ ಆದಾಗ 24 ಬಾಲ್‌ಗಳಲ್ಲಿ 38 ರನ್ ಗಳಿಸಿದ್ದ ಜಾನಿ ಬೈರ್ ಸ್ಟೋವ್ ವೈಶಾಖ್ ವಿಜಯ್‌ಕುಮಾರ್ ಬೌಲಿಂಗ್‌ನಲ್ಲಿ ಜೋಶ್ ಇಂಗ್ಲೀಸ್‌ಗೆ ಕ್ಯಾಚ್ ನೀಡಿ ಪೆವಿಲಿಯನ್‌ಗೆ ನಿರ್ಗಮಿಸಿದರು.

ಆ ಬಳಿಕ ಕ್ರೀಸ್‌ಗೆ ಬಂದ ಸೂರ್ಯಕುಮಾರ್ ಯಾದವ್ ತಿಲಕ್ ವರ್ಮಾ ಜೊತೆ ಬ್ಯಾಟಿಂಗ್ ಮುಂದುವರಿಸಿದರು. 44 ರನ್ ಗಳಿಸಿದ್ದ ತಿಲಕ್ ವಧೇರಾಗೆ ಕ್ಯಾಚ್ ನೀಡಿ ಔಟ್ ಆದರು. ಹಾರ್ದಿಕ್ ಪಾಂಡ್ಯ 13 ಬಾಲ್‌ಗಳಲ್ಲಿ 15 ರನ್ ಗಳಿಸಿದರು. ನಮನ್ ಧೀರ್ 18 ಬಾಲ್‌ಗಳಲ್ಲಿ 37 ರನ್ ಗಳಿಸಿ ತಂಡಕ್ಕೆ ಆಸರೆಯಾದರು. ಕೊನೆಯಲ್ಲಿ ರಾಜ್ ಬಾವಾ ಮತ್ತು ಸ್ಯಾಂಟ್ನರ್ ಅಜೇಯರಾಗುಳಿದರು.

ಸೂರ್ಯಕುಮಾರ್ ದಾಖಲೆ

ಪಂಜಾಬ್ ಕಿಂಗ್ಸ್ ವಿರುದ್ಧದ ಕ್ವಾಲಿಫೈಯರ್-2 ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡದ ಸೂರ್ಯಕುಮಾರ್ ಯಾದವ್ ಆರ್‌ಸಿಬಿ ಮಾಜಿ ಆಟಗಾರ ಎಬಿಡಿ ವಿಲಿಯರ್ಸ್ ಅವರ ದಾಖಲೆಯೊಂದನ್ನು ಮುರಿದಿದ್ದಾರೆ. ಸೂರ್ಯಕುಮಾರ್ 15 ರನ್ ಬಾರಿಸುತ್ತಿದ್ದಂತೆ ಆರಂಭಿಕನಲ್ಲದೆ ಐಪಿಎಲ್‌ನ ಒಂದೇ ಆವೃತ್ತಿಯಲ್ಲಿ ಅತೀ ಹೆಚ್ಚು ರನ್ ಗಳಿಸಿದ ಬ್ಯಾಟರ್ ಎಂಬ ದಾಖಲೆ ನಿರ್ಮಿಸಿದರು. ಅದಕ್ಕೂ ಮುನ್ನ ಈ ದಾಖಲೆ ವಿಲಿಯರ್ಸ್ ಅವರ ಹೆಸರಿನಲ್ಲಿತ್ತು. ಎಬಿಡಿ 2016ರ ಆವೃತ್ತಿಯಲ್ಲಿ ಆಡಿ, 16 ಇನಿಂಗ್ಸ್‌ಗಳಲ್ಲಿ 1 ಶತಕ ಹಾಗೂ 6 ಅರ್ಧಶತಕ ಸಹಿತ 687 ಗಳಿಸಿದ್ದರು.

ಅಹಮದಾಬಾದ್‌ನಲ್ಲಿ ಭಾನುವಾರ ಅಭ್ಯಾಸ ನಡೆಸಿದ ಪಾಟೀದಾರ್ ಪಡೆ

ಫೈನಲ್ ಗೆಲ್ಲಲು ಆರ್‌ಸಿಬಿ ಕಠಿಣಾಭ್ಯಾಸದ ಸಿದ್ಧತೆ

ಅಹಮದಾಬಾದ್: 18 ವರ್ಷಗಳ ಕಪ್ ಗೆಲುವಿನ ಆಸೆ ಈಡೇರಿಸುವ ಇರಾದೆಯೊಂದಿಗೆ ಫೈನಲ್ ಪ್ರವೇಶಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಮಂಗಳವಾರ ಇಲ್ಲಿ ನಡೆಯಲಿರುವ ಈ ಆವೃತ್ತಿಯ ಫೈನಲ್ ಪಂದ್ಯಕ್ಕೆ ಭಾರೀ ಸಿದ್ಧತೆ ಆರಂಭಿಸಿದೆ. ಭಾನುವಾರ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರಿಕೆಟ್ ಸ್ಟೇಡಿಯಂನಲ್ಲಿ ಕ್ವಾಲಿಫೈಯರ್-2 ಪಂದ್ಯ ನಡೆಯುವ ಮುನ್ನ ನಾಲ್ಕು ಗಂಟೆ ಕಠಿಣ ಬ್ಯಾಟಿಂಗ್ ಮತ್ತು ಬೌಲಿಂಗ್ ಅಭ್ಯಾಸ ನಡೆಸಿದೆ.

ಭಾನುವಾರ ಮಧ್ಯಾಹ್ನ 12 ಗಂಟೆಯಿಂದ 3 ಗಂಟೆ ತನಕ ಆರ್‌ಸಿಬಿ ಆಟಗಾರರು ನಿರಂತರವಾಗಿ ಅಭ್ಯಾಸ ನಡೆಸಿದರು. ತಂಡದ ಪ್ರಧಾನ ಕೋಚ್ ಆ್ಯಂಡಿ ಫ್ಲವರ್, ಬ್ಯಾಟಿಂಗ್ ಕೋಚ್ ದಿನೇಶ್ ಕಾರ್ತಿಕ್ ಮಾರ್ಗದರ್ಶನದಲ್ಲಿ ಆಟಗಾರರು ಬ್ಯಾಟಿಂಗ್ ಅಭ್ಯಾಸ ನಡೆಸಿದರು. ವಿರಾಟ್ ಕೊಹ್ಲಿ, ಫಿಲ್ ಸಾಲ್ಟ್, ನಾಯಕ ಪಾಟೀದಾರ್, ಜಿತೇಶ್ ಶರ್ಮ ನೆಟ್ಸ್‌ನಲ್ಲಿ ಹೆಚ್ಚಾಗಿ ದೊಡ್ಡ ಹೊಡೆತಗಳನ್ನು ಅಭ್ಯಾಸ ನಡೆಸಿದ್ದಾರೆ.

ವೇಗದ ಬೌಲರ್‌ಗಳಾದ ಜೋಶ್ ಹೇಜಲ್‌ವುಡ್, ಯಶ್ ದಯಾಳ್ ಮತ್ತು ಭುವನೇಶ್ವರ್ ಕುಮಾರ್ ಬಹಳ ಉತ್ಸಾಹದಿಂದ ಬೌಲಿಂಗ್ ಅಭ್ಯಾಸ ನಡೆಸಿದರು. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಶನಿವಾರದಂದೇ ಅಹಮದಾಬಾದ್‌ಗೆ ತಲುಪಿತ್ತು. ಕಳೆದ ಗುರುವಾರ ನಡೆದ ಕ್ವಾಲಿಫೈಯರ್-1ರ ಗೆಲುವಿನ ನಂತರ, ತಂಡವು ಒಂದು ದಿನ ಚಂಡೀಗಢದಲ್ಲಿಯೇ ಉಳಿದು ಮರುದಿನ ಅಹಮದಾಬಾದ್‌ಗೆ ಪ್ರಯಾಣಿಸಿತ್ತು. ಸೋಮವಾರ ಬೆಳಗ್ಗಿನಿಂದಲೇ ಆರ್‌ಸಿಬಿ ತಂಡವು ಮತ್ತೆ ತನ್ನ ಅಭ್ಯಾಸವನ್ನು ಮುಂದುವ ರಿಸಲಿದೆ. ಆದರೆ ಸೋಮವಾರದ ಅಭ್ಯಾಸ ಪಂದ್ಯಕ್ಕೆ ಸ್ವಲ್ಪ ಮಟ್ಟಿಗೆ ಮತ್ತೆ ಮೈದಾನದಲ್ಲಿ ಮಳೆ ಅಡ್ಡಿಯಾಗುವ ಸಾಧ್ಯತೆ ಇದೆ. ಕ್ವಾಲಿಫೈಯರ್-2 ಪಂದ್ಯಕ್ಕೆ ಮೀಸಲು ದಿನ ನಿಗದಿಯಾಗಿಲ್ಲದಿದ್ದರೂ, ಒಂದು ವೇಳೆ ಮಂಗಳ ವಾರದ ಫೈನಲ್ ಪಂದ್ಯಕ್ಕೆ ಮಳೆ ಅಡ್ಡಿಯಾಗಿ ಪಂದ್ಯದ ಫಲಿತಾಂಶ ಸಾಧ್ಯವಾಗದ್ದರೆ, ಬುಧವಾರ ಪಂದ್ಯದ ಮೀಸಲು ದಿನ ಎಂಬ ನಿರ್ಧಾರವೂ ಆಗಿದೆ.

ಆರ್‌ಸಿಬಿ ಚಿತ್ತ ಪ್ರಶಸ್ತಿಯ ಬರ ನೀಗಿಸುವತ್ತ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) 2025ರ ಆವೃತ್ತಿಯ ಆರಂಭದಿಂದಲೂ ಉತ್ತಮ ಪ್ರದರ್ಶನ ನೀಡುತ್ತಿದ್ದು, ಮಂಗಳವಾರದ ಫೈನಲ್ ಪಂದ್ಯಕ್ಕಾಗಿ ಎದುರು ನೋಡುತ್ತಿದೆ. 18 ವರ್ಷಗಳ ಪ್ರಶಸ್ತಿ ಬರ ನೀಗಿಸುವುದಕ್ಕೆ ಗೆಲುವಿನಿಂದ ಕೇವಲ ಇನ್ನೊಂದು ಹೆಜ್ಜೆ ಮಾತ್ರ ದೂರವಿದೆ.

ರಜತ್ ಪಾಟೀದಾರ್ ನೇತೃತ್ವದ ಪಡೆ ಕ್ವಾಲಿಫೈಯರ್-1ರಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಸೋಲಿಸುವ ಮೂಲಕ ಈ ಸಕದ ಐಪಿಎಲ್ ಫೈನಲ್‌ನಲ್ಲಿ ಸ್ಥಾನವನ್ನು ಕಾಯ್ದಿರಿಸಿದೆ. ಈ ಆವೃತ್ತಿಯು ಪಂದ್ಯಾವಳಿಯ ಐಪಿಎಲ್ ಇತಿಹಾಸದಲ್ಲಿಯೇ ಆರ್‌ಸಿಬಿಯ ಇದುವರೆಗಿನ ಅತ್ಯುತ್ತಮ ಆವೃತ್ತಿಯಾಗಿದ್ದು, ಬಹುತೇಕ ಎಲ್ಲಾ ಆಟಗಾರರು ಗೆಲುವಿಗೆ ಕೊಡುಗೆ ನೀಡಿದ್ದಾರೆ. ಲೀಗ್ ಹಂತದಲ್ಲಿ ಆರ್‌ಸಿಬಿ ಆಡಿರುವ 14 ಪಂದ್ಯಗಳ ಪೈಕಿ 9 ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದು, ಈ ಒಂಬತ್ತು ಪಂದ್ಯಗಳಲ್ಲಿಯೂ ಒಬ್ಬೊಬ್ಬ ಆಟಗಾರರು ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದಿದ್ದಾರೆ.

ವಿಟಾಕೀಸ್

ದಿ ಗ್ರ್ಯಾಂಡ್ ಇಲ್ಯೂಶನ್ ಟೀಸರ್ ರಿಲೀಸ್

ಸಂಗೀತ ನಿರ್ದೇಶಕರಾಗಿ ಗುರುತಿಸಿಕೊಂಡಿರುವ ರಾಘವನ್ ಕಾರ್ತಿಕ್, ಈಗ ದಿ ಗ್ರ್ಯಾಂಡ್ ಇಲ್ಯೂಶನ್ ಚಿತ್ರವನ್ನು ನಿರ್ದೇಶಿಸುತ್ತಿದ್ದು, ಆ ಮೂಲಕ, ಚಂದನವನದಲ್ಲಿ ನಿರ್ದೇಶಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ಶೂಟಿಂಗ್ ಮುಗಿಸಿರುವ ದಿ ಗ್ರ್ಯಾಂಡ್ ಇಲ್ಯೂಶನ್ ಟೀಸರ್ ಹಾಗೂ ಹಾಡು ಬಿಡುಗಡೆಯಾಗಿದೆ. ಅನುರಾಗದಿ ಅರಳಿದೆ ಮನ.. ಎಂಬ ಹಾಡು ಇದಾಗಿದ್ದು, ರಾಘವನ್ ಕಾರ್ತಿಕ್ ಸಂಗೀತ ಸಂಯೋಜಿರುವ ಈ ಹಾಡಿಗೆ ಪ್ರತಿಮಾ ಭಟ್ ದನಿಯಾಗಿದ್ದಾರೆ. ಇದು ಮಹಿಳಾ ಪ್ರಧಾನ ಕಥೆಯಾಗಿದ್ದು, ಒಂಬತ್ತು ಪ್ರಮುಖ ಪಾತ್ರಗಳ ಸುತ್ತ ಈ ಸಿನಿಮಾದ ಕಥೆ ಸಾಗುತ್ತದೆ. ಜಗತ್ತಿನ ಅನೇಕ ವಿಷಯಗಳನ್ನು ಈ ಸಿನಿಮಾದಲ್ಲಿ ಹೇಳುವ ಪ್ರಯತ್ನ ಮಾಡಲಾಗುತ್ತಿದೆ. ಭ್ರಮೆ ಮತ್ತು ವಾಸ್ತವಗಳ ಸಂಗಮ ಈ ಸಿನಿಮಾದಲ್ಲಿದೆ. ಈಗಾಗಲೇ ಈ ಸಿನಿಮಾದ ಸ್ಕ್ರಿಪ್ಟ್ ಕೆಲಸಗಳು ಪೂರ್ಣಗೊಂಡಿದ್ದು, ಶೀಘ್ರವೇ ಚಿತ್ರತಂಡ ಚಿತ್ರೀಕರಣ ಹೊರಡಲಿದೆ. ಸೂರ್ಯತೇಜ, ಶ್ರೇಯಸ್, ಪುನೀತ್ ಮತ್ತಿತರರು ಚಿತ್ರದಲ್ಲಿ ನಟಿಸಲಿದ್ದಾರೆ. ಶೂಟಿಂಗ್‌ಗೂ ಮೊದಲೇ ಟೀಸರ್ ರಿಲೀಸ್ ಮಾಡಿರುವುದು ಈ ಸಿನಿಮಾದ ವಿಶೇಷವಾಗಿದೆ.

ಕನ್ನಡದ ಮಟ್ಟಿಗೆ ದಿ ಗ್ರ್ಯಾಂಡ್ ಇಲ್ಯೂಶನ್ ಹೊಸಬಗೆಯ ಸಿನಿಮಾವಾಗಲಿದೆ ಎಂಬ ವಿಶ್ವಾಸವಿದೆ. ಈ ಸಿನಿಮಾದಲ್ಲಿ ಹತ್ತಾರು ವಿಷಯಗಳಿವೆ. ಅವೆಲ್ಲವನ್ನೂ ಮನರಂಜನೆಯ ಪರಿಧಿಯೊಳಗೆ ಪ್ರೇಕ್ಷಕರ ಮುಂದೆ ತರುವ ಪ್ರಯತ್ನವನ್ನು ಈ ಸಿನಿಮಾದಲ್ಲಿ ಮಾಡುತ್ತಿದ್ದೇವೆ. ಈಗಾಗಲೇ ಈ ಸಿನಿಮಾದ ತೆರೆಯ ಹಿಂದಿನ ಬಹುತೇಕ ಕೆಲಸಗಳು ಪೂರ್ಣಗೊಂಡಿದ್ದು, ಶೀಘ್ರದಲ್ಲಿಯೇ ಚಿತ್ರೀಕರಣಕ್ಕೆ ಹೊರಡಲಿದ್ದೇವೆ ಎಂದು ನಿರ್ದೇಶಕ ರಾಘವನ್ ಕಾರ್ತಿಕ್ ಹೇಳಿದರು.

ನೈಜತೆಗೆ ಹಿಡಿದ ಕೈಗನ್ನಡಿ

ಚಿತ್ರ : ಠಾಣೆ ಕೇರ್ ಆಫ್ ಶ್ರೀರಾಮಪುರ
ನಿರ್ದೇಶನ : ಎಸ್.ಭಗತ್ ರಾಜ್
ನಿರ್ಮಾಣ: ಎಂ.ಗಾಯತ್ರಿ
ತಾರಾಗಣ: ಪ್ರವೀಣ್, ಬಲರಾಜವಾಡಿ, ಮಾಸನಾ, ಚಂದ್ರು, ರೋಹಿತ್ ಮುಂತಾದವರು.
ರೇಟಿಂಗ್ : ★★★

ಭೂಗತ ಲೋಕದ ಅಟ್ಟಹಾಸ ಅದಕ್ಕೆ ರಾಜಕಾರಣಿಗಳ ಕುಮ್ಮಕ್ಕೂ, ಡ್ರಗ್ಸ್ ಮಾಫಿಯಾ ಕಥೆ ಹೊತ್ತ ಹಲವು ಸಿನಿಮಾಗಳು ಈಗಾಗಲೇ ತೆರೆಗೆ ಬಂದಿದೆ. ಇಂತಹದ್ದೇ ಕಥೆಯನ್ನು ಹೊತ್ತ ಠಾಣೆ ಕೇರ್ ಆಫ್ ಶ್ರೀರಾಮಪುರ ಚಿತ್ರ ರಿಲೀಸ್ ಆಗಿದ್ದು ಪ್ರೇಕ್ಷಕರ ಮನಗೆದ್ದಿದೆ. ಇಂದು ಸಮಾಜದಲ್ಲಿ ನಡೆಯುತ್ತಿರುವ ನೈಜ ಘಟನೆಗಳನ್ನು ಎಲ್ಲರಿಗೂ ಮನಮುಟ್ಟುವಂತೆ ಈ ಚಿತ್ರದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಕಾಳಿ ಬಡತನದಲ್ಲಿಯೇ ಬೆಳೆದ ಯುವಕ, ತಾನು ಅಂದುಕೊಂಡಿದ್ದನ್ನು ಸಾಧಿಸಿಯೇ ತ್ತೀರುವ ಛಲಗಾರ. ಪ್ರಾಮಾಣಿಕವಾಗಿ ಬದುಕು ಸಾಗಿಸುವ ಶ್ರಮಜೀವಿ. ಹೀಗಿರುವಾಗಲೇ ಆತ ತನಗೆ ಅರಿವಿಲ್ಲದಂತೆ ಭೂಗತ ಜಗತ್ತಿಗೆ ಸೆಡ್ಡು ಹೊಡೆಯಲು ಸಿದ್ಧವಾಗುತ್ತಾನೆ. ದುರಳರನ್ನು ಹೆಡೆಮುರಿ ಕಟ್ಟುತ್ತಾನೆ. ಅದು ಯಾಕೆ, ಹೇಗೆ ಎಂಬುದನ್ನು ತೆರೆಯಲ್ಲಿಯೇ ನೋಡಬೇಕು.

ಇಂದು ಮಾರಕವಾಗಿರುವ ಡ್ರಗ್ಸ್ ಮಾಫಿಯಾದ ಕುರಿತಂತೆಯೂ ಸಿನಿಮಾದಲ್ಲಿ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿದೆ. ಯಾವೆಲ್ಲಾ ರೀತಿಯಲ್ಲಿ ಡ್ರಗ್ಸ್ ಸರಬರಾಜಾಗುತ್ತಿದೆ. ಅದರಿಂದ ನಮ್ಮ ಯುವ ಸಮೂಹ ಹೇಗೆ ದಾರಿ ತಪ್ಪುತ್ತಿದೆ ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಕಟ್ಟಿಕೊಡಲಾಗಿದೆ. ಹಾಗಂತ ಠಾಣೆ, ಸಸ್ಪೆನ್ಸ್, ಥ್ರಿಲ್ಲರ್, ಆ್ಯಕ್ಷನ್‌ಗೆ ಸೀಮಿತವಾಗಿಲ್ಲ. ಇಲ್ಲಿ ಮನಸೆಳೆಯುವ ಪ್ರೇಮಕಥೆಯೂ ಇದೆ. ಕಾಳಿ ಮತ್ತು ಶ್ರೀದೇವಿಯ ಪ್ರೇಮಕಥೆ ಸಿನಿಪ್ರಿಯರನ್ನು ರಂಜಿಸುತ್ತದೆ. ಅದರಲ್ಲಿ ಒಂದು ಸಂದೇಶವೂ ಅಡಕವಾಗಿದೆ. ಅದೆಲ್ಲಕ್ಕಿಂತ ಹೆಚ್ಚಾಗಿ ಸಮಾಜವನ್ನು ಕಾಯುವ ಆರಕ್ಷರ ಬಗ್ಗೆಯೂ ಚಿತ್ರದಲ್ಲಿ ಹೇಳಲಾಗಿದೆ.

ಎಸ್.ಭಗತ್ ರಾಜ್ ಎಲ್ಲರಿಗೂ ಹಿಡಿಸುವ ಸ್ಟೋರಿಯನ್ನು ಆಯ್ದುಕೊಂಡು ಅದನ್ನು ಎಲ್ಲರ ಮನಕ್ಕೂ ನಾಟುವಂತೆ ತೆರೆಯಲ್ಲಿ ನಿರೂಪಿಸಿದ್ದಾರೆ. ಅದರಲ್ಲಿಯೂ ಯುವ ಸಮೂಹ ಅರಿತುಕೊಳ್ಳಬೇಕಾದ ಡ್ರಗ್ಸ್ ವಿರುದ್ಧ ಸೆಟೆದು ನಿಲ್ಲಬೇಕಾದ ಅಂಶಗಳು ಚಿತ್ರದಲ್ಲಿ ಬೆರೆತಿವೆ. ಕಾಳಿಯ ಪಾತ್ರದಲ್ಲಿ ನಟ ಪ್ರವೀಣ್ ಅಬ್ಬರಿಸಿದ್ದಾರೆ. ಪ್ರವೀಣ್ ರಂಗಭೂಮಿ ಕಲಾವಿದರಾಗಿರುವುದರಿಂದ ತಮ್ಮ ಪಾತ್ರಕ್ಕೆ ಜೀವತುಂಬಿ ನಟಿಸಿದ್ದಾರೆ. ಶ್ರೀದೇವಿಯ ಮುಗ್ಧತೆಯ ಪಾತ್ರ ಬಿಡದೆ ಕಾಡುತ್ತದೆ. ಬಲರಾಜವಾಡಿ ಖಳನಾಗಿ ಖದರ್ ತೋರಿದ್ದಾರೆ. ರೋಹಿತ್ ನಾಗೇಶ್, ಪಿ.ಡಿ.ಸತೀಶ್ ಚಂದ್ರ, ಮುಂತಾದವರು ತಮ್ಮ ಪಾತ್ರಕ್ಕೆ ಜೀವತುಂಬಿ ಅಭಿನಯಿಸಿದ್ದಾರೆ. ಚಿತ್ರದ ಸಂಗೀತ, ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಒಟ್ಟಾರೆ ಠಾಣೆ ಚಿತ್ರವನ್ನು ಮನೆಮಂದಿಯೆಲ್ಲಾ ಕುಳಿತು ನೋಡಬಹುದು.

ಹೊಸ ರೂಪದಲ್ಲಿ ಸಂಜು ವೆಡ್ಸ್ ಗೀತಾ -2

ಕನ್ನಡ ಚಿತ್ರರಂಗದಲ್ಲಿ ದೊಡ್ಡ ಮಟ್ಟದ ನಿರೀಕ್ಷೆಗಳನ್ನು ಹುಟ್ಟು ಹಾಕಿದ್ದ ನಾಗಶೇಖರ್ ನಿರ್ದೇಶನದ ಸಂಜು ವೆಡ್ಸ್ ಗೀತಾ -2 ಹಲವು ಅಡೆತಡೆಗಳನ್ನು ಎದುರಿಸಿ, ಜನವರಿಯಲ್ಲಿ ಬಿಡುಗಡೆಯಾಗಿತ್ತು .ಚಿತ್ರ ದ ಹಾಡುಗಳನ್ನು ಕೇಳಿ ಆನಂದಿಸಿದ್ದ ಸಿನಿಪ್ರಿಯರು ಚಿತ್ರವನ್ನು ಮೆಚ್ಚಿಕೊಂಡಾಡಿದ್ದರು. ಎಲ್ಲೋ ಒಂದು ಕಡೆ ಚಿತ್ರವನ್ನು ಇನ್ನೂ ಚೆನ್ನಾಗಿ

ನಮ್ಮ ಚಿತ್ರಕ್ಕೆ ಇಪ್ಪತ್ತೊಂದು ನಿಮಿಷದ ಸಿಜಿ ಪ್ಲಾನ್ ಇತ್ತು. ಅದೇ ಚಿತ್ರದ ಹೃದಯಸ್ಪರ್ಶಿ ಭಾಗ. ಅದೇ ಇಲ್ಲದೆ ಸಿನಿಮಾ ರಿಲೀಸಾಗಿತ್ತು. ಈಗ ಅದನ್ನು ಸೇರಿಸಿ ಸಿನಿಮಾವನ್ನು ಹೊಸ ರೂಪದಲ್ಲಿ ತೆರೆಗೆ ತರುತ್ತಿದ್ದೇವೆ.
- ನಾಗಶೇಖರ್ ನಿರ್ದೇಶಕ

ಮಾಡಬಹುದಿತ್ತು ಎಂಬ ಅಭಿಪ್ರಾಯವೂ ಕೇಳಿಬಂದಿತ್ತು, ಬಿಡುಗಡೆ ಸಂದರ್ಭದಲ್ಲಿ ಒಂದಷ್ಟು ಆತಂಕ ಸೃಷ್ಟಿಯಾಗಿದ್ದ ಕಾರಣ ಎಲ್ಲವನ್ನೂ ಗಮನಿಸಲು ಚಿತ್ರತಂಡಕ್ಕೂ ಸಾಧ್ಯವಾಗಿರಲಿಲ್ಲ. ಹಾಗಾಗಿ ಮೂರೇ ದಿನದಲ್ಲಿ ಚಿತ್ರದ ಪ್ರದರ್ಶನವನ್ನು ಎಲ್ಲಾ ಕೇಂದ್ರಗಳಲ್ಲಿ ಸ್ಥಗಿತಗೊಳಿಸಲಾಗಿತ್ತು. ಈಗ ಹೊಸದಾಗಿ ಇಪ್ಪತ್ತೊಂದು ನಿಮಿಷಗಳ ಹೃದಯ ಸ್ಪರ್ಶಿ ಚಿತ್ರಣವನ್ನು ಚಿತ್ರಕ್ಕೆ ಮರು ಜೋಡಿಸಲಾಗಿದ್ದು, ಸಂಜು ವೆಡ್ಸ್ ಗೀತಾ ಈ ವಾರ ಹೊಸ ರೂಪದಲ್ಲಿ ತೆರೆಗೆ ಬರಲಿದೆ.

ನಮ್ಮ ಚಿತ್ರದ ಬಿಡುಗಡೆಗೆ ಮೂರು ದಿನ ಇರುವಾಗ ಸ್ಟೇ ತಂದಿದ್ದರಿಂದ ನಮಗೆ ತುಂಬಾ ತೊಂದರೆಯಾಯಿತು. ಅದಾಗಲೇ ಎಲ್ಲಾ ಥಿಯೇಟರ್ ಗಳು ಬುಕ್ ಆಗಿದ್ದರಿಂದ ಸಿನಿಮಾ ಬಿಡುಗಡೆ ಮಾಡಲೇಬೇಕಿತ್ತು. ಆನಂತರ ಮೂರು ದಿನದಲ್ಲಿ ಸಿನಿಮಾದ ಪ್ರದರ್ಶನ ನಿಲ್ಲಿಸಿದೆವು. ಈಗ ಇಪ್ಪತ್ತು ನಿಮಿಷಗಳ ಪ್ರಮುಖವಾದ ಹಾರ್ಟ್ ಟಚಿಂಗ್ ಸೀನ್ ಸೇರಿಸಿ ಈ ವಾರ ಬಿಡುಗಡೆ ಮಾಡುತ್ತಿದ್ದೇವೆ.
-ಛಲವಾದಿ ಕುಮಾರ್ ನಿರ್ಮಾಪಕ

ಕಣ್ಣಪನ ಆಗಮನಕ್ಕೆ ವೇದಿಕೆ ಸಿದ್ಧ

ಶಿವಭಕ್ತ ಕಣ್ಣಪ್ಪನ ಕಥೆಯನ್ನು ಹೊತ್ತ ಕಣ್ಣಪ್ಪ ಪ್ಯಾನ್ ಇಂಡಿಯಾ ಚಿತ್ರವಾಗಿ ನಿರ್ಮಾಣವಾಗಿದೆ. ಕನ್ನಡ, ತೆಲುಗು ಸೇರಿದಂತೆ ಅನೇಕ ಭಾಷೆಗಳಲ್ಲಿ ಸಿದ್ಧವಾಗಿರುವ ಈ ಚಿತ್ರವನ್ನು ನಟ ಮೋಹನ್ ಬಾಬು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ. ಮುಖೇಶ್ ಕುಮಾರ್ ಸಿಂಗ್ ನಿರ್ದೇಶನದಲ್ಲಿ ಚಿತ್ರ ಅದ್ಭುತವಾಗಿ ಮೂಡಿಬಂದಿದೆ. ಚಿತ್ರದಲ್ಲಿ ವಿಷ್ಣು ಮಂಚು ಕಣ್ಣಪ್ಪನಾಗಿ ಕಾಣಿಸಿಕೊಂಡಿದ್ದು, ಬಾಲಿವುಡ್ ನಟ ಅಕ್ಷಯ್ ಕುಮಾರ್ ಶಿವನ ಪಾತ್ರದಲ್ಲಿ ಹಾಗೂ ಬೆಡಗಿ ಕಾಜಲ್ ಅಗರವಾಲ್ ಪಾರ್ವತಿಯಾಗಿ ಕಾಣಿಸಿಕೊಂಡಿದ್ದಾರೆ. ಪ್ರಭಾಸ್, ಮೋಹನ್ ಲಾಲ್ ಸೇರಿದಂತೆ ಹಲವು ದಿಗ್ಗಜರು ಚಿತ್ರದ ತಾರಾಬಳಗದಲ್ಲಿದ್ದಾರೆ. ಸದ್ಯ ಈ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಟೀಸರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ನಾನು ಕಣ್ಣಪ್ಪ ಚಿತ್ರದಲ್ಲಿ ನಟಿಸಬೇಕಾಗಿತ್ತು. ಆ ವೇಳೆ ಹಲವು ಚಿತ್ರಗಳಲ್ಲಿ ಬ್ಯುಸಿ ಇದ್ದುದರಿಂದ ನಟಿಸಲು ಸಾಧ್ಯವಾಗಲಿಲ್ಲ. ಮುಂದೊಂದು ದಿನ ವಿಷ್ಣು ಮಂಚು ಅವರ ಜತೆಗೆ ಪೂರ್ಣ ಪ್ರಮಾಣದ ಚಿತ್ರದಲ್ಲಿ ನಟಿಸುತ್ತೇನೆ ಎಂದು ಶಿವರಾಜ್ ಕುಮಾರ್ ಹೇಳಿದರು.

ಡಾ.ರಾಜ್‌ಕುಮಾರ್ ಅವರ ಬಳಿಕ, ಶಿವಣ್ಣ ಅವರು ಕೂಡ ಕಣ್ಣಪ್ಪನ ಪಾತ್ರದಲ್ಲಿ ನಟಿಸಿ ಮನಗೆದ್ದರು. ಅವರ ಪಾತ್ರ ನನ್ನನ್ನು ಕಾಡಿತು. ಈ ಚಿತ್ರದಲ್ಲಿ ಶಿವಣ್ಣ ಅವರು ಅಭಿನಯಿಸಬೇಕಿತ್ತು. ಆದರೆ ದಿನಾಂಕ ಸಮಸ್ಯೆಯಿಂದ ನಟಿಸಲು ಸಾಧ್ಯವಾಗಲಿಲ್ಲ. ಮುಂದೆ ಶಿವರಾಜ್ ಕುಮಾರ್ ಅವರ ಜತೆಗೆ ನಟಿಸಬೇಕು ಎಂಬ ಆಸೆಯಿದೆ ಎಂದು ವಿಷ್ಣು ಮಂಚು ತಿಳಿಸಿದರು.

ನಾನು ಈ ಹಿಂದೆ ಮಹಾಭಾರತ ಧಾರಾವಾಹಿ ನಿರ್ದೇಶನ ಮಾಡಿದ್ದೆ, ನಾನು ಕನ್ನಡದ ಬೇಡರ ಕಣ್ಣಪ್ಪ ಹಾಗೂ ಶಿವ ಮೆಚ್ಚಿದ ಕಣ್ಣಪ್ಪ ಎರಡೂ ಚಿತ್ರಗಳನ್ನು ನೋಡಿದ್ದೇನೆ. ಡಾ.ರಾಜ್‌ಕುಮಾರ್, ಶಿವಣ್ಣ ಇಬ್ಬರ ಅಭಿನಯ ನೋಡಿ ಈ ಸಿನಿಮಾ ನಿರೂಪಿಸಿದ್ದೇನೆ.
-ಮುಖೇಶ್ ಕುಮಾರ್ ಸಿಂಗ್ ನಿರ್ದೇಶಕ

ಕಣ್ಣಪ್ಪ ಚಿತ್ರ, ವರನಟ, ಕನ್ನಡದ ಕಂಠೀರವ ಡಾ.ರಾಜ್ ಕುಮಾರ್ ಅವರು ಅಭಿನಯಿಸಿದ್ದ ಚಿತ್ರ. ಈಗ ನಾವು ಕಣ್ಣಪ್ಪ ಚಿತ್ರವನ್ನು ಜನರ ಮುಂದೆ ತರುತ್ತಿದ್ದೇವೆ. ನ್ಯೂಜಿಲ್ಯಾಂಡ್ ಕಾಡಿನಲ್ಲಿ ಬೃಹತ್ ಸೆಟ್ ಹಾಕಿ ಚಿತ್ರೀಕರಣ ಮಾಡಿದ್ದೇವೆ. ಮುಂದೆ ಕನ್ನಡ ಸಿನಿಮಾಗಳಲ್ಲಿ ನಟಿಸಬೇಕು ಎಂಬ ಆಸೆಯಿದೆ. ಶಿವಣ್ಣ ಅವರ ಜತೆಗೆ ಅಭನಯಿಸಬೇಕು ಎಂಬ ಹಂಬಲವಿದೆ.
-ಮೋಹನ್ ಬಾಬು ನಿರ್ಮಾಪಕ

ಚೌಕಿದಾರನ ಮೊದಲ ಗಾನ

ಚೌಕಿದಾರ್ ಸಿನಿಮಾ ತನ್ನ ಕಂಟೆಂಟ್ ಮೂಲಕ ಪ್ರೇಕ್ಷಕರಲ್ಲಿ ನಿರೀಕ್ಷೆ ಹೆಚ್ಚಿಸಿದೆ. ಇತ್ತೀಚೆಗೆ ಟೀಸರ್ ಮೂಲಕ ಗಮನಸೆಳೆದಿರುವ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದೆ. ಅಪ್ಪ ಮಗನ ಬಾಂಧವ್ಯ ಸಾರುವ ಹಾಡು ಇದಾಗಿದ್ದು, ಸಾಯಿ ಕುಮಾರ್ ಹಾಗೂ ಪೃಥ್ವಿ ಅಂಬರ್ ತಂದೆ ಮಗನಾಗಿ ಕಾಣಿಸಿಕೊಂಡಿದ್ದಾರೆ. ವಿ ನಾಗೇಂದ್ರ ಪ್ರಸಾದ್ ಸಾಹಿತ್ಯ ರಚಿಸಿರುವ ಈ ಹಾಡಿಗೆ ಸಚಿನ್ ಬಸ್ರೂರ್ ಸಂಗೀತ ಸಂಯೋಜಿಸಿದ್ದು, ವಿಜಯ್ ಪ್ರಕಾಶ್ ದನಿಯಲ್ಲಿ ಮಧುರವಾಗಿ ಮೂಡಿಬಂದಿದೆ. ಅಪ್ಪ ಮಗನ ಬಾಂಧವ್ಯದ ಚೌಕಿದಾರ್ ಸಿನಿಮಾದ ಹಾಡಿಗೆ ಭರಪೂರ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಶಾಲೆಯ ಶಿಕ್ಷಕರು, ಪ್ರಾಧ್ಯಾಪಕರು ಪತ್ರ ಬರೆದು ಅಭಿಪ್ರಾಯ ತಿಳಿಸುತ್ತಿದ್ದಾರೆ. ಅಪ್ಪ ಎಂಬ ಅಮೃತ ಬಿಂದು, ಕುಟುಂಬದ ಚೌಕಿದಾರ್ ಅಪ್ಪನನ್ನು ಎಲ್ಲರೂ ಸ್ಮರಿಸುತ್ತಿದ್ದಾರೆ.

ದಿಯಾ ಖ್ಯಾತಿಯ ಪೃಥ್ವಿ ಅಂಬರ್ ನಾಯಕನಾಗಿ ನಟಿಸಿದ್ದು, ವಿಭಿನ್ನ ಲುಕ್‌ನಲ್ಲಿ ಕಂಗೊಳಿಸಿದ್ದಾರೆ. ಮಾಸ್ ಆಗಿ ಕಂಗೊಳಿಸಿದ್ದಾರೆ. ದೊಡ್ಮನೆಯ ಮೊಮ್ಮಗಳು ಧನ್ಯಾ ರಾಮ್‌ಕುಮಾರ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಚೈತ್ರದಪ್ರೇಮಾಂಜಲಿ ಚಿತ್ರದ ನಾಯಕಿ ಶ್ವೇತಾ, ಡೈಲಾಗ್ ಕಿಂಗ್ ಸಾಯಿಕುಮಾರ್ ಕೂಡ ಈ ಸಿನಿಮಾದಲ್ಲಿದ್ದಾರೆ. ಸುಧಾರಾಣಿ ಈ ಚಿತ್ರದಲ್ಲಿ ಪೊಲೀಸ್ ಆಫೀಸರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಪ್ರತಿ ಸಿನಿಮಾಗಳಲ್ಲಿಯೂ ಹೊಸತನ ಹೊತ್ತು ಬರುವ ನಿರ್ದೇಶಕ ಚಂದ್ರಶೇಖರ್ ಬಂಡಿಯಪ್ಪ ಚೌಕಿದಾರ್‌ಗೂ ಸಾಕಷ್ಟು ವರ್ಕೌಟ್ ಮಾಡಿದ್ದಾರೆ. ಈ ಬಾರಿ ಕೂಡ ಹೊಸ ಕಥೆ ಹೊತ್ತುಬಂದಿದ್ದಾರೆ. ಚೌಕಿದಾರ್ ಸಿನಿಮಾವನ್ನು ಕಲ್ಲಹಳ್ಳಿ ಚಂದ್ರಶೇಖರ್ ನಿರ್ಮಾಣ ಮಾಡುತ್ತಿದ್ದಾರೆ.ವಿ.ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ ಸಾಹಿತ್ಯ ರಚಿಸಿರುವ ಚಿತ್ರದ ಹಾಡುಗಳಿಎಗ ಸಚಿನ್ ಬಸ್ರೂರು ಸಂಗೀತ ಸಂಯೋಜಿಸಿದ್ದಾರೆ. ಚೌಕಿದಾರ್ ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ಬಿಡುಗಡೆಯಾಗಲಿದೆ.



ಮಾತೊಂದ ಹೇಳಿದ ಮಯೂರ್

ಮಯೂರ್ ಕಡಿ ನಿರ್ದೇಶನದ ಮಾತೊಂದ ಹೇಳುವೆ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಟ್ರೇಲರ್‌ಗೆ ಭರ್ಜರಿ ಸ್ಪಂದನೆ ವ್ಯಕ್ತವಾಗಿದೆ. ಟ್ರೇಲರ್ ಬಿಡುಗಡೆಗೂ ಪೂರ್ವಭಾವಿಯಾಗಿ ಚಿತ್ರತಂಡ ಟ್ರೇಲರ್ ಡಿಕೋಡ್ ಸ್ಪರ್ಧೆ ಆಯೋಜಿಸಿತ್ತು. ಚಿತ್ರದ ನಾಯಕ ಮತ್ತು ನಾಯಕಿಯ ಡೈಲಾಗ್ ಮ್ಯೂಟ್ ಮಾಡಿ, ಜನರಿಗೆ ಡೈಲಾಗ್ ಊಹಿಸಲು ಈ ಸ್ಪರ್ಧೆ ಏರ್ಪಡಿಸಿತ್ತು. ಹುಬ್ಬಳ್ಳಿ - ಧಾರವಾಡ ಹುಡುಗ ಹಾಗೂ ಮೈಸೂರು ಭಾಗದ ಹುಡುಗಿಯ ಪ್ರೇಮ ಕಥಾನಕ ಹೊಂದಿರುವ ಈ ಚಿತ್ರದಲ್ಲಿದೆ. ಮಯೂರ್ ಕಡಿ ನಾಯಕನಾಗಿ ನಟಿಸಿದ್ದು, ರಾಧ್ಯಾ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಗಿರೀಶ್ ಶಿವಣ್ಣ, ಪಿ.ಡಿ ಸತೀಶ್ ಮುಂತಾದವರು ಚಿತ್ರದಲ್ಲಿ ನಟಿಸಿದ್ದಾರೆ. ಈಗಾಗಲೇ ಬಿಡುಗಡೆಯಾಗಿರುವ ಚಿತ್ರದ ಕೆಲವು ಕಂಟೆಂಟ್ ಗಳ ಮೂಲಕ ಪ್ರೇಕ್ಷಕರ ಮನ ತಲುಪಿರುವ ಮಾತೊಂದ ಹೇಳುವೆ ಚಿತ್ರ, ಜೂನ್ 20 ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗಲಿದೆ.